ಕಸ್ತೂರಿ

ಮಾರ್ಚ್ 1991

ರೂ. 3-00





ಪಾರಿವಾಳಗಳ ರೆಕ್ಕೆ ಬಿಚ್ಚಿರಿ
ಯುದ್ಧ ನಾಡಿನಲ್ಲಿ

ಲೋಕ ಶಿಕ್ಷಣ ಟ್ರಸ್ಟ್
ಗ್ರಂಥಮಾಲೆಯ ಪ್ರಕಟಣೆಗಳು
ಹುಬ್ಬಳ್ಳಿ-ಬೆಂಗಳೂರು

		ಬೆಲೆ
1. ಶ್ರೀ ರಾಮದಾಸರು ಹೇಳಿದ ಕಥೆಗಳು	ಶ್ರೀ ಬಸಪ್ಪ ದಾನಪ್ಪ ಜತ್ತಿ	ರೂ. 12-00
2. ಅಂತರಾತ್ಮನಿಗೆ	ಶ್ರೀ ರಂಗನಾಥ ದಿವಾಕರ	ರೂ. 5-00
3. ಗೀತೆಯ ಗುಟ್ಟು	ಶ್ರೀ ರಂಗನಾಥ ದಿವಾಕರ	ರೂ. 15-00
4. ಪುಟಾಣಿಗೆ ಶರಣರ ಕಥೆಗಳು	ಶ್ರೀಮತಿ ಜೆ.ವಿ.ಜಯಾ ರಾಜಶೇಖರ	ರೂ. 3-50
5. ಮರಳಿ ಬಂದ ಮಧುರ ಮಾಸ	ಶ್ರೀಮತಿ ಜೆ.ವಿ.ಜಯಾ ರಾಜಶೇಖರ	ರೂ. 12-00
6. ವಿಚಾರ ಜ್ಯೋತಿ	ಶ್ರೀ ಕೆ.ಟಿ.ಪಾಂಡುರಂಗಿ	ರೂ. 10-00
7. ವಚನಗಳಲ್ಲಿ ಪ್ರತಿಮೆಗಳು	ಶ್ರೀಮತಿ ಉಷಾಕಿರಣ್	ರೂ. 25-00
8. ಶಿಶುನಾಳ ಶರೀಫ ಸಾಹೇಬರು	ಶ್ರೀ ಶಿವಾನಂದ ಗುಬ್ಬಣ್ಣವರ	ರೂ. 15-00
9. ನನಗೆ ನಾನೇ ಮಾದರಿ (ಆತ್ಮಕಥನ)	ಶ್ರೀ ಬಿ.ಡಿ.ಜತ್ತಿ	ರೂ. 40-00
10. ಕೋಟ್ಯಧೀಶ್ವರರ ಪ್ರಪಂಚದಲ್ಲಿ 60 ದಿನ	ಶ್ರೀ ಎಸ್.ಪಿ.ಭಟ್ಟ	ರೂ. 20-00

ಪುಸ್ತಕ ದೊರೆಯುವ ಸ್ಥಳ:

ಸಂಯುಕ್ತ ಕರ್ನಾಟಕ ಪ್ರೆಸ್,
ಕೊಪ್ಪಿಕರ ರೋಡ್, ಹುಬ್ಬಳ್ಳಿ

ವಿ.ಸೂ:- ಒಂದೊಂದು ಪುಸ್ತಕದ ಕನಿಷ್ಟ 10 ಪ್ರತಿ, ಅದಕ್ಕಿಂತಲೂ ಹೆಚ್ಚು ಖರೀದಿಸಿದಲ್ಲಿ ಶೇ. 15ರಂತೆ ಕಮೀಶನ್ ಕೊಡಲಾಗುವುದು. ಅಂಚೆ ವೆಚ್ಚ ಪ್ರತ್ಯೇಕ.

ಕಸ್ತೂರಿ

ಕನ್ನಡ ಡೈಜೆಸ್ಟ್

ವರ್ಷ: 35
ಸಂಚಿಕೆ: 7
ಮಾರ್ಚ್ 1991

ವ್ಯವಸ್ಥಾಪಕ ಸಂಪಾದಕ
ಕೆ.ಶಾಮರಾವ್

ಸಂಪಾದಕ
ಆರ್.ಎ.ಉಪಾಧ್ಯ

ನಿರ್ವಹಣೆ
ರವಿ ಬೆಳಗೆರೆ

ಮುಖಪುಟ ಚಿತ್ರ:
ಸಂಜೀವ ಕುಲಕರ್ಣಿ

ಕಸ್ತೂರಿ ಕಾರ್ಯಾಲಯ
ಕೊಪ್ಪೀಕರ ರಸ್ತೆ
ಹುಬ್ಬಳ್ಳಿ - 580 020

ಬೆಳಕಿಂಡಿ

★ ಪ್ರಾಮಾಣಿಕನು ತನಗೆ ಸಲ್ಲದ ಹಣ ಹಾಗೂ ಪ್ರಶಂಸೆಯನ್ನೆಂದಿಗೂ ಅಂಗೀಕರಿಸನು.

- ಬೆಂಜಾಮಿನ್ ಫ್ರಾಂಕ್ಲಿನ್

★ ಶ್ರೇಷ್ಠ ಗ್ರಂಥ ಓದುವುದರಿಂದ ಶ್ರೇಷ್ಠ ಅಭಿಪ್ರಾಯಗಳು ಬೆಳೆಯುತ್ತವೆ.

- ಡಾ. ಎಸ್.ರಾಧಾಕೃಷ್ಣನ್

★ ಏಕಾಗ್ರತೆಯಿಂದ ಯಾವನು ಪ್ರಯತ್ನಿಸುವುದಿಲ್ಲವೋ ಅವನು ಪ್ರಪಂಚದಲ್ಲಿ ಎಂದೂ ಯಶಸ್ವಿಯಾಗಲಾರನು.

- ನೆಪೋಲಿಯನ್

★ ಮನುಷ್ಯನು ಪರಿಶ್ರಮದ ಮುಖಾಂತರವಾಗಿ ತನ್ನ ಭಾಗ್ಯವನ್ನು ಬದಲಿಸಿಕೊಳ್ಳಬಲ್ಲ.

- ಜಮಶೇಟಜಿ ಟಾಟಾ

★ ನಿಮ್ಮ ದೋಷಗಳನ್ನು ನಿಮಗೆ ಏಕಾಂತದಲ್ಲಿ ತಿಳಿಸಿಕೊಡುವವನನ್ನು ಪ್ರೀತಿಸಬೇಕು.

- ಚೀನಾ ಗಾದೆ

ಚಂದಾ ದರಗಳು

ಬಿಡಿ ಸಂಚಿಕೆ		ರೂ.3-00
1 ವರ್ಷಕ್ಕೆ	ಅಂಚೆ ಸೇರಿ	ರೂ.34-00
2 ವರ್ಷಕ್ಕೆ	ಅಂಚೆ ಸೇರಿ	ರೂ.65-00
3 ವರ್ಷಕ್ಕೆ	ಅಂಚೆ ಸೇರಿ	ರೂ.100-00

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ 1ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ 5ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಆನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

KASTURI

MARCH 1991

ಸಹಚಿಂತನ

ಬೇಂದ್ರೆ ದರ್ಶನ

ಫೆಬ್ರುವರಿ ೯೧ರ ಸಂಚಿಕೆಯಲ್ಲಿ ಪ್ರಕಟವಾಗಿರುವ 'ವರಕವಿ ಬೇಂದ್ರೆ: ಒಂದು ಮೆಲುಕು' ಲೇಖನದಲ್ಲಿ ಎನ್ಕೆಯವರು ಬೇಂದ್ರೆ ಜೀವನಕ್ಕೆ ಸಂಬಂಧಿಸಿದ ಅಪರೂಪದ ಸಂಗತಿಗಳನ್ನು ಪ್ರಸ್ತಾಪ ಮಾಡಿದ್ದು ತುಂಬಾ ಉಪಯುಕ್ತವಾಗಿರುತ್ತದೆ. ಬಹುಮುಖ ಆಸಕ್ತಿಯ ಬೇಂದ್ರೆ ದರ್ಶನ ವಾಚಕರಿಗೆ ಲಭ್ಯವಾಗುತ್ತದೆ.

ಬೆಂಗಳೂರು — ಅ. ಕೊಟ್ರಪ್ಪ

'ಎನ್ಕೆ'ಯವರು ಬೇಂದ್ರೆಯವರ ಅಗಾಧ ಪಾಂಡಿತ್ಯ, ಭಾಷಾಪ್ರಭುತ್ವ, ರಸಿಕತೆ, ಹಾಸ್ಯಪ್ರಜ್ಞೆ, ಮಾತಿನ ಮೋಡಿಯೇ ಮೊದಲಾದ ವಿಚಾರಗಳನ್ನು ಸೋದಾರಣ ಸಹಿತವಾಗಿ ವಿವರಿಸಿದ್ದಾರೆ. ವರಕವಿ ಬೇಂದ್ರೆ ದರ್ಶನ ಮಾಡಿಸಿದ ಹಿರಿಯರಾದ ಶ್ರೀ 'ಎನ್ಕೆ'ಯವರಿಗೆ ಅನಂತ ವಂದನೆಗಳು.

ಬ್ಯಾಡಗಿ — ಚಂದಾಬೇಗಂ

ಲೇಖನ ವರಕವಿ ಬೇಂದ್ರೆಯವರ ಆದರ್ಶ ಜೀವನದ ವ್ಯಕ್ತಿತ್ವವನ್ನು ದಿನವಿಡೀ ಮೆಲುಕು ಹಾಕುವಂತೆ ಮಾಡಿದೆ.

ಮಾಗಡಿ — ಶಿವಾನಂದ ರಾ. ಕುಂದಿ

ಸಿಡಿಲಿನ ಚಮತ್ಕಾರ

ಐ. ಶ್ರೀರಾಮು ಅವರು ಬರೆದ 'ಸಿಡಿಲು: ದೈವಿಕ ಚಮತ್ಕಾರವೇ ?' ಲೇಖನದಿಂದ ನಮಗೆ ಸಿಡಿಲ ಕುರಿತು ಕುತೂಹಲಕಾರಿಯಾದ ಅಂಶಗಳು ತಿಳಿದು ಬಂದವು. ಸಿಡಿಲಿನಿಂದ ಆಗಬಹುದಾದ ಹಾನಿಯನ್ನು ತಡೆಯಲು ಮಿಂಚು ನಿರೋಧಕಗಳ ಬಳಕೆ ಬಗ್ಗೆ ಶ್ರೀ ಸಾಮಾನ್ಯರಿಗೂ ಅರ್ಥವಾಗುವಂತೆ ಉಪಯುಕ್ತ ಸಲಹೆ ನೀಡಿದ್ದಾರೆ.

ಕಾದರವಳ್ಳಿ — ವೈ.ಸಿ. ಮೇಲಿನಮನಿ

ಮೆದುಳು: ಒಂದು ಅನುಮಾನ

'ಮೆದುಳು: ಒಂದು ಜೈವಿಕ ಸಮಯಯಂತ್ರ ?' ಚೆನ್ನಾಗಿದೆ. ಆದರೆ ಒಂದು ಅನುಮಾನ. ಆಲೋಚನೆಯಿಂದ ವಯಸ್ಸಾಗುತ್ತಾ ಸಾವು ಬರುತ್ತದೆ ಎಂಬುದು ನಿಜವಾದಲ್ಲಿ ಎತ್ತು, ಎಮ್ಮೆ, ನಾಯಿ, ಕತ್ತೆ, ಬೆಕ್ಕು ಮುಂತಾದ ಪ್ರಾಣಿಗಳ ಆಯುರ್ಮಾನ ಮನುಷ್ಯನಿಗಿಂತ ಕಡಿಮೆ ಏಕಿದೆ ? ಇವು ಮಾನವನಿಗಿಂತ ಹೆಚ್ಚು ಆಲೋಚಿಸಬಲ್ಲವೇ ? ಶತಾಯುಷಿಯಾದ ಮಾನವ ಬರೀ ನಿದ್ರೆಯನ್ನೇ ಮಾಡುತ್ತಾನೆಯೇ ? ಲೇಖಕರು ಈ ಅನುಮಾನಕ್ಕೆ ಪರಿಹಾರ ನೀಡುವರೇ ?

ಚನ್ನಗಿರಿ — ಎನ್.ಎಸ್. ಚಿದಂಬರರಾವ್

ಪರೀಕ್ಷೆಯ ಸಿದ್ಧತೆ

ಕೆ.ಸಿ. ಮರಿಯಪ್ಪನವರು ಪರೀಕ್ಷೆಯ ಸಿದ್ಧತೆ ಬಗ್ಗೆ ಬರೆದಿರುವ ಲೇಖನ ನಮಗೆ ತುಂಬ ಹಿಡಿಸಿತು. ಇಂತಹ ಲೇಖನಗಳಿಂದ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಬಹಳ ಅನುಕೂಲವಾಗುತ್ತದೆ.

ಮಲ್ಲಪ್ಪನ ಹಳ್ಳಿ — ಜಿ.ಆರ್. ನಂಜಪ್ಪ

ನಾವು ವಿದ್ಯಾರ್ಥಿಗಳಾಗಿರುವುದರಿಂದ ಪರೀಕ್ಷಾ ಸಮಯದಲ್ಲಿ ಏಕಾಗ್ರತೆಯಿಂದ ವ್ಯಾಸಂಗ ನಡೆಸಲು ತುಂಬಾ ಉಪಯುಕ್ತವಾಗಿದೆ.

ಮಂಡ್ಯ — ಮನು, ಗೋಪಾಲಕೃಷ್ಣ, ಮಂಜುನಾಥ, ತಿಮ್ಮೇಗೌಡ, ಸುರೇಶ್ ಬಾಬು ಮತ್ತು ಮಿತ್ರರು

ಲೇಖನ ತುಂಬಾ ಚನ್ನಾಗಿತ್ತು.

ಮಂಡ್ಯ ರಮೇಶ ಎಂ.ಕೆ.
ನಾಗರಾಜ ಎಂ.ಕೆ.

ಕೃತಿಚೌರ್ಯ ?

ಫೆಬ್ರುವರಿ ಸಂಚಿಕೆಯಲ್ಲಿ ಡಾ.ಕೆ. ಶ್ರೀಕಂಠಯ್ಯನವರ ಹೆಸರಿನಲ್ಲಿ ಪ್ರಕಟವಾಗಿರುವ 'ಕೋಣ ನಿಮ್ಮಷ್ಟು ತರ್ಕವನ್ನು ಓದಿಲ್ಲ' ಎಂಬ ಕಿರು ಬರಹವನ್ನು ವಿದ್ವಾನ್ ಎನ್.ರಂಗನಾಥ ಶರ್ಮಾ ಅವರು ಬರೆದ 'ಲೌಕಿಕ ನ್ಯಾಯಗಳು' ಎಂಬ ಪುಸ್ತಕದಿಂದ ಯಥಾವತ್ತಾಗಿ ಎತ್ತಿಕೊಳ್ಳಲಾಗಿದೆ.

ಕುಮಟಾ ಪ್ರೊ. ಮಹೇಶ ಅಡಕೋಳಿ

ಚೆನ್ನಪ್ಪನ ಮಕ್ಕಳು

ಜಯಂತ ಕಾಯ್ಕಿಣಿಯವರ ಕವಿತೆ 'ಚೆನ್ನಪ್ಪನ ಮಕ್ಕಳು' ಬಹಳ ಸ್ವಾರಸ್ಯಕರವಾಗಿತ್ತು.

ಗಲಗಲಿ ಎನ್.ಪ್ರಸನ್ನ

ಗುಂಗು ಹಿಡಿಸಿದ ಗಾಯಕ

ಕುಂದನ್‌ಲಾಲ್ ಸೈಗಲ್ ಅಮರ ಗಾಯಕನೆಂಬುದರಲ್ಲಿ ಎರಡನೇ ಮಾತಿಲ್ಲ. ಇವತ್ತಿಗೂ ಸೈಗಲ್ ತಮ್ಮ ಕಂಠ ಮಾಧುರ್ಯದ ಅಲೆಗಳಲ್ಲಿ ಸಜೀವವಾಗಿದ್ದಾರೆ. ಸುರೇಶ್ ಕುಲಕರ್ಣಿಯವರು ಲೇಖನದಲ್ಲಿ ದಾಖಲಿಸಿದ ವಿವರಗಳು ಮನನ ಯೋಗ್ಯ.

ಚಿತ್ರದುರ್ಗ ಡಿ.ಎಂ.ಗುರುದೇವ್

ಕೆ.ಎಲ್. ಸೈಗಲರ ಬಗ್ಗೆ ಬರೆದ ಲೇಖನ ಹೃದಯಸ್ಪರ್ಶಿಯಾಗಿತ್ತು.

ರಾಯಚೂರು ರಾಜಶೇಖರ ಜಂಗಮಶೆಟ್ಟಿ

ಸರಸ್ವತಿ ಪುತ್ರರೆಲ್ಲಾ ಶಾಪಗ್ರಸ್ತರೇ ಎನ್ನುವ ಮಾತು ಸೈಗಲ್ ಅಂತಹವರಿಗೆ ಚೆನ್ನಾಗಿ ಅನ್ವಯಿಸುತ್ತದೆ. ಒಮ್ಮೆ ಸೈಗಲ್‌ರ ಸ್ವರ ಕೇಳಿದರೆ ಎಷ್ಟೋ ದಿನಗಳವರೆಗೆ ಅದರ ನೆನಪು ಉಳಿಯುತ್ತದೆ.

ಕಾರ್ಕಳ ವನಜಾ

ಹಕ್ಕಿ ಲೋಕ

ಹೇಮಚಂದ್ರ ಆಕ್ಕಿ ಅವರ 'ಹಕ್ಕಿ ಲೋಕದ ವಿಸ್ಮಯಗಳು' ಲೇಖನ ಇನ್ನೂ ಹೆಚ್ಚಿನ ಮಾಹಿತಿ ನೀಡಬಹುದಿತ್ತು. ಕೊಲ್ಲಿ ಯುದ್ಧದಲ್ಲಿ ಪ್ರಯೋಗಿಸಿದ ತೈಲ ಸೋರಿಕೆಯ ತಂತ್ರದಿಂದ ಮಾನವನೇ ಅನೇಕ ಪಕ್ಷಿಗಳ ಮೃತ್ಯುವಿಗೆ ಕಾರಣವಾಗಿರುವ ಸತ್ಯವೂ ನಮ್ಮೆದುರಿಗಿದೆಯಲ್ಲವೆ ?

ಪರ್ಕಳ ಕೆ. ಪ್ರೀತಾ ಪೈ

ಸಿದ್ದಿ: ಮತ್ತಷ್ಟು ಮಾಹಿತಿ

ಡಿಸೆಂಬರ್ ೧೯೯೦ರ ಕಸ್ತೂರಿಯಲ್ಲಿ ಬಂದ 'ಸಿದ್ದಿ' ಜನಾಂಗದ ಬಗೆಗಿನ ಲೇಖನ ಮಹತ್ವದ್ದಾಗಿದೆ. ಈ ಜನರು ಕಿತ್ತೂರು ನಾಡಿನ ಖಾನಾಪುರ, ಸೂಪಾ, ಹಳ್ಯಾಳ ತಾಲೂಕುಗಳಲ್ಲಿ ವಾಸವಾಗಿದ್ದಾರೆ. ಈ ಜನರಿಗೆ ನಾವು 'ಹಬಸಿ' ಎಂದು ಕರೆಯುತ್ತೇವೆ. ಈ ಶಬ್ದ 'ಅಬಿಸೀನಿಯನ್'ದ ತದ್ಭವವಿರಬೇಕು. ರಾಣಿ ಚೆನ್ನಮ್ಮಾಜಿಯ ಆಡಳಿತ ಕಾಲದಲ್ಲಿ ಕಿತ್ತೂರ ಸೈನ್ಯದಲ್ಲಿ ೪೦೦೦ ಜನ 'ಕಾಕರ'[1] ಸೈನ್ಯ ಇವರದ್ದಾಗಿತ್ತು. ಕಿತ್ತೂರಿನ ಕೊನೆಯ ಹೋರಾಟದಲ್ಲಿ ಇವರ ಪಾತ್ರ ಹಿರಿದಾಗಿತ್ತು. ಕಿತ್ತೂರಿನ ಮೊದಲ ಯುದ್ಧದಲ್ಲಿ ಥ್ಯಾಕರೆಯನ್ನು ಅಮಟೂರು ಬಾಳಪ್ಪ ಗುಂಡಿಕ್ಕಿ ಸಾಯಿಸಿದಾಗ ಮಹಾರಾಣಿಯ ಆಜ್ಞೆಯಂತೆ ಹಬಸಿರಾಮ ಎಂಬವ ಅವನ ರುಂಡವನ್ನು ಕತ್ತರಿಸಿ ಭಾತಿಗೆ ತುರುಕಿ ಕುಣಿದುದು ಇತಿಹಾಸ.

ಇತ್ತೀಚೆಗೆ ಹುಣಶಿಕಟ್ಟಿಯಲ್ಲಿ ಹಬಸಿಯೊಬ್ಬನಿದ್ದ. ಅವನು ಬಲಾಢ್ಯನಾಗಿದ್ದ. ಒಂದು ಕುರಿಯನ್ನು ತಾನೊಬ್ಬನೇ ತಿನ್ನುತ್ತಿದ್ದ. ಹುಣಶಿಕಟ್ಟಿ ದೇವರ ತೇರನ್ನು ಒಬ್ಬನೇ ಎಳೆಯುತ್ತಿದ್ದ. ಕ್ರೂರಿಯೂ ಆಗಿದ್ದ ಅವನು ಕೊನೆಗೊಮ್ಮೆ ದುರ್ಮರಣಕ್ಕೆ ಈಡಾಗಬೇಕಾಯ್ತು. ಕಿತ್ತೂರ ನಾಡಿನಲ್ಲಿ ಈ ಜನರು ರೈತರಾಗಿದ್ದಾರೆ. ಕೂಲಿ ಮಾಡುವವರೂ ಇದ್ದಾರೆ.

ಧಾರವಾಡ ಪ್ರೊ. ವಿ.ಜಿ. ಮಾರಿಹಾಳ

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ



ಎಲ್ಲಿ ಯುದ್ಧ ಭುಗಿಲೆದ್ದರೂ ಚೆಲ್ಲಾಡುವ ಮನುಷ್ಯ ನೆತ್ತರ ಬಿಂದುವಿನೊಳಗಿಂದ ಒಂದು ಕೂಗು ಕೇಳಿಸುತ್ತದೆ.....

ಪಾರಿವಾಳಗಳೆ ರೆಕ್ಕೆ ಬಿಚ್ಚಲಿ ಯುದ್ಧನಾಡಿನಲ್ಲಿ



ಎಸ್.ಬಿ. ನರಗುಂದಕರ

ಆ ಭೂಮಿಯಿಂದ ಒಂದು ಅತಿ ಪುರಾತನ, ಭವ್ಯ ಹಾಗೂ ಶ್ರೇಷ್ಠ ನಾಗರಿಕತೆಯೊಂದು ಸೆಲೆಯೊಡೆದು ನಿಂತಿತ್ತು. ಶತಶತಮಾನಗಳ ಕಾಲ ಮನುಕುಲಕ್ಕೆ ಮುದ, ಬೆರಗು ಮತ್ತು ಜ್ಞಾನದಾಯಕ ಸಂತಸವನ್ನು ನೀಡಿದ 'ಅರೇಬಿಯನ್ ನೈಟ್ಸ್' ಕಥೆಗಳೆಂದು ಪ್ರಚಲಿತವಾದ 'ಯವನ ಯಾಮಿನಿ ಕಥೆ'ಗಳನ್ನು ನೀಡಿದ ನೆಲವೂ ಇದೇ ಆಗಿತ್ತು. ಆದರಿಂದು ಅದೇ ನೆಲದಿಂದ ನಭದ ತನಕ ಸಾವಿನ ನೆರಳು ಬೆಳೆದು ನಿಲ್ಲುತ್ತಿದೆ. ಕಚ್ಚಾ ತೈಲದ ಕೊಳಕು ಅಲೆಗಳು ಪುಟಿದೇಳುತ್ತಿವೆ. ಸಿಡಿದ ತೈಲಾಗಾರಗಳಿಂದ ಮರಣದ ಹಬೆಯೇಳುತ್ತಿದೆ. ಮೆಸೋಪೊಟೇಮಿಯಾ ನಾಗರೀಕತೆಯ ಗೋರಿಯ ಸುತ್ತ ಯುದ್ಧದ ರಣಹದ್ದುಗಳು ರೆಕ್ಕೆ ಫಡಫಡಿಸುತ್ತಿವೆ.

ಕೊಲ್ಲಿ ಯುದ್ಧ ನಡೆದಿದೆ!

'ಮೆಸೊಪೊಟೇಮಿಯಾ' ಎಂದೇ ಹೆಸರಾದ ಯೂಫ್ರಿಟಸ್ ಮತ್ತು ಟೈಗ್ರಿಸ್ ನದಿಗಳ ನಡುವಣ ಹರವಾದ ನಾಡು ಇಂದು ನಿನ್ನೆಯ ಆಕರ್ಷಣೆಯಲ್ಲ. ಈ ಯವನ ಸುಂದರಿಗಾಗಿ, ಇದರ ಭೂಶಿರದಂತಿರುವ ಇರಾನದ ಕೊಲ್ಲಿಯಲ್ಲಿ ನಡೆದ ರಕ್ತಪಾತಕ್ಕೆ ಅಂತ್ಯವಿಲ್ಲ. ಈ ನೆಲದ ಮರಳುಗಾಡಿನ ಒಂದೊಂದು ಕಣಕ್ಕೂ ಆಗಿದೆ ರಕ್ತದ ಭ್ಯಂಜನ. ವೈಭವೋಪೇತ ಬ್ಯಾಬಿಲೋನಿಯನ್ ಸಾಮ್ರಾಜ್ಯದ ಅಧಿಪತಿ ಸೋಲಮನ್ನನ ಕಾಲದಿಂದ, ಅದಕ್ಕೂ ಮುಂಚೆ ಬದುಕಿದ ಹಮ್ಮುರಬಿಯ ಕಾಲದಿಂದ ಹಿಡಿದು, ಮಧ್ಯಯುಗದ ಓಟೋಮನ್ ಸಾಮ್ರಾಜ್ಯದ ನಾಯಕ ಸಲಾದೀನ್‌ನ ಕಾಲವನ್ನೂ ಆಕ್ರಮಿಸಿಕೊಂಡು ಇಂದಿನ ಸದ್ದಾಂ ಹುಸೇನ್ ಮತ್ತು ಜಾರ್ಜ್ ಬುಶ್‌ರ ಕದನದ ಈ ಕ್ಷಣದ ತನಕ ಮಧ್ಯ ಏಶಿಯಾದ ಈ ಭೂಭಾಗ ಜಗತ್ತಿನ ನಾನಾ ಶಕ್ತಿ ಬಣಗಳ ಕಣವಾಗಿದೆ, ರಣವಾಗಿದೆ ಮತ್ತು ವ್ರಣವಾಗಿದೆ!

ಯುದ್ಧ ಭೂಮಿಯ ಸುತ್ತಮುತ್ತ

ಯುದ್ಧ ಭೂಮಿಗೆ ಕಾಲಿಡುವ ಮೊದಲು ಸದಾಂ ಹುಸೇನರ ನಾಡಿನ ಸುತ್ತ ಹರಡಿಕೊಂಡಿರುವ ದೇಶಗಳ ಬಗ್ಗೆ ತಿಳಿದುಕೊಂಡಿರುವುದು ಅವಶ್ಯಕ. ಇಂದು ನಾವು 'ಅರಬ್ ದೇಶ'ಗಳೆಂದು ಕರೆಯುತ್ತಿರುವ ದೇಶಗಳು ಪಶ್ಚಿಮಕ್ಕೆ ಅಟ್ಲಾಂಟಿಕ್ ಸಾಗರದ ದಂಡೆಯ ಮೊರೊಕ್ಕೊದಿಂದ ಪೂರ್ವ ದಿಕ್ಕಿಗೆ ಇರಾಕ್‌ನ ಪೂರ್ವಗಡಿಯತನಕ ಹಬ್ಬಿಕೊಂಡಂಥವುಗಳಾಗಿವೆ. ಇವುಗಳಲ್ಲಿ ಮೊರೊಕ್ಕೋದಿಂದ ಈಜಿಪ್ತದವರೆಗಿನ ದೇಶಗಳು ಉತ್ತರ ಆಫ್ರಿಕಾದ ಮೆಡಿಟರೇನಿಯನ್ ಕರಾವಳಿಯಗುಂಟ ಹಬ್ಬಿವೆ. ಉಳಿದ ದೇಶಗಳು ಪಶ್ಚಿಮ ಏಶಿಯಾದಲ್ಲಿವೆ. ಎಲ್ಲ ಅರಬ್ ದೇಶಗಳ ಸಾಮಾನ್ಯ ಅಂಶವೆಂದರೆ ಅವುಗಳಲ್ಲಿ ಹರಡಿಕೊಂಡಿರುವ ಸವಿಸ್ತಾರ ಮರಳುಗಾಡುಗಳು. ಜಗತ್ತಿನ ಅತಿ ಪುರಾತನ ಈಜಿಪ್ತ್ ಮತ್ತು ಮೆಸೊಪೊಟೇಮಿಯಾ ನಾಗರಿಕತೆಗಳು ಗೋಚರಿಸಿದ್ದು ಇದೇ ಭೂಭಾಗವಾದ ನೈಲ್ ನದಿಯ ಕೊಳ್ಳ ಹಾಗೂ ಯೂಫ್ರಿಟಸ್-ಟೈಗ್ರಿಸ್ ನದಿ ಕೊಳ್ಳಗಳಲ್ಲಿ (ಅಂದರೆ ಈಗಿನ ಇರಾಕ್‌ದಲ್ಲಿ).

ಪಶ್ಚಿಮ ಏಶಿಯಾವನ್ನು ಚತುರ್ಧರ್ಮಗಳ ತೊಟ್ಟಿಲೆಂದು ಕರೆಯುವುದೂ ಉಂಟು. ಯಹೂದಿ (ಜ್ಯೂ) ಧರ್ಮ, ಕ್ರೈಸ್ತಧರ್ಮ, ಇಸ್ಲಾಂ ಮತ್ತು ಝೊರಾಸ್ಟ್ರಿಯನ್ ಧರ್ಮಗಳು ಜನಿಸಿದ್ದು ಪಶ್ಚಿಮ ಏಶಿಯಾದಲ್ಲಿಯೇ. ಕೆಲವೊಮ್ಮೆ ತಾತ್ವಿಕವಾಗಿ ಮಧ್ಯಏಶಿಯಾಕ್ಕೆ ಸೇರಿಸಲ್ಪಡುವ ದೇಶವಾದ ಇರಾನ್ ಝೊರಾಸ್ಟ್ರಿಯನ್ ಧರ್ಮದ ತಾಯಿನಾಡು.

ಮರಳುಗಾಡಿನ ಅಲೆಮಾರಿಗಳಾದ ಅರಬ್ 'ಬದೋಯಿನ್ನ'ರು ಇಸ್ಲಾಂ ಧರ್ಮದ ಅನುಯಾಯಿಗಳಾದ ನಂತರ ಅರಬರ ಉನ್ನತಿ ಪ್ರಾರಂಭವಾಯಿತು. ಕೆಲವೇ ವರ್ಷಗಳಲ್ಲಿ ಅವರು ಪೂರ್ವದಲ್ಲಿ ಭಾರತದಿಂದ ಹಿಡಿದು ಪಶ್ಚಿಮದ ಸ್ಪೇನ್ ತನಕ ತಮ್ಮ ಸಾಮ್ರಾಜ್ಯವನ್ನು ಹಬ್ಬಿಸಿದರು. ಫ್ರಾನ್ಸ್‌ನ ದಕ್ಷಿಣ ಗಡಿಗಳನ್ನೂ ತಾಕಿ ತಮ್ಮ ಬಾವುಟ ಹಾರಿಸಿದರು.

ಮೊರೊಕ್ಕೋದಿಂದ ಇರಾಕ್ ತನಕ ಅರಬ್ಬಿ ಭಾಷೆ ಮತ್ತು ಅದರ ಉಪಭಾಷೆಗಳು ಪ್ರಚಲಿತವಾಗಿವೆ. ಉತ್ತರದ ಟರ್ಕಿದಲ್ಲಿಯ ಓಟ್ಟೊಮನ್ ಸಾಮ್ರಾಜ್ಯದಲ್ಲಿ ತುರ್ಕಿ ಭಾಷೆಯ ಪ್ರಾಬಲ್ಯ. ಅದು ಈಗಲೂ ಟರ್ಕಿ ಹಾಗೂ ಏಷಿಯಾ ಮೈನರ್ ದೇಶಗಳಲ್ಲಿ ಜನಜನಿತವಾಗಿದೆ.

ವಿಶೇಷವೆಂದರೆ ಈ ಇಡೀ ಭೂಭಾಗವನ್ನು ಕಾಲಾಂತರದಲ್ಲಿ ಅರಬರು ಇಸ್ಲಾಮೀಕರಣಗೊಳಿಸಿದುದು. ಇಸ್ಲಾಂ ಧರ್ಮ ಸುನ್ನಿ ಹಾಗೂ ಷಿಯಾ ಎಂಬೆರಡು ಪ್ರಮುಖ ಪಂಥಗಳಲ್ಲಿ ಇಬ್ಭಾಗವಾಗಿದ್ದು ಸುನ್ನಿ ಪಂಥ ಹೆಚ್ಚು ಸನಾತನವಾದುದೆನಿಸಿಕೊಂಡಿದೆ. ನಂತರದ ಪಂಥವಾಗಿ ಬೆಳೆದ ಷಿಯಾ ವಿಚಾರಧಾರೆಯನ್ನು ಇರಾನ್ ಸ್ವೀಕರಿಸಿತಾದರೂ ಇರಾಕ್ ಪ್ರಜೆಗಳಲ್ಲಿ ಅರ್ಧಕ್ಕರ್ಧ ಜನ ಷಿಯಾ ಪಂಥೀಯರಿದ್ದಾರೆ. ಅರೆಬಿಕ್ ಭಾಷೆಯನ್ನಾಡುವ ಅರಬರು ಹೆಚ್ಚಾಗಿ ಸುನ್ನಿ ಪಂಥದವರಾಗಿದ್ದಾರೆ. ಷಿಯಾ ಪಂಥೀಯರಲ್ಲಿ

ಮತ್ತೆ ಝೈದಿಗಳು, ಇಸ್ಮೈಲಿಗಳು, ಡ್ರೂಜರು ಎಂಬ ಒಳ ಪಂಗಡದವರಿದ್ದಾರೆ. ಉತ್ತರ ಎಮೆನ್‌ನಲ್ಲಿ ಝೈದಿಗಳು, ಸಿರಿಯಾ-ಇರಾನ್-ಓಮನ್‌ಗಳಲ್ಲಿ ಇಸ್ಮೈಲಿಗಳು ಮತ್ತು ಲೆಬೆನಾನ್, ಸಿರಿಯಾ, ಇಸ್ರೇಲ್‌ಗಳಲ್ಲಿ ಡ್ರೂಜರು ನೆಲೆಗೊಂಡಿದ್ದಾರೆ. ಇವರೆಲ್ಲರೂ ಮೂಲತಃ ಷಿಯಾಗಳೇ.

ದಯೆ, ಪ್ರೀತಿಗಳನ್ನು ಮೂಲವಾಗಿಟ್ಟುಕೊಂಡು ಉದಯಿಸಿದ ಕ್ರೈಸ್ತ ಧರ್ಮಕ್ಕೂ ಇವತ್ತಿನ ಈ ಯುದ್ಧ ಭೂಮಿಯೇ ತವರು ಮನೆ! ಇಲ್ಲಿನ ಕ್ರಿಶ್ಚಿಯನ್ನರು ನಗರವಾಸಿಗಳು. ಗ್ರೀಕ್ ಸನಾತನ ವಾದಿಗಳು, ಅಸೀರಿಯನ್ ಮತ್ತು ಸಿರಿಯನ್ ಸನಾತನ ವಾದಿಗಳಲ್ಲದೆ ಕಾಪ್ಟರು, ಮೆರೋನೈಟರು, ಅರ್ಮೇನಿಯನ್ನರು ಮುಂತಾದವರು ಇಲ್ಲಿ ನೆಲೆಗೊಂಡ ಪಂಗಡಗಳವರಾಗಿದ್ದಾರೆ.

ಶತಶತಮಾನಗಳ ಹಿಂದೆ ಏಶಿಯಾ ಮೈನರ್ ಭೂಭಾಗಕ್ಕೆ ಬಂದು ನೆಲೆಗೊಂಡ ಯಹೂದಿ (ಜ್ಯೂ)ಗಳು ಏಸುವನ್ನು ಶಿಲುಬೆಗೇರಿಸಿದ ನಂತರದ ಪರಿಣಾಮಗಳ ಫಲವಾಗಿ ಎರಡು ಸಾವಿರ ವರ್ಷಗಳ ಹಿಂದೆ ವಿಶ್ವದಾದ್ಯಂತ ಚದುರಿ ಹೋದರು. ಅವರಿಗೊಂದು ಮನೆಯಿಲ್ಲದಂತಾಯಿತು. ಸತತವಾಗಿ ಎರಡು ಸಾವಿರ ವರ್ಷಗಳ ಹೋರಾಟದ ನಂತರ 1948ರಲ್ಲಿ ಅವರು ಮರಳಿ ಬಂದು ತಮ್ಮ ತವರಿನಲ್ಲಿ ನೆಲೆಗೊಂಡಿದ್ದ ಪೆಲೆಸ್ತೇನಿಯನ್ನರನ್ನು ಹೊರದಬ್ಬಿ ಅದನ್ನು ಆಕ್ರಮಿಸಿಕೊಂಡರು. ಇವರ ಭಾಷೆ ಹಿಬ್ರೂ.

ಹದಿನಾರನೆಯ ಶತಮಾನದಲ್ಲಿ ಓಟ್ಟೊಮನ್ ಟರ್ಕರು ಇದೆಲ್ಲ ಭಾಗವನ್ನು ಆಕ್ರಮಿಸಿಕೊಂಡು ಒಂದು ಸಾಮ್ರಾಜ್ಯವನ್ನು ಕಟ್ಟಿದರು. ಮೂಲತಃ ಮಂಗೋಲರಾದ ಇವರು 1566ರ ಸುಮಾರಿಗೆ ಅಫಘನಿಸ್ತಾನದಿಂದ ಈಜಿಪ್ತದವರೆಗಿನ ಎಲ್ಲ ಇಸ್ಲಾಮಿ ರಾಜ್ಯಗಳನ್ನು ಕೊಳ್ಳೆ ಹೊಡೆದರು. ಗೆದ್ದುಕೊಂಡರು. ಮೊರಕ್ಕೋ ತನಕ ಅವರು ವ್ಯಾಪಿಸಿದರು. ಕಾಲಾಂತರದಲ್ಲಿ ಅವರು ಆಕ್ರಮಿಸಿಕೊಂಡ ನೆಲದ ಧರ್ಮವೇ ಆಗಿದ್ದ ಇಸ್ಲಾಂಗೆ ಅವರು ಪರಿವರ್ತಿತರಾದರು. ನಾಲ್ಕು ನೂರು ವರ್ಷಗಳ ಕಾಲ ಇರಾಕ್ ಅನ್ನು ಆಳಿದ ಭೂಪರಿವರು.

ಪ್ರಥಮ ಜಾಗತಿಕ ಯುದ್ಧದ ನಂತರ ಈ ಸಾಮ್ರಾಜ್ಯದ ಭಾಗಗಳನ್ನು ಬ್ರಿಟಿಶರು, ಫ್ರೆಂಚರು, ಇಟಾಲಿಯನ್ನರು ಪಾಲು ಹಾಕಿ ಹಂಚಿಕೊಂಡರು. ಆಗ ಪಾಶ್ಚಾತ್ಯರಿಂದ ಪ್ರಾರಂಭವಾದ ಶೋಷಣೆ ಒಂದು ಅರ್ಥದಲ್ಲಿ ಕೊನೆಗೊಂಡು ಈ ದೇಶಗಳು ಸ್ವಾತಂತ್ರ್ಯ ಗಳಿಸಲು 1945ರ ತನಕ ಕಾಯಬೇಕಾಯಿತು.

ಆದರೆ ಪಶ್ಚಿಮದ ಶೋಷಕ ಹಸ್ತದ ನೆರಳು ಮುಂದೆಯೂ ಈ ದೇಶಗಳ ಬೆನ್ನು ಬಿಡಲಿಲ್ಲ. 1945ರಲ್ಲಿ ಗಳಿಸಿದ ಸ್ವಾತಂತ್ರ್ಯಕ್ಕೆ ಕೃತಿಮತೆ ಇತ್ತು. ಆರ್ಥಿಕ ಹಾಗೂ ರಾಜಕೀಯ ಶೋಷಣೆಗಳಿಗೊಳಗಾದ ಈ ದೇಶಗಳು ಮೊದಲು ಪಶ್ಚಿಮದ ಕೆಲ ರಾಷ್ಟ್ರಗಳ ಕೈವಾಡವಷ್ಟೇ ಸಹಿಸಿಕೊಂಡಿದ್ದು, 1945ರ ನಂತರ ಅಮೆರಿಕದ ಭೂತವನ್ನೂ ಸಹಿಸಿಕೊಳ್ಳಬೇಕಾದದ್ದು ಐತಿಹಾಸಿಕ ದುರಂತ.

ಅಂದಿನಿಂದ ಇಂದಿನ ತನಕ ಪಾಶ್ಚಾತ್ಯದೇಶಗಳ ಆಟದಂಗಳಗಳೂ, ಕುದಿಯುವ ಎಣ್ಣೆಯ ಕೊಪ್ಪರಿಗೆಗಳೂ ಆದ ಎಮನ್, ಓಮನ್, ಯುನೈಟೆಡ್ ಅರಬ್ ಎಮಿರೇಟ್ಸ್ ಮುಂತಾದವು ನಿರಂತರ ಅನಿರ್ದಿಷ್ಟತೆಯಿಂದ ಬಳಲುತ್ತಿರುವುದು ಸತ್ಯ.

ಉತ್ತರ ಮತ್ತು ದಕ್ಷಿಣ ಎಮನ್‌ಗಳೆಂದು ವಿಭಜಿತವಾಗಿದ್ದ ನಾಡು ಈಗ ಒಂದುಗೂಡಿದೆ. ಏಡನ್ ಇದರ ಪ್ರಮುಖ ಬಂದರು. 1967ರ ತನಕ ಬ್ರಿಟಿಶ್ ರಕ್ಷಿತ ಪ್ರದೇಶ (Protectorate)ವಾಗಿದ್ದ ಇದು ಆಯಕಟ್ಟಿನ ದೃಷ್ಟಿಯಿಂದ ಪ್ರಾಮುಖ್ಯತೆ ಪಡೆದಿದೆ. ಅರೇಬಿಯನ್ ಭೂಶಿರದ ನೈರುತ್ಯದಲ್ಲಿರುವ ಎಮನ್ ಕೆಂಪು ಸಮುದ್ರ ಮತ್ತು ಸೂಯೆಜ್ ಕಾಲುವೆಯನ್ನು ನಿಯಂತ್ರಿಸಬಲ್ಲ ಆಯದ ಜಾಗದಲ್ಲಿದೆ. ಇದು ಎಮನ್ ಅರಬ್ ರಿಪಬ್ಲಿಕ್ ಅನ್ನಿಸಿಕೊಂಡದ್ದು 1977ರಲ್ಲಿ.

ಇದರ ಆಗ್ನೇಯಕ್ಕಿರುವ ರಾಷ್ಟ್ರವೇ ಓಮನ್. ಕೇವಲ ಹತ್ತು ಲಕ್ಷ ಓಮಾನಿಗಳಿರುವ ಈ ರಾಜ್ಯದ

ಪ್ರಮುಖ ಬಂದರು ಮಸ್ಕತ್. ಮುತ್ತು ಹಾಗೂ ಕಡಲ ಚಿಪ್ಪುಗಳ ವ್ಯಾಪಾರಕ್ಕಾಗಿ ಮುಂಚೆ ಹೆಸರಾಗಿದ್ದ ಓಮಾನ್, ಆಫ್ರಿಕಾದ ಪೂರ್ವ ಕರಾವಳಿಯ ಹತ್ತಿರದ ಝಂಝೀಬಾರ ದ್ವೀಪದ ಮೇಲೂ ಹಿಡಿತವುಳ್ಳದ್ದು. ಮಸ್ಕತ್ ಇಂದು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವೆನಿಸಿಕೊಂಡಿದೆ.

ಇದರ ಉತ್ತರಕ್ಕೆ ಇರಾನ್ ಕೊಲ್ಲಿಯ ದಂಡೆಗುಂಟ ಹಬ್ಬಿಕೊಂಡ ಏಳು ಚಿಕ್ಕ ಸಲ್ತಾನೇಟ್‌ಗಳ ಸಂಯುಕ್ತರಾಜ್ಯವಾದ ಯುನೈಟೆಡ್ ಅರಬ್ ಎಮಿರೇಟ್ಸ್ ಸಮೂಹವಿದೆ. ಅಬುಧಾಬಿ, ದುಬೈ, ಬಹ್ರೇನ್ ಮುಂತಾದವು ಇದರ ಮಹತ್ವದ ಘಟಕಗಳು. ದುಬೈನ ಮುಕ್ತ ಮಾರುಕಟ್ಟೆ 'ಬಂಗಾರದ ಜೇಲ' ಎನ್ನಿಸಿಕೊಂಡಿರುವುದೂ ಹೌದು.

ಅರಬ್ ರಾಷ್ಟ್ರವಾದವೆಂದರೆ?

ಸೌದಿ ಅರೇಬಿಯಾ, ಈ ಸಮೂಹದ ಮಹತ್ವದ ದೇಶ. ಅರಬ್ ರಾಷ್ಟ್ರವಾದದ ಉದಯವಾದುದೇ ಇಲ್ಲಿಂದ. ಅರಬರ ತಂಡಗಳು ಇಲ್ಲಿಂದಲೇ ಹೊರಟು ದೂರ ತೀರಗಳನ್ನಾಕ್ರಮಿಸಿದ್ದು. ಅರೇಬಿಕ್ ಇವರ ಭಾಷೆ ಮತ್ತು ಇಸ್ಲಾಂ ಇವರ ಧರ್ಮ. ಎಲ್ಲ ದೇಶಗಳ ಅರಬ ಸಮೂಹವನ್ನು ಭಾವನಾತ್ಮಕವಾಗಿ ಒಂದೆಡೆಗೆ ಬಂಧಿಸಿಟ್ಟಿರುವ ಅಂಶಗಳೆಂದರೆ ಈ ಭಾಷೆ ಮತ್ತು ಧರ್ಮಗಳು. ಒಂದು ಕಾಲಕ್ಕೆ ಸ್ಪೇನದ ತನಕ ರಾಜ್ಯ ವಿಸ್ತರಿಸಿ ಜಗತ್ತಿಗೆ ಅತ್ಯುತ್ತಮ ನಾಗರಿಕತೆಯನ್ನು ನೀಡಿದವರು ಈ ಜನ. ಮಧ್ಯಯುಗದಲ್ಲಿ ಇವರ ಸಾಮ್ರಾಜ್ಯ ಪತನಗೊಂಡು ಉತ್ತರ ಒಟ್ಟೋಮನ್ನರು ಪ್ರಬಲರಾದರು. ಮುಂದೆ 18ನೇ ಶತಮಾನ

ಎಣ್ಣೆ ಯುದ್ಧಕ್ಕೆ ಮುನ್ನ

ರಾಜಕೀಯಕ್ಕೆ ಬರುವ ಮುನ್ನ ಹದಿನಾಲ್ಕು ವರ್ಷಗಳ ಕಾಲ ಅಮೆರಿಕದ ಅಧ್ಯಕ್ಷ ಜಾರ್ಜ್ ಬುಷ್ ಎಣ್ಣೆ ವ್ಯಾಪಾರಿಯಾಗಿದ್ದರೆಂಬುದು ಅನೇಕರಿಗೆ ಗೊತ್ತಿರಲಿಕ್ಕಿಲ್ಲ! ಇವತ್ತಿನ 'ಎಣ್ಣೆ ಯುದ್ಧ'ಕ್ಕಿದು ಸಂಬಂಧವಿರಲಿಕ್ಕಿಲ್ಲ ಬಿಡಿ. ಅಂತೆಯೇ ದ್ವಿತೀಯ ಜಾಗತಿಕ ಯುದ್ಧದಲ್ಲಿ ಇದೇ ಬುಷ್ ನೌಕಾ ಪಡೆ ಸೇರಿದ್ದು ಕೂಡ ಕೊಲ್ಲಿಯತ್ತ ತೇಲಿ ಬರಲು ಕಾರಣವಾಗಿರಲಿಕ್ಕಿಲ್ಲ.

ಬುಷ್ ಟೆಕ್ಸಾಸ್ ರಾಜ್ಯದ ರಿಪಬ್ಲಿಕನ್ ಪಕ್ಷವನ್ನು ಗಟ್ಟಿಗೊಳಿಸಿದವರು. ಕೆಲಕಾಲ ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಅಮೆರಿಕದ ಪ್ರತಿನಿಧಿಯೂ, ಚೀನದಲ್ಲಿ ಅಮೇರಿಕದ ರಾಯಭಾರಿಯೂ ಆಗಿದ್ದ ಬುಷ್ ಕೆಲಕಾಲ ಅಮೆರಿಕದ ಕುಪ್ರಸಿದ್ಧ ಬೇಹುಗಾರ ಸಂಸ್ಥೆಯಾದ ಸಿ.ಐ.ಎ.ದ ನಿರ್ದೇಶಕರೂ ಆಗಿದ್ದರು. ರೊನಾಲ್ಡ್ ರೇಗನ್ ಕಾಲದಲ್ಲಿ ಅವರಿಗೆ ಅಮೆರಿಕದ ಉಪಾಧ್ಯಕ್ಷ ಸ್ಥಾನ ದೊರಕಿತು. ತಮ್ಮ ನಿಲುವುಗಳ ಬಗ್ಗೆ ಎಂದಿಗೂ ಸ್ಪಷ್ಟತೆ ಒದಗಿಸದ ಬುಷ್ 'ಬಣ್ಣವಿಲ್ಲದ ರಾಜಕಾರಣಿ' ಎಂದೇ ಪ್ರಸಿದ್ಧರು. ಕೊಟ್ಟ ಮಾತಿಗೆ ತಪ್ಪುವುದರಲ್ಲಿ ನಿಸ್ಸೀಮರು.

ರಷಿಯಾ ತನ್ನ ಆಂತರಿಕ ಕ್ಷೋಭೆಗಳಲ್ಲಿ ಸಿಕ್ಕಿಕೊಂಡಿರುವಾಗ ಸಂ.ರಾ.ಸಂಸ್ಥೆಯಲ್ಲಿ ಮೇಲುಗೈ ಪಡೆಯುವುದರಲ್ಲಿ ಸಫಲರಾದ ಬುಷ್ ಎಂಥ ಪ್ರತಿಭಾವಂತ ತಂತ್ರಗಾರ ಎಂಬುದು ಸಾಬೀತಾದ ವಿಷಯವೇ. ಆದರೆ ಕೊಲ್ಲಿ ಯುದ್ಧ ಆರಂಭವಾದಾಗಿನಿಂದ ಬುಷ್ ಜಗತ್ತಿನ ನಾನಾ ಕಡೆಗಳಿಂದ ಪ್ರತಿರೋಧ, ಪ್ರತಿಭಟನೆ, ಪ್ರದರ್ಶನಗಳನ್ನೆದುರಿಸಿದ್ದಾರೆ. ವಿಯೆಟ್ನಾಂ ವಿರುದ್ಧ ಮೂಗು ಕೊಯ್ದುಕೊಂಡ ನೆನಪುಗಳಿನ್ನೂ ಅಮೆರಿಕೆಯ ಪ್ರಜೆಗಳು ಮರೆತಿಲ್ಲ. ಈ ಯುದ್ಧದ 'ಸೋಲುಗೆಲುವು'ಗಳು ಬುಷ್‌ರ ರಾಜಕೀಯ ಭವಿಷ್ಯವನ್ನು ನಿರ್ಧರಿಸುತ್ತವೆಂಬುದು ನಿಜ, ಆದರೆ ಈ ಯುದ್ಧದ 'ಆಗುಹೋಗು'ಗಳು ಜಗತ್ತಿನ ಭವಿಷ್ಯವನ್ನೇ ನಿರ್ಧರಿಸಲಿವೆ ಎಂಬುದು ಹೆಚ್ಚು ನಿಜ.


ದಲ್ಲಿ ಅರೇಬಿಯಾದಲ್ಲಿ ವಹಾಬ ಪಂಥದ ರೂಪದಲ್ಲಿ ಅರಬ್ ರಾಷ್ಟ್ರವಾದದ ಆಂದೋಲನ ಪ್ರಾರಂಭವಾಗಿ ಮೊರೊಕ್ಕೋದಿಂದ ಇರಾಕ್‌ದ ವರೆಗೂ ಹಬ್ಬಿತು.

ಹಲವಾರು ಬಣಗಳಲ್ಲಿ ವಿಂಗಡಿತರಾಗಿದ್ದ ಅರಬರನ್ನು 1926ರಲ್ಲಿ ಇಬ್ನ ಸೌದ್ ಅವರು ಅವರನ್ನೆಲ್ಲ ಒಗ್ಗೂಡಿಸಿ ಸೌದಿ ಅರೇಬಿಯಾ ರಾಜ್ಯವನ್ನು ನಿರ್ಮಿಸಿದರು. ಅದಕ್ಕೆ ಕೆಲವರ್ಷಗಳ ಮುಂಚೆ 1920ರಲ್ಲಿ ಇಲ್ಲಿ ಕಲ್ಲೆಣ್ಣೆಯ ನಿಕ್ಷೇಪಗಳು ಬಾಯ್ತೆರೆದುಕೊಂಡಾಗ ಜಗತ್ತಿನ ಸಂಪತ್ತೆಲ್ಲ ಈ ಮರಳುಗಾಡಿಗೆ ಹರಿದು ಬಂತು. ಇವತ್ತಿಗೆ ಕಲ್ಲೆಣ್ಣೆ ಸರಬರಾಜಿನಲ್ಲಿ ಸೌದಿ ಅರೇಬಿಯಾಕ್ಕೆ ಜಗತ್ತಿನಲ್ಲೇ ಪ್ರಥಮ ಸ್ಥಾನ!

ಇದರ ವಾಯುವ್ಯಕ್ಕಿರುವುದೇ ಇವತ್ತಿನ ಶಾಪಗ್ರಸ್ಥ ಭೂಮಿ ಕುವೈತ್!

ಭೂಮಧ್ಯ ಸಮುದ್ರದ ದಂಡೆಯ ಮೇಲಿನ ದೇಶಗಳಾದ ಲೆಬನಾನ್, ಜೋರ್ಡಾನ್, ಸಿರಿಯಾ ಮತ್ತು ಇಸ್ರೇಲ್‌ಗಳು ಏಶಿಯಾ ಮೈನರ್ ದೇಶಗಳೆಂದು ಕರೆಸಿಕೊಳ್ಳುತ್ತವೆ. ಏಸುವಿನ ದಯಾಮಯ ಪಾದಸ್ಪರ್ಶಕ್ಕೆ ಪುಳಕಿತಗೊಂಡ ಈ ನೆಲಗಳಿಂದು ಬಹು ರಾಷ್ಟ್ರೀಯ ಪಡೆಗಳ ಟ್ಯಾಂಕರುಗಳ ವಜ್ಜೆಯಿಂದ ಕಿರುಗುಡುತ್ತಿವೆ.

ಚಿಕ್ಕ ದೇಶವಾದ ಲೆಬನಾನ್‌ದಲ್ಲಿ ಮೆರೊನೈಟ್ ಕ್ರೈಸ್ತರೂ, ಡ್ರೂಜ್ ಪಂಥದ ಮುಸ್ಲಿಮರೂ ಇದ್ದು, ಇಲ್ಲಿ ರಾಜ್ಯ ಧರ್ಮ ಕ್ರಿಶ್ಚಿಯಾನಿಟಿಯಾಗಿದೆ. ಬಂದರು ನಗರಿ ಬೈರೂಟ್ ಇದರ ರಾಜಧಾನಿ. ಇದು ಪಶ್ಚಿಮ ಏಶಿಯಾದ ಭೂಪ್ರದೇಶಕ್ಕೆ ಭೂಮಧ್ಯ ಸಮುದ್ರದ ಮೂಲಕ ಪ್ರವೇಶವನ್ನು ಕೊಡುತ್ತದೆ. ಕ್ರೈಸ್ತ ಹಾಗೂ ಮುಸ್ಲಿಮರ ನಡುವಿನ ಕಲಹ ಈ ನೆಲವನ್ನು ಇತ್ತೀಚೆಗೆ ಘಾಸಿಗೊಳಿದೆ. 1976ರಲ್ಲಿ ಕ್ರೈಸ್ತ-ಮುಸ್ಲಿಂ ಕಲಹ ನಡೆದಾಗ ಸಮೀಪದ ಮುಸ್ಲಿಂ ರಾಷ್ಟ್ರವಾದ ಸಿರಿಯಾ ಸೈನ್ಯ ಕಳುಹಿಸಿ ಶಾಂತಿಸ್ಥಾಪನೆಗೆ ನೆರವು ನೀಡಿತ್ತು.



ಇಸ್ರೇಲ್ ಸಮಸ್ಯೆ

ಇದರ ದಕ್ಷಿಣಕ್ಕಿರುವ ಪುಟ್ಟ ನಾಡೇ ಇಸ್ರೇಲ್! ಜ್ಯೂಗಳ ಬೀಡು. ಕ್ರಿ.ಶ. 70ರಲ್ಲಿಯೇ ನೆಲೆ ಕಳೆದುಕೊಂಡ ಇಸ್ರೇಲಿನ ಯಹೂದಿಗಳು ಕಷ್ಟಸಹಿಷ್ಣುಗಳು. ನಾನಾ ದೇಶಗಳಲ್ಲಿ ಬದುಕಿ ಬೆಳೆದವರು. 19ನೇ ಶತಮಾನದಲ್ಲಿ ಯಹೂದಿ ರಾಷ್ಟ್ರವಾದ ಹಾಗೂ 'ಜಿಯೋನಿಝಮ್'ಗಳ ಅಲೆ ಎದ್ದಾಗ ಎರಡು ಸಾವಿರ ವರ್ಷಗಳಿಂದ ತಾಯ್ನಾಡಿಗಾಗಿ, ತಮ್ಮ ಪವಿತ್ರ ಭೂಮಿಗಾಗಿ ಹಂಬಲಿಸುತ್ತಿದ್ದ ಯಹೂದ್ಯರು ತಮ್ಮ ಭಾವನೆಗಳನ್ನು ಬಹಿರಂಗಗೊಳಿಸಿದರು. 1917ರ ಜಾಗತಿಕ ಯುದ್ಧಾನಂತರ ಪ್ಯಾಲಸ್ತೀನವೆಂದು ಕರೆಸಿಕೊಳ್ಳುತ್ತಿದ್ದ ಯಹೂದಿಗಳ ತಾಯಿನಾಡನ್ನು 'ಮ್ಯಾಂಡೇಟ್' ಪ್ರದೇಶವನ್ನಾಗಿ ಘೋಷಿಸಿ ಅದನ್ನು ಬ್ರಿಟಿಶರ ಅಧೀನ ಮಾಡಲಾಯಿತು. ಆಗ ಈ ನೆಲದಲ್ಲಿದ್ದವರು ಶೇಕಡ 95ರಷ್ಟು ಪ್ಯಾಲಸ್ತೀನ ಮುಸ್ಲಿಮರು!

ಮುಂದೆ 1945ರಲ್ಲಿ ಎರಡನೆ ಜಾಗತಿಕ ಯುದ್ಧ ಮುಗಿದ ಮೇಲೆ ಈ ನಾಡನ್ನು ಸಂ. ರಾ. ಸಂಸ್ಥೆಯ ನಿರ್ಣಯದಂತೆ ಯಹೂದ್ಯರಿಗೆ ಬಿಟ್ಟುಕೊಡಲಾಯಿತು. ಎರಡು ಸಾವಿರ ವರ್ಷಗಳ ಹಿಂದೆ ತಾಯಿನಾಡು ತೊರೆದು ಹೋಗಿದ್ದ ಯಹೂದ್ಯರು 102 ದೇಶಗಳಿಂದ ಹಿಂತಿರುಗಿ ಬಂದು, ಎರಡು ಸಾವಿರ

ವರ್ಷಗಳಿಂದ ನೆಲೆಗೊಂಡಿದ್ದ ಪ್ಯಾಲಸ್ತೀನ್ ಮುಸ್ಲಿಮರನ್ನು ಹೊರಹಾಕಿದರು!

ನಿರಾಶ್ರಿತ ಪ್ಯಾಲಸ್ತೀನಿಯನ್ನರೀಗ ಯಾಸೀರ್ ಅರಾಫತ್‌ರ ನೇತೃತ್ವದಲ್ಲಿ ಪ್ಯಾಲಸ್ತೀನ ವಿಮೋಚನಾ ರಂಗದ ಧ್ವಜದಡಿಯಲ್ಲಿ ನೆಲಕ್ಕಾಗಿ ಹೋರಾಟ ಮಾಡುತ್ತಿದ್ದಾರೆ! 1948ರಿಂದ ತಮ್ಮ ಗಡಿಗಳನ್ನು ವಿಸ್ತರಿಸುತ್ತ ಬಂದಿರುವ ಇಸ್ರೇಲ್, ಪ್ಯಾಲಸ್ತೀನಿಯನ್ನರಿಗಾಗಿ ಸಂ. ರಾ. ಸಂಸ್ಥೆ ಕೊಟ್ಟ ಭೂಮಿಯನ್ನು ನುಂಗಿ ಕುಳಿತಿದೆ. ಜೋರ್ಡಾನದ ಪಶ್ಚಿಮ ದಂಡೆ, ಸಿರಿಯಾಕ್ಕೆ ಸೇರಿದ ಗೋಲಾನ್ ದಿಬ್ಬ, ಗಾಝಾ ಪಟ್ಟಿ ಮುಂತಾದವು ಇಸ್ರೇಲ್‌ನ ಸೈನ್ಯಾಕ್ರಮಣಕ್ಕೆ ತುತ್ತಾಗಿವೆ. ರಾತ್ರೋರಾತ್ರಿ ಯುದ್ಧ ಘೋಷಿಸಿ ಆರೇ ದಿನಗಳಲ್ಲಿ ಈ ಪ್ರದೇಶಗಳನ್ನಾಕ್ರಮಿಸಿಕೊಂಡಿರುವ ಇಸ್ರೇಲ್, ಇವುಗಳನ್ನು ಬಿಟ್ಟುಕೊಡಲು ಸಿದ್ಧವಿದೆಯಾದರೂ, ತನ್ನ ಸ್ವತಂತ್ರ ಅಸ್ತಿತ್ವವನ್ನು ಅರಬ್ ದೇಶಗಳು ಒಪ್ಪಿಕೊಂಡು ಮನ್ನಣೆ ನೀಡಬೇಕು ಎಂಬುದು ಅದರ ಷರತ್ತು.

ಇಸ್ರೇಲಿನ ಉತ್ತರಕ್ಕಿರುವ ಜೋರ್ಡಾನ್ 1927ರಿಂದ ಬ್ರಿಟಿಶ್‌ರ ಹಿಡಿತದಲ್ಲಿದ್ದು 1946ರಲ್ಲಿ ಸ್ವತಂತ್ರವಾದ ದೇಶ.

ಟರ್ಕಿ ಮತ್ತು ಇರಾಕ್ ನಡುವಣ ಭೂಮಿಯೇ ಸಿರಿಯಾ. ಇರಾಕ್‌ನೊಂದಿಗೆ ಸಮಾನ ಗಡಿ ಹೊಂದಿರುವ ಟರ್ಕಿ, ಈಗ ನಡೆದಿರುವ ಯುದ್ಧದ ಎರಡನೆ ರಣಾಂಗಣವೆನ್ನಿಸಿಕೊಂಡಿದೆ. ಇದರ ರಾಜಧಾನಿ ದಮಾಸ್ಕಸ್ ಹಿಂದೊಮ್ಮೆ ಓಮೆಯಾದ್ ಸಾಮ್ರಾಜ್ಯದ ಮುಖ್ಯ ಸ್ಥಳವಾಗಿತ್ತು. 1930ರ ತನಕ ಇದು ಫ್ರೆಂಚರ ಹಿಡಿತದಲ್ಲಿತ್ತು.

ಇದರ ಉತ್ತರ ದಿಕ್ಕಿಗಿರುವ ಜಗತ್ಪ್ರಸಿದ್ಧ 'ಅನಟೋಲಿಯಾ' ಪ್ರದೇಶವನ್ನೇ ನಾವಿಂದು ಟರ್ಕಿ ಎನ್ನುತ್ತೇವೆ. ಯುರೋಪ ಹಾಗೂ ಏಶಿಯಗಳನ್ನು ಜೋಡಿಸುವ ಹೊಸ್ತಿಲಿನಂತಿರುವ ಟರ್ಕಿಯ ಕಾನ್‌ಸ್ಟಾಂಟಿನೋಪಲ್ ಬಂದರು ಪಟ್ಟಣ ಹಿಂದೊಮ್ಮೆ ಜಾಗತಿಕ ಇತಿಹಾಸವನ್ನೇ ಬದಲಿಸಿದ ಆಯಕಟ್ಟಿನ ಜಾಗವಾಗಿತ್ತು. ಇದಕ್ಕೆ 'ಇಸ್ತಾಂಬುಲ್' ಎಂಬ ಹೆಸರೂ ಇತ್ತು. 1923ರಲ್ಲಿ ಖಲೀಫರ ಆಳ್ವಿಕೆ ಕೊನೆಗೊಂಡು ಕೆಮಾಲ್ ಪಾಶಾ ನೇತೃತ್ವದಲ್ಲಿ ನಡೆದ ಕ್ರಾಂತಿಯ ಪರಿಣಾಮವಾಗಿ ಇಲ್ಲಿ ಗಣ ರಾಜ್ಯದ ರಚನೆಯಾಯಿತು.

ಆತ ಉದ್ಭವಿಸಿದ

ಹೀಗೆ ಹಲವಾರು ವಿಭಿನ್ನ ಸಂಸ್ಕೃತಿಗಳುಳ್ಳ ದೇಶಗಳಿಂದ ಸುತ್ತುವರೆಯಲ್ಪಟ್ಟ ಇರಾಕ್, ಎಲ್ಲ ಅರಬ್ ದೇಶಗಳನ್ನು ಇಂದು ಎದುರು ಹಾಕಿಕೊಂಡಿದೆ. ಇರಾಕ್‌ನ ಇತಿಹಾಸವೂ ರೋಚಕವಾದದ್ದೇ! ಇರಾಣದ ಕೊಲ್ಲಿಯಿಂದ ಪ್ರಾರಂಭವಾಗಿ ಸಿರಿಯಾದ ತನಕ ಹಬ್ಬಿದ ಈ ಪ್ರದೇಶವನ್ನು 'ದಿ ಫರ್ಟೈಲ್ ಕ್ರೆಸೆಂಟ್' ಎಂದು ಕರೆಯುತ್ತಿದ್ದ ಕಾಲವಿತ್ತು. ಕ್ರಿಸ್ತಪೂರ್ವ 3500ರಲ್ಲಿ ಮೆಸೊಪೊಟೇಮಿಯಾ ನಾಗರಿಕತೆ ಪಕಳೆ ಬಿಚ್ಚಿದ ನಾಡಿದು. ಮರಳುಗಾಡಿನ ಸುಡುಬಿಸಿಲಿನ ಮಧ್ಯೆ ತಂಪುದಾಣದಂತಿರುವ ಇರಾಕ್, ಸಿಕಂದರ್ ಬಾದಶಾಹ, ಒಟ್ಟೊಮನ್ ತುರ್ಕೀಯರು, ಅಬ್ಬಾಸಿದ್ ಖಲೀಫರು, ಬ್ರಿಟಿಷರು .... ಹೀಗೆ ಅನೇಕರನ್ನು ಆಕರ್ಷಿಸಿದ ನೆಲ. 1920ರ ತನಕ ಈ ದೇಶ ಒಟ್ಟೊಮನ್ ಸಾಮ್ರಾಜ್ಯದಲ್ಲಿತ್ತು. ಮೊದಲ ಜಾಗತಿಕ ಯುದ್ಧದ ನಂತರ ಇದನ್ನು ಬ್ರಿಟನ್ನಿಗೆ ಒಪ್ಪಿಸಲಾಗಿತ್ತು. 1941ರಲ್ಲಿ ಬ್ರಿಟಿಷರು ಇರಾಕ್‌ಗೆ ಕೃತ್ರಿಮ ಸ್ವಾತಂತ್ರ್ಯ ನೀಡಿ ಫೈಜಲ್ ಎಂಬ ಕೈಗೊಂಬೆ ಅರಸನನ್ನು ಪಟ್ಟಕ್ಕೆ ತಂದರು. 1945ರಲ್ಲಿ ಅಬ್ದುಲ್ ಕರೀಮ ಕಾಸೀಮ್ ಈ ಅರಸನನ್ನು ಕೊಂದು ಅಧಿಕಾರಕ್ಕೆ ಬಂದ. ಆದರೆ ಕಮ್ಯುನಿಸ್ಟ ಆಶೋತ್ತರಗಳನ್ನು ಹೊತ್ತ ಇರಾಕ್ ತರುಣರು ಸೋವಿಯತ್ ರಷ್ಯಾದತ್ತ ಆಸೆಯಿಂದ ನೋಡಿದರು. ಸಿರಿಯಾ ಮತ್ತು ಈಜಿಪ್ತದ ವಿಶ್ವವಿದ್ಯಾಲಯಗಳಲ್ಲಿ ಓದಿ ಬಂದ ಕೆಲ ಯುವಕರು 1947ರ ಏಪ್ರಿಲ್ 4ರಂದು ಮೊದಲು ಸಿರಿಯಾದಲ್ಲಿ 'ಬಾತ್ ಪಕ್ಷ'ವನ್ನು ಸ್ಥಾಪಿಸಿದರು. ಅದರ ಶಾಖೆಗಳು ನಿಧಾನವಾಗಿ ಇರಾಕ್‌ನ ಪಟ್ಟಣಗಳಲ್ಲಿ ಟಿಸಿಲೊಡೆದವು. ಅಬ್ದುಲ್ ಕರೀಮ ಕಾಸೀಮ್‌ರ ದಬ್ಬಾಳಿಕೆ, ಕ್ರೌರ್ಯಗಳಿಂದ ಸಿಟ್ಟಿಗೆದ್ದ ಈ ಕಾರ್ಯಕರ್ತರು ಚುರುಕಾದಂತೆಲ್ಲ, ಕಾಸೀಮರ

ಸರಕಾರ ಅವರನ್ನು ಮುರಿಯಲು ಹವಣಿಸಿತು. 1959ರಲ್ಲಿ ಭೂಗತ ಚಟುವಟಿಕೆಗಳಲ್ಲಿ ತೊಡಗಿದ ಬಾತ್ ಪಕ್ಷದ ಕೆಲ ಕಾರ್ಯಕರ್ತರು ಒಬ್ಬ ಯುವಕನ ನೇತೃತ್ವದಲ್ಲಿ ಕಾಸೀಮ್‌ನ ಕೊಲೆಗೆ ಯತ್ನಿಸಿ ವಿಫಲರಾದರು. ಆದರೆ ಇಡೀ ಕಾರ್ಯಾಚರಣೆ ದೇಶದಲ್ಲಿ ಸಂಚಲನವುಂಟು ಮಾಡಿತ್ತು. ಆ ಕಾರ್ಯಾಚರಣೆಯ ರೂವಾರಿ ಮತ್ತು ಯುವ ಮುಖಂಡನೇ ಈ ಸದ್ದಾಂ ಹುಸೇನ್!

ಕೊಲೆ ಯತ್ನದಲ್ಲಿ ಸದ್ದಾಂ ಕಾಲಿನ ಮೂಳೆ ಮುರಿಯಿತು. ಆತ ಅತಿ ಕಷ್ಟದಿಂದ ಇರಾಕ್ ಬಿಟ್ಟು ಸಿರಿಯಾಕ್ಕೆ ಪರಾರಿಯಾದ. ಅಲ್ಲಿಂದ ಈಜಿಪ್ತದ ಕೈರೋ ತಲುಪಿ ಅಲ್ಲಿನ ಅಲ್ ಅಜ್ಹರ್ ವಿಶ್ವವಿದ್ಯಾಲಯದಿಂದ ಪದವಿ ಪಡೆದುಕೊಂಡ. ಅಂದಿನ ಅರಬ್ ಯುವಕರ ಕಣ್ಮಣಿ ಹಾಗೂ ನೇತಾರ ಜಮಾಲ್ ಅಬ್ದುಲ್ ನಾಸೀರ್‌ರೆಡೆಗೆ ಈತ ಆಕರ್ಷಿತನಾದ. ಅಲ್ಲದೆ ನಾಸೀರ್‌ರ ನೆಚ್ಚಿನ ಹುಡುಗನೂ ಆದ.

ಮತ್ತೆ ಇರಾಕ್‌ಗೆ ಮರಳಿದ ಸದ್ದಾಂ ಭೂಗತನಾಗಿದ್ದುಕೊಂಡು 1963ರ ಫೆಬ್ರುವರಿ 8ರಂದು ಅಬ್ದುಲ್ ಕರೀಮ್ ಕಾಸೀಮ್ ವಿರುದ್ಧ ಬಂಡಾಯವೆಬ್ಬಿಸಿದ. ಪದಚ್ಯುತಿಗೊಳಿಸುವಲ್ಲಿ ಸಫಲನೂ ಆದ. ಆದರೆ ಬಾತ್ ಪಕ್ಷ ಆಗ ಆಳಿದ್ದು ಕೇವಲ ಒಂಬತ್ತು ತಿಂಗಳ ತನಕ. ಮುಂದೆ ಮತ್ತೆ ಪಕ್ಷ ಭೂಗತವಾಯಿತು. ಸದ್ದಾಂ ನೆಲಮನೆ ಸೇರಿದ. ಅವತ್ತಿನ ಹಂತದಲ್ಲಿ ತುಂಬ ಕ್ರಾಂತಿಕಾರಿ ಎನಿಸಿದ್ದ ಬಾತ್ ಪಕ್ಷಕ್ಕೆ ರಶಿಯದ ನೆರವಿತ್ತು. ಮುಂದೆ 1968ರ ಜುಲೈ ತಿಂಗಳಲ್ಲಿ ಬಾತ್ ಪಕ್ಷ ಮತ್ತೆ ಅಧಿಕಾರಕ್ಕೆ ಬಂತು. ಸದ್ದಾಂ ತಾನೇ ತಾನಾಗಿ ವಿಜೃಂಭಿಸಿದ. ಅಂದಿನಿಂದ ಇಂದಿನ ತನಕ ಇರಾಕ್‌ನ ಚುಕ್ಕಾಣಿ ಈತನ ಕೈಯಲ್ಲೇ ಇದೆ.

ಕಮ್ಯೂನಿಸ್ಟ್ ಪಕ್ಷಗಳಂತೆಯೇ ಸಂಘಟಿತವಾಗಿರುವ ಬಾತ್ ಪಕ್ಷಕ್ಕೆ ಏಳು ಜನ ಸದಸ್ಯರ ಸಮಿತಿಯೊಂದಿದ್ದು ಅದನ್ನು ರೆವೊಲ್ಯೂಷನರಿ ಕಮ್ಯಾಂಡ್ ಕೌನ್ಸಿಲ್ ಎಂದು ಕರೆಯಲಾಗುತ್ತದೆ. ಇದು ಕಮ್ಯೂನಿಸ್ಟ್ ಪಕ್ಷಗಳ ಪಾಲಿಟ್ ಬ್ಯೂರೋ ಥರದ್ದು. ಇದಕ್ಕೂ ಸದ್ದಾಂ ಅಧ್ಯಕ್ಷತೆ. ಈ ಏಳು ಜನರ ಪೈಕಿ ಸದ್ದಾಂ, ಇಜ್ಜತ್ ಇಬ್ರಾಹಿಮ್ ಹಾಗೂ ಯಾಸೀಮ್ ರಮದಾನ್ ಒಂದು ತ್ರಿಕೂಟ ರಚಿಸಿಕೊಂಡಿದ್ದು ಸಮಸ್ತ ಅಧಿಕಾರವನ್ನು ಕೇಂದ್ರೀಕರಿಸಿಕೊಂಡಿದ್ದಾರೆ. ಸೌದಿ ಅರೇಬಿಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ಹೊರತಾಗಿ ಉಳಿದೆಲ್ಲ ಅರಬ್ ದೇಶಗಳಲ್ಲೂ ಬಾತ್ ಪಕ್ಷದ ಶಾಖೆಗಳಿವೆ. ಇವುಗಳ ಕಾರ್ಯಕರ್ತರಿಗೆ ಸದ್ದಾಂ ಕಲ್ಪಿಸಿಕೊಟ್ಟ ಕನಸುಗಳೆಂದರೆ, ಅರಬ್ ರಾಷ್ಟ್ರವಾದ, ಅರಬ್ ಪ್ರತಿಷ್ಠೆ, ಅರಬ್ ಪರಂಪರೆ, ಅರಬ್ ಆಸೆ-ಆಕಾಂಕ್ಷೆಗಳು .....! ಇತ್ಯಾದಿ.


ಎಲ್ಲ ಅರಬ್ ದೇಶಗಳೂ ಒಂದಾಗಿ ಒಂದೇ ಒಂದು ಅರಬ್ ರಾಷ್ಟ್ರ ನಿರ್ಮಾಣವಾಗಬೇಕು ಎಂಬುದು ಬಾತ್ ಪಕ್ಷದ ಅಂತಿಮ ಗುರಿ! ಈ ಬೃಹತ್ ಅರಬ್ ವಾದ (Pan Arabism) ಶುರುವಾದಾಗಿನಿಂದಲೂ ಕೊಲ್ಲಿಯ ಶೇಖ್, ಸುಲ್ತಾನ್, ಅಮೀರರಿಗೆ ನಿದ್ದೆ ಹತ್ತುತ್ತಿಲ್ಲ. ಕಣ್ಣು ಮುಚ್ಚಿದರೆ ಸಾಕು ಸದ್ದಾಂ ಗುಟುರು ಕೇಳಿಸಿ ಬೆಚ್ಚಿಬೀಳುತ್ತಾರೆ.

ಕಿರುಲಿಕೊಂಡಿತು ಕುವೈತ್

ಈ ಶೇಖರಲ್ಲಿ ಮೊದಲು ಕಿರುಲಿಕೊಂಡ ಪ್ರಭುವೆಂದರೆ ಕುವೈತ್‌ನ ಅಮೀರನಾದ ಶೇಖ್ ಜಬಕ್ ಅಲ್ ಅಹಮದ್ ಅಲ್ ಜಬರ್ ಅಲ್ ಸಭಾ! ಕೇವಲ ಇಪ್ಪತ್ನಾಲ್ಕು ಸಾವಿರ ಚೌರಸ್ ಕಿಲೋಮೀಟರುಗಳ ವಿಸ್ತಾರವುಳ್ಳ ಪುಟ್ಟ ಕೋಟೆಯ ದೊರೆ 'ಕಲ್ಲೆಣ್ಣೆ'ಯೆಂಬ ಕಪ್ಪು ಬಂಗಾರದ ಆಗರ್ಭ ಶ್ರೀಮಂತ. ಸದ್ದಾಂನ ಸೈನ್ಯ 1990ರ ಆಗಸ್ಟ್ 2ರಂದು ಕುವೈತ್‌ನ ರಸ್ತೆಗಳಲ್ಲಿ ಬೂಟು ಕಟಕಟಿಸುವುದಕ್ಕೆ ಕೆಲವೇ ಗಂಟೆಗಳ ಮೊದಲು ಈ ದೊರೆ ಅಮೀರ್ ಅಲ್ ಸಬಾಹ್ ದೇಶ ಬಿಟ್ಟು ಸೌದಿ ಅರೇಬಿಯಾದ ರಿಯಾದ್ ನಗರಕ್ಕೆ ಪರಾರಿಯಾದರು. ಅಲ್ಲಿನ ದೊರೆ ಅಮೀರ್ ಇಬ್ನ ಫಹಾದ್‌ರನ್ನು ತಬ್ಬಿಕೊಂಡು ಗೋಳೋ ಎಂದು ಅತ್ತರು.

ಹೀಗೆ ಅಳಲು ಕಾರಣವೂ ಇತ್ತು. ಇರಾಣ

ಕೊಲ್ಲಿ: ಸೈನಿಕ ಬಲಾಬಲ



ಮೊಂದಿಗೆ ಸದ್ದಾಂ ಕಾದುತ್ತಿದ್ದ ವೇಳೆಯಲ್ಲಿ ಕುವೈತ್‌ನ ದೊರೆ ಹತ್ತು ಬಿಲಿಯನ್ ಡಾಲರುಗಳ ಸಾಲವನ್ನು ಕೊಟ್ಟು ಸದಾಂಗೆ ಬೆಂಬಲ ಸೂಚಿಸಿದ್ದರು. ಅದರಿಂದ ಸಂತುಷ್ಟನಾದ ಸದ್ದಾಂ, ಉಪಕಾರ ಸ್ಮರಣೆಯೆಂಬಂತೆ 'ಅಲ್-ರಫೀದಿನ್' ಎಂಬ ಬಿರುದನ್ನೂ ಕುವೈತ್ ದೊರೆಗೆ ಕರುಣಿಸಿದ್ದ. ಇರಾಕಕ್ಕೆ ಸಹಾಯ ಮಾಡಿದ ತಪ್ಪಿಗಾಗಿ ಕುವೈತ್ ದೊರೆಯ ಮೇಲೆ ಇರಾಣ ಕೊಲೆಗಡುಕರನ್ನು ಕಳಿಸಿತ್ತು. ಇಷ್ಟೆಲ್ಲ ಆದ ಮೇಲೂ ಸದ್ದಾಂ ಕುವೈತ್ ಮೇಲೆ ದಾಳಿ ಮಾಡಿ ಅರಬ್ ದೊರೆಯನ್ನು ಊರು ಬಿಡಿಸಿದ್ದ! ಈಗ ಅರಬ್ ದೊರೆ ಸೌದಿ ಅರೇಬಿಯಾದ ತೈಫ್ ಬೆಟ್ಟದ ಮೇಲಿನ ಷರಟಾನ್ ಹೊಟೆಲೊಂದರಲ್ಲಿ ಕೂತು ಎದುರಿಗೇ ಕಾಣುವ ಪವಿತ್ರ ಮಕ್ಕಾ ನಗರಿಯತ್ತ ಅಸಹಾಯಕ ಕೈಗಳನ್ನು ಚಾಚಿ ಪ್ರಾರ್ಥಿಸುತ್ತಿದ್ದಾನೆ. ಕಳೆದ 240 ವರ್ಷಗಳಿಂದ ಕುವೈತವನ್ನಾಳಿದ ಮನೆತನ ಈತನದು. ಈತನಿಗೀಗ ಅರವತ್ತನಾಲ್ಕು ವರ್ಷಗಳು!

'ಪುಟ್ಟ ಕೋಟೆ' ಎಂಬುದು 'ಕುವೈತ್' ಶಬ್ದದ ಅರ್ಥ. 18ನೇ ಶತಮಾನದಲ್ಲಿ 'ಉತುಬ್' ಬುಡಕಟ್ಟಿನ ಜನ ಬಂದು ಈ ದ್ವೀಪದಲ್ಲಿ ನೆಲೆಗೊಂಡರು. ಅಲ್-ಸಭಾಹ, ಅಲ್-ಖಲೀಫಾ ಮತ್ತು ಅಲ್-ಜಹೀದ್ ಎಂಬ ಪಂಗಡಗಳು ಈ ಬುಡಕಟ್ಟಿನ ಪ್ರಮುಖ ಗುಂಪುಗಳು. 1753ರಲ್ಲಿ ಇವರೆಲ್ಲ ಒಂದಾಗಿ ಶೇಖ್ ಸಬಾಹ್ ಬಿನ್ ಜಬೀರ್ ಎಂಬುವವನ ಕೈಗೆ ಆಡಳಿತ ನಡೆ

ಸುವ ಜವಾಬ್ದಾರಿ ಕೊಟ್ಟರು. ಆಗಿನಿಂದ ಅಲ್-ಸಭಾ ಕುಟುಂಬ ಕುವೈತದ ಆಡಳಿತ ನಡೆಸಿತು. 1899ರ ಹೊತ್ತಿಗೆ ಉತ್ತರದ ತುರ್ಕಿಗಳು ತಮ್ಮ ಮೇಲೆ ಆಕ್ರಮಣ ಮಾಡಿಯಾರೆಂದು ಹೆದರಿದ ಕುವೈತದ ದೊರೆ ಶೇಖ್ ಮುಬಾರಕ್ ಬ್ರಿಟಿಷರೊಂದಿಗೆ ರಾಜಕೀಯ ಒಪ್ಪಂದ ಮಾಡಿಕೊಂಡ.

ಎಲ್ಲ ಅನಾಹುತಗಳ ಆರಂಭವಾದದ್ದು 1943ರಲ್ಲಿ! ಈ ಪುಟ್ಟ ಕೋಟೆಯ ಗರ್ಭದಲ್ಲಿ ಕದಲುತ್ತಿದ್ದ 'ಕಪ್ಪು ಬಂಗಾರವಾದ ಕಲ್ಲೆಣ್ಣೆ'ಯ ಶೋಧವಾದದ್ದು ನಿಜಕ್ಕೂ ಕುವೈತದ ಇತಿಹಾಸದಲ್ಲಿ ದೊಡ್ಡ ಮೈಲಿಗಲ್ಲು. ಎರಡನೇ ಜಾಗತಿಕ ಯುದ್ಧದಲ್ಲೂ ಜಗತ್ತಿನ ಗಮನ ಈ ಗುಪ್ತ ನಿಧಿಯತ್ತ ಬೀಳಲಿಲ್ಲ. 1950ರಲ್ಲಿ ಅಮೀರ್ ಅಬ್ದುಲ್ಲಾ ಅಲ್ ಸಲೀಂ ಅಲ್-ಸಬಾಹ ಎಂಬಾತ ಅಧಿಕಾರದಲ್ಲಿದ್ದ. ಆಗ ಶುರುವಾಯಿತು. ಕಲ್ಲೆಣ್ಣೆಯ ಕರಡೀ ಕುಣಿತ! ಬ್ರಿಟಿಶರಿಂದ ಅದೊಂದು ತೆರನಾದ ಕೃತ್ರಿಮ ಸ್ವಾತಂತ್ರ್ಯ ದೊರಕಿತ್ತು. ಅದೇ ಹೊತ್ತಿಗೆ ಆದ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಕಲ್ಲೆಣ್ಣೆಗೆ ಭಾರೀ ಮಹತ್ವ ದೊರಕಿತು. ಅದೇ ಪ್ರಮುಖ ಇಂಧನವಾಯಿತು. ಜಗತ್ತಿನ ನಾನಾ ಮೂಲೆಗಳಿಂದ ಕುವೈತಕ್ಕೆ ಹಣದ ಹೊಳೆ ಹರಿದು ಬಂತು. ರಾತ್ರೋರಾತ್ರಿ ಶ್ರೀಮಂತರಾದ ಶೇಖರು ಸಹಜವಾಗಿಯೇ ಜಗತ್ತಿನ ಆರ್ಥಿಕ ವ್ಯವಸ್ಥೆಯ ಪ್ರಮುಖ ಕೀಲು ಎನ್ನಿಸಿಕೊಂಡರು. ಹದಿಮೂರನೇ ಅಮೀರರಾದ ಈಗಿನ ದೊರೆ ಅಲ್-ಸಬಾಹ್ ಪಟ್ಟವೇರುವ ಹೊತ್ತಿಗೆ ಜಗತ್ತಿನ ಅತಿದೊಡ್ಡ ಶ್ರೀಮಂತರ ಪೈಕಿ ಒಬ್ಬರಾಗಿದ್ದರು. ಕುವೈತ್ ಜಗತ್ತಿನ ಅತ್ಯಂತ ಶ್ರೀಮಂತ ರಾಷ್ಟ್ರವೆನಿಸಿಕೊಂಡಿತು.

ಉಳಿದ ಅರಬ್ ದೊರೆಗಳ ಮಕ್ಕಳಂತೆ ಕುವೈತದ ಅಲ್ ಸಬಾಹ ಪಾಶ್ಚಾತ್ಯ ದೇಶಗಳಲ್ಲಿ ವಿದ್ಯಾಭ್ಯಾಸ ಮಾಡದೆ ಕುವೈತದ ಪ್ರಥಮ ಶಾಲೆಯಾದ ಅಲ್-ಮುಬಾರಕಿಯಾದಲ್ಲಿ ಕಲಿತವರು. 1949ರಲ್ಲಿ ಸಾರ್ವಜನಿಕ ಜೀವನ ಪ್ರಾರಂಭಿಸಿದ ಅವರು 1966ರಲ್ಲಿ ಕುವೈತದ ಅಮೀರರಾದರು. ತುಂಬ ಧಾರ್ಮಿಕ ಸ್ವಭಾವದ ಈತ ಏಕಾಂತಪ್ರಿಯ. ನಲವತ್ತು ಮಕ್ಕಳ ತಂದೆ!

ಜಗತ್ತಿನ ಮೂರನೆಯ ಅತಿ ದೊಡ್ಡ ಕಲ್ಲೆಣ್ಣೆ ನಿಕ್ಷೇಪ ಹೊಂದಿರುವ ಕುವೈತ್ ಸಾಗರೋತ್ತರ ವ್ಯವಹಾರಗಳಲ್ಲಿ ನೂರು ಬಿಲಿಯನ್ ಡಾಲರುಗಳಷ್ಟು ಬಂಡವಾಳ ತೊಡಗಿಸಿದೆ. ಅದರ ಫಲವಾಗಿ ಪ್ರತಿನಿತ್ಯ ಇಪ್ಪತ್ತು ಬಿಲಿಯನ್ ಡಾಲರುಗಳಷ್ಟು ಆದಾಯ ಪಡೆಯುತ್ತಿದೆ. ಕಲ್ಲೆಣ್ಣೆ ಶೋಧ, ಹೋಟೆಲು ಉದ್ಯಮ, ಆಸ್ತಿ-ಪಾಸ್ತಿ ವ್ಯವಹಾರ, ಆಟೊಮೊಬೈಲ್, ರಾಸಾಯನಿಕ ಮತ್ತು ಇಂಜಿನಿಯರಿಂಗ್ ಉದ್ಯಮಗಳನ್ನಾರಿಸಿಕೊಂಡು ನಾನಾ ದೇಶಗಳಲ್ಲಿ ಹಣ ತೊಡಗಿಸಿರುವ ಕುವೈತದ ಅಮೀರರು ನ್ಯೂಯಾರ್ಕ್‌ನಲ್ಲಿ ತಮ್ಮ ಕೇಂದ್ರ ಕಛೇರಿ ಹೊಂದಿದ್ದಾರೆ.

ಯುದ್ಧವೆಂದರೆ ಸುದ್ದಿಯಲ್ಲ!

ಯುದ್ಧವೆಂದರೆ ವಾರ್ತೆಗಳನ್ನು ಕೇಳುವುದಲ್ಲ. ಸುದ್ದಿ ಓದುವುದಲ್ಲ. ಟಿ.ವಿ. ಮುಂದೆ ಕುಳಿತು ಲೊಚಗುಡುವುದಲ್ಲ. ಆ ರುದ್ರ ಭೀಕರತೆಯನ್ನು ದೂರ ಕುಳಿತು ಸವಿಯುವ ಕಾಲ ಮುಗಿಯಿತು. ಯುದ್ಧವೆಂಬ ತೋಳವೀಗ ಮನೆ ಬಾಗಿಲಿಗೇ ಬಂದು ನಿಂತಿದೆ!

'ಈ ಯುದ್ಧ, ಶಾಂತಿ ಸ್ಥಾಪನೆಗಾಗಿ!' ಎಂದು ಕೊಂಚವೂ ಮುಗುಳ್ನಗದೆ ಹೇಳುತ್ತಿರುವ ಜಾಗತಿಕ ಪೊಲೀಸ್ ಮ್ಯಾನ್ ಜಾರ್ಜ್ ಬುಶ್‌ರನ್ನು ನಂಬಲು ಸಾಧ್ಯವಾಗುತ್ತಿಲ್ಲ. ದ್ವಿತೀಯ ಜಾಗತಿಕ ಯುದ್ಧದ ನಂತರ ಜಗತ್ತಿನ ನಾನಾ ದೇಶಗಳನ್ನು ಸದ್ದಿಲ್ಲದೆ ಹೀರಿ ಸಮೃದ್ಧವಾಗಿ ಬೆಳೆದ ಅಮೆರಿಕಾ ಎಂಬ 'ಜಿಗಣೆ'ಗೆ ಬೇಕಾಗಿರುವುದು ಕುವೈತನ ಮತ್ತು ಅರಬ್ ಜಗತ್ತಿನ ತೈಲವೇ ಹೊರತು ಮತ್ತೇನೂ ಅಲ್ಲ.

'ಇದು ಸೈತಾನನ ವಿರುದ್ಧ ದೇವತೆಗಳ ಸಮರ' ಎಂದು ಕಿರುಚುತ್ತಿರುವ ಸದ್ದಾಂನ ಮಸಲತ್ತೂ ಸುಸ್ಪಷ್ಟ. ಇರಾನ್ ವಿರುದ್ಧ ಎಂಟು ವರ್ಷ ಕಾದಿದ ಸಮರೋತ್ಸಾಹಿ ಸದ್ದಾಂ, ಅಂದು ಕಮ್ಯೂನಿಸ್ಟ್ ವೀರನಂತೆ ಕಂಗೊಳಿಸಲು ಯತ್ನಿಸಿದರೆ, ಇಂದು ಧರ್ಮಯುದ್ಧದ ಮಾತನ್ನಾಡುತ್ತಿದ್ದಾನೆ. ಎಂಟು ವರ್ಷದ ಯುದ್ಧದಲ್ಲಿ ಖಾಲಿ

ಯಾಗಿ ಹೋದ ಇರಾಕನ್ನು ತುಂಬಿಸಿಕೊಳ್ಳಲು ಸದ್ದಾಂಗೆ ಕುವೈತನ್ನು ಕೊಳ್ಳೆ ಹೊಡೆಯುವ ನೀಚ ಜರೂರತ್ತು ಯಾವ ಮಟ್ಟದ್ದು ಎಂಬುದು ಕೂಡ ಅಷ್ಟೇ ಸ್ಪಷ್ಟವಾಗಿದೆ.

ಈ ಮಧ್ಯೆ ಆಸೆ ಬುರುಕ ಅರಬ್ ದೊರೆಗಳು ಅನವಶ್ಯಕ ಸ್ಪರ್ಧೆಗೆ ಬಿದ್ದು ತಮ್ಮ ನಿಯತ್ತು ಮರೆತು ಹೆಚ್ಚಿನ ಪ್ರಮಾಣದ ತೈಲ ಉತ್ಪಾದಿಸಿದ್ದು, ಅವುಗಳೊಂದಿಗೆ ಸ್ಪರ್ಧಿಸಲಾಗದೆ ಇರಾಕ್ ಕಂಗಾಲಾಗಿ ಜಗಳಕ್ಕಿಳಿದಿದ್ದು ಕೂಡ ಸ್ಪಷ್ಟ ಗೋಚರ. 'ಕಪ್ಪು ಬಂಗಾರದ ಗಣಿ' ಯಲ್ಲಿ ಪ್ರಾರಂಭವಾದ 'ರೊಳ್ಳೆ'ಯಲ್ಲಿ ಜಗತ್ತಿನ ಪ್ರತಿ ದೇಶಕ್ಕೂ ತನ್ನದೇ ಆದ ಆಸಕ್ತಿ, ಕುತೂಹಲ. ರಷಿಯದ ಮೌನದಿಂದ ಉತ್ತೇಜಿತಗೊಂಡ ಅಮೇರಿಕ ವಿಶ್ವಸಂಸ್ಥೆಯ ಗುರಾಣಿ ಅಡ್ಡವಾಗಿಸಿಕೊಂಡು ಸೌದಿಯ ಮರಳಿನ ಮೇಲೆ ಸೈನ್ಯ ಜಮಾಯಿಸಿದಾಗ ಉಳಿದ ದೇಶಗಳೂ ಬಂದು ಕಾಲು ಕೆದರತೊಡಗಿದವು.

ಸಂಧಾನಗಳೂ, ಶಾಂತಿ ಯತ್ನಗಳೂ, ಎಚ್ಚರಿಕೆಗಳೂ, ದಿಗ್ಬಂಧನಗಳೂ ಎಲ್ಲ ಮುಗಿದು ಗಡುವು ದಾಟಿತು. ಭಾರತದಲ್ಲಿ 1991ರ ಜನವರಿ 17ರ ಬೆಳಗಿನ ಜಾವ ಪಕಳೆ ಬಿಚ್ಚುತ್ತಿದ್ದಂತೆಯೇ ಅಮೆರಿಕಾ ನೇತೃತ್ವದ ಬಹುರಾಷ್ಟ್ರೀಯ ಪಡೆಗಳ ವಿಮಾನಗಳು ಮಿಡತೆಗಳಂತೆದ್ದವು. ಇರಾಕ್ ರಾಜಧಾನಿ ಬಾಗ್ದಾದಿನ ಮೇಲೆ ಬಾಂಬುಗಳ ಬಿರುಮಳೆ ಶುರುವಾಯ್ತು. ಜಗತ್ತಿನ ರಾಜತಾಂತ್ರಿಕರೆಲ್ಲ ತಡೆಯಬಯಸಿದ ಯುದ್ಧ ಆಗಿಯೇ ಹೋಯಿತು. ಎಂಥ ಯುದ್ಧವಿದು? ಪೂರ್ವದ ವಿರುದ್ಧ ಪಶ್ಚಿಮ, ಏಶಿಯಾ ವಿರುದ್ಧ ಯೂರೋಪ್, ಮುಸ್ಲಿಮರ ವಿರುದ್ಧ ಕ್ರಿಶ್ಚಿಯನ್ನರು, ಯೂರೋಪದ ಕೆಂಪು ಜನರ ವಿರುದ್ಧ ಏಶಿಯಾದ ಗೌರ ವರ್ಣೀಯರು ..... ಹೀಗೆ ಬಣಗಳಾಗಿ ನಿಂತಿದೆ ಜಗತ್ತು. ಹೀಗಾದುದರಿಂದಲೇ ಈ ಪ್ರಶ್ನೆ ಕೇವಲ ಕುವೈತಕ್ಕೆ ಸಂಬಂಧಿಸಿದಂತೆ ಉಳಿದಿಲ್ಲ. ಅದಕ್ಕೂ ವಿಸ್ತಾರವಾದ, ಜಟಿಲವಾದ ಸಮಸ್ಯೆ, ಸಂಗತಿಗಳು ಇದರಲ್ಲಿ ಅಡಕವಾಗಿವೆ.

ಕುವೈತದಿಂದ ಇರಾಕ್ ಹಿಂದಕ್ಕೆ ಸರಿದ ಮಾತ್ರಕ್ಕೆ ಈ ಯುದ್ಧ ನಿಲ್ಲುತ್ತದೆಯೇ? ಈ ಯುದ್ಧ ಎತ್ತಿದ ಸಮಸ್ಯೆಗಳಿಗೆ ಇರಾಕ್ ಪತನ ಉತ್ತರವಾದೀತೆ? ಈಗಾಗಲೇ ದಂತಕಥೆಯಾಗುತ್ತಿರುವ ಸದ್ದಾಂನ ಅಂತಿಮ ಸೋಲು ಕೂಡ ಯುದ್ಧದ ಮೋಡಗಳನ್ನು ಚೆದುರಿಸೀತೆಂಬ ನಂಬಿಕೆ ಉಳಿದಿಲ್ಲ. ಅರಬ್ ರಾಷ್ಟ್ರ ವಾದದ ಚುಕ್ಕಾಣಿ ಹಿಡಿದವನಂತೆ ವರ್ತಿಸುವ ಸದ್ದಾಂ, ತನ್ನ ವಿರೋಧಿ ಅರಬ್ ದೇಶಗಳ ಸಾಮಾನ್ಯ ಪ್ರಜೆಗಳ ಮನಸ್ಸಿನಲ್ಲಿ ಕೂಡ ಒಬ್ಬ ಹೀರೋ! ಆತನ ಸಾವು, ಯುದ್ಧದ ಅಂತ್ಯವಲ್ಲ. ಅರಬ್ ರಾಷ್ಟ್ರ ವಾದ ಇರುವ ತನಕ, ಇಸ್ರೇಲ್ ವಿರುದ್ಧ ಅರಬರು ಕತ್ತಿ ಮಸೆಯುತ್ತಿರುವ ತನಕ, ಅಮೆರಿಕ ತನ್ನ ಉಪದ್ವ್ಯಾಪವನ್ನು ಕೊಲ್ಲಿಯ ನೆಲದಲ್ಲಿ ನಿಲ್ಲಿಸುವ ತನಕ ..... ಇದು ಮುಗಿಯುವ ಸಮಸ್ಯೆಯಲ್ಲ.

ನಕ್ಕುಬಿಡಿ

ವರ್ಷಂಪ್ರತಿಯಂತೆ ಆ ಸ್ಕೂಲಿಗೂ ಇನ್ಸ್‌ಪೆಕ್ಟರ್ ಒಬ್ಬರು ಭೇಟಿ ಕೊಟ್ಟರು. ಐದನೇ ತರಗತಿಯಲ್ಲಿ ಗುಂಡನನ್ನು ಪ್ರಶ್ನಿಸಿದರು -

''ಹೇಳು ಮಗು, ದ್ರೌಪದೀ ವಸ್ತ್ರಾಪಹರಣವನ್ನು ಯಾರು ಮಾಡಿದರು?'' ಆಗ ಗುಂಡ ಥಟ್ಟನೆ -

''ಸಾರ್, ದ್ರೌಪದಿ ವಸ್ತ್ರಾಪಹರಣವನ್ನು ಯಾವಾಗ್ಲೂ ರಂಗಣ್ಣ ಮೇಷ್ಟ್ರು ಮಾಡುತ್ತಿದ್ದರು. ಅವತ್ತು ಅವರು ರಜೆ ಇದ್ದದ್ದರಿಂದ ಹೆಡ್‌ಮಾಸ್ತರರೇ ಮಾಡಿ ಮುಗಿಸಿದರು!''

ಇನ್ಸ್‌ಪೆಕ್ಟರರ ಸ್ಥಿತಿ ಗಳಗಳ ನಗುವಂತಾಯ್ತು!

● ಎಂ. ಎಸ್. ಪ್ರಶಾಂತ್

ಹೊನ್ನ ಶೂಲ

● ಡಾ. ತಿಪ್ಪೇಸ್ವಾಮಿ

'ಎನ್ನವರೆನಗೊಲಿದು ಹೊನ್ನ ಶೂಲದಲಿಕ್ಕಿದರೆನ್ನ ಹೊಗಳಿ ಹೊಗಳಿ' ಎಂದ ಬಸವಣ್ಣನವರು ಹೊಗಳಿಕೆಯನ್ನು ಹೊನ್ನ ಶೂಲವೆಂದು ಕರೆದು ಹೊಗಳಿಕೆಯಿಂದ ಮತ್ತು ಹೊಗಳು ಭಟ್ಟರಿಂದ ದೂರವಿರಲು ಇಷ್ಟಪಟ್ಟಿದ್ದಾರೆ. ಬಹುಶಃ ಈಗಿನಂತೆಯೇ ಅವರ ಕಾಲದಲ್ಲೂ ತಮ್ಮ ಸ್ವಾರ್ಥ ಸಿದ್ಧಿಗಾಗಿ, ತಮ್ಮ ಕೆಲಸ-ಕಾರ್ಯಗಳನ್ನು ಮಾಡಿಸಿಕೊಳ್ಳಲು ಅಧಿಕಾರ ಸ್ಥಾನದಲ್ಲಿದ್ದ ಬಸವಣ್ಣನವರನ್ನು ಜನ ಭೂರಿ-ಭೂರಿಯಾಗಿ ಹೊಗಳಿದ್ದಿರಬೇಕು, ಮುಖಸ್ತುತಿ ಮಾಡಿರಬೇಕು. ಇದರಿಂದ ಅವರಿಗೆ ಇರಿಸು-ಮುರಿಸಾಗಿ ಹೊಗಳುವಿಕೆಯನ್ನು ಹೊನ್ನ ಶೂಲವೆಂದು ಕರೆದು ಅದರಿಂದ ತಮ್ಮನ್ನು ತಿವಿಯದಂತೆ ಬಿನ್ನವಿಸಿಕೊಂಡಿದ್ದಿರಬೇಕು. ಇಲ್ಲಿ ನಮ್ಮ ಬಸವಣ್ಣನವರ ಪಾಡು ಹೀಗಾದರೆ ಉತ್ತರದಲ್ಲಿ ಸಂತ ಕಬೀರರ ಪಾಡೇನೂ ಉತ್ತಮವಾಗಿರಲಿಲ್ಲ. ಹೊಗಳುವವರು ಸರ್ವಾಂತರ್ಯಾಮಿಗಳಲ್ಲವೆ? ಎಲ್ಲ ಕಾಲದಲ್ಲೂ ಎಲ್ಲ ಸ್ಥಳಗಳಲ್ಲೂ ಅವರು ಇದ್ದವರೇ. ಕಬೀರರು ಸಹ ಈ ಹೊಗಳುಭಟ್ಟರಿಂದ ಬಹಳವಾಗಿ ಕಾಡಲ್ಪಟ್ಟಿದ್ದಿರಬೇಕು. ಇಲ್ಲದ ಗುಣಗಳನ್ನೂ ಅವರು ಆರೋಪಿಸಿ ಅವರ ದಾರಿತಪ್ಪಿಸಿರಬೇಕು, ಪಥಭ್ರಷ್ಟರನ್ನಾಗಿ ಮಾಡಲು ಪ್ರಯತ್ನಿಸಿರಬೇಕು. ಇವರಿಂದ ಎಚ್ಚೆತ್ತ ಕಬೀರರು ಈ ಹೊಗಳುಭಟ್ಟರನ್ನು ದೂರವಿರಿಸಿ ನಿಂದಕರನ್ನು ತಮ್ಮ ಬಳಿ ಇಟ್ಟುಕೊಂಡು ಆದರಿಸಿರಬೇಕು.

ನಿಂದಕರನ್ನು ಪಕ್ಕದಲ್ಲಿಯೇ ಇಟ್ಟುಕೊಂಡಿರಬೇಕಂತೆ. ನಿಮ್ಮ ಮನೆಯಂಗಳದಲ್ಲೇ ಅವರಿಗೂ ಕುಟೀರವನ್ನು ಕಟ್ಟಿಸಿಕೊಡಬೇಕಂತೆ ನಿಂದಕರು ನೀರಿಲ್ಲದೆ, ಸಾಬೂನನ್ನು ಉಪಯೋಗಿಸದೆ ನಿಮ್ಮ ಸ್ವಭಾವವನ್ನು ಶುಭ್ರಗೊಳಿಸುವರಂತೆ. ನಿಂದಕರನ್ನು ದೂರೀಕರಿಸದೆ, ಅವರನ್ನು ಗೌರವಿಸಿದರೆ ಅವರು ನಿಮ್ಮ ಒಳ ಹೊರಗನ್ನು ಶುಭ್ರವಾಗಿಟ್ಟಿರುವರಂತೆ ಎಂದು ಕಬೀರರು ಹೊಗಳುಭಟ್ಟರನ್ನು ಹತ್ತಿರ ಹಾಯಗೊಡದೆ ನಿಂದಕರನ್ನು ಹತ್ತಿರ ಇಟ್ಟುಕೊಂಡಿದ್ದರು.

ಈ ಪ್ರಪಂಚದಲ್ಲಿ ತಮ್ಮ ಬೆನ್ನನ್ನು ತಾವೇ ನೋಡಿಕೊಂಡಿರುವವರು ಯಾರಾದರೂ ಉಂಟೇನು? ಬೆನ್ನು ಬೇರೆಯವರಿಗೆ ಕಾಣುತ್ತದೆ. ಹೊಗಳುವವರು ಬೆನ್ನನ್ನು ನೋಡುವುದಿಲ್ಲ, ಮುಖವನ್ನು ನೋಡುತ್ತಿರುತ್ತಾರೆ. ತನ್ನ ಹೊಗಳಿಕೆಯಿಂದ ತಾನು ಹೊಗಳುತ್ತಿರುವವನ ಮುಖ ಅರಳುವ ಬಗೆಯನ್ನು ನೋಡಿ ಹೊಗಳಿಕೆಯ ಗೇರನ್ನು ಬದಲಾಯಿಸಲು ತುದಿಗಾಲಲ್ಲಿ ನಿಂತಿರುತ್ತಾರೆ. ಆದರೆ ನಿಂದಕರು? ನಿಂದಕರು ಮುಖ ನೋಡುವುದಿಲ್ಲ, ಬೆನ್ನನ್ನು ಮಾತ್ರ ನೋಡುತ್ತಿರುತ್ತಾರೆ. ವ್ಯಕ್ತಿ ಮಾಡುವ ತಪ್ಪುಗಳನ್ನು ತಮ್ಮ ದುರ್ಬೀನು ಕಣ್ಣುಗಳಿಂದ ನೋಡಿ ಟೀಕಿಸುತ್ತಾರೆ, ಬೈಯುತ್ತಾರೆ. ಹೊಗಳುವವರು ಬೈರಿಗೆಗಳಾದರೆ ನಿಂದಕರು ಸುತ್ತಿಗೆಗಳು. ನಿಂದಕರಿಗೆ ದೋಷಗಳೇ ಮುಖ್ಯ.

ಹೊಗಳಿಕೆ ಒಂದು ಮಿತಿಯಲ್ಲಿದ್ದರೆ ಹೊಗಳಿಕೆಯಲ್ಲಿ ಬರುವ ಶಬ್ದಾವಳಿಗಳಿಗೂ ಮೌಲ್ಯ ಬರುತ್ತದೆ. ಇಂಥ ಹೊಗಳಿಕೆ ಸಾಮಾಜಿಕವಾಗಿ ಅನಿವಾರ್ಯವೂ ಹೌದು! ವ್ಯಕ್ತಿಯ ಸಾಧನೆಗ

ಳಿಗೆ ಮೆಚ್ಚುಗೆಯ ರೂಪದಲ್ಲಿ ಬರುವ ಹೊಗಳಿಕೆಯ ಮಾತುಗಳು ಕೆಲಸ ಮಾಡುವವನಿಗೆ ಪ್ರೇರಣೆ, ಸ್ಫೂರ್ತಿಯನ್ನು ಕೊಡುತ್ತವೆ. ಈ ಹೊಗಳಿಕೆಯಲ್ಲಿ ಸ್ವಾರ್ಥವಿರುವುದಿಲ್ಲ. ತನ್ನ ಬೇಳೆ ಬೇಯಿಸಿಕೊಳ್ಳುವ ಹಂಬಲವಿರುವುದಿಲ್ಲ. ಹೀಗಾಗಿ, ಇಂಥ ಹೊಗಳಿಕೆ ಸಾಮಾಜಿಕವಾಗಿ ಅನಿವಾರ್ಯವೂ ಹೌದು. ಅರ್ಜುನನಿಗೆ ಹೊಗಳಿಕೆಯಿಂದ ಪ್ರೇರಣೆ ಬರುತ್ತಿತ್ತಂತೆ. ಕರ್ಣನಿಗೆ ತೆಗಳಿಕೆಯಿಂದ ಪ್ರೇರಣೆ ಬರುತ್ತಿತ್ತಂತೆ.

ಇಂದಿನ ಆಧುನಿಕ ಸಮಾಜದಲ್ಲಿ ವ್ಯಾಪಕವಾಗಿ ಪ್ರಚಾರದಲ್ಲಿರುವ ಬೆಣ್ಣೆ ಹಚ್ಚುವುದು, ಕಾಕಾಪುಡಿ, ಅತಿ ಹೊಗಳಿಕೆ, ಬಟರಿಂಗ್, ಖುಷಾಮದಿ, ಚಾಪಲೂಸಿ, ಮುಖಸ್ತುತಿ ಮುಂತಾದ ಶಬ್ದಗಳು 'ಹೊಗಳಿಕೆ' ಶಬ್ದದ ಅರ್ಥಾಪಕರ್ಷಗೊಂಡ ಪರ್ಯಾಯಗಳು. ಆಧುನಿಕ ಸಮಾಜದಲ್ಲಿ ತೀವ್ರ ಚಲಾವಣೆಯಲ್ಲಿರುವ ಈ ಶಬ್ದಗಳು ನಮ್ಮ ಆಧುನಿಕ ಬದುಕಿನ ಅವಿಭಾಜ್ಯ ಅಂಗಗಳಾಗಿವೆ. ಇವಿಲ್ಲದೆ ಆಧುನಿಕ ಬದುಕೇ ಇಲ್ಲವೇನೋ ಎಂಬಂಥ ಸ್ಥಿತಿಗೆ ನಾವು ಬಂದಿದ್ದೇವೆ.

ಮುಖಸ್ತುತಿ, ಬೆಣ್ಣೆ ಹಚ್ಚುವಿಕೆ, ಬಟರಿಂಗ್‌ನ ಕಾಲ ನಿರ್ಣಯ ಮಾಡುವುದು ವಿದ್ವಾಂಸರಿಗೂ ಸಾಧ್ಯವಾಗಿಲ್ಲ. ಆದರೆ ಎಲ್ಲ ವಿದ್ವಾಂಸರು ಒಪ್ಪಿಕೊಂಡಿರುವಂತೆ, ಪ್ರಪಂಚ ಹುಟ್ಟಿದಲಾಗಾಯ್ತು ಇದು ಅಸ್ತಿತ್ವದಲ್ಲಿದೆ. ಸ್ಥಾನ ನಿರ್ಣಯದ ವಿಷಯದಲ್ಲೂ ಅಷ್ಟೆ, ನಮ್ಮ ದೇಶದಲ್ಲಷ್ಟೆ ಅಲ್ಲ, ವಿದೇಶಗಳಲ್ಲೂ ಇದು ವ್ಯಾಪಕವಾಗಿ ಬೇರು-ಬೀಳಲುಗಳನ್ನು ಬಿಟ್ಟಿದೆಯಂತೆ. ಏಕೆಂದರೆ ಇಲ್ಲಿನ ಜನರಿಗೆ ಕೆಲಸಗಳಾಗುವಂತೆ ಅಲ್ಲಿನ ಜನರಿಗೂ ಕೆಲಸಗಳಾಗಬೇಕಲ್ಲ! ಕೆಲಸಗಳಾಗಬೇಕಾದ ಕಡೆ, ಎಕ್‌ಸ್ಟ್ರಾ ಫೇವರ್ ಲಭ್ಯವಾಗಬೇಕಾದ ಕಡೆ ಸ್ತುತಿಯಾಗಲೇಬೇಕು, ಬೆಣ್ಣೆ ಹಚ್ಚಲೇಬೇಕು. ಈ ದೃಷ್ಟಿಯಿಂದ ಯುಗ ಯುಗಗಳಿಂದ ಪ್ರಚಲಿತವಿರುವ ಹೊಗಳಿಕೆ, ಬಟರಿಂಗ್ ಕಲೆ ಈಗ ತನ್ನ ಉಚ್ಛ್ರಾಯ ಸ್ಥಿತಿಯಲ್ಲಿದೆ.

ಬಟರಿಂಗ್ ಅಥವಾ ಮುಖಸ್ತುತಿ ಹಗುರವಾಗಿ ತೆಗೆದುಕೊಳ್ಳುವಂಥ ಕಲೆಯಲ್ಲ, ಇದೊಂದು ಗಂಭೀರವಾದ ಕಲೆ. ಅಂದಹಾಗೆ 'ಕಲೆ'ಯ ಮಾತು ಬಂದಾಗ ಲಲಿತ ಕಲೆಗಳ ನೆನಪಾಯಿತು ನೋಡಿ. ಕಾವ್ಯ ಶಾಸ್ತ್ರದಲ್ಲಿ ಕಲೆಯನ್ನು ಲಲಿತ ಕಲೆ ಮತ್ತು ಉಪಯೋಗಿ ಕಲೆ ಎಂದು ಎರಡು ಭಾಗಗಳಾಗಿ ವಿಂಗಡಿಸಿರುವ ವಿಚಾರ ನಿಮಗೂ ಗೊತ್ತಿರಬೇಕಲ್ಲವೆ? ಸೌಂದರ್ಯತತ್ವ ಪ್ರಧಾನವಾದ ಕಲೆಗಳೇ ಲಲಿತ ಕಲೆಗಳಾದರೆ ಹೊಗಳುವಿಕೆ, ಮುಖಸ್ತುತಿ ಉಪಯೋಗಿ ಕಲೆ. ಈ ಕಲೆ ಲಲಿತ ಕಲೆಗೂ ಸೇರುತ್ತದೆ. ಈ ಉಪಯೋಗಿ ಕಲೆಯನ್ನು ಕರತಲಾಮಲಕ ಮಾಡಿಕೊಂಡವನಿಗೆ ಇದರಿಂದಾಗುವ ಪ್ರಯೋಜನಗಳು ಒಂದೇ ಎರಡೇ! ಇನ್ನು ಲಲಿತ ಕಲೆಗಳ ದೃಷ್ಟಿಯಿಂದ ನೋಡಿದರೂ ಸ್ತುತಿಗಾರರಿಗೆ, ಹೊಗಳುಭಟ್ಟರಿಗೆ ಲಾಭವೇ ಆಗುತ್ತದೆ. ಹೊಗಳಿಸಿಕೊಳ್ಳುವ ವ್ಯಕ್ತಿ ಪಡುವ ಆನಂದ ಸುಖಿಸುವ ರೀತಿಯನ್ನು ಕಂಡು ಸುಖಿಸದ ಹೊಗಳುಭಟ್ಟ ಸುಂಟೆ? ಇದೇ ಅವನ ಲೋಕೋತ್ತರ ಆನಂದ, ರಸಾನುಭವದ ಚರಮ ಸ್ಥಿತಿ.

ಈ ಹೊಗಳುವಿಕೆ ಎಂಬ ಕಲೆಯಲ್ಲಿರುವ ಒಂದು ವೈಶಿಷ್ಟ್ಯ ನನಗಿನ್ನೂ ಅರ್ಥವಾಗಿಲ್ಲ. ಪ್ರಚಾರಯುಗದಲ್ಲಿರುವ ಇವರು ಪ್ರಚಾರವನ್ನೇ ಬಯಸದಿರುವುದನ್ನು ನೋಡಿ ನಾನು ದಿಗ್ಭ್ರಮೆಗೊಂಡಿದ್ದೇನೆ. ಅರವತ್ತನಾಲ್ಕು ಕಲೆಗಳಲ್ಲಿ ಮತ್ತು ಅಲ್ಲಿ ಸೇರದ ಇನ್ನಾವುದೇ ಕಲೆ ಅಥವಾ ಉದ್ಯಮಗಳಲ್ಲಿ ನಿಷ್ಣಾತನಾದ ಯಾವನೇ ಒಬ್ಬನನ್ನು ಮಾತನಾಡಿಸಿ, ಆತ ತಾನು ಇಂಥಾದ್ದರಲ್ಲಿ ಎಕ್ಸ್‌ಪರ್ಟ್ ಎಂದು ಹೇಳಿಕೊಳ್ಳಲು ಹೆಮ್ಮೆಪಡುತ್ತಾನೆ. ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ತಾನು ಈ ವಿದ್ಯೆಯಲ್ಲಿ ಎಕ್ಸ್‌ಪರ್ಟ್, ನಿಪುಣ, ಪ್ರವೀಣ ಎಂದು ಘಂಟಾಘೋಷವಾಗಿ ಹೇಳಿಕೊಳ್ಳುವಂಥ ಆಧುನಿಕ ಯುಗದಲ್ಲಿ ಫ್ಲಾಟರಿಂಗ್, ಬಟರಿಂಗ್ ಮುಖಸ್ತುತಿ, ಖುಷಾಮದಿ, ಚಾಪಲೂಸಿ ಕಲೆಯಲ್ಲಿ ಪಂಡಿತೋತ್ತಮರೆಂದು ಜಗತ್ತೇ ಮಾನ್ಯ ಮಾಡಿರುವಂಥ ಹೊಗಳುಭಟ್ಟರು ಮಾತ್ರ ತಾವು ಈ ಕಲೆಯಲ್ಲಿ ಎಕ್ಸ್‌ಪರ್ಟ್‌ಗಳೆಂದು ಒಪ್ಪಿಕೊಂಡಿರುವ ಒಂದು ಉದಾಹರಣೆಯೂ ನಮ್ಮ

ಮುಂದಿಲ್ಲ. ತಮ್ಮ ಈ ಪ್ರಾವೀಣ್ಯತೆಯನ್ನು, ಎಕ್ಸ್‌ಪರ್ಟೈಸ್ ಅನ್ನು ರಟ್ಟು ಮಾಡದೆ ಗುಪ್ತವಾಗಿಯೇ ಇಟ್ಟುಕೊಂಡಿರುವುದನ್ನು ನೋಡಿದರೆ ಈ ಕಲೆಗೆ ಫಿಲಾಸಫಿಯೇ ಇದೆಯೇನೋ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. 'ನಾನು ನಿಮ್ಮನ್ನು ಓಲೈಸುತ್ತಿಲ್ಲ, ನಿಮಗೆ ಬೆಣ್ಣೆ ಹಚ್ಚುತ್ತಿಲ್ಲ ನಿಮ್ಮ ಮುಖಸ್ತುತಿ ಮಾಡುತ್ತಿಲ್ಲ, ಮುಖಸ್ತುತಿ ಎಂದರೇನು ಎಂಬುದೇ ನನಗೆ ಗೊತ್ತಿಲ್ಲ ನಿಮ್ಮ ದೊಡ್ಡಸ್ತಿಕೆ ಯಾರಿಗೆ ಗೊತ್ತಿಲ್ಲ? ಜಗತ್ತಿಗೇ ಗೊತ್ತಿದೆ. ಸೂರ್ಯನಿಗೆ ದೀಪ ಹಿಡಿಯಬೇಕೆ? ನಾನು ನಿಮ್ಮ ಗುಣಗಾನ ಮಾಡಿ ನಿಮ್ಮನ್ನು ಮುಂದೆ ತರಬೇಕೆ?' ಎಂದು ಹೇಳುತ್ತಲೇ ಕೇಳುವವನಿಗೆ ಬೆಣ್ಣೆ ಹಚ್ಚುತ್ತಿರುತ್ತಾರೆ. ಹೊಗಳಿಕೆಯ ತ್ರಿಶೂಲದಿಂದ ಚುಚ್ಚುತ್ತಿರುತ್ತಾರೆ. ಆದರೆ ನಿಜ ಹೇಳಬೇಕೆಂದರೆ ಹೀಗೆ ಹೇಳುವವರೇ ಈ ಕಲೆಯಲ್ಲಿ ಪ್ರವೀಣರು, ಪಂಡಿತರು.

ಇನ್ನು ಈ ಮುಖಸ್ತುತಿ, ಈ ಹೊಗಳಿಕೆಯನ್ನು ಲಲಿತ ಕಲೆಯೆಂದೆನಲ್ಲವೆ? ಲಲಿತ ಕಲೆಗಳಲ್ಲಿನ ಯಾವ ಕಲೆಯೂ ಸ್ವಯಂ ಸಿದ್ಧಿಯಿಂದ ಬರುವ ಕಲೆಯಲ್ಲ, ಈ ಎಲ್ಲ ಕಲೆಗೂ ನಿರಂತರ ಸಾಧನೆ ಬೇಕು, ಕುಂಡಲಿನಿಯನ್ನು ಸಹಸ್ರದಳ ಕಮಲದ ಬಳಿಗೆ ಒಯ್ಯುವುದು ಅಷ್ಟು ಸುಲಭವಾದ ಮಾತೇನು? ಹಾಗೆಯೇ ಹೊಗಳುವುದು, ಮುಖಸ್ತುತಿ ಮಾಡುವುದು ಒಂದೇ ದಿನದಲ್ಲಿ ಕೈಗೂಡುವ ಕಲೆಯಲ್ಲ. ಈ ಕಲೆಗೆ ತನ್ನದೇ ಆದ ಶಬ್ದ ಭಂಡಾರವಿದೆ. ತನ್ನದೇ ಆದ ವಾಕ್ಯಗಳಿವೆ, ನುಡಿಗಟ್ಟುಗಳಿವೆ, ಅಲಂಕಾರಗಳಿವೆ. ಕಾಗೆಯ ಬಾಯಿಯಲ್ಲಿದ್ದ ಮಾಂಸದ ತುಂಡನ್ನು ಕಸಿದುಕೊಳ್ಳಲು ಅದರ ಬಾಯಿ ಬಿಡಿಸಲು ಜಾಣ ನರಿ ಕಪ್ಪು ಕಾಗೆಯ ಕರ್ಕಶ ಧ್ವನಿಯನ್ನು ಏನೆಂದೆಲ್ಲ ವರ್ಣಿಸಿರಬಹುದು! ಹೊಗಳಿರಬಹುದು! ಆ ಹೊಗಳಿಕೆಗೆ ಮಾರು ಹೋಗಿ ತನ್ನ ಸಂಗೀತದಾನಂದ ಉಣ್ಣಿಸಲು ಆ ಕಾಗೆ ಬಾಯ್ದೆರೆದು ತನ್ನ ತಿಂಡಿಯನ್ನು ಕಳೆದುಕೊಂಡದ್ದನ್ನು ನೆನೆಸಿಕೊಂಡರೆ ಮುಖಸ್ತುತಿಯಲ್ಲಿ ಹೊಗಳಿಕೆಯಲ್ಲಿ ಏನೋ ಸಮ್ಮೋಹಕ ಶಕ್ತಿಯಿದ್ದೇ ಇರಬೇಕೆಂಬುದು



ನನಗೆ ಮನದಟ್ಟಾಗಿದೆ. ಮುಖಸ್ತುತಿಗೆ ಪಶುಪಕ್ಷಿಗಳು, ಸಾವಿರ ಕುದುರೆ ಸವಾರರೂ ಪೂರ್ವಾಪರ ಯೋಚನೆಯಿಲ್ಲದೆ ಬಲಿಯಾಗುತ್ತಾರೆ ಎಂದ ಮೇಲೆ ಸಾಮಾನ್ಯರ ಪಾಡೇನಾಗಿರಬಾರದು?

ಹೊಗಳುಭಟ್ಟರು, ಮುಖಸ್ತುತಿಗಾರರು ತುಂಬಾ ವ್ಯವಹಾರ ಕುಶಲಿಗಳು, ಪ್ರಪಂಚದಲ್ಲಿ ಬದುಕುವುದು ಹೇಗೆ ಎಂಬುದನ್ನು ಅರ್ಥ ಮಾಡಿಕೊಂಡವರು. ಹೀಗಾಗಿ ಇಹಪರಗಳೆರಡಕ್ಕೂ ಸಲ್ಲುವವರು. ಭರತ ಖಂಡದ ಯಾವುದೇ ಕಚೇರಿಗೆ ಹೋಗಿ ನಾವು-ನೀವು ರೋಫ್ ಹಾಕಿ, ದಬಾಯಿಸಿ, ಕಾನೂನಿನ ಮಾತನಾಡಿ ಕೆಲಸ ಮಾಡಿಸಿಕೊಳ್ಳಲು ಸಾಧ್ಯವೇನು? ನನ್ನ ಅನುಭವದಲ್ಲಂತೂ ಸಾಧ್ಯವಾಗಿಲ್ಲ. ನೀವು ಮಾಡಿಸಿಕೊಂಡು ಬಂದಿರೆಂದರೆ ತಲೆದಂಡ ಕೊಡುತ್ತೇನೆ. ಇದು ಬಿಟ್ಟು ಹೊಗಳುವಿಕೆ ಎಂಬ ಅಪಮಾರ್ಗ, ಅಲ್ಲ, ರಾಜಮಾರ್ಗವನ್ನು ಅನುಸರಿಸಿ, ಬೆಣ್ಣೆ ಹಚ್ಚಿ, ಕೆಲಸ ಯಾರಿಂದ ಆಗಬೇಕೋ ಅವರನ್ನು ರೈಲಿಗೆ ಹತ್ತಿಸಿ ನೋಡಿ, ನಿಮ್ಮ ಕೆಲಸ ಹೂ ಎತ್ತಿದಷ್ಟು ಹಗುರವಾಗಿ ಆಗುತ್ತದೆ. ನಾನು ಯಾವುದೇ ಕಚೇರಿಗೆ ಹೋಗಲಿ. ಈ ಕಲೆಯಲ್ಲಿ ನಿಷ್ಣಾತನಾದವನೊಬ್ಬನನ್ನು ಕರೆದುಕೊಂಡು

ಹೋಗುತ್ತೇನೆ. ಈ ಸ್ತುತಿಗಾರರು ಪ್ರಪಂಚದ ಬಗ್ಗೆ, ಜನ ಏನೆಂದುಕೊಂಡಾರು ಎಂಬ ಬಗ್ಗೆ ತಲೆ ಕೆಡಿಸಿಕೊಳ್ಳದ ಸಂಕೋಚಹೀನರು. ಅಲಂಕಾರ ಶಾಸ್ತ್ರದಲ್ಲಿ ಬರುವ ವ್ಯಾಜಸ್ತುತಿ ಮತ್ತು ವ್ಯಾಜ ನಿಂದೆ ಅಲಂಕಾರದ ಪರಿಕಲ್ಪನೆ ಮಾಡಿದವರು ಮಹಾ ಹೊಗಳುಭಟ್ಟರಿರಬೇಕು, ಬೆಣ್ಣೆ ಹಚ್ಚುವ ಕಲೆಯಲ್ಲಿ ನಿಷ್ಣಾತರಿದ್ದಿರಬೇಕು ಎಂದೇ ನನ್ನ ಅನುಮಾನ.

ನಮ್ಮ ಕವಿಗಳು ತಮ್ಮ ಕಾವ್ಯದ ಆರಂಭದಲ್ಲಂತೂ ತಮ್ಮ ಪ್ರಿಯ ದೇವತೆಗಳನ್ನು ಉದಾರವಾಗಿ ಹೊಗಳಿದ್ದಾರೆ. ಭಕ್ತ ಕವಿ ತುಲಸೀದಾಸರಂತೂ ತಮ್ಮ ರಾಮಚರಿತ ಮಾನಸದ 'ಬಾಲ ಕಾಂಡ'ದಲ್ಲಿ ಅಖಂಡವಾಗಿ ದೇವತೆಗಳನ್ನು ಮತ್ತು ಎಲ್ಲ ಸ್ವಭಾವದ ಮನುಷ್ಯರನ್ನು ಸ್ತುತಿಸಿದ್ದಾರೆ. ಅದನ್ನು ಓದುವುದು ಆಪ್ಯಾಯವೇನೋ ಸರಿ, ಆದರೆ ತುಲಸೀದಾಸರ ಹೊಗಳಿಕೆಯನ್ನು ಕೇಳಿಸಿಕೊಂಡವರು ಅವರ ಮೇಲೆ ಏನೆಲ್ಲ ಕೃಪೆ ದೋರಿರಬೇಕು ಎಂಬುದನ್ನು ನೆನೆಸಿಕೊಂಡರೂ ತುಲಸೀದಾಸರ ಬಗ್ಗೆ ಹೊಟ್ಟೆಕಿಚ್ಚುಂಟಾಗುತ್ತದೆ.

ಮಂತ್ರಗಳನ್ನು ದೇವರ ಮುಂದೆ ಗಂಟೆಗಟ್ಟಲೆ ಹೇಳುವವರನ್ನು ಕುರಿತು, ಇವರು ದೇವರ ಹೊಗಳುಭಟ್ಟರು, ದೇವರಿಗೆ ಪೂಸಿ ಮಾಡುತ್ತಿದ್ದಾರೆ, ಬೆಣ್ಣೆ ಹಚ್ಚುತ್ತಿದ್ದಾರೆ ಎಂದು ಕೆಲವರು ಕುಹಕವಾಡುವುದುಂಟು. ಆದರೆ ನಾನು ಇದನ್ನು ಒಪ್ಪುವುದಿಲ್ಲ. ಆಸ್ತಿಕರಿಗೆ ಕಲ್ಲೂ ದೇವರು ನಾಸ್ತಿಕರಿಗೆ ದೇವರೂ ಕಲ್ಲು. ಆದರೆ ಮನುಷ್ಯ ಇದ್ದಾನೆ, ಜೀವಂತ ಇದ್ದಾನೆ. ಪ್ರಪಂಚದ ರಥಯಾತ್ರೆ ಸಾಗಿರುವುದು ಈತನಿಂದಲೇ, ಈತ ಮಿಡಿಯಬಲ್ಲ, ಕುಣಿಯಬಲ್ಲ. ಆದರೆ ಮಂತ್ರಪುಷ್ಪಗಳಿಂದ ಕೊರಡು ಕೊನರಿರುವುದು, ಕುಂಟ ನಡೆದಾಡಿರುವುದು, ಕಿವುಡ ಕೇಳಿಸಿಕೊಂಡಿರುವುದು, ಮೂಗ ಮಾತನಾಡಿದ ಉದಾಹರಣೆಗಳಿಲ್ಲ. ಆದರೆ ಜೀವಂತ ಮನುಷ್ಯರನ್ನು ಹೊಗಳಿ, ಅವರ ಸ್ತುತಿ ಮಾಡಿ ಲಾಭ ಪಡೆದುಕೊಂಡಿರುವ ಉದಾಹರಣೆಗಳು ಎಷ್ಟು ಬೇಕು? ಭಕ್ತರು ದೇವರನ್ನು ಹೊಗಳುವುದರಲ್ಲಿ, ಭಜಿಸುವುದರಲ್ಲಿ, ಉಚ್ಚರಿಸುವ ನಾಮಸ್ಮರಣೆಗಳಲ್ಲಿ ವಿಶೇಷಣೆಗಳೆಲ್ಲ ತುಂಬಿರುತ್ತವೆ ಎಂಬುದೇನೋ ನಿಜ. ಆದರೆ ಈ ಒಂದೊಂದಕ್ಕೂ ದೇವರು ಅರ್ಹನಾಗಿದ್ದಾನೆ ಎಂದೇ ಭಕ್ತರ ನಂಬಿಕೆ. ಆದರೆ ನಾವು ಕೆಲಸ ಮಾಡಿಸಿಕೊಳ್ಳಬೇಕಾದವರನ್ನು ಏನೆಲ್ಲ ಶಬ್ದಗಳಿಂದ ಹೊಗಳುತ್ತೇವಲ್ಲ, ಅವಕ್ಕೆಲ್ಲ ಅವರು ಅರ್ಹರಾಗಿರುತ್ತಾರೆಯೇ? ಭಕ್ತನ ಭಜನೆ ಮಂತ್ರಗಳಲ್ಲಿ ಭಕ್ತಿ ಮತ್ತು ಸಮರ್ಪಣೆಯಿದ್ದರೆ ಹೊಗಳುಭಟ್ಟನ, ಕ್ರಿಯಾವಿಶೇಷಣಗಳಲ್ಲಿ ಸುಳ್ಳೇ ತುಂಬಿರುತ್ತದೆ. ಹೀಗಿರುವಾಗ ಭಕ್ತ ಮತ್ತು ಭವಿಯನ್ನು ಸಮೀಕರಿಸುವುದು ಯುಕ್ತವಲ್ಲವೆಂದೇ ನನ್ನ ಭಾವನೆ.

ಹೊಗಳುವವರು, ಸ್ತುತಿಕಾರರು ಅತಿಶಯೋಕ್ತಿಯ ಆರಾಧಕರು, ಶಬ್ದಗಳ ಮೋಹಕ ಬಳಕೆಯಲ್ಲಿ ನಿಷ್ಣಾತರು. ಇವರ ಶಬ್ದಗಳಿಗೆ ಅರ್ಥಗಳಿಲ್ಲದಿದ್ದರೂ ಅಲಂಕಾರಗಳಿರುತ್ತವೆ. ಇವರು ಶಬ್ದಗಳ ಬಳಕೆಯಲ್ಲೂ ಎಚ್ಚರದಿಂದಿರಬೇಕಾಗುತ್ತದೆ. ಕರ್ಣ ತೊಟ್ಟ ಬಾಣಗಳನ್ನು ತೊಡೆ ಎಂದು ಪ್ರತಿಜ್ಞೆ ಮಾಡಿದಂತೆ ಇವರು ತಮ್ಮ ಆರಾಧ್ಯರನ್ನು ಹೊಗಳಬೇಕಾದರೆ ಹೊಸ ಹೊಸ ಶಬ್ದಗಳನ್ನು ಹುಡುಕಬೇಕು. ಅದು ಬಿಟ್ಟು, ಆಡಿದ್ದೇ ಆಡಿದರೆ, ಹೇಳಿದ್ದೇ ಹೇಳಿದರೆ ಬೋರಾಗುತ್ತದೆ. ಏಕತಾನತೆ ಬರುತ್ತದೆ. ಹೀಗಾಗಿ ಪ್ರತಿ ಸಾರಿ ಭೇಟಿಯಾದಾಗಲೂ ಹೊಸ ಶಬ್ದಾಲಂಕಾರಗಳೊಂದಿಗೆ ಹೋಗಬೇಕಾಗುತ್ತದೆ. ಈ ಕ್ಷೇತ್ರದ ಅನುಭವಿಕರ ಮಾರ್ಗದರ್ಶನ ಪಡೆದುಕೊಳ್ಳಬೇಕಾಗುತ್ತದೆ.

ಹೊಗಳಿಸಿಕೊಳ್ಳುವ ವ್ಯಕ್ತಿಯ ದೌರ್ಬಲ್ಯಗಳನ್ನು ಪತ್ತೆ ಹಚ್ಚಿ ಅದನ್ನು ಮೀಟುವ ಜಾಣ್ಮೆಯನ್ನು ಹೊಗಳುಭಟ್ಟ ತೋರಿಸಬೇಕು. ಹೊಗಳಿಕೆಯಿಂದ ಯಾರು ಸಂತೋಷಪಡುವುದಿಲ್ಲ, ಯಾರು ಹಿಗ್ಗಿ ಹೀರೇಕಾಯಿಯಾಗುವುದಿಲ್ಲ? ಸೆಲೂನಿನಲ್ಲಿ ಕುಳಿತ ನಿಮಗೆ ಕ್ಷೌರ ಮಾಡುತ್ತಿರುವ ಹಜಾಮ, 'ಹೀಗಲ್ಲ, ಹೀಗೆ ಮಾಡೋಣವೆ?' ಎಂದು ಕೇಳಿದರೆ 'ಹಾಗಾ' ಎಂದು ಕನ್ನಡಿ ನೋಡಿಕೊಳ್ಳುವ ನಿಮಗೆ ಹೊಗಳಿಕೆ ಆಪ್ಯಾಯ

ಮಾನ. ಹಿಂದಿನ ಕಾಲದಲ್ಲಿ ರಾಜರು ಹೊಗಳು ಭಟ್ಟ ವಂದಿಮಾಗಧರನ್ನು ಇಟ್ಟುಕೊಂಡಿರುತ್ತಿದ್ದುದು ಯಾರಿಗೆ ಗೊತ್ತಿಲ್ಲ? ಅವರ ಭೋಪರಾಕುಗಳು ರಾಜರ ಠೀವಿಗೆ ಗಾಂಭೀರ್ಯವನ್ನು ಕೊಡುತ್ತಿದ್ದವು. ರಾಜನ ಅಬ್ಬರ-ಆಡಂಬರಗಳನ್ನು ವಂದಿ ಮಾಗಧರು ಹಾಡುತ್ತಿದ್ದರೆ ರಾಜನೂ ಸೇರಿದಂತೆ ಸಭಾಸದರೆಲ್ಲ ರೋಮಾಂಚಿತಗೊಳ್ಳುತ್ತಿದ್ದರು, ಪುಲಕಿತರಾಗುತ್ತಿದ್ದರು. ನಮ್ಮ ಎಷ್ಟೋ ಕವಿಗಳು ದರ್ಬಾರಿ ಕವಿಗಳೇ ತಾನೆ? ಆಸ್ಥಾನಿಕರು ತಾನೆ? ಇವತ್ತು ಸಹ ಸಾಹಿತ್ಯ ಲೋಕದಲ್ಲಿ 'ಗುಟಬಂದಿ' ಅಂದರೆ ಗುಂಪುಗಾರಿಕೆ ಇದೆ ಎಂದು ಕೆಲವು ಸಿನಿಕ ಲೇಖಕರು ಹೇಳುವುದುಂಟು. ಈ ಗುಂಪುಗಾರಿಕೆ ಎಂದರೇನೆಂದು ನಾನು ಯೋಚಿಸಿದ್ದೇನೆ. ಒಂದು ಗುಂಪು ತನ್ನ ಗುಂಪಿನವರನ್ನು ತಾನೇ ಹೊಗಳಿಕೊಳ್ಳುವುದು, ಇಷ್ಟೇ ಅಲ್ಲವೆ? ಅಥವಾ ಇನ್ನೊಂದು ಗುಂಪಿನವರನ್ನು ಟೀಕಿಸುವುದು. ಈ ಗುಂಪು ಹೊಗಳಿದರೆ, ಒಲಿದರೆ ಯಾರು ಏನೆಲ್ಲ ಆಗಬಹುದು, ಯಾವುದೇ ಪದಕ ಪ್ರಶಸ್ತಿಯನ್ನು ಪಡೆದುಕೊಳ್ಳಬಹುದು. ಯಾವ ಗುಂಪಿಗೂ ಸೇರದವರು ನಾಲಾಯಕ್ಕು, ಹೊಗಳಲು ಬಾರದವರನ್ನು ಯಾರೂ 'ಕ್ಯಾರೇ' ಅನ್ನುವುದಿಲ್ಲ. ಇಂಥವರನ್ನು ಮಾನ್ಯತೆ ಇಲ್ಲದವರೆಂದು ಗುರುತಿಸಬಹುದೇನೋ!

ಹೊಗಳುವುದು, ಖುಷಾಮದಿ ಮಾಡುವುದು, ಬೆಣ್ಣೆ ಹಚ್ಚುವುದು ಅಡನಾಡಿಗಳಿಂದಾಗುವ ಕೆಲಸವಲ್ಲ. ಇದಕ್ಕೂ ತಲೆ ಬೇಕು, ಚತುರತೆ ಬೇಕು ಕೌಶಲ್ಯ ಬೇಕು, ಸಮಯ ಸಾಧಕ ಬುದ್ಧಿ ಬೇಕು ಎಂದು ಈ ಕ್ಷೇತ್ರದಲ್ಲಿ ಅಸಫಲರಾದ ನನ್ನಂಥ ಎಷ್ಟೋ ಜನರನ್ನು ನೋಡಿದಾಗಲೆಲ್ಲ ನನಗೆ ತೀವ್ರವಾಗಿ ಅನ್ನಿಸಿದೆ. ಹೊಗಳುವ ಕೆಲಸಕ್ಕೆ ಕೈ ಹಾಕುವ ಮುನ್ನ ಯಾರನ್ನು ಹೊಗಳಬೇಕೋ ಅವನ ರುಚಿ-ಅಭಿರುಚಿಗಳನ್ನು ಮೂಡುಗಳನ್ನು ಅರ್ಥ ಮಾಡಿಕೊಳ್ಳಬೇಕು. ಆತನ ಹವ್ಯಾಸಗಳನ್ನು ತಿಳಿದುಕೊಳ್ಳಬೇಕು. ಒಬ್ಬ ಅಧಿಕಾರಿ ಎಷ್ಟೇ ಸ್ಟ್ರಿಕ್ಟ್ ಇರಲಿ, ಆತ ಯಾವುದೋ ಜನ್ಮದಲ್ಲಿ ಕವಿಯಾಗಿದ್ದನೆಂಬ ವಾಸನೆ ಸಿಕ್ಕಿದರೂ ಸಾಕು, ಅದನ್ನೇ ಹಿಡಿದು, ಆತನ ಕಾವ್ಯಾಭಿರುಚಿಯನ್ನು ಹೊಗಳಿ, ಅವರ ಒಂದು ಕವಿತಾ ಸಂಕಲನವನ್ನು ಪ್ರಕಟಿಸುತ್ತೇನೆಂದು ನೀವು ಹೇಳಿದರೆ ಸಾಕು. ಆತ



"ಛಿ! ಛಿ! ನಿನಗೇನು ಹೋಗೋ ಕಾಲ ಬಂತೋ!
ನಾವೇನು? ನಮ್ಮ ವಂಶವೇನು? ಹೋಗಿ ಹೋಗಿ ಈ ಕೆಲ್ಸಕ್ಕೆ ಸೇರ್ಕೊಂಡಿಯಲ್ಲಾ?!"

ಕರಗಿ ನೀರಾಗಿ ನಿಮ್ಮ ಭಕ್ತನಾಗುವುದಷ್ಟೇ ಅಲ್ಲ, ನಿಮಗೆ ಹಣಕೊಟ್ಟು ಕವಿತಾ ಸಂಕಲನ ಪ್ರಕಟಿಸುವಂತೆ ಹೇಳಿ, ಪುಸ್ತಕದ ಮಾರಾಟದ ವ್ಯವಸ್ಥೆಯನ್ನೂ ತಾನೇ ನೋಡಿಕೊಳ್ಳುತ್ತಾನೆ. ಇಷ್ಟಾದ ಮೇಲೆ ನಿಮ್ಮ ಕೆಲಸ ಆಗದಿರುತ್ತದೆಯೇನು? ಇನ್ನು ಕೆಲವು ಪ್ರಸಂಗಗಳಲ್ಲಿ ನಿಮ್ಮ ಕೆಲಸ ಯಾರಿಂದ ಆಗಬೇಕೋ ಅವರ ಮನೆಗೆ ಹೋಗಿ, ಒಂದು ಸಾರಿಯಲ್ಲ, ಹತ್ತು ಸಾರಿಯಾದರೂ ಬೇಜಾರು ಮಾಡಿಕೊಳ್ಳಬೇಡಿ, ಬೇಜಾರು ಮಾಡಿಕೊಂಡರೆ ಕೆಲಸವಾಗುವುದಿಲ್ಲ. ಅಷ್ಟು ಸಾರಿ ನೀವು ಅವರ ಮನೆಗೆ ಹೋದಿರಿ ಅಂದರೆ ಅವರ ಮನಸ್ಸೂ ಕರಗುತ್ತೆ. ಮಾತನಾಡಿಸುತ್ತಾರೆ ಆಗ ನೀವು ನಿಮ್ಮ ಗೋಳನ್ನು ಹೇಳಿಕೊಳ್ಳಬೇಡಿ. ಅವರ ಮನೆಯ ನಾಯಿಯನ್ನು ಹೊಗಳಿ, ನೀವು ಹೊರಗೆ ಬಿಟ್ಟಿದ್ದ ನಿಮ್ಮ ಸೈಕಲನ್ನು ಅವರ ಮಗ ತೆಗೆದುಕೊಂಡು ಹೋಗಿ ಸರ್ಕಸ್ಸು ಮಾಡಿ ಮುರಿದು ಹಾಕಿದರೂ ಅವನ ತುಂಟಾಟವನ್ನು ಮನಸಾರೆ ಅವರ ಹೆಂಡತಿಗೆ ಕೇಳಿಸುವಂತೆ ಸ್ತುತಿಸಿ, ಕೃಷ್ಣನ ಬಾಲಲೀಲೆಗಳನ್ನು ನೋಡಿ ನಂದ ಮತ್ತು ಯಶೋದೆ ಹಿಗ್ಗಿದಂತೆ ಅವರೂ ಹಿಗ್ಗುತ್ತಾರೆ. ಅವರ ಕನ್ನಡಕದ ಫ್ರೇಮನ್ನು, ಸ್ಕೂಟರನ್ನು, ಕಾರನ್ನು, ಕವಿತೆಯನ್ನು, ಬಂಗಲೆಯನ್ನು, ಆರೋಗ್ಯವನ್ನು, ಭಾಷಣವನ್ನು, ದಾನ ಶೂರತ್ವವನ್ನು, ಹೀಗೆ ಯಾರ ಬಳಿ ಹೋಗುತ್ತೀರೋ ಅವರ ವಿಶಿಷ್ಟ ಗುಣಗಳನ್ನು ಸ್ತುತಿಸಿ. ಆಗಲೂ ನಿಮ್ಮ ಕೆಲಸವಾಗದಿದ್ದಲ್ಲಿ ನಿಮಗೆ ಬೆಣ್ಣೆ ಹಚ್ಚುವ ಕಲೆ ಗೊತ್ತಿಲ್ಲ, ಹೊಗಳುವ, ಸ್ತುತಿಗೈಯುವ ಕೆಲಸಕ್ಕೆ ನೀವು ಹೊಸಬರು ಅಥವಾ ನಾಲಾಯಕ್ಕು ಎಂದು ಹೇಳಬೇಕಾಗುತ್ತೆ.

ತಮ್ಮ ಕೆಲಸಕ್ಕೆಂದು ಬರುವ ಜನ, ಪೂಸಿಗಾರರು, ಶ್ಯಾನುಭೋಗ, ಪಟೇಲ-ಗೌಡರೇ ಮುಂತಾದವರ ಮನೆಗಳಿಗೆ, ಪರೀಕ್ಷೆಯ ಫಲಿತಾಂಶಗಳು ಹೊರಬೀಳುವ ಸಮಯದಲ್ಲಿ ಮೇಷ್ಟ್ರುಗಳ ಮನೆಗೆ ಬೆಣ್ಣೆ, ತರಕಾರಿಗಳನ್ನು ತೆಗೆದುಕೊಂಡು ಹೋಗಿ ಕೊಡುತ್ತಿದ್ದುದನ್ನು ನಾನು ನೋಡಿದ್ದೇನೆ. ಆಗ ಅಷ್ಟರಿಂದಲೇ ಕೆಲಸವಾಗುತ್ತಿತ್ತು. ಈಗ ಬೆಣ್ಣೆಯ ಜತೆಗೆ ಬೆಣ್ಣೆಯಂಥ ಮಾತುಗಳೂ ಬೇಕು. ಇತ್ತೀಚೆಗೆ ಈ ಹೊಗಳುಭಟ್ಟರು ತಮ್ಮ ಕೆಲಸ ಆಗಬೇಕಾದ ಮನುಷ್ಯರ ಹೆಂಡತಿಯರನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಕೆಲವು ಹೊಗಳುಭಟ್ಟರು ಇದನ್ನೇ ಅಪ್ರೂವ್ ಮಾಡಿದ್ದಾರೆ. 'ಥ್ರೂ ಪ್ರಾಪರ್ ಚಾನೆಲ್' ಹೋಗಿ ನೋಡಿ, ಕೆಲಸ ಆಗೇ ಆಗುತ್ತದೆ. ತಮ್ಮ ಹೊಗಳಿಕೆಯ ಹೊನ್ನಶೂಲದಿಂದ ಅಧಿಕಾರಿಯ 'ಬೆಟರ್ ಹಾಫ್'ನ್ನು ಒಲಿಸಿಕೊಳ್ಳಿ; ಮುಖ್ಯವಾಗಿ ಅವರ ಎದುರಿನಲ್ಲಿ ಅವರ ಗಂಡನನ್ನು ಹೊಗಳಿ, ಆಗ ನೋಡಿ ನಿಮ್ಮ ಕೆಲಸ ಹೇಗೆ ಆಗುತ್ತೆ ಅಂತ ಹೇಳುತ್ತಿದ್ದಾರೆ. ಬಿಹಾರಿ ಎಂಬ ಹಿಂದಿ ಕವಿ ಹೀಗೆ ಮಾಡಿದ್ದಾನೆ. ರಾಧಾ ಸ್ತುತಿಯ ಮೂಲಕವೇ ತನ್ನ 'ಸತಸಈ' ಯನ್ನು ಆರಂಭಿಸಿದ್ದಾನೆ. ಬರಿ ಹೊಗಳಿಕೆಯಿಂದಲೇ ನಿಮ್ಮ ಕೆಲಸವಾಗುವುದರಲ್ಲಿ ಅನುಮಾನ ಕಂಡು ಬಂದರೆ, ಅವರಿಂದ ಯಾವುದಾದರೂ ಸಮಾರಂಭದ ಉದ್ಘಾಟನೆ ಮಾಡಿಸಿ, ಬಹುಮಾನದ ವಿತರಣೆ ಮಾಡಿಸಿ, ಮಾತುಗಳಿಲ್ಲದ ಯಾವುದೇ ಕಾರ್ಯಕ್ರಮವಿದ್ದರೆ ಅವರನ್ನು ಕರೆಸಿ, ಹಾರ ಹಾಕು(ಕಿಸು)ವ ಸಂದರ್ಭದಿಂದ ವಂಚಿತರಾಗಬೇಡಿ.

ಹೊಗಳಿ, ಮುಖಸ್ತುತಿ ಮಾಡಲು, ಬೆಣ್ಣೆ ಹಚ್ಚಲು ಶಬ್ದಗಳಿಗಾಗಿ ತಡಕಾಡುವ ಬಡಪಾಯಿಗಳಿಗಾಗಿ ಇನ್ನೊಂದು ಮಾರ್ಗವೂ ಇದೆ. ಇದು ಆಪದ್ಧನವಿದ್ದಂತೆ, ತೀರಾ ಅವಶ್ಯಕತೆಯಿದ್ದಾಗ ಮಾತ್ರ ಇದನ್ನು ಪ್ರಯೋಗಿಸಬೇಕು. ಇದೆಂದರೆ ಪರನಿಂದೆ. ಪರನಿಂದೆಯಿಂದ ಸಿಗುವಷ್ಟು ಸುಖ, ಲೋಕೋತ್ತರವಾದ ಆನಂದ ಇನ್ನಾವುದರಲ್ಲೂ ಸಿಗುವುದಿಲ್ಲವೆಂದೇ ಆಧುನಿಕ ವಿಮರ್ಶಕರ ಅಭಿಪ್ರಾಯ. ಕಾವ್ಯ ಶಾಸ್ತ್ರದಲ್ಲಿ ನವರಸಗಳ ಉಲ್ಲೇಖವಿದೆ. ಅವಕ್ಕೆ ಇನ್ನಷ್ಟು ರಸಗಳನ್ನು ಸೇರಿಸಲು ವಿದ್ವಾಂಸರು ವಾದ-ಪ್ರತಿವಾದ ಮಾಡುತ್ತಿದ್ದಾರೆ. ಅವರು ಸಮರ್ಥಿಸುವ 'ರಸ'ಗಳನ್ನು ಸೇರಿಸುವುದರ ಜೊತೆಗೆ 'ನಿಂದಾರಸ'ವನ್ನೂ ಸೇರಿಸಿ ಎಂದು ಇತ್ತೀಚೆಗೆ ಈ ರಸದ ಸಮರ್ಥ

ಕರು ಹಿಂದಿನವರು ಕೇಳುತ್ತಿದ್ದಾರೆ. ಶೃಂಗಾರವನ್ನು ರಸರಾಜ ಎಂದು ಕರೆದಿದ್ದರೆ, ಆಧುನಿಕ ನಿಂದಾ ರಸಾನುಭವಿಗಳು ನಿಂದಾರಸವೇ 'ರಸರಾಜ' ಅನ್ನುತ್ತಿದ್ದಾರೆ. ನಿಂದಾರಸದ ನಿಷ್ಪತ್ತಿ ಬಹಳ ಸುಲಭವಾಗಿ ಆಗುತ್ತದೆ. ಯಾರಿಂದ ನಿಮಗೆ ಕೆಲಸವಾಗಬೇಕೋ ಅವರ ಮುಂದೆ ಅವರ ಮಿತ್ರರನ್ನು ಮತ್ತು ಶತ್ರುಗಳನ್ನು ಸಮಭಾವದಿಂದ ನಿಂದಿಸಿ, ನಿಂದಿಸುತ್ತಲೇ ಮಧ್ಯೆ ಮಧ್ಯೆ ಅವರನ್ನು ಹೊಗಳಿ, ಆಗ ನೋಡಿ ಅವರ ಮುಖ, ಬಿರಡೆಯನ್ನು ತೆಗೆದ ಕೂಡಲೇ ಒಂದಿಷ್ಟು ಉಪ್ಪು ಹಾಕಿದರೆ ಕೋಕಾಕೋಲಾ ಮೇಲಕ್ಕೆ ಚಿಮ್ಮಿ ಬರುವಂತೆ ಇವರ ಮುಖದಲ್ಲೂ ಅಸೀಮ ಸಂತೋಷ ಲಾಸ್ಯವಾಡತೊಡಗುತ್ತದೆ, 'ನಗಿ ನವಿಲು' ನರ್ತಿಸತೊಡಗುತ್ತದೆ. ಭಗವಾನ್ ಬುದ್ಧನ ಮುಖದಲ್ಲೂ ಕಾಣದ ಅಲೌಕಿಕ ಆನಂದ ಅವರ ಮುಖದಲ್ಲೂ ಕಾಣುತ್ತದೆ, ಕಿವಿಗಳು ತನ್ಮಯವಾಗಿ ಬಿಡುತ್ತವೆ. ಅದರಲ್ಲೂ 'ತಾನು ಕಳ್ಳ ಪರರ ನಂಬ' ದ ಸ್ವಭಾವದವರು ಬೇರೆಯವರ ನಿಂದನೆಯಾಗುತ್ತಿರುವಾಗ ಅಮೃತಪಾನ ಮಾಡಿದಷ್ಟು ಸುಖವನ್ನು ಅನುಭವಿಸುತ್ತಾರೆ. ರಾಜಕೀಯ ಕ್ಷೇತ್ರದಲ್ಲಂತೂ ಪರರ ನಿಂದೆಗೆ ಎಲ್ಲಿಲ್ಲದ ಸ್ಥಾನ, ಗೌರವ. ಯಾವುದೇ ಪಕ್ಷದವರು ಭಾಷಣ ಮಾಡಲಿ, ಇನ್ನೊಂದು ಪಕ್ಷದವರನ್ನು ವಾಚಾಮಗೋಚರ ನಿಂದಿಸುವುದನ್ನೇ ತಾನೇ ಮಾಡುವುದು? ಈ ನಿಂದಾರಸದಲ್ಲಿ ಶ್ರೋತೃಗಳು ತನ್ಮಯರಾಗಿ ಚಪ್ಪಾಳೆ ತಟ್ಟುವುದನ್ನು ನೀವೂ ನೋಡಿರಬೇಕಲ್ಲವೆ? ರಾಜಕಾರಣಗಳು ಕುರ್ಚಿಯನ್ನು ಪಡೆದುಕೊಳ್ಳಲು ಸಹಾಯವಾಗುವುದೇ ಈ ನಿಂದಾರಸ ಅಥವಾ ಹೊಗಳುರಸ.

ಹೊಗಳುವಿಕೆ ಅಥವಾ ಮುಖಸ್ತುತಿಯ ಕಲೆಯಲ್ಲಿ ಪಂಡಿತರಲ್ಲದವರು ಏನು ಮಾಡಬೇಕು ಗೊತ್ತೇನು? ಕೆಲಸ ಯಾರಿಂದ ಆಗಬೇಕೋ ಅವರ ಚಮಚಾಗಳಾಗಬೇಕು. ಚಮಚಾಗಳೆಂದರೆ ಆಧುನಿಕ ಪರಿಭಾಷೆಯಲ್ಲಿ ದಾಸಾನುದಾಸನಾಗುವುದು ಎಂದರ್ಥ. ದಾಸ್ಯ ಭಕ್ತಿಯ ಪ್ರತೀಕವೇ ಚಮಚಾಗಿರಿ. ಚಮಚಾಗಿರಿ ಮಾಡುವುದೂ

> ಬಗೆದಿರಲಿಲ್ಲ ನಾನು-
> ನನ್ನೆದೆಯ ಸೌಧಕ್ಕೆ
> ನೀನು ಜ್ಯೋತಿಯಾಗದೇ
> ಜ್ವಾಲೆಯಾಗುತ್ತೀ ಎಂದು
>
> – ಅಶೋಕ ಸಮಗಂಡಿ

ಒಂದು ಬಗೆಯ ಖುಷಾಮದಿಯೇ. ಬೆಣ್ಣೆ ಹಚ್ಚುವ ಒಂದು ವಿಧ, ವ್ಯಾಕರಣದ ಪರಿಭಾಷೆಯಲ್ಲಿ ಹೇಳುವುದಾದರೆ ಕ್ರಿಯೆ. ಉದಾಹರಣೆಗೆ ಅವರ ಜತೆಯಲ್ಲಿ ನೀವು ಯಾವುದಾದರೂ ಒಂದು ದೇವಸ್ಥಾನಕ್ಕೆ ಹೋದಿರಿ ಎಂದಿಟ್ಟುಕೊಳ್ಳಿ. ಅವರಿಗಿಂತಲೂ ಮುಂಚೆ ಬಂದು ಅವರ ಚಪ್ಪಲಿಗಳನ್ನು ಹುಡುಕಿಟ್ಟು ಹಾಕಿಕೊಳ್ಳಲು ಹೇಳಿ. ಅವರಿಗೆ ದಾರಿ ಮಾಡಿಕೊಡಿ, ಕಾರು ಹತ್ತಲು ಬಾಗಿಲು ತೆರೆಯಿರಿ, ಸ್ಕೂಟರ್ ಆದರೆ ಕಿಕ್ ಮಾಡಿ ಸ್ಟಾರ್ಟ್ ಮಾಡಿ ಕೊಡಿ, ಭಾಷಣ ಬರೆದು ಕೊಡಿ, ಅವರು ಭಾಷಣ ಮಾಡಲು ಹೋದಾಗ ಅವರು ಆಡುವ ಪ್ರತಿಯೊಂದು ಮುಖ್ಯ ಮಾತಿಗೂ ನೀವು ಮೊದಲು ಚಪ್ಪಾಳೆ ತಟ್ಟಿ ಬೇರೆಯವರೂ ತಟ್ಟುವಂತೆ ಪ್ರೇರೇಪಿಸಿ. ಜೋಕು ಹೇಳಿದರೆ ಮೊದಲು ನೀವು ನಗಿ, ನಿಮ್ಮನ್ನು ನೋಡಿಕೊಂಡು ಬೇರೆಯವರೂ ನಗುತ್ತಾರೆ. ಅವರಿಗೆ ಹಾರ ಹಾಕಿದಾಗ ಅದನ್ನು ಅವರ ಕೈಯಿಂದ ತೆಗೆದುಕೊಂಡು ಪಕ್ಕಕ್ಕಿಡಿ. ಅಕಸ್ಮಾತ್ ಯಾರಾದರೂ ಕೋಳಿ ಮೊಟ್ಟೆಯನ್ನೋ ಟೊಮ್ಯಾಟೊ ಹಣ್ಣನ್ನೋ ಎಸೆದರು ಅನ್ನಿ, ಅದನ್ನು ತೆಗೆದು ಒರೆಸಿ. ಹೊಗಳಿಕೆ ಮಾಡುವುದಕ್ಕಿಂತಲೂ ಹೆಚ್ಚಿನ ಕೆಲಸವನ್ನು ಚಮಚಾಗಿರಿ ಎಂಬ ಬಟರಿಂಗ್ ಮಾಡುತ್ತದೆಯೆಂದು ನಾನಾದರೂ ನಂಬಿದ್ದೇನೆ. ನಿಮ್ಮ ಹೊಗಳಿಕೆಯ ಮಾತುಗಳು ಗಾಳಿಗೆ ಹೋಗಬಹುದು, ಆದರೆ ನಿಮ್ಮ ಸೇವೆಯನ್ನು ಮರೆಯಲು ಅವರ ಅಂತರಂಗ ಒಪ್ಪುವುದಾದರೂ ಹೇಗೆ? ಹೀಗಾಗಿ ನಿಮ್ಮ ಕೆಲಸ

ಆಗಿಯೇ ಆಗುತ್ತದೆ. ಜೊತೆಗೆ ನಿಮ್ಮ ಸಖ್ಯಭಕ್ತಿ ಮತ್ತು ದಾಸ್ಯ ಭಕ್ತಿಯನ್ನು ನೋಡಿದವರು ತಮ್ಮ ಕೆಲಸ ಮಾಡಿಸಿಕೊಳ್ಳಲು ನಿಮಗೆ ದುಂಬಾಲು ಬೀಳುತ್ತಾರೆ. ರಾಮನಿಗಿಂತ ರಾಮನಾಮ ದೊಡ್ಡದಲ್ಲವೆ? ಇವತ್ತಿನ ಕಾಲದಲ್ಲಿ ಕೆಲಸ ಮಾಡಿಕೊಡುವವನಿಗಿಂತ ಮಾಡಿಸಿಕೊಡುವವ ನಿಗೆ ಹೆಚ್ಚು ಬೆಲೆ, ಮೌಲ್ಯ. ಅವನೇ ಹೆಚ್ಚು ಚಲಾವಣೆಯಲ್ಲಿರುತ್ತಾನೆ.

ಹೊಗಳುಭಟ್ಟರಿಗೆ ಸ್ವಂತ ವ್ಯಕ್ತಿತ್ವ ಇಲ್ಲದಿರು ವುದನ್ನು ನಾನು ಗಮನಿಸುತ್ತಲೇ ಬಂದಿದ್ದೇನೆ. ನಿಷ್ಠೆಯೆಂಬುದು ಇವರ ಶಬ್ದಕೋಶದಲ್ಲೇ ಇಲ್ಲ. ಗಾಳಿ ಬಂದ ಕಡೆ ತೂರಿ ಹೋಗುತ್ತಾರೆ. ಯಾರಿಂದ ಕೆಲಸವಾಗಬೇಕೋ ಅವರ ಮರ್ಜಿ ಯನ್ನು ಅನುಸರಿಸಿ ಸಾಗುತ್ತಾರೆ. 'ಗಂಗಾ ಗಯೇ ಗಂಗಾದಾಸ್! ಜಮುನಾ ಗಯೇ ಜಮುನಾದಾ ಸ್' ಅನ್ನುತ್ತಾರಲ್ಲ, ಹಾಗೆ. ಇವರು ಆರು ಕೊಟ್ಟರೆ ಅತ್ತೆಯ ಕಡೆ, ಮೂರು ಕೊಟ್ಟರೆ ಸೊಸೆಯ ಕಡೆ. ಆಷಾಢದ ಮೋಡಗಳು ಒಂದೆಡೆ ನಿಲ್ಲುತ್ತವೆಯೇನು? ಇವರ ವಿನಯ, ನಮ್ರ ತೆಯ ಬಗ್ಗೆ ಹೇಳುವುದನ್ನೇ ಮರೆತಿದ್ದೆ. ಗುಣಕ್ಕೆ ಮಾತ್ಸರ್ಯವೇಕೆ? ಇವರು ನಮ್ರತೆಯ ಸಾಕಾರ ಮೂರ್ತಿಗಳು. ತಿವಿಯದ, ಒದೆಯದ ಸಾಧು ಗಳು, ಇವರಿಂದ ಯಾರಿಗೂ ಕೇಡಿಲ್ಲ. ಅಂದ ಮೇಲೆ ಅವರು ಸಮಾಜಕ್ಕೆ ಹೊರೆಯಲ್ಲ, ಶಾಪ ವಲ್ಲ.

ಪರಂಪರಾಗತವಾಗಿ ಯುಗಯುಗಗಳಿಂದ ಅನೂಚಾನವಾಗಿ ಹೊಗಳಿಕೆಯ ಈ ಕಲೆ, ಮುಖ ಸ್ತುತಿ ಮಾಡುವ ವಿದ್ಯೆ ಬಾಯಿಂದ ಬಾಯಿಗೆ, ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದಿದೆ. ಇದಿಲ್ಲದ ಯಾವ ಯುಗವೂ ಇಲ್ಲ. ಆದರೂ ಈ ಕಲೆಯ ಬಗ್ಗೆ ಚರ್ಚೆ ನಡೆದಿರುವುದು ನನ್ನ ಗಮ ನಕ್ಕೆ ಬಂದಿಲ್ಲ. ಆದರೇನಂತೆ, ಇದು ಬದುಕಿದೆ. ಜನರ ನರನಾಡಿಗಳಲ್ಲಿ ಎಷ್ಟರ ಮಟ್ಟಿಗೆ ಬೆರೆತಿದೆ ಅಂದರೆ ಗ್ರಾಂಥಿಕ ಕಲೆಗಳು ಹೇಳ ಹೆಸರಿಲ್ಲದಂತೆ ಹೋದರೂ ಈ ಕಲೆ ಹೋಗುವುದಿಲ್ಲ, ಅಳಿಸುವು ದಿಲ್ಲ. ದಿನದಿನಕ್ಕೆ ಪರಿಷ್ಕೃತವಾಗುತ್ತ, ಹೊಸ ಹೊಸ ವಿಧಾನಗಳನ್ನು ಆವಿಷ್ಕರಿಸಿಕೊಳ್ಳುತ್ತ ಸಾಗುತ್ತಿದೆ. ನಮ್ಮ-ನಿಮ್ಮ ಮಧ್ಯೆ ಮಹಾನ್ ಹೊಗಳುಭಟ್ಟರು ಅಪ್ರತಿಮ ಸ್ತುತಿ ಗಾಯಕರು ಇಲ್ಲವೇನು? ಖುಷಾಮದಿ ಕಲೆಯಲ್ಲಿ ರುಸ್ತು ಮರು, ಬೆಣ್ಣೆ ಹಚ್ಚುವ ಕಲೆಯಲ್ಲಿ ಉಸ್ತಾದರ ಕೊರತೆಯೇನು? ಇವರೆಲ್ಲರ ಕೈ ಬಾಯಿಗಳಲ್ಲಿ ಹೊನ್ನ ಶೂಲಗಳಿವೆ. ಕವಿ ನಿಸಾರ್ ಅಹಮದ್ ಅವರ 'ನಗ್ತೀರ ನನ್ ಹಿಂದೆ?' ಎಂಬ ಕವಿತೆ ಯಲ್ಲಿ ಹೊಗಳುವಿಕೆ, ಭಟ್ಟಂಗಿತನ, ಚಮಚಾ ಗಿರಿ, ಖುಷಾಮದಿ ಇತ್ಯಾದಿ ಏನೆಲ್ಲ ಇದೆಯೋ ಅವನ್ನೆಲ್ಲ ಮಾಡಿದ ಒಬ್ಬ ಡಿಗ್ರಿಧಾರಿಯ ಗೋಳನ್ನು, ಅವನು ಬದುಕಿನಿಂದ ಕಲಿತ ಪಾಠ ವನ್ನು ಅತ್ಯಂತ ಮಾರ್ಮಿಕವಾಗಿ ವರ್ಣಿಸಿದ್ದಾರೆ.

'ನಗ್ತೀರ ನನ್ ಹಿಂದೆ? ನಗ್ರಯ್ಯಾ ನಗ್ರಿ
ಸುಮ್ನೆ ಸಿಕ್ಲಿಲ್ಲ ಹೆಸ್ರ ಹಿಂದಿನ್ ಡಿಗ್ರಿ,
ಮೂರು ವರ್ಷ ಪ್ರೊಫೆಸರ್ರ ನಾಯಿಗೆ ಸ್ನಾನ
ಹಿರಿ ಮಗನ್ ಚೌಲಕ್ಕೆ ಮಖ್ಮಲ್ ಜಮ್ಖಾನ
ಇನ್ನವರ ಮೈದುನನ್ಗೆ ಸಿನಿಮಾಗಾನ
ಪ್ರತಿದಿನ ಒಪ್ಸಿದೀನಿ ಅಮ್ಮಾವ್ರಿಗೆ ಸ್ನೋನ

ಹೊಗಳುವವರಿಗೆ ಜಯವಾಗಲಿ, ಬೆಣ್ಣೆ ಹಚ್ಚುವವರಿಗೆ ಶುಭವಾಗಲಿ, ಖುಷಾಮದಿಗಳ ಬಾಳು ಬೆಳಗಲಿ. ಹೊಗಳಿಕೆಯ ಹೊನ್ನ ಶೂಲ ಗಳು ಬರಲಿರುವ ದಿನಗಳಲ್ಲಿ ಜಗತ್ತಿನ ತುಂಬಾ ವಿಜೃಂಭಿಸಲಿ ಎಂಬುದೇ ನನ್ನ ಆಸೆ. ●

ಅಣ್ವಸ್ತ್ರಗಳ ಹಿಡಿದು ಹೊರಟವರ ತಲೆಯ ನುಣ್ಣಗೆ ಮಾಡಿ
ಲಿಂಬಿ ಹುಳಿಯನು ಹಿಂಡಿ, ಸುಣ್ಣದ ಪಟ್ಟೆ ಎಳೆದು
ಕತ್ತೆಯ ಮೇಲೆ ತಂದು ವಿಶ್ವ ಸಂಸ್ಥೆಯ ಮುಂದೆ ಮೆರೆಸೋಣ.
ನಮ್ಮ ಬೆಂಬಲಕಿಹನು ಅಂಬಿಗರ ಚೌಡಯ್ಯ.

ಚೆನ್ನವೀರ ಕಣವಿ
('ಕಾಲ ನಿಲ್ಲುವುದಿಲ್ಲ' ಕವನದಿಂದ)

STATEMENT ABOUT OWNERSHIP AND OTHER PARTICULARS ABOUT MONTHLY KASTURI TO BE PUBLISHED IN THE FIRST ISSUE EVERY YEAR AFTER THE LAST DAY OF FEBRUARY.

FORM IV
(See Rule 8)

1.	Place of Publication	: Hubli
2.	Periodicity of its Publication	: Monthly
3.	Printer's Name	: B.S. Savanoor
	Whether citizen of India?	: Yes
	Address	: Samyukta Karnataka, Koppikar Road, Hubli - 580 020
4.	Publisher's Name	: B.S. Savanoor
	Whether citizen of India?	: Yes
	Address	: Samyukta Karnataka, Koppikar Road, Hubli - 580 020.
5.	Editor's Name	: R.A. Upadhya
	Whether citizen of India?	: Yes
	Address	: Samyukta Karnataka, Koppikar Road, Hubli - 580 020.
6.	Name and Address of individuals who own the newspapers and partners or share-holders holding more than one percent of the total capital.	: Loka Shikshana Trust, Koppikar Road, Hubli Board of Trustees: Sri A.R. Badarinarayan, Chairman. Sri B.D. Jatti, Trustee Sri S.P. Bhat, Trustee Sri G.M. Patil, Trustee Sri Nittur Srinivas Rao, Trustee

I, B.S. Savanoor hereby declare that the particulars given above are true to the best of my knowledge and belief.


HUBLI
DATED : 1.3.1991

B.S. Savanoor
Signature of Publisher

ಬಯಸದಿರು ಮತ್ತೆ ಅಂಥ ಪ್ರೀತಿ ...

ಪ್ರಿಯೆ, ಬಯಸದಿರು ಮತ್ತೆ ಅಂಥ ಮೊದಲ ಪ್ರೀತಿ
ನೀನಿದ್ದರೆ ಬದುಕು ಹೊಳಪೆಂದು ತಿಳಿದಿದ್ದೆ ನಾನು
ನೀ ನೀಡಿದ ನೋವ ವರದಾನದ ಮುಂದೆ
ಲೋಕದೆಲ್ಲ ವ್ಯಥೆ ಹಿಂದೆ, ಹಿಂದೆ

ನಿನ್ನ ಮುಖದಲ್ಲಿ ಹಾಯುತ್ತಿತ್ತು ಸರ್ವಋತು
ನಿನ್ನ ಕಣ್ಣ ಚೆಲುವ ಮುಂದಿತ್ತು ಬೇರಾವ ಚೆಲುವು
ನನ್ನವಳಾಗಿದ್ದರೆ ನೀನು ಸೌಭಾಗ್ಯವೇ ಶರಣಾಗುತ್ತಿತ್ತು
ಹೀಗಾಗಲಿಲ್ಲವಾದರೂ ಮನಸ್ಸು ಹೀಗೆ ಬಯಸಿತ್ತು



ಪ್ರೀತಿ ಯಾತನೆಯ ಮೀರಿ ಇನ್ನೆಷ್ಟೋ ದುಃಖಗಳಿವೆ
ಇನ್ನೆಷ್ಟೋ ಸಂಭ್ರಮಗಳಿವೆ ಮಿಲನ ಸಂಭ್ರಮವ ಮೀರಿ
ಸೆಳೆಯುತ್ತಿವೆ ಅನಾದಿಯಿಂದ ಅಸಂಖ್ಯಾತ ತಂತ್ರ
ವಿಕರಾಳ ರೂಪಕ್ಕೆ ರೇಷ್ಮೆಯುಡಿಗೆ ತೊಡಿಸಿದಂತೆ

ಓಣಿಓಣಿಗಳಲಿ ಮಾರಾಟಕ್ಕಿವೆ ದೇಹ
ರಕ್ತ ಸ್ನಾನವ ಮಾಡಿ ಮಣ್ಣರಾಶಿಯಲಿ ಹೊರಳಿ
ರೋಗರುಜಿನಗಳಲಿ ಬೆಂದು ಬಂದಿದೆ ದೇಹ
ಹಳೆ ಗಾಯವೊಡೆದು ಸೋರುತ್ತಿದೆ ಕೀವು

ಪ್ರಿಯೆ ಈಗಲೂ ನೀನು ಅತಿ ಚೆಲುವೆ ಕೋಮಲೆ
ಆದರೂ, ಅತ್ತಲೂ ಹೊರಳುತ್ತಿವೆ ಕಣ್ಣು ಏನು ಮಾಡಲೆ?

ಪ್ರೀತಿ ಯಾಚನೆಯ ಮೀರಿ ಇನ್ನೆಷ್ಟೋ ದುಃಖಗಳಿವೆ
ಇನ್ನೆಷ್ಟೋ ಸಂಭ್ರಮಗಳಿವೆ ಮಿಲನ ಸಂಭ್ರಮವ ಮೀರಿ
ಪ್ರಿಯೆ, ಬಯಸದಿರು ಮತ್ತೆ ಇಂಥ ಮೊದಲ ಪ್ರೀತಿ
ನೀನಿದ್ದರೆ ಬದುಕು ಹೊಳಪೆಂದು ತಿಳಿದಿದ್ದೆ ನಾನು.


ಉರ್ದು : **ಫಯಾಜ್ ಅಹಮದ್ ಫಯಾಜ್**
ಕನ್ನಡಕ್ಕೆ : ಎಂ. ಆರ್. ಕಮಲ

ರಾಸಾಯನಿಕ ಅಸ್ತ್ರಗಳ ಸಂಚಯ


ಅರುಣ

ರಾಸಾಯನಿಕ ಅಸ್ತ್ರಗಳನ್ನು ಜಾಗತಿಕ ಮಟ್ಟದಲ್ಲಿ ಸಾರ್ವತ್ರಿಕವಾಗಿ ನಿಷೇಧಿಸುವ ಸಲುವಾಗಿ ಸದ್ಯ ಜನೀವಾದಲ್ಲಿ ಒಪ್ಪಂದವೊಂದು ರಚನೆಯಾಗುತ್ತಿದೆ. ಈ ಮಧ್ಯೆ ಸೋವಿಯತ್ ರಶಿಯಾ ಮತ್ತು ಅಮೆರಿಕಾ 'ಮೌನವಾಗಿ ಸಾವನ್ನು' ಹರಡುವ ಈ ಮಾರಕಾಸ್ತ್ರಗಳ ಸಂಗ್ರಹವನ್ನು ಶೇಕಡಾ 80ರಿಂದ ಶೇಕಡಾ 90ರಷ್ಟು ಅಂದರೆ ಸುಮಾರು 5000 ಟನ್ ವಿಷಯುಕ್ತ ರಾಸಾಯನಿಕ ಅಸ್ತ್ರಗಳನ್ನು ನಿರ್ನಾಮಗೊಳಿಸಲು ಒಪ್ಪಂದಕ್ಕೆ ಸಹಿ ಹಾಕಿವೆ.

ರಾಸಾಯನಿಕ ಅಸ್ತ್ರಗಳ ಪೈಕಿ 'ನರ್ವ್‌ಗ್ಯಾಸ್' ಎಂಬ ಸಮರಾನಿಲಗಳು ಪ್ರಮುಖವಾಗಿವೆ. ಅವು ಮಾನವನ ನರಮಂಡಲದ ಮೇಲೆ ಅಪಾರ ಹಾನಿ ಉಂಟುಮಾಡುತ್ತವೆ. ಇಂತಹ ಭೀಕರ ಮಾರಕಾಸ್ತ್ರಗಳನ್ನು ನಾಶಗೊಳಿಸುವ ಸಲಹೆಯನ್ನು ಎಲ್ಲರೂ ಸ್ವಾಗತಿಸುತ್ತಿದ್ದಾರೆ. ಹಳೆಯ ರಾಸಾ



ಪ್ರಾಣಾಂತಿಕವಾದ ರಾಸಾಯನಿಕ ಅಸ್ತ್ರಗಳ ದಾಸ್ತಾನು



ಯನಿಕ ಅಸ್ತ್ರ ಸಂಗ್ರಹವನ್ನು ನಾಶಗೊಳಿಸುವ ನಿಟ್ಟಿನಲ್ಲಿ ರಶಿಯಾ ಮತ್ತು ಅಮೆರಿಕಾ ರಾಷ್ಟ್ರಗಳಿಗೆ ಸಾಕಷ್ಟು ಅನುಭವವಿದೆ. ರಶಿಯಾದ ವೋಲ್ಗಾ ವಲಯದಲ್ಲಿ ಚಪಾಯೆವ್ಸ್ಕ್ ನಗರದಿಂದ 12 ಕಿಲೋ ಮೀಟರ್ ದೂರದಲ್ಲಿ 'ನರ್ವ್ ಗ್ಯಾಸ್'ಗಳ ನಾಶಕ್ಕೆ ನೆರವಾಗುವ ವಿಶೇಷ ತಂತ್ರಜ್ಞಾನ ರೂಪಿಸಲು ಕಾರ್ಖಾನೆಯೊಂದನ್ನು ನಿರ್ಮಿಸಲಾಗಿದೆ. ಈ ಕಾರ್ಖಾನೆಯ ನಿರ್ಮಾಣಕ್ಕೆ 50 ಮಿಲಿಯ ರೂಬಲ್ ವೆಚ್ಚವಾಗಿದೆ. ಈ ಕಾರ್ಖಾನೆಯು ತಜ್ಞರಿಗೆ ತರಬೇತಿ ನೀಡುವ ಹಾಗೂ ಸಮರಾನಿಲ ನಾಶಗೊಳಿಸುವ ತಂತ್ರಜ್ಞಾನವನ್ನು ರೂಪಿಸುವ ಕೇಂದ್ರವಾಗಲಿದೆ.

ಮೊದಲು ಪ್ರತಿಯೊಂದು ರಾಸಾಯನಿಕ ಅಸ್ತ್ರ ಸಿಡಿತಲೆ (ವಾರ್‌ಹೆಡ್) ಪ್ರತ್ಯೇಕ ಪ್ರತ್ಯೇಕವಾಗಿ ನಾಶಗೊಳಿಸುತ್ತಾರೆ. ಎರಡನೇ ಹಂತದಲ್ಲಿ ರಾಸಾಯನಿಕ ಅಸ್ತ್ರಗಳಲ್ಲಿ ತುಂಬಿರುವ ವಿಷವನ್ನು ಹೊರತೆಗೆದು ಅವನ್ನು ಮಿಲಿಟರಿ ಬಳಕೆಗೆ ನಿರುಪಯುಕ್ತಗೊಳಿಸಲಾಗುವುದು. ಸಮರಾನಿಲಗಳಿಂದ ವಿಷಯುಕ್ತ ಅಂಶಗಳನ್ನು ತೆಗೆದ ಬಳಿಕ ಅವುಗಳನ್ನು ನಾಶಗೊಳಿಸಿದರೆ ಪರಿಸರಕ್ಕೆ ಯಾವುದೇ ವಿಧದಲ್ಲಿಯೂ ಹಾನಿಯಾಗುವುದಿಲ್ಲ. ನರ್ವ್‌ಗ್ಯಾಸ್‌ನಂತಹ ಭೀಕರ ರಾಸಾಯನಿಕ ಅಸ್ತ್ರಗಳನ್ನು ನಾಶಗೊಳಿಸುವ ಸಂದರ್ಭದಲ್ಲಿ ಆಸುಪಾಸಿನ ವಲಯಗಳಲ್ಲಿ ನೆಲೆಸಿರುವ ಜನರ ಜೀವಕ್ಕೆ ಭದ್ರತೆ ಒದಗಿಸುವುದು ಹಾಗೂ ಪರಿಸರ ಸುರಕ್ಷತತೆ ಕಾಯ್ದುಕೊಳ್ಳುವುದು ಬಹಳ ಮಹತ್ವದ ಅಂಶವಾಗಿವೆ. ಈ ನಿಟ್ಟಿನಲ್ಲಿ ಸೋವಿಯೆತ್ ಮತ್ತು ಅಮೆರಿಕಾ ತಜ್ಞರು ಸಮಾನ ವಿಧಾನವೊಂದನ್ನು ರೂಪಿಸಲು ಯತ್ನಿಸುತ್ತಿದ್ದಾರೆ. ತೀರಾ ಈಚೆಗಿನವರೆಗೂ ರಶಿಯಾ ಮತ್ತು ಅಮೆರಿಕಾ ಅವು ಹೊಂದಿರುವ ರಾಸಾಯನಿಕ ಅಸ್ತ್ರ ಸಂಗ್ರಹದ ಬಗ್ಗೆ ರಹಸ್ಯತೆ ಕಾಯ್ದುಕೊಂಡು ಬಂದಿದ್ದವು. ಇಂದು ಅವು ರಾಸಾಯನಿಕ ಅಸ್ತ್ರಗಳ ಸಂಗ್ರಹ ಹಾಗೂ ಅವುಗಳ ನಿರ್ಮೂಲನಕ್ಕೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿಗಳನ್ನು ಬಹಿರಂಗಗೊಳಿಸಿವೆ.

ಸೋವಿಯೆತ್ ರಶಿಯಾದಲ್ಲಿ ರಾಸಾಯನಿಕ ಅಸ್ತ್ರಗಳನ್ನು ದಾಸ್ತಾನು ಮಾಡಿದ ಶಸ್ತ್ರ ಕೋಠಿ ಎಲ್ಲಿದೆ ಎಂಬುದು ಈತನಕ ಕಟ್ಟುನಿಟ್ಟಾದ ರಹಸ್ಯವಾಗಿತ್ತು. ಆದರೆ ಇಂದು ಆ ಸ್ಥಳ ರಹಸ್ಯವಾಗಿ ಉಳಿದಿಲ್ಲ. ಕೇವಲ 13,000 ಜನಸಂಖ್ಯೆಯಿರುವ ಕಂಬಾರ್ಕ ಪಟ್ಟಣದಲ್ಲಿ ಲ್ಯೂಯಿಸೈಟ್ ರಾಸಾಯನಿಕ ಅಸ್ತ್ರ ಸಂಗ್ರಹವಿರುವ ಅಸ್ತ್ರಕೋಠಿ ಇದೆ.

ಕಂಬಾರ್ಕ್, 18ನೇ ಶತಮಾನದ ಮಧ್ಯಭಾಗದಲ್ಲಿ ಸ್ಥಾಪನೆಯಾದ ಹಳೆಯ ರಶಿಯನ್ ಪಟ್ಟಣ. ಕಂಬಾರ್ಕದ ಉತ್ತರ ಹಾಗೂ ಪೂರ್ವ ಭಾಗಗಳಲ್ಲಿ ದಟ್ಟವಾದ ಕೊನಿಫರಸ್ ಕಾಡುಗಳಿವೆ. ಈ ಪಟ್ಟಣದಿಂದ 20 ಕಿಲೋಮೀಟರ್ ದೂರದಲ್ಲಿ ನೆಫ್ತೆಕಾಮಾಸ್ತ್ ನಗರವಿದೆ. ಮಾಸ್ಕೋ-ಸ್ವೆರ್ಡ್ಲೋವ್‌ಸ್ಕ್ ರೈಲು ಮಾರ್ಗ ಕಂಬಾರ್ಕ ಮೂಲಕ ಹಾದು ಹೋಗುತ್ತದೆ.

1941ರಲ್ಲಿ ಎರಡನೇ ಮಹಾಯುದ್ಧದ ದಿನಗಳಲ್ಲಿ ಕಂಬಾರ್ಕದಲ್ಲಿ ರಾಸಾಯನಿಕ ಅಸ್ತ್ರ ಕೋಠಿಯನ್ನು ನಿರ್ಮಿಸಲಾಯಿತು. ಇಂದು ಲ್ಯೂಯಿಸೈಟ್ ಎಂಬ ಮಾರಕ ರಾಸಾಯನಿಕ ಅಸ್ತ್ರವನ್ನು ಇಲ್ಲಿ ಸಂಗ್ರಹಿಸಿಡಲಾಗಿದೆ. ಜೆರಾನಿಯಂನ ವಾಸನೆ ಇರುವ ಕಡು ಕಂದುಬಣ್ಣದ ಈ ದ್ರವ


ಗಾಳಿಯ ಸಂಪರ್ಕಕ್ಕೆ ಬಂದರೆ, ಚರ್ಮವನ್ನು ಸ್ಪರ್ಶಿಸಿದರೆ ತಕ್ಷಣ ವ್ಯಕ್ತಿ ಸಾಯುತ್ತಾನೆ. 1950ರ ಅನಂತರ ಕಂಬಾರ್ಕದಲ್ಲಿ ಹಲವು ಟನ್ ತೂಕದ ಟ್ಯಾಂಕ್‌ಗಳಲ್ಲಿ ರಾಸಾಯನಿಕ ವಿಷಾಸ್ತ್ರಗಳನ್ನು ಸಂಗ್ರಹಿಸಿಡಲಾಗಿದೆ.

ಕಂಬಾರ್ಕದಲ್ಲಿರುವ ಕಾರ್ಖಾನೆಯಲ್ಲಿ ರಾಸಾಯನಿಕ ಅಸ್ತ್ರಗಳನ್ನು ದಾಸ್ತಾನು ಮಾಡಲು ಪ್ರತ್ಯೇಕ ಉಗ್ರಾಣವಿದೆ. ರಾಸಾಯನಿಕ ಅಸ್ತ್ರಗಳಿಂದ ಸಜ್ಜಾಗಿರುವ ಪಡೆಗಳಿಗೆ ಅಗತ್ಯವಿರುವ ಬಿಡಿ ಭಾಗಗಳನ್ನು ಪೂರೈಸಲು, ಸಾಧನ ಸಲಕರಣೆಗಳ ಪ್ರತ್ಯೇಕ ವಿಭಾಗವೂ ಅಲ್ಲಿದೆ.

ಇಂದು ಕಂಬಾರ್ಕ ರಾಸಾಯನಿಕ ಅಸ್ತ್ರ ಕೋಠಿಯ ಬಗ್ಗೆ ಯಾವ ರಹಸ್ಯವೂ ಉಳಿದಿಲ್ಲ. ಅಲ್ಲಿ ಸಂಗ್ರಹವಾಗಿರುವ ಅಸ್ತ್ರಗಳನ್ನೆಲ್ಲಾ ನಾಶಗೊಳಿಸಲಾಗುವುದು. ಕೆಲವು ವರ್ಷಗಳ ಹಿಂದೆಯೇ ರಶಿಯಾ ರಾಸಾಯನಿಕ ವಿಷ ಅಸ್ತ್ರಗಳ ಉತ್ಪಾದನೆ ನಿಲ್ಲಿಸಿದೆ. ರಶಿಯಾದ ವಿಜ್ಞಾನಿಗಳು ಹಲವು ವರ್ಷಗಳ ಹಿಂದಿನಿಂದಲೂ ರಾಸಾಯನಿಕ ಅಸ್ತ್ರ ಕೋಠಿಗಳಲ್ಲಿ ಜಮಾವಣೆಯಾಗಿರುವ ರಾಸಾಯನಿಕ ಅಸ್ತ್ರಗಳನ್ನು ನಾಶಗೊಳಿಸುವ ಕಾರ್ಯಭಾರದಲ್ಲಿ ತೊಡಗಿದ್ದಾರೆ.

ರಾಸಾಯನಿಕ ಅಸ್ತ್ರಗಳನ್ನು ನಾಶ ಮಾಡಲು ಬಳಸಬಹುದಾದ ಹಲವು ಮಾದರಿಯ ವಿಧಾನಗಳನ್ನು ತಜ್ಞರು ಸೋವಿಯೆತ್ ಸಂಸತ್‌ನ ಅವಗಾಹನೆಗಾಗಿ ಸಲ್ಲಿಸಿದ್ದಾರೆ. ಅಂತಹ ತಂತ್ರಜ್ಞಾನವನ್ನು ಸುಧಾರಿಸುವ ಹಾಗೂ ಅಭಿವೃದ್ಧಿಪಡಿಸುವ ದಿಶೆಯಲ್ಲಿ ರಶಿಯಾದ ತಜ್ಞರು ಅಮೆರಿಕಾದ ಸಂಶೋಧಕರೊಂದಿಗೆ ಸಹಕರಿಸುತ್ತಿದ್ದಾರೆ. ●

ಎಲುಬಿಲ್ಲದ ನಾಲಗೆ



ಜೋಡಿ ನಾಲಿಗೆಯ ಫಿಲಿಪ್ ಡೆವೊನ್

● *ದೀಪಕ್‌ಸಾಗರ*

ತಾನಾಗಿಯೇ ತಪ್ಪಿತಸ್ಥವಲ್ಲದ ನಾಲಿಗೆ ಎಂಬ ಅಂಗ ಮಾನವನ ದುರ್ಬಳಕೆಯ ದೆಸೆಯಿಂದಾಗಿ ''ಎಲುಬಿಲ್ಲದ ನಾಲಗೆ ...'' ಎಂದು ವಿನಾಕಾರಣ ಹೀಯಾಳಿಸಿಕೊಂಡಿದೆ. ಹಾಗೆಂದು ಅದೆಂದೂ ಮುನಿಸಿಕೊಂಡು ಕರ್ತವ್ಯದಿಂದ ಹಿಂದೆಗೆದದ್ದಿಲ್ಲ. ಆಹಾರದ ರುಚಿಯನ್ನು ಅರಿಯುವುದಷ್ಟೇ ಅಲ್ಲ, ಮಿದುಳ ಆದೇಶದಂತೆ ಧ್ವನಿಗಳಿಗೆ ಆಕಾರ ಕೊಡುವ ಹೆಚ್ಚುವರಿ ಶ್ರಮವನ್ನೂ ನಾಲಗೆ 'ದೂಸರಾ ಮಾತಿಲ್ಲದೆ' ನಿರ್ವಹಿಸುತ್ತದೆ. ಗಂಟಲಿನಿಂದ ಹೊರಬೀಳುವ ಕಚ್ಚಾ

ರೂಪದ ಧ್ವನಿಗೆ ನಿರ್ದಿಷ್ಟ ಸ್ವರೂಪ ನೀಡುವ ಮೂಲಕ ಭಾಷೆಗೆ ಅರ್ಥ ಕೆತ್ತುವುದು ನಾಲಗೆಯೇ. ಬಾಯಿಯೊಳಗಿನ ಯಾವ ಭಾಗದಲ್ಲಿ ಹೇಗೆ, ಎಷ್ಟು ವಿಶಿಷ್ಟವಾಗಿ ನಾಲಗೆ ಒತ್ತುತ್ತದೆಯೋ ಅದರ ಮೇಲಿಂದ ಅಕ್ಷರಗಳು ಉಚ್ಚರಿಸಲ್ಪಡುತ್ತವೆ.

ಬಾಯೊಳಗಿನ ದಪ್ಪ ಮಾಂಸಲ ಅಂಗವಾದ ನಾಲಗೆಯ ಬಣ್ಣ ಸಾಧಾರಣವಾಗಿ ಎಳೆಗೆಂಪು. ಮನುಷ್ಯನಲ್ಲಿ ಜಿಹ್ವಾಸ್ಥಿಗೆ ಸೇರುವ ಅದರ ಮುಂಭಾಗ ಬೇಕಾದಂತೆ ಹೊರಳುತ್ತದೆ. ಅಂಟಿಕೊಂಡಿರುವ ಹಿಂಭಾಗವನ್ನು ಬೇರು ಎಂದೂ, ಚಲನೆಯುಳ್ಳ ಮುಂಭಾಗದ ತುದಿಯನ್ನು ಡೋರೇಸಂ ಎಂದೂ ವೈದ್ಯಕೀಯ ಭಾಷೆಯಲ್ಲಿ ಕರೆಯಲಾಗುತ್ತದೆ. ಪಟ್ಟಿಯಂತಹ ಸ್ನಾಯುರಜ್ಜುಗಳಿಂದ ಕೂಡಿ ಲೋಳೆಪರೆಯಿಂದ ಮುಚ್ಚಲ್ಪಟ್ಟಿದೆ. ಲೋಳೆಪರೆಯ ಗ್ರಂಥಿಯಿಂದಾಗಿ ಸದಾ ತೇವವಾಗಿರುವ ನಾಲಗೆಯಲ್ಲಿ ಅನೇಕ ರಕ್ತನಾಳಗಳು ಅಡಕವಾಗಿವೆ. ನಾಲಗೆಯ ಒರಟುತನಕ್ಕೆ ಕಾರಣ ಲೋಳೆದೊಗಲಿನಿಂದ ಹೊರಟ ಶಂಕುವಿನಾಕಾರದ ಗ್ರಂಥಿಗಳು. ನಾಲಗೆಯ ತುಂಬ ಹರಡಿಕೊಂಡ ರುಚಿ ಮೊಗ್ಗುಗಳು ರುಚಿಯ ವ್ಯತ್ಯಾಸವನ್ನು ತಿಳಿಸುತ್ತವೆ. ನಾಲಗೆಯ ತುದಿ ಭಾಗದಲ್ಲಿ ಸಿಹಿ, ಉಪ್ಪು; ಅಂತ್ಯದಲ್ಲಿ ಹುಳಿ; ಹಿಂಭಾಗದಲ್ಲಿ ಕಹಿ ಪದಾರ್ಥಗಳ ರುಚಿಯನ್ನು ಸಂವೇದಿಸುವ ಗ್ರಂಥಿಗಳಿವೆ.

ನಾಲಗೆಯ ಸೇವೆ ಬಹುರೂಪವುಳ್ಳದ್ದು. ಬಾಯೊಳಗೆ ನಾಜೂಕಾಗಿ ಹೊರಳಾಡುತ್ತ ಹಲ್ಲುಗಳು ನುರಿಸಲು ಅನುಕೂಲವಾಗುವಂತೆ ಆಹಾರವನ್ನು ಒಸಡುಗಳೆಡೆ ನೂಕುತ್ತದೆ. ಆಹಾರವನ್ನು ಜಗಿಯುವ ಅವಸರದಲ್ಲಿರುವ ಹಲ್ಲುಗಳು ಆಕಸ್ಮಾತಾಗಿ ತನ್ನನ್ನು ಜಬಡುವ ಅಪಾಯವನ್ನು ನಾಲಗೆ ಸದಾ ಎಚ್ಚರದಿಂದಿದ್ದು ತಪ್ಪಿಸಿಕೊಳ್ಳಬೇಕಾಗುತ್ತದೆ. ಜೊತೆಗೆಯೇ ಹಲ್ಲುಗಳು ಅರೆದ ಪದಾರ್ಥವನ್ನು ಲಾಲಾರಸದೊಂದಿಗೆ ಬೆರೆಸಿ ಗಾ.ಸನಳಿಕೆಯೊಳಗೆ ಹೋಗಲು ಸಹಾಯ ಮಾಡುತ್ತದೆ.



ಚಿತ್ರ: ಸದಾಶಿವರಾವ್

ಆರೋಗ್ಯವಂತ ಮನುಷ್ಯನ ನಾಲಗೆ ತೇವವಾಗಿ ಚೊಕ್ಕಟವಾಗಿರುತ್ತದೆ; ಜ್ವರ ಬಂದಾಗ ನಾಲಗೆ ಒಣಗಿ ಅದರ ಮೇಲೆ ಬಿಳಿ ಲೇಪನ ಕೂತಿರುತ್ತದೆ. ಜೀರ್ಣಶಕ್ತಿಯಲ್ಲಿ ವ್ಯತ್ಯಾಸವಾದಾಗ ನಾಲಗೆಯ ಮೇಲೆ ಹಳದಿ ಬಣ್ಣ ಲೇಪವಿರುತ್ತದೆ. ಕೆಲವು ಕಾಯಿಲೆಗಳಲ್ಲಿ ನಾಲಗೆ ಕೆಂಪಿರುವುದೂ ಉಂಟು. ನಾಲಗೆಯ ರಚನೆಯಲ್ಲಿ ಒಮ್ಮೊಮ್ಮೆ ದೋಷವೂ ಕಾಣಿಸಿಕೊಳ್ಳುತ್ತದೆ. ಕೆಲವರಿಗೆ ಹುಟ್ಟಿನಿಂದಲೇ ನಾಲಗೆ ತುಂಬಾ ಚಿಕ್ಕದು ಅಥವಾ ಉದ್ದ. ಇನ್ನೂ ಕೆಲವರಿಗೆ ನಾಲಗೆ ಇರಬೇಕಾದ ಸ್ಥಳದಲ್ಲಿ ಇಲ್ಲದೆ ಪಕ್ಕಕ್ಕೆ ಪಲ್ಲಟಗೊಂಡಿರುತ್ತದೆ. ಕೆಲವೊಮ್ಮೆ ಫ್ರೇಣಮ್ ಎಂಬ ತಡೆಪರೆ ನಾಲಗೆಯನ್ನು ಬಾಯಿಂದ ತಳಕ್ಕೆ ಸೇರಿಸಿಬಿಟ್ಟಿರುತ್ತದೆ. ಆದರೆ ಇದು ಹಲವಾರು ವರ್ಷಗಳ ಬಳಿಕ ತಾನಾಗಿಯೇ ಸರಿ ಹೋಗುವುದುಂಟು. ಕೆಲವು ವೇಳೆ ಶಸ್ತ್ರ ಚಿಕಿತ್ಸೆಯನ್ನೂ ಮಾಡಬೇಕಾಗುತ್ತದೆ.

ನಾಲಗೆಯೂ ರೋಗಪೀಡೆಯಿಂದ ಹೊರತಲ್ಲ. ದುರ್ಮಾಂಸ, ಕ್ಯಾನ್ಸರ್, ಉರಿಯೂತ, ಲೋಳೆಪರೆ, ಸಂಚಾರಿಗುಳ್ಳೆ, ಕ್ಷಯ ಮೊದಲಾದವು ನಾಲಗೆಗೆ ತಗುಲಿ ನಲುಗಿಸಬಲ್ಲ ರೋಗಗಳು.

ಎಲ್ಲ ಕಶೇರಕಗಳಿಗೂ ನಾಲಗೆ ಇರುತ್ತದೆ; ಈ ನಾಲಗೆಯೂ ವೈವಿಧ್ಯಮಯವಾಗಿರುವಂತಹದು. ಆಹಾರವನ್ನು ಜಗಿಯದಿರುವ ಸಸ್ತನಿಗಳ ನಾಲಗೆ ಆಕಾರದಲ್ಲಿ ಚಿಕ್ಕದು. ಹುಲ್ಲು ತಿನ್ನುವ ಪ್ರಾಣಿಗಳಿಗೆ ನಾಲಗೆ ಉದ್ದವಿರುತ್ತದೆ. ತಿಮಿಂಗಿಲದ ನಾಲಗೆ ಪುಟ್ಟದಾಗಿದ್ದು ಚಲಿಸಲು ಬರುವುದಿಲ್ಲ. ಬೆಕ್ಕಿನ ಬಳಗದ ಪ್ರಾಣಿಗಳಿಗೆ ನಾಲಗೆಯ ಮೇಲೆ ಬಿರುಗೂದಲಿನಂತಹ ರಚನೆಯಿದ್ದು, ಮೂಳೆಯಿಂದ ಮಾಂಸವನ್ನು ಒರಟಾಗಿ ಉಜ್ಜಿ ಎಳೆದುಕೊಳ್ಳುವ ಅನುಕೂಲವಿದೆ. ಕೆಲವು ಮೀನುಗಳ ನಾಲಗೆ ಮೇಲೆ ಹಲ್ಲು ಬೆಳೆದಿರುತ್ತದೆ. ಕಪ್ಪೆಯ ನಾಲಗೆ ಅಂಟು ಅಂಟಾಗಿದ್ದು ಆಹಾರ ಹಿಡಿಯುವಾಗ ಇದು ಸಹಾಯ ಮಾಡುತ್ತದೆ. ಸಾಧಾರಣವಾಗಿ ಸರೀಸೃಪಗಳ ನಾಲಗೆ ಚಲಿಸಲು ಆಗುವಂತಿದ್ದರೂ ಮೊಸಳೆ, ಕಡಲಾಮೆಗಳಿಗೆ ಹಾಗಿರುವುದಿಲ್ಲ. ತುದಿಯಲ್ಲಿ ಎರಡಾಗಿ ಸೀಳಿರುವ ಹಾವುಗಳ ನಾಲಗೆ ತಟ್ಟನೆ ಒಳಗೆಳೆದುಕೊಳ್ಳುವ ಅನುಕೂಲ ಹೊಂದಿದ್ದು, ಅತೀ ಸಪೂರವಾಗಿರುತ್ತದೆ. ಹಾವಿಗೆ ಸಂಬಂಧಿಸಿದಂತೆ ಮತ್ತೊಂದು ಅಚ್ಚರಿಯೆಂದರೆ ಅದರ ನಾಲಗೆಯೂ ವಾಸನೆ ಗ್ರಹಿಸುವ ಅಂಗವಾಗಿರುವುದು. ಹಕ್ಕಿಗಳಿಗೆ ನಾಲಗೆಯ ಮೇಲೆ ಗಡುಸಾಗಿರುವ ವಸ್ತು ಇದ್ದು, ಸ್ನಾಯುಗಳು ಚೆನ್ನಾಗಿ ಬೆಳೆದಿರುವುದಿಲ್ಲ. ಚಿಟ್ಟೆಯ ನಾಲಗೆ ಉದ್ದವಿರುತ್ತದೆ. ಉಪಯೋಗಿಸದಿದ್ದಾಗ ಸುರುಳಿ ಸುತ್ತಿಕೊಂಡು ಒಳಸೇರುತ್ತದೆ.

ಈಗ ಹೇಳಿ, ಎಲುಬಿಲ್ಲದ ಏಕೈಕ ಅಂಗವಾದರೂ ಅನೇಕಾನೇಕ ಉಪಯೋಗವನ್ನುಳ್ಳ ನಾಲಗೆ ಕುರಿತು ಹೀಯಾಳಿಕೆ ಮಾತು ಬಳಸುವುದು ಸರಿಯೇ? *

ಬಹು ಜನ ಹಿತಾಯ

ಶ್ರೀ ವೈಷ್ಣವ ಸಂಪ್ರದಾಯದ ಸ್ಥಾಪಕರಾದ ಶ್ರೀ ರಾಮಾನುಜಾಚಾರ್ಯರಿಗೆ ಗುರುಮಂತ್ರವನ್ನು ಬೋಧಿಸುತ್ತ ಗುರುಗಳು ಅವರಿಗೆ ಎಚ್ಚರಿಸಿದರು. 'ಗೋಪ್ಯಂ, ಗೋಪ್ಯಂ ಪರಗೋಪ್ಯಂ ಗೋಪನೀಯಂ ಪ್ರಯತ್ನತಃ' ಮಂತ್ರವನ್ನು ಪ್ರಯತ್ನ ಪೂರ್ವಕ ಗೌಪ್ಯವಾಗಿಡತಕ್ಕದ್ದು. ರಾಮಾನುಜಾಚಾರ್ಯರು ಈ ಗುರುಮಂತ್ರವನ್ನು ಜಪಿಸುತ್ತ ಯೋಚಿಸತೊಡಗಿದರು. ಈ ಅಘೋಘ ದೇವರ ನಾಮವು ಮೃತ್ಯುಲೋಕದ ಸಂಜೀವಿನಿಯಾಗಿದೆ. ಇದು ಜನಮಾನಸದ ಮುಕ್ತಿಯ ಸಾಧನವಾಗಬಲ್ಲದು. ಇದನ್ನೇಕೆ ಗೌಪ್ಯವಾಗಿಡಬೇಕು? ಹೀಗೆ ಮಾಡುವುದು ಸರಿಯೇ? ಆಚಾರ್ಯರಿಗೆ ಇದು ಸರಿಯೆನಿಸಲಿಲ್ಲ. ಅವರು ಗುರುವಿನ ಆಜ್ಞೆಯನ್ನು ಉಲ್ಲಂಘಿಸಿದರು. ಮತ್ತು ಆ ಮಂತ್ರವನ್ನು ಎಲ್ಲರಿಗೆ ಬೋಧಿಸಿದರು. ಇದನ್ನು ನೋಡಿ ಗುರುಗಳು ಕೋಪೋದ್ರಿಕ್ತರಾಗಿ ನುಡಿದರು. 'ರಾಮಾನುಜ! ನೀನು ಈ ಮಂತ್ರವನ್ನು ಎಲ್ಲರಿಗೆ ಬೋಧಿಸಿ ಪಾಪಕ್ಕೆ ಗುರಿಯಾಗಿರುವೆ. ನಿನಗೆ ನರಕ ಪ್ರಾಪ್ತವಾಗುವುದು'.

ರಾಮಾನುಜಾಚಾರ್ಯರು ಕೂಡಲೇ ಗುರುಗಳ ಪಾದಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಹೇಳಿದರು, ''ಗುರುದೇವ, ಯಾರಿಗೆ ನಾನು ಈ ಮಹಾಮಂತ್ರವನ್ನು ಬೋಧಿಸಿರುವೆನೋ ಅವರಿಗೂ ನರಕ ಪ್ರಾಪ್ತವಾಗುವುದೇ?''

ಗುರುಗಳು ಹೇಳಿದರು, ''ಇಲ್ಲ, ಅವರಿಗೆ ಪುಣ್ಯ ಲಭಿಸುವುದು ಮತ್ತು ಅವರು ಮೋಕ್ಷವನ್ನು ಪಡೆಯುವರು',

ರಾಮಾನುಜಾಚಾರ್ಯರ ಮುಖದಲ್ಲಿ ಸಂತೋಷದ ಅಲೆ ಮಿನುಗತೊಡಗಿತು. ಆಗ ಅವರು ಗುರುಗಳಿಗೆ ಸಂತೃಪ್ತಿಯಿಂದ ನುಡಿದರು, ''ಈ ಮಂತ್ರದ ಪ್ರಭಾವದಿಂದ ಇಷ್ಟೆಲ್ಲ ಜನರು ಮೋಕ್ಷವನ್ನು ಪಡೆಯಲು ಅರ್ಹರಾದರೆ ನಾನು ನರಕ ಯಾತನೆಯನ್ನು ಸಂತೋಷದಿಂದ ಅನುಭವಿಸಲು ಸಿದ್ಧನಾಗಿರುವೆನು.''

- ವೆಂಕಟೇಶ ಗಂಗಾವತಿ

ಸಾವಿನೊಡನೆ ಸೆಣಸಿ ಬದುಕಿದವನು

ಫಾಕ್ಲೆಂಡ್ ನಡುಗಡ್ಡೆ ಭಾರೀ ಗಾತ್ರದ ತಿಮಿಂಗಿಲಗಳಿಗೆ ಬಹು ಹಿಂದಿನಿಂದಲೂ ಪ್ರಸಿದ್ಧ. 25 ಆಗಸ್ಟ್ 1891ರಂದು ತಿಮಿಂಗಿಲಗಳ ಬೇಟೆಯನ್ನಾಡಲು ಇಲ್ಲಿಗೆ ಇಂಗ್ಲೆಂಡಿನ 'ಸ್ಟಾರ್ ಆಫ್ ದಿ ಈಸ್ಟ್' ಎಂಬ ಹಡಗಿನಲ್ಲಿ ಒಂದು ತಂಡ ಬಂದಿತು. ಬೇಟೆಗಾರರಲ್ಲಿ ಒಬ್ಬ ಭಾರೀ ಗಾತ್ರದ ತಿಮಿಂಗಿಲವೊಂದರ ಬೆನ್ನಿಗೆ ಭರ್ಚಿಯಿಂದ ಇರಿದ. ಆಗ ಅದು ತನ್ನ 12 ಅಡಿ ಉದ್ದದ ಬಾಲವನ್ನು ಎತ್ತಿ ನೀರಿಗೆ ಅಪ್ಪಳಿಸಿತು. ಆ ಏಟಿಗೆ ದೋಣಿ ಮಗುಚಿತು. ದೋಣಿಯಲ್ಲಿದ್ದವರಲ್ಲಿ ಒಬ್ಬ ಸತ್ತ. ಉಳಿದವರು ಹೇಗೋ ಪಾರಾದರು. ಆದರೆ ದೃಢಕಾಯನಾದ ಯುವ ನಾವಿಕ 'ಜೇಮ್ಸ್ ಬಾರ್ಟಲೇ' ಮಾತ್ರ ಕಂಡು ಬರಲಿಲ್ಲ. ಅವನನ್ನು ತಿಮಿಂಗಿಲ ನುಂಗಿದೆ ಎನ್ನುವುದರಲ್ಲಿ ಯಾವ ಅನುಮಾನವೂ ಇರಲಿಲ್ಲ.

ಉಳಿದವರು ಆ ತಿಮಿಂಗಿಲವನ್ನು ಹಾಗೆಯೇ ಬಿಡದೆ ಮಹಾ ಸಾಹಸದಿಂದ ಕೊಂದು ಹಡಗಿಗೆ ತಂದರು. ಒಂದು ಹಗಲು ಮತ್ತು ಒಂದು ರಾತ್ರಿಯ ಕಾಲ ಅವಿರತವಾಗಿ ಕತ್ತರಿಸಲಾರಂಭಿಸಿ ಅದರ ಶರೀರದಲ್ಲಿದ್ದ ಕೊಬ್ಬನ್ನೆಲ್ಲಾ ತೆಗೆದು ಹಾಕಿ ಉಪಯುಕ್ತವಾದ ಹೊಟ್ಟೆಯ ಭಾಗವನ್ನು ಉಳಿಸಿಕೊಂಡರು. ಆ ಭಾಗದಲ್ಲಿ ಏನೋ ಅಲುಗಾಡಿದಂತೆ ತೋರಿತು. ತಿಮಿಂಗಿಲ ನುಂಗಿದ ಯಾವುದೋ ಪ್ರಾಣಿ ಇನ್ನೂ ಜೀವಂತವಾಗಿರಬೇಕೆಂದು ಭಾವಿಸಿದ ಅವರು ಹೊಟ್ಟೆಯನ್ನು ಸೀಳಿದಾಗ ಒಳಗಿನ ದೃಶ್ಯ ಕಂಡು ಆಶ್ಚರ್ಯಚಕಿತರಾದರು.

ತಿಮಿಂಗಿಲದ ಹೊಟ್ಟೆಯೊಳಗೆ ಕೈಕಾಲು ಮುದುಡಿಕೊಂಡು ಮಲಗಿದ್ದ ಜೇಮ್ಸ್ ಬಾರ್ಟ್‌ಲೇ ಇನ್ನೂ ಸತ್ತಿರಲಿಲ್ಲ. ಪ್ರಜ್ಞೆಯಿಲ್ಲದೆ ಬಿದ್ದುಕೊಂಡಿದ್ದ. ತಿಮಿಂಗಿಲದ ಜಠರ ರಸದ ತೀಕ್ಷ್ಣತೆಯಿಂದಾಗಿ ಬಟ್ಟೆಯಿಂದ ಮುಚ್ಚಿರದ ಅವನ ಮುಖ ಮೊದಲಾದ ಅಂಗಗಳು ಬೆಂಕಿಯಿಂದ ಸುಟ್ಟಂತೆ ಬಿಳಿಚಿಕೊಂಡಿದ್ದವು.

ಜೇಮ್ಸ್ ಬಾರ್ಟಲೇಯ ಮೇಲೆ ಉಪ್ಪು ನೀರು ಸುರಿದು ಬ್ರಾಂದಿಯನ್ನು ಅವನಿಗೆ ಕುಡಿಸತೊಡಗಿದರು. ಸ್ವಲ್ಪ ಹೊತ್ತಿನಲ್ಲಿ ಅವನು ಚೇತರಿಸಿಕೊಂಡ. ಸತತ ಎರಡು ವಾರಗಳ ಆರೈಕೆಯಿಂದ ಅವನು ಎಚ್ಚರಗೊಂಡರೂ ಹುಚ್ಚನಂತೆ ಬಡಬಡಿಸುತ್ತಿದ್ದ. ಮೂರು ವಾರ ಕಳೆದ ಬಳಿಕ ನಿಧಾನವಾಗಿ ಜೇಮ್ಸ್ ಬಾರ್ಟ್‌ಲೇ ಮನಸ್ಸಿನ ಆಘಾತವು ಪರಿಹಾರವಾಗಿ ಅವನ ನಡೆನುಡಿಗಳು ಮೊದಲಿನಂತಾದವು. ಆಗ ಜೇಮ್ಸ್ ಬಾರ್ಟಲೇ ತನಗಾದ ಅನುಭವವನ್ನು ಕುರಿತು ಹೇಳತೊಡಗಿದ.

"ದೋಣಿಯಿಂದ ಕೆಳಗೆ ಬಿದ್ದಾಗ ನನ್ನ ಮೇಲೆ ಮೂಳೆಗಳಿಂದ ಆವೃತವಾದ ನಸುಗೆಂಪಿನ ಬಿಳಿಯ ಹೊದಿಕೆಯೊಂದು ಆವರಿಸಿದಂತಾಯಿತು. ಅದು ನನ್ನ ಕಾಲನ್ನು ಬಲವಾಗಿ ಎಳೆಯತೊಡಗಿತು. ನಾನೊಂದು ಮಾಂಸದ ಗೋಡೆಯ ನಡುವೆ ಇರುವಂತೆ ಭಾಸವಾಗಿ, ಅದು ರಬ್ಬರಿನಂತೆ ಕುಗ್ಗುತ್ತಿತ್ತು. ನನ್ನನ್ನು ತಿಮಿಂಗಿಲ ನುಂಗುತ್ತಿದೆ ಎಂದು ಅರಿವಾಗುವ ವೇಳೆಗೆ ಗಾಢಾಂಧಕಾರವಾದ ಅದರ ಹೊಟ್ಟೆಯನ್ನು ನಾನಾಗಲೇ ಪ್ರವೇಶಿಸಿ ಬಿಟ್ಟಿದ್ದೆ. ಎಲ್ಲಿ ಕೈಯಾಡಿ

ಸಿದರೂ ಸತ್ತ ಮೀನುಗಳ ರಾಶಿಯೇ ಕೈಗೆ ಸಿಗು ತ್ತಿತ್ತು. ನನಗೆ ಉಸಿರಾಡುವುದು ಅಸಾಧ್ಯವಾಗಿ ವಿಪರೀತ ತಲೆ ಸಿಡಿತ ಆರಂಭವಾಯಿತು. ಆಮೇಲೆ ಕಣ್ಣು ಮುಚ್ಚಿಕೊಂಡಂತಾಗಿ ಪ್ರಜ್ಞೆ ತಪ್ಪಿರಬೇಕು'' ಎಂದು ಹೇಳಿದ.

ತಿಮಿಂಗಿಲದ ಹೊಟ್ಟೆಯೊಳಗಿನ ಉಷ್ಣತೆ 104 ಡಿಗ್ರಿ ಇರುವುದರಿಂದ ಜೇಮ್ಸ್ ಬಾರ್ಟ್‌ಲೇಗೆ ತೀಕ್ಷ್ಣವಾದ ಶಾಖದಿಂದ ಮೈ ಸುಡುತ್ತಿರುವಂತೆ ಅನಿಸಿರಬೇಕು. ಅವನು ತನ್ನ ಅನುಭವಗಳನ್ನು ಮುಂದುವರೆಸುತ್ತ, ''ಒಂದೆಡೆ ಅಸಹ್ಯವಾದ ಸೆಖೆ, ಇನ್ನೊಂದೆಡೆ ತಾನಿನ್ನು ಬದುಕುವುದಿಲ್ಲ ಎನ್ನುವ ಭಯ. ಎದ್ದು ನಿಲ್ಲಲಾಗಲಿ, ಕೈಕಾಲು ಚಾಚಿಕೊಳ್ಳಲಿಕ್ಕಾಗಲಿ ಸಾಧ್ಯವಿರಲಿಲ್ಲ. ಇದ ರೊಂದಿಗೆ ಘೋರವಾದ ನಿಶ್ಶಬ್ದದಿಂದ ಕಂಗೆಟ್ಟು ಜೋರಾಗಿ ಕೂಗಿಕೊಂಡೆ. ಅದು ಯಾರಿಗೆ ಕೇಳಿ ಸಿತೋ ದೇವರಿಗೇ ಗೊತ್ತು'' ಎಂದನು.

ಜೇಮ್ಸ್ ಬಾರ್ಟ್‌ಲೇಯನ್ನು ನುಂಗಿದ ತಿಮಿಂಗಿಲದ ಹೊಟ್ಟೆಯೊಳಗೆ ಬೇರೆ ಆಹಾರವೇನೂ ಇರದ ಕಾರಣ ಅವನು ಬದುಕಿದ. ಖಾಲಿಯಾದ ಹೊಟ್ಟೆಯಲ್ಲಿ ಆಡುತ್ತಿದ್ದ ಅಲ್ಪ ಗಾಳಿ ಅವನಿಗೆ ಸಾಕಾಯಿತು. ಹಸಿವಿನ ಜಠರ ರಸ ಉದ್ದೀಪನ ಗೊಳ್ಳುವ ಮೊದಲು ಅವನನ್ನು ಹೊರಗೆ ತೆಗೆಯ ಲಾಗಿತ್ತು. ಇಲ್ಲವಾದರೆ ಆ ರಸದಿಂದಾಗಿ ಅವನು ಜೀರ್ಣವಾಗಿ ಹೋಗುತ್ತಿದ್ದ. ಅಂತೂ ಸುಮಾರು 20 ಗಂಟೆಗಳ ಕಾಲ ಸಾವಿನ ದವಡೆಯಲ್ಲಿ (ಹೊಟ್ಟೆಯಲ್ಲಿ?) ಕಳೆದು ಪಾರಾಗಿ ಬದುಕಿ ಬಂದಿದ್ದ.

ತನ್ನ ವಿಕಾರವಾದ ರೂಪದಲ್ಲಿ ಮುಂದೆ ಬಹು ಕಾಲ ಜೇಮ್ಸ್ ಬಾರ್ಟ್‌ಲೇ ನಾವಿಕನಾಗಿಯೇ ಬದುಕಿದ. ಆಗಾಗ್ಗೆ ಈ ಘಟನೆ ಅವನನ್ನು ಕೆಟ್ಟ ಕನಸಿನಂತೆ ಕಾಡುತ್ತಿತ್ತಂತೆ. ಆಶ್ಚರ್ಯವೆಂದರೆ ತಿಮಿಂಗಿಲ ನುಂಗಿದ ಗುರುತಾಗಿ ಅವನ ಮೈಯಲ್ಲಿ ಗಾಯದ ಕಲೆಗಳೇನೂ ಉಳಿದಿರ ಲಿಲ್ಲ. ●

(ಸಂಗ್ರಹ) *ಸಿ. ಎಸ್. ಎ.*

ಚಾಣಕ್ಯನ ಮಾತೃ ಪ್ರೇಮ

ಒಮ್ಮೆ ಚಾಣಕ್ಯನು ತನ್ನ ತಾಯಿ ಅಳುತ್ತಿರುವುದನ್ನು ಕಂಡು, ''ಅಮ್ಮ, ನೀನೇಕೆ ಅಳುತ್ತೀ?'' ಎಂದು ಪ್ರಶ್ನಿಸಿದನು. ತಾಯಿ ದುಃಖವನ್ನು ನುಂಗಿಕೊಂಡು ಮಗನೊಡನೆ ''ನಿನ್ನ ಎದುರಿನ ಹಲ್ಲಿರವನ್ನು ನೋಡಿದರೆ ನೀನು ರಾಜನಾಗುತ್ತಿ. ಇಂತಹ ಹಲ್ಲಿನವರು ರಾಜರಾಗುತ್ತಾರೆಂದು ಸಾಮುದ್ರಿಕ ಶಾಸ್ತ್ರ ಸಾರುತ್ತದೆ'' ಎಂದಳು. ಆಗ ಚಾಣಕ್ಯನು, ''ನಾನು ರಾಜನಾದರೆ ನಿನಗೆ ಸಂತೋಷವಲ್ಲವೆ?'' ಎಂದು ಪುನಃ ತಾಯಿಯನ್ನು ಪ್ರಶ್ನಿಸಿದ.

ತಾಯಿ, ''ಮನುಷ್ಯನು ಅಧಿಕಾರಕ್ಕೆ ಬಂದರೆ ತನ್ನ ಬಂಧುಬಾಂಧವರನ್ನೆಲ್ಲ ಮರೆಯು ತ್ತಾನೆ. ನೀನು ರಾಜನಾದರೆ ನನ್ನನ್ನು ಮರೆತುಬಿಡುತ್ತಿ. ನಾನು ಅನಾಥೆಯಾಗುತ್ತೇನೆ'' ಎಂದು ಕಣ್ಣೀರನ್ನೊರೆಸುತ್ತಾ ಹೇಳಿದಳು. ಕೂಡಲೆ ಚಾಣಕ್ಯನು ಒಂದು ಕಲ್ಲಿನಿಂದ ಬಡಿದು ತನ್ನ ಎದುರಿನ ಎರಡು ಹಲ್ಲುಗಳನ್ನು ತುಂಡು ಮಾಡಿಕೊಂಡು, ''ಅಮ್ಮ, ನಿನ್ನ ಮಮತೆಯ ಎದುರಿಗೆ ಈ ಹಲ್ಲುಗಳಾಗಲಿ, ಜಗತ್ತಿನ ಯಾವ ಮಹಾ ವಸ್ತುವೇ ಆಗಲಿ ಕ್ಷುಲ್ಲಕ. ನೀನಿನ್ನು ನಿಶ್ಚಿಂತೆಯಿಂದಿರು. ನಾನಿನ್ನು ರಾಜನಾಗಲಾರೆ'' ಎಂದು ತಾಯಿಯನ್ನು ಸಮಾಧಾನಪಡಿಸಿದ.

ಅಂದಿನಿಂದ ಚಾಣಕ್ಯನು 'ಖಂಡ ದಂತ' ಎಂಬ ಹೆಸರಿನಿಂದ ಪ್ರಸಿದ್ಧನಾದನು.

(ಸಂಗ್ರಹ) **ಬಿ. ವಾಸುದೇವ ವರ್ಣ**

ಪರಿಚಯ

ರವಿ ಬೆಳಗೆರೆ

ಹಾಗೇ ಕೂತು ಯೋಚಿಸಿದೆ. ಜಗತ್ತಿನ ಸಂಪರ್ಕವಿಲ್ದೆ ಕಥೆಗಳು ಹುಟ್ಟೋದಿಲ್ವಾ ? ಹಾಗಾದರೆ ಈ ತಂಕಾ ಹುಟ್ಟದ ಕಥೆಗಳು ? ಥೂ, ಕಥೆಗಳಾ ಅವು ? ಬರೀ ವಿಕೃತಿಗಳು. ಭ್ರಮೆಗಳು. ಓದಿದ್ರಲ್ಲ ಜನ ? ಅವ್ರಿಗೇನಂತೆ, ಏನು ಕೊಟ್ರೂ ಓದ್ತಾರೆ. ಬೆಳಕಲ್ಲಿ ಕೂತು ಓದೋರ್ಗೆ ಕತ್ತಲೇಲಿ ಕೂತು ಬರ್ದೋನು ಕಾಣಿಸ್ತಾನಾ ? ಓದಿ ಬಿಡ್ತಾರೆ..... ನಂಗೆ ಜಗತ್ತು ಬೇಡ. ಜಗತ್ತಿಗಿದೆಲ್ಲ ಯಾಕೆ ಬೇಕು. ಅವರಿಗ್ಯಾಕೆ ನನ್ನ ಪರಿಚಯ ? ಈ ಪ್ರಶ್ನೆಯು ಬೆನ್ನಲುಬಿನಾಳದಿಂದಲೇ ಮತ್ತೊಂದು ಪ್ರಶ್ನೆ ಉದ್ಭವಿಸಿದಾಗ ನಿಜಕ್ಕೂ ಹೈರಾಣಾದೆ. ನನ್ನ ಪರಿಚಯ ಎಲ್ಲಿದೆ ? ಯಾರಿಗಿದೆ ?

ಏನಾದರೂ ಬರೆಯಬೇಕು.

ಏನು? ಗೊತ್ತಿಲ್ಲ. ಏನೂ ತೋಚುವುದಿಲ್ಲ. ತೋಚದಿದ್ದಾಗ ಬರೀಬಾರ್ದು. ಹೀಗೆ ಏನೂ ತೋಚದಿದ್ದಾಗಲೇ ಅಪ್ಪ ಅಮ್ಮನನ್ನು ಕರೆದದ್ದು. ಮಕ್ಕಳು ಮಾಡಿದ್ದು. ಹಾಗೆ ಹುಟ್ಟಿದೋರು ನಾವು. ಅಷ್ಟವಕ್ರಗಳು. ಅಮ್ಮನ ಮೈಯ್ಯ ವಕ್ರಗಳಲ್ಲಿ ಅಪ್ಪ ಸಳಸಳನೆ ಕಾದು ನೇರವಾಗಿ ನುಗ್ಗಲು ಯತ್ನಿಸಿ, ಅವನಿಗದೇನಾಯಿತೋ? ಇದ್ದಕ್ಕಿದ್ದಂತೆ ವಕ್ರವಾಗಿ ಬಿದ್ದುಕೊಂಡ. ನಾನು ಹುಟ್ಟಿದೆ. ಎದುರಿಗೆ ಅನ್ನಬಾರ್ದೂಂತ ಸುಮ್ಮನಿರ್ತಾರೆ, ಅಷ್ಟೆ. ಗೂನು ಬೆನ್ನು, ಭುಜದಿಂದ ತಟಕ್ಕನೆ ಇಳಿಬಿದ್ದಂತಹ ಕೈಗಳು, ಬಾಗಿದ ಕಾಲು, ಹುಟ್ಟಿದಾಗಲೇ ಚರ್ಮರೋಗ, ಒಂದು ಕಣ್ಣು ದೊಡ್ಡದು. ನನ್ನ ನೋಡಿದ ಪ್ರತಿಯೊಬ್ಬರೂ ಅಂದುಕೊಳ್ಳುವ ಒಂದೇ ಮಾತು .... ಅಷ್ಟವಕ್ರ! ನನಗಿಬ್ಬರು ತಂಗಿಯರಿದ್ದಾರೆ. ಒಬ್ಬಳು ರಕ್ತ, ಮಲ, ಮೂತ್ರ, ಪರೀಕ್ಷೆ ಮಾಡೋ ಲ್ಯಾಬಿನಲ್ಲಿ ಕೆಲ್ಸ ಮಾಡ್ತಾಳೆ. ಹಲ್ಲಿಗೆ ಕ್ಲಿಪ್ಪು ಹಾಕಿಸ್ಕೋಬೇಕೂಂತ ದುಡ್ಡು ಕೂಡಿಸ್ತಾಳೆ. ಮೆಳ್ಳಗಣ್ಣು ಕಾಣಬಾರ್ದೂಂತ ಅಗ್ಗದ ಕನ್ನಡಕ ಹಾಕ್ಕೋತಾಳೆ. ಇನ್ನೊಬ್ಬ ತಂಗಿ ವೀಣೆ ನುಡಿಸ್ತಾಳೆ. ಹಗಲೊತ್ತೆಲ್ಲ ಮನೇಲೇ ಇದ್ದು ಕತ್ತಲಾದ ಮೇಲೆ ಹೊರಡ್ತಾಳೆ. ಮೂರು ಮನೇಲಿ ಮಕ್ಕಳಿಗೆ ವೀಣೆ ಪಾಠ ಹೇಳಿಕೊಡ್ತಾಳೆ. ರಾತ್ರಿ ಕತ್ತಲಲ್ಲಿ ಒಬ್ಳೇ ನಡಕೊಂಡು ಬರ್ತಾಳೆ. ಅವಳ್ನ ಯಾರೂ ಏನೂ ಮಾಡಲ್ಲ. ಇವತ್ತಿನ ತಂಕಾ ಮಾಡಿಲ್ಲ. ತಿಂಗಳಿಗೆ ನಾನ್ನೂರೈವತ್ತು ರೂಪಾಯಿ ತಂದು ಅಪ್ಪನ ಕೈಲಿಡುತ್ತಾಳೆ. ಲ್ಯಾಬಿನೋಳು ಐನೂರು ಕೊಡ್ತಾಳೆ.

ನಾನು ಹೊರಕ್ಕೇ ಹೋಗಲ್ಲ; ಜನ ಅಂದ್ರೆ ಹೆದರಿಕೆ. ಬೆಳಕು ನನ್ಮೇಲೆ ಬಿದ್ದಿಲ್ಲ. ನಾನು ಮನೇಲೇ ಇರ್ತೀನಿ. ಕಥೆ ಬರೀತೀನಿ. ಪೇಪ

ರ್ನೋರು ದುಡ್ಡು ಕಳುಸ್ತಾರೆ. ಅದೇ ನನ್ನ ಸಂಪಾದನೆ. ಈಗದೂ ನಿಂತಿದೆ. ನಂಗೇನೂ ಬರಿಯೋಕಾಗ್ತಾ ಇಲ್ಲ. ಕೂತೂ ಕೂತೂ ಸವೆದು ಹೋಗಿದೀನಿ. ಕತ್ತಲಲ್ಲಿ ಕರಗಿ ಹೋಗಿದೀನಿ. ನಮ್ಮನೆ ತುಂಬ ಕತ್ತಲು. ವರಾಂಡದೊಳಕ್ಕೂ ಸೂರ್ಯ ಬರಲ್ಲ. ನಂಗೆ ಕಥೆಗಳು ತೋಚತಾ ಇಲ್ಲ. ಹಿಮಾಲಯದ ಬಗ್ಗೆ ಬರೀತಾ ಬರೀತಾ ಸೆಖೆ ಅನ್ಸಿ ಅಂಗಿ ಬಿಚ್ಕೋತಿನಿ. ಹುಡುಗೀರ್ನ ಊಹಿಸ್ಕೊಂಡು ಹಾಗ್ ಹಾಗೇ ಬೆವರತೀನಿ. ಮೈ ತುಂಬ ಬೆಳೆದಿರೋ ವಿಕಾರವಾದ ಕೂದಲಲ್ಲಿ ಬೈತಲೆ ತೆಕ್ಕೊಂಡು ಚರ್ಮದ ರಂಧ್ರ, ಚಿಮ್ಮಿಸೋ ಬೆವರನ್ನ ಬೆರಳ ತುದೀಗೆ ತಾಕಿಸ್ಕೊಂಡು 'ಹೋ' ಅಂತ ಕಿರುಚ್ಕೋತೀನಿ. ಬಾಗ್ಲು ಹಾಕ್ಕೊಂಡು ಕೋಣೇಲಿ ನೆಲದ ಮೇಲೆ ಕೂತ್ಕೊಂಡು ದಬದಬಾಂತ ಎದೆ ಬಡ್ಕೋತಿನಿ. ದನಿ ಹೊರಡುತ್ತದೆ. ಅದು ಕಥೆಯಾಗುವುದಿಲ್ಲ. ಕತ್ತಲಲ್ಲಿ ಸೌಂದರ್ಯವಿಲ್ಲ. ಕುರೂಪದಿಂದ ಕಥೆ ಹುಟ್ಟುವುದಿಲ್ಲ.

ಆದ್ರೆ ಲ್ಯಾಬಿನೋಳು ಹಾಡೋದು ಚಿತ್ರಗೀತೆಯಾದರೂ ರಾತ್ರಿಯ ನೀರವತೆಯಲ್ಲಿ ಹಿತ ಅನ್ನಿಸುತ್ತೆ. ವೀಣೆ ನುಡಿಸೋಳು ಕುರೂಪಿಯಾದ್ರೂ ವೀಣೆ ಮಿಡಿಯುತ್ತೆ. ಅವರಿಗೆ ಕತ್ತಲಿವೆ, ಕನ್ನಡಕವಿದೆ. ತಿರುಗಾಟವಿದೆ. ಸಂಪಾದನೆಯಿದೆ. ಸಂಬಳ ಬಂದ ದಿನ ಮನೆ ತುಂಬ ಓಡಾಡ್ತಾರೆ. ಜೋರು ಜೋರಾಗಿ ಹಾಡ್ಕೋತಾರೆ. ಹೊಸ ಬಟ್ಟೆ ಹಾಕ್ಕೋತಾರೆ. ಕಾರಣವಿಲ್ದೆ ನಗ್ತಾರೆ. ನಾನೇ ಒಬ್ನು, ಕೂತಲ್ಲೇ ನಾಶವಾಗ್ತೀನಿ.

''ಡಿಯರ್ ಶ್ರೀವತ್ಸ,

ನೀವು ಏನಾದ್ರೂ ಬರ್ದು ಎಷ್ಟೊಂದು ದಿನ ಆದ್ವು. ಯಾಕೆ? ನಿಮ್ಮ ಹಳೇ ಕತೆಗಳ್ನ ಓದಿ ಓದಿ ಬಾಯಿಪಾಠವಾಗಿದೆ. ಹೊಸ ಕಥೆ ಕೊಡಲ್ವಾ?

ನಿಮ್ಮ ಓದುಗಳು

ನಳಿನಿ, ಭದ್ರಾವತಿ''

ಅಂತ ಬರೆದಿದ್ದ ಇನ್‌ಲ್ಯಾಂಡು ಇವತ್ತು ಓದಿದ್ದೂ ಸೇರಿದರೆ ಬಹುಶಃ ಗಿನಿಸ್ ದಾಖಲೆಯಾಗಬಹುದು. ಮೂರು ತಿಂಗಳಾಯಿತು. ನೀಲಿ ಇನ್‌ಲ್ಯಾಂಡು ಧೂಳೆದ್ದು, ಬಣ್ಣ ಕಳ್ಕೊಂಡು, ಮುದುರಾಗಿ, ಮೊನೆಗಳಲ್ಲಿ ಹರಿದು, ಮಡಕೆಗಳಲ್ಲಿ ಅಕ್ಷರಗಳು ಒಡೆದು .... ಪತ್ರ ಕೂಡ ನನ್ನ ಹಾಗೇ ಕುರೂಪ.

ಆದ್ರೆ ಒಂದು ವಿಚಿತ್ರ ಹೇಳಲಾ? ನಾನಿವಾಗ ಪ್ರತೀ ದಿನ ಒಳ ಮನೆ ಬಾಗ್ಲಲ್ಲಿ ನಿಂತು ಬೆಳಿಗ್ಗೆ ಹತ್ಗಂಟೇಯಿಂದ ಹನ್ನೊಂದೂವರೆ ತನಕ ಕಾಯ್ತೀನಿ, ಪೋಸ್ಟಿಗಾಗಿ. ಆವಾಗ ತುಂಬ ಉದ್ವೇಗಗೊಂಡಿರ್ತೀನಿ. ಯಾರು ಬರೀತಾರೆ, ಏನು ಬರೀತಾರೆ, ಯಾತಕ್ಕೆ ಬರೀತಾರೆ, ಎಲ್ಲಿಂದ ಬರೀತಾರೆ ಒಂದೂ ಗೊತ್ತಿಲ್ಲ. ನಂಗೆ ನಿರೀಕ್ಷೆಯೂ ಇಲ್ಲ. ನಾನು ಯಾರಿಗೂ ಬರ್ದಿಲ್ಲ. ಕಡೇ ಪಕ್ಷ ಪತ್ರಿಕೆಗಳಿಗೆ ಕಥೇನೂ ಕಳಿಸಿಲ್ಲ. ನನ್ನ ಯಾವ ಕಥೇನೂ ಹಿಂತಿರುಗಿ ಬಂದಿಲ್ಲ. ಆದ್ರೂ, ಪೋಸ್ಟು ಬರೋ ಹೊತ್ತಿಗೆ ಒಳ ಮನೇಲಿ ನಿಂತಿರ್ತೀನಿ. ಒಂದಿನಾನೂ ಬರಲ್ಲ. ನಳಿನಿ ಭದ್ರಾವತಿಯದೇ ಕಡೆ. ಅವಳ ಹೆಸರಿತ್ತು, ಊರಿತ್ತು, ವಿಳಾಸವಿಲ್ಲ. ಭದ್ರಾವತೀಲಿ ಬೀದಿಗೊಬ್ಳು ನಳಿನಿಯಿರಬಹುದು. ಒಬ್ಬ ನಳಿನಿಯೂ ಇರದಿರಬಹುದು. ನಂಗೇನಂತೆ.

ಅವತ್ತು ಹಾಗಾಗಲಿಲ್ಲ, 'ಪೋಸ್ಟ್!' ಅಂತ ಅವನು ಕೂಗಿದ. ದೇವರ ಮನೇಲಿದ್ದ ಅಪ್ಪ ಎದ್ದು ಬಂದರು. ಒಳಮನೆ ಬಾಗ್ಲಲ್ಲಿ ನಿಂತೋನ್ನ ದಾಟಿಕೊಂಡೇ ಹೋದರು. ಅವ್ರಿಗೆ ಗೊತ್ತು. ನಾನು ಎಂದೂ ಪೋಸ್ಟಿನೋನ ಮುಂದೆ ನಿಂತು ಕಾಗ್ದ ಇಸ್ಕೊಂಡಿಲ್ಲ. ಎಂ.ಓ. ಬಂದಾಗ ಮಾತ್ರ, ಅನಿವಾರ್ಯ. ನಮ್ಮನೆಯ ವರಾಂಡದಲ್ಲೂ ಕತ್ಲು ಅಂತ ಹೇಳಿದೆನಲ್ಲ? ಬಿಸಿಲಲ್ಲಿ ಬಂದ ಪೋಸ್ಟಿನೋನಿಗೆ ಸರಿಯಾಗಿ ಮುಖ ಕಾಣಲ್ಲ. ನಾನು ಮರೇಲಿ ನಿಂತು ಸೈನು ಮಾಡ್ತೀನಿ. ಅವ್ನು ಚಕಚಕಾ ಅಂತ ಎಣಿಸಿಕೊಡ್ತಾನೆ. ನಾನು ನನ್ ರೂಮಿಗೆ ಬರ್ತೀನಿ. ದುಡ್ಡನ್ನೆಲ್ಲಾ ನೆಲದ ಮೇಲ್ಹಾಕಿ ಅದರ ಮುಂದೆ ಕುಕ್ಕರಗಾಲಲ್ಲಿ ಕೂತು ಸಣ್ಣಗೆ ಕಿರುಚ್ಕೋತೀನಿ. ಯಾರೂ ನೋಡಲ್ಲ ಅಂತ ಖಾತರಿಯಾದ್ರೆ, ಎದೆ ಎದೆ ಬಡ್ಕೋತೀನಿ. ಅಳ್ತೀನಿ. ಯಾಕೋ ಗೊತ್ತಿಲ್ಲ. ತಂಗೀರು

ಸಂಬಳ ತಂದ ದಿನ ಪಡೋ ಹಾಗೆ ಸಂತೋಷ ಪಡೋಕೆ ನಂಗಾಗಲ್ಲ. ಅವತ್ತೆಲ್ಲಾ ನಾನು ಮಲಗಲ್ಲ.

ಅವತ್ತು ಹಾಗೇನೂ ಆಗಲಿಲ್ಲ. ಅಪ್ಪ ಪೋಸ್ಟಿಸ್ಕೊಂಡರು. ಕವರು ಬಂದಿತ್ತು. ತಿರುತಿರುಗ್ಸಿ ನೋಡಿದರು. ಅದರ ಮೂತಿ ಹರ್ದು ಒಳಕ್ಕೆ ಬೆರಳು ಹಾಕಿ ಹರೀಬೇಕೂ ಅಂತ ಹೊರಟೋರು ಗಬಕ್ಕಂತ ಹಿಂದಕ್ಕೆ ತಿರುಗಿ ನೋಡಿ ನನ್ನ ಕೈಗೆ ಅದನ್ನ ಕೊಟ್ಟು ಸರಸರಾಂತ ದೇವರ ಕೋಣೆಯೊಳಕ್ಕೆ ಹೋಗಿಬಿಟ್ಟರು. ಪೋಸ್ಟು ನಂಗೇ ಬಂದಿತ್ತು.

ಆದ್ರೆ ನಂಗದು ಬರಬೇಕಿರಲಿಲ್ಲ. ನಾನು ಯಾರಿಗೂ ಬರೆದಿರಲಿಲ್ಲ ಜಗತ್ತಿನ ಯಾವ ಸಂಪರ್ಕಾನೂ ನಂಗಿಲ್ಲ. ನಾನು ಪೇಪರೋದಲ್ಲ. ರೇಡಿಯೋದಲ್ಲಿ ವಾರ್ತೆ ಕೇಳಲ್ಲ. ಕಿಟಕೀಲಿ ನಿಂತು ಆಕಾಶ ನೋಡಲ್ಲ. ವರಾಂಡದಾಚೆ ಹೋಗಿ ಸೂರ್ಯನ್ನ ಕಾಯಲ್ಲ. ನನ್ ಕತ್ಲ ಕೋಣೆಗೆ ಯಾರೂ ಬರಲ್ಲ. ಪ್ರಪಂಚವೇ ಬ್ಯಾರೆ. ನಾನೇ ಬ್ಯಾರೆ. ತಂಗಿ ಅಡುಗೆ ಮಾಡ್ತಾಳೆ. ಬಡಿಸಿದ ತಟ್ಟೆ ತಂದು ರೂಮು ಬಾಗ್ಲಲ್ಲಿಡ್ತಾಳೆ. ಕಕ್ಕಸ್ಸು ಮನೇಲೇ ಇದೆ. ನಾನು ಕ್ಯಾಲೆಂಡ್ರೂ, ನೋಡಲ್ಲ. ರೂಮಲ್ಲಿರೋ ಗಡಿಯಾರ ನಿಂತ್ಹೋಗಿದೆ. ತಂಗೀರು ಸಂಬ್ಳ ತರೋ ದಿನ ನಾನು ರೂಮು ಸೇರ್ಕೋತೀನಿ. ಆ ಸಡಗರ ನೋಡೋಕೆ ನನ್ನ್ಕೈಲಾಗಲ್ಲ. ಆದ್ರೆ ಅದೆಲ್ಲ ಒಂದೇ ದಿನದ ಖುಷಿ. ದಿನಾ ತಂಗಿ ವೀಣೆ ನುಡುಸ್ತಾಳೆ. ಒಬ್ಳೇ ಅಡುಗೆ ಮನೇಲಿ ಕೂತು ಬಿಕ್ಕಳಿಸ್ತಾಳೆ. ಅಪ್ಪ ಕಳ್ಸಿದ ಜಾತಕ ವಾಪಸ್ ಬಂದ ದಿನ ಮೂರೂ ಜನ ಕೂತು ತುಂಬ ಹೊತ್ತು ಮಾತಾಡ್ತಾರೆ. ಕ್ಲಿಪ್ಪು ಹಾಕಿಸ್ಕೊಂಡ್ರೆ ಮದ್ವೆಯಾಗುತ್ತೆ ಅಂತಾಳೆ ಲ್ಯಾಬಿನೋಳು. ಅಪ್ಪ ದೇವರ ಮನೆ ಹೊಕ್ಕುಬಿಡ್ತಾರೆ. ತಂಗಿ ವೀಣೆ ಕಲಿಸೋಕೆ ಹೋಗ್ತಾಳೆ. ಲ್ಯಾಬಿನೋಳು ರಾತ್ರಿ ಎಷ್ಟೊತ್ತಿನ ತಂಕಾ ಚಿತ್ರಗೀತೆ ಹಾಡುತ್ತಾಳೆ. ನಾನು ಬೋರಲು ಮಲಗಿ ಕೊಳಕು ದಿಂಬಿಗೆ ಮೂಗುಜ್ಜುತ್ತೇನೆ. ಸತ್ಹೋಗಿರೋ ಅಮ್ಮ ನೆನಪಾಗ್ತಾ ಆಗ್ತಾನೇ ನಿದ್ದೆ ಬಂದು ಬಿಡುತ್ತೆ.

ಏನೇ ಇರ್ಲಿ. ಈ ಪೋಸ್ಟು ನಂಗೆ ಬರಬಾರದಿತ್ತು. ಬಾರದ್ದಕ್ಕೆ ಕಾಯುವುದೇ ಚೆಂದ. ಬಂದುಬಿಟ್ಟರೆ ಬರೀ ದುಗುಡ ಉಳಿಯುತ್ತೆ, ನಿರೀಕ್ಷೆ ನಾಶವಾಗುತ್ತೆ. ಬಂದ ಕವರನ್ನು ಹಾಗೇ ಕೈಲಿ ಹಿಡಿದುಕೊಂಡು ಮಂಚದ ಮೇಲೆ ಕುಳಿತೆ. ತಂಗಿ ಅಡುಗೆ ಮನೇಲಿದ್ದಾಳೆ. ಅಪ್ಪ ದೇವರ ಮನೇಲಿ. ಲ್ಯಾಬಿನೋಳು ಮನೇಲಿಲ್ಲ. ರಕ್ತವೋ, ಮಲವೋ ..... ಏನು ಪರೀಕ್ಷಿಸ್ತಿದಾಳೋ? ವೀರ್ಯ! ಇರಬಹುದು. ನನ್ನ ಕೋಣೇಲಿ ನಾನು ಮತ್ತು ಕತ್ತಲು ಇದ್ದೇವೆ. ಇದೇ ಕತ್ತಲಲ್ಲಿ ಅಲ್ವಾ ನಾನು ಕಥೆ ಬರೆದಿದ್ದು? ಪೇಪರಿನೋರು ಪ್ರಕಟವಾದ ಕಥೆ ಕಳಿಸ್ತಾರೆ. ಹಣ ಬರುತ್ತೆ. ಓದುಗರು ಅದೇನು ಬರ್ಕೋತಿದ್ರೋ ನಾನ್ಯಾವತ್ತೂ ನೋಡಕ್ಕೆ ಹೋಗಿಲ್ಲ. ನಂಗೇ ನೇರವಾಗಿ ಬರೆಯೋಳು ನಳ್ನಿ ಒಬ್ಳೇ. ನಳಿನಿ ಭದ್ರಾವತಿ.

ಅಂಥಾದ್ರಲ್ಲಿ ಇದೇನು ಬಂತು ಇವತ್ತು? ಕವರನ್ನ ಮೇಜಿನ ಮೇಲಿಟ್ಟು ನೋಡಿದೆ. ಕಿಲಿಕಿಲೀಂತ ನಕ್ಕೆ. ಯಾವನೋ ಹುಚ್ಚ ಬರ್ದಿರಬೇಕು ಅನ್ನುಸ್ತು. ಬೆಂಗಳೂರಿಂದ ಬಂದಿದೆ. ಕವರಿನ ಮೇಲೆ ವಿಕಾರವಾದ ಕರೀ ಸೀಲು, ಪೋಸ್ಟಾಫೀಸಿನದು. ನನಗಿನ್ನೆಂಥಾದ್ದು ಬರುತ್ತೆ? ಹಾಗೇ ಕೂತು ಯೋಚಿಸಿದೆ. ಜಗತ್ತಿನ ಸಂಪರ್ಕವಿಲ್ದೆ ಕಥೆಗಳು ಹುಟ್ಟೋದಿಲ್ವಾ? ಹೌದು ಮತ್ತೆ. ಕುರೂಪದಿಂದ ಏನೂ ಹುಟ್ಟಲ್ಲ, ವಿಕೃತಿಯ ಹೊರತು. ಕಥೆ ಹುಟ್ಟಬೇಕೂಂದ್ರೆ, ಊಟಿ, ಕೊಡೈಕೆನಾಲು, ಆಗುಂಬೆ, ಜೋಗ, ಅಟ್ಲೀಸ್ಟ್ ಕೆಮ್ಮಣ್ಣುಗುಂಡಿ! ನಾನೊಂದೂ ನೋಡಿಲ್ಲ. ಈ ಕತ್ತಲು ದಾಟಿ ಅಂಗಳಕ್ಕೆ ಹೋಗಿಲ್ಲ.

ಹಾಗಾದ್ರೆ ಈ ತಂಕಾ ಹುಟ್ಟಿದ ಕಥೆಗಳು? ಥೂ, ಕಥೆಗಳಾ ಅವು? ಬರೀ ವಿಕೃತಿಗಳು. ಭ್ರಮೆಗಳು. ಓದಿದ್ರಲ್ಲ ಜನ? ಅವ್ರಿಗೇನಂತೆ, ಏನು ಕೊಟ್ರೂ ಓದ್ತಾರೆ. ಬೆಳಕಲ್ಲಿ ಕೂತು ಓದೋರ್ಗೆ ಕತ್ತಲೇಲಿ ಕೂತು ಬರ್ದೋನು ಕಾಣುಸ್ತಾನಾ? ಓದಿ ಬಿಡ್ತಾರೆ. ಅವು, ಮಕ್ಕಳಿದ್ದ ಹಾಗೆ. ಕತ್ತ

ಲಲ್ಲೇ ಅಲ್ವಾ ಮಕ್ಕಳು ಸೃಷ್ಟಿಯಾಗೋದು? ಆಸ್ಪತ್ರೆ ಬೆಳಕಲ್ಲಿ ಕಣ್ಣು ಕಿಸ್ದು ಕಿರ್‍ರೋ ಅಂತ ಅಳೋ ಅವಕ್ಕೆ ಕತ್ಲಲ್ಲಿ ನಡೆದದ್ದೇನೂಂತ ಗೊತ್ತೇ ಇರಲ್ಲ.

ಆದ್ರೆ ಇವತ್ತು ಈ ಕತ್ತಲಿನಲ್ಲಿ ಏನೂ ಘಟಿಸ್ತಾ ಇಲ್ಲ. ಸೃಷ್ಟಿಯಾಗ್ತಾ ಇಲ್ಲ. ಇಲ್ಲ, ತಂಗಿಯ ವೀಣೆ, ಲ್ಯಾಬಿನೋಳ ಚಿತ್ರಗೀತೆ, ಅಪ್ಪನ ದೇವರ ಪೂಜೆ ಮಂತ್ರ .... ಇದ್ಯಾವ್ದೂ ನನ್ನ ಕೋಣೆಗೆ ಕಾಲಿಡುವುದಿಲ್ಲ. ಎದೆ ತಾಕುವುದಿಲ್ಲ. ಶೂನ್ಯದಲ್ಲಿ ಅಲ್ಲೂ ಅಲ್ಲೂ ತಿರುಗಿ ರಪಾಂತ ಗೋಡೆಗೆ ಬಡ್ಕೊಳ್ಳೋ ಬಾವಲಿಗಳ ಹಾಗೆ ತಂಗಿಯರ ಜಾತಕಗಳು ವಾಪಸು ಬರ್ತವೆ. ನನ್ನಲ್ಲಿ ಕಳವಳ ಹುಟ್ಟಲ್ಲ. ಆ ಕುರೂಪಿ ಹುಡುಗೀರು, ಆ ಕತ್ತಲೆಯ ವಿಕಾರ ಸೃಷ್ಟಿಗಳು ನನ್ನಲ್ಲಿ ಏನನ್ನೂ ಕದಲಿಸುವುದಿಲ್ಲ. ನಿಜ ಹೇಳ್ಬೇಕೂಂದ್ರೆ, ಅಪ್ಪ, ಅಮ್ಮ ಅಂಥ ಕುರೂಪಿಗಳಲ್ಲ. ನಾವೇ ಮೂವರು. ಯಾವ ನೀಚ ಸಂಧಾನಕ್ಕೆ ಹುಟ್ಟಿದೋರು? ಯಾವ ಗ್ರಹಣ? ಎಂಥ ಪ್ರದೋಷ ಕಾಲ?

''ನಿನ್ ಹೆಣಾ ಎತ್ತ! ಮೂರು ಹೊತ್ತೂ ತಿಂದು ಬಿದ್ಕೋತಿಯಲ್ಲೋ. ತಂಗೀರು ಅನ್ನೋ ಪ್ರೀತಿ ಇದ್ಯಾ ನಿಂಗೆ? ಒಂದಿನಕ್ಕಾದ್ರೂ ಒಂದ್ಕಡೆ ಹೋಗಿ ಗಂಡು ಹುಡುಕಿದ್ಯಾ. ನಾಲಕ್ಕಾಸು ದುಡ್ಡು ಹಾಕಿದ್ಯಾ?'' ಅಪ್ಪ ದೇವರ ಪೂಜೆ ನಿಲ್ಲಿ ವಾಚಾಮಗೋಚರವಾಗಿ ಬೈದದ್ದು ಮತ್ತೆ ಮತ್ತೆ ನೆನಪಾಗುತ್ತೆ. ನಾನು ತಿರುಗಿ ಒಂದ್ಮಾತೂ ಆಡಿರ್‍ಲಿಲ್ಲ. ಮನೇ ಬಿಟ್ಟು ಹೋಗು ಅಂದ್ರೆ? 'ಹುಟ್ಟಿಸಿದೋನು ನೀನು, ಮದ್ವೆ ನೀನು ಮಾಡು. ಹುಟ್ಟಿದೀನಿ. ನೀನು ಸಾಯೋ ತಂಕಾ ಊಟ ಹಾಕು. ಇಷ್ಟಕ್ಕೂ ದುಡೀತಿರೋರು ಅವ್ರು, ನೀನಲ್ವಲ್ಲ? ಅಮ್ಮನ್ನ ಹಿಂಡಿ ಜೀವಾ ತೆಗ್ದು ನಮ್ಮನ್ನ ಹುಟ್ಟಿಸಿದ್ದು ಬಿಟ್ರೆ, ನೀನು ಮಾಡಿದ್ದಾದ್ರೂ ಏನು?'

ಮಾತು ಬಾಯಿಗೆ ಬಂದಿದ್ವು ಅವತ್ತು. ನುಂಗಿ ಕೊಂಡು ಬಂದಿದ್ದೆ. ಚಿತ್ರಗೀತೆ ಹಾಡೋಳು ಹಾಡ್ತನೇ ಇದ್ಲು. ವೀಣೆ ಸುಮ್ಮನಿತ್ತು.

ಅಷ್ಟರಲ್ಲಿ ಬಾಗಿಲ ಬಳಿ ತಟ್ಟೆ ಸರಿದ ಸದ್ದು. ತಂಗಿ ಊಟ ತಂದಿದ್ದಳು. ಎದ್ದು ಹೋಗಿ ಅದನ್ನು ತಂದಿಟ್ಟುಕೊಂಡೆ. ಬಿಸಿಯಾಗಿತ್ತು. ವೀಣೆ ನುಡಿಸೋಳಿಗೆ ಒಳ್ಳೆ ಅಡ್ಗೇನೂ ಬರತ್ತೆ. ದೊಡ್ಡ ಜಡೆಯಿದೆ. ಆದ್ರೆ ಮುಖದ ತುಂಬ ಹಳೆ ಸಿಡುಬಿನ ತೆಗ್ಗುಗಳು. ಒಂದು ಕಣ್ಣು ಮುಚ್ಚಿ ಹೋಗಿದೆ. ಹುಬ್ಬು ಹರಿದಿವೆ. ಹಲ್ಲುಬ್ಬು. ಕತ್ತಲಿಗಿನ್ನೊಂದು ಹೆಸರು. ಅವಳ ಜಾತಕ ಚೆನ್ನಾಗಿದೆ. ವೀಣೆ ಗೊತ್ತು, ಉದ್ದ ಜಡೆ. ಒಳ್ಳೆ ಅಡುಗೆ. ಗಂಡು ಸಿಗೋಕಿಷ್ಟು ಸಾಲದೆ? ಜಾತಕಗಳೇಕೆ ವಾಪಸ್ಸು ಬರ್ತವೆ?

ಮಂಚದ ಮಧ್ಯದಲ್ಲಿದ್ದ ತಟ್ಟೆಯತ್ತ ಸರಿದು ಕುಕ್ಕರಗಾಲಲ್ಲಿ ಕುಳಿತೆ. ಹುಳ ತಿನ್ನುವ ಜೇಡನಂತೆ. ಒಂದು ತುತ್ತು ಗಬಕ್ಕಂತ ಎತ್ತಿ ಬಾಯಿಗಿಟ್ಟುಕೊಂಡೆ. ಆಗ ಬಂತು ಸದ್ದು, 'ಏನೋ ಅದು ಪೋಸ್ಟಲ್ಲಿ ಬಂದಿದ್ದು?' ಅಪ್ಪ! ಬಾಗಿಲಲ್ಲಿ ನಿಂತು ಕೇಳುತ್ತಿದ್ದರು. ಅವರ ಮಾತುಗಳು ಕೂಡಾ ನಂಗೆ ದೇವರ ಪೂಜೆ ಮಂತ್ರಗಳಂತೆ ಕೇಳಿಸುತ್ತವೆ. ಅಪ್ಪ ಮತ್ತೆ ಕೇಳಿದರು. ಏನುತ್ತರಿಸಬೇಕು? ಇನ್ನೂ ಒಡೆದು ನೋಡಿಲ್ಲವೆನ್ನಲು ಮನಸ್ಸಾಗಲಿಲ್ಲ. ಎರಡನೇ ತುತ್ತು ಬೆರಳ ಮೇಲಿತ್ತು. ಅದನ್ನು ತಟ್ಟೆಗೆ ಬಿಟ್ಟು,

'ಹುಚ್ಚ! ಹುಚ್ಚ ಪತ್ರ ಬರ್ದಿದಾನಣ್ಣಾ' ಅಂದೆ.

ಒಂದು ನಿಟ್ಟುಸಿರು. ಅಪ್ಪ ಹೊರಟು ಹೋದರು. ತಂಗಿ ವೀಣೆ ಕಲಿಸಲು ಹೊರಟಿರಬೇಕು, ಬಾಗಿಲೆಳೆದುಕೊಂಡ ಸದ್ದು. ಲ್ಯಾಬಿನೋಳು ಚಿತ್ರಗೀತೆ ಹಾಡುತ್ತಿದ್ದಳು. ಗಬಾಗಬನೆ ತಿಂದೆ. ಮುಗಿಸಿದೆ. ಮುಸುಗೆಳೆದು ಮಲಗಿಕೊಂಡೆ. ನಿದ್ದೆ ಬಾರದಾಗ ಎದೆಯ ಕೂದಲಲ್ಲಿ ಬೈತಲೆಯೆಳೆದುಕೊಂಡೆ.

ಕೊಂಚ ಹೊತ್ತಿಗೆ ಚಿತ್ರಗೀತೆ ನಿಂತವು. ಮಂತ್ರ ಮುಗಿದವು. ವೀಣೆ ಹೊರಕ್ಕೆ ಹೋಗಿತ್ತು. ಅವಳಿವತ್ತು ರಾತ್ರಿ ಮನೆಗೆ ಬರುವು ದಿಲ್ಲವಂತೆ. ಪಾಠದವರ ಮನೇಲಿ ಬೆಳದಿಂಗ ಳೂಟ. ಅಲ್ಲೇ ಮಲಗ್ತೀನೀಂತ ಹೇಳಿದ್ದು ಕೇಳಿ ಸಿತ್ತು. ನನ್ನ ಕೋಣೆಯಲ್ಲಿ ನಾನು, ಕತ್ತಲು ಮತ್ತು ಮೌನ. ದಿಡಗ್ಗನೆ ಎದ್ದು ಕೂತೆ, ಅರೆನಿ ದ್ರೆಯ ಮಗುವಿನಂತೆ. ಮೋಂಬತ್ತಿ ಹಚ್ಚಿದೆ. ಟೇಬಲ್ಲಿನ ಮೇಲಿದ್ದ ಕವರೊಡೆದು ಸರಸರನೆ ಓದಿಕೊಂಡೆ.

''ಪ್ರಿಯ ಶ್ರೀವತ್ಸ ಅವರಿಗೆ,

ನಮ್ಮ ಪತ್ರಿಕೆಗೆ ಹತ್ತು ವರ್ಷ ತುಂಬಲಿದೆ. ಅದನ್ನು ಸಮೃದ್ಧ ಹಾಗೂ ಜನಪ್ರಿಯಗೊಳಿಸು ವಲ್ಲಿ ಕಥೆಗಾರರಾದ ನಿಮ್ಮ ಪಾತ್ರ ದೊಡ್ಡದು. ಶ್ರೇಷ್ಠ ಕಥೆಗಾರರಾದ ನಿಮ್ಮನ್ನು ಓದುಗರಿಗೆ ಪರಿ ಚಯಿಸುತ್ತಾ ನಿಮ್ಮ ಇತ್ತೀಚಿನದೊಂದು ಕಥೆ ಪ್ರಕಟಿಸುವ ಅಭಿಲಾಷೆ ನಮ್ಮದು. ಕನ್ನಡದ ಇತರೆ ಹಿರಿಯ ಕಥೆಗಾರರನ್ನೂ ಈ ಸಂಚಿಕೆಯಲ್ಲಿ ಪರಿಚಯಿಸುತ್ತಿದ್ದೇವೆ. ದಯವಿಟ್ಟು ನಿಮ್ಮ ಕಿರು ಪರಿಚಯ ಮತ್ತು ಭಾವ ಚಿತ್ರ ಕಳುಹಿಸಿರಿ. ಹಾಗೇ ಇತ್ತೀಚಿನದೊಂದು ಕಥೆಯನ್ನೂ.

ಧನ್ಯವಾದಗಳು
ಸಂಪಾದಕ''

ತೆಪ್ಪಗೆ ನಕ್ಕೆ. ಸಣ್ಣಗೆ ಅಳಬಹುದಲ್ಲ ಎನಿ ಸಿತು. ಮಂಚಕ್ಕೆ ಬಿದ್ದು ಬಿಕ್ಕಿದೆ. ಅದು ಗಳಗಳನೆ ಬಂದ ಅಳುವಾಯಿತು. ಮತ್ತೆ ಎದ್ದು ಮಂಡಿ ಝೂರಿ ಕೂತು ಎದೆ ಎದೆ ಚಚ್ಚಿಕೊಂಡೆ. ಭಾವ ಚಿತ್ರವಂತೆ! ಕಥೆಯಂತೆ. ನಂಗೆ ಜಗತ್ತು ಬೇಡ. ಜಗತ್ತಿಗಿದೆಲ್ಲ ಯಾಕೆ ಬೇಕು. ಅವರಿಗ್ಯಾಕೆ ನನ್ನ ಪರಿಚಯ? ಈ ಪ್ರಶ್ನೆಯ ಬೆನ್ನಲುಬಿನಾಳದಿಂ ದಲೇ ಮತ್ತೊಂದು ಪ್ರಶ್ನೆ ಉದ್ಭವಿಸಿದಾಗ ನಿಜಕ್ಕೂ ಹೈರಾಣಾದೆ. ನನ್ನ ಪರಿಚಯ ಎಲ್ಲಿದೆ? ಯಾರಿಗಿದೆ? ನನ್ನ ಕೈಲಿನ್ನು ಕೂತ್ಕೊಳೋಕಾಗ ಲಿಲ್ಲ. ಉರಿಯುತ್ತಿದ್ದ ಮೋಂಬತ್ತಿ ಎತ್ತಿ ಕೊಂಡು ರೂಮೆಲ್ಲಾ ತಿರುಗಿದೆ. ಪೇಪರಿನೋ ರಿಗೆ ಪರಿಚಯ ಬೇಕು. ಎಲ್ಲಿಂದ ಪ್ರಾರಂಭಿಸಲಿ ಹುಡುಕಾಟ? ಕತ್ತಲಿನಲ್ಲೂ ತಡಕಾಡದೆ ಒಳ ಮನೆಗೆ ಬಂದೆ. ಹ್ಞಾಂ, ತೋಚಿತು. ತಂಗಿ ಮಲ

ಗೋದು ಅಡುಗೆ ಮನೇಲಿ. ಅಲ್ಲೇ ಅವಳ ವೀಣೆ ಇರೋದು. ಅದು ಅಮ್ಮನದಂತೆ. ಇನ್ನೂ ತಂತಿಗಳು ಉಳಿದಿವೆ. ಮೋಂಬತ್ತಿ ಹಿಡಿದು ನುಗ್ಗಿದವನನ್ನು ಕಂಡು ಹೆದರಿದ ಜಿರಳೆಗಳು ಮೀಸೆ ಹೊಡೆಯುತ್ತ ಓಡಿದವು. ಇಲಿಯೊಂದು ಅಕ್ಕಿ ಡಬ್ಬದಲ್ಲಡಗಿತು. ವಿಪರೀತ ಆಸಕ್ತಿಯಿಂದ ಹುಡುಕತೊಡಗಿದೆ. ತಂಗಿ ಮಲಗುವ ಜಾಗ. ಅವಳ ಮಾಸಿದ ದಿಂಬು. ದಿಂಬಿನ ಕವರು. ಅದರ ಮಡಿಕೆಗಳಲ್ಲಿ? ಹತ್ತಿಯ ಮಿದುವಿನಲ್ಲಿ? ರಹಸ್ಯಗಳಿರಬಹುದು ಅನ್ನಿಸಿತು. ಎಲ್ಲ ಎಳೆದಾಡಿದೆ. ಪರಪರನೆ ಹರಿದೆ ಬರೀ ಭ್ರಮೆ, ಏನಿಲ್ಲ ಕತ್ತಲಲ್ಲಿ ಹೋದವಳ ಹಿಂದೆ ಏನೂ ಇಲ್ಲ. ಥತ್, ಅಲ್ಲಿಂದ ಹೊರಬೀಳಬೇಕು. ಧಡಾರನೆ ಎದ್ದು ಬಾಗಿಲಿಗೆ ಬಂದೆ. ಆಗ ತಾಕಿತ್ತು ಕಾಲಿಗೆ! ವ್ಯಾನಿಟಿ ಬ್ಯಾಗು. ಇದಲ್ಲವೇ ನೋಡಬೇಕಾದ್ದು?

ಲಟಕ್ಕನೆ ಸದ್ದು ಮಾಡಿ ಕ್ಲಿಪ್ಪು ಕಳಚಿಕೊಂಡಿತು ಬ್ಯಾಗು. ಬಾಯ್ತೆರೆಯಿತು. ಒಳಗೆ ಪತ್ರಗಳಿವೆ. ಬರೀ ಕಾರ್ಡುಗಳು! ಯಾರ್‍ಯಾರದೋ ಬರಹಗಳು. ನಮ ನಮೂನಿ ಇಂಕು. ಬೆಳಕು ಸಾಲುತ್ತಿಲ್ಲ. ಮೋಂಬತ್ತಿ ಬಲಗೈಲಿ ಎತ್ತಿ ಹಿಡಿದೆ. ಒಂದು ಪತ್ರ, ಎರಡನೇದು, ಮೂರನೇಯದು ..... ಎಲ್ಲವುದರದೂ ಹೆಚ್ಚು ಕಡಿಮೆ ಒಂದೇ ಒಕ್ಕಣಿಕೆ. ಅವೆಲ್ಲ ಒಬ್ಬನೇ ಮಾಂತ್ರಿಕ ಕೂತು ತಯಾರಿಸಿದ ಸಾವಿನ ಬೊಂಬೆಗಳಂತಿದ್ದವು. ವಿಷ ಕುಡಿದು ಸತ್ತ ಮಕ್ಕಳಂತಿದ್ದವು. ''ನಿಮ್ಮ ಹುಡುಗಿಯನ್ನು ವಿವಾಹವಾಗಲು ಅವಕಾಶವಿಲ್ಲವೆಂದು .....'' ಒಟ್ಟು ನಲವತ್ತೆರಡು ಪತ್ರಗಳು! ಮಟ್ಟಸವಾಗಿ ಜೋಡಿಸಿಟ್ಟುಕೊಂಡಿದ್ದಾಳೆ.

ಯಾಕೋ ದಿಗಿಲೆನ್ನಿಸಿತು. ಇದಲ್ಲ ನಾನು ಹುಡುಕ ಬಯಸಿದ್ದು. ಇದು ನನ್ನ ಪರಿಚಯವಲ್ಲ. ಅವಳ ರಹಸ್ಯವೂ ಅಲ್ಲ. ಬ್ಯಾಗು ತಲಕೆಳಗಾಗಿ ಹಿಡಿದು ಕೊಡವಿದೆ. ಪತಪತಾಂತ ಬಿದ್ದವು ಫೋಟೋಗಳು. ಒಂದನ್ನೆತ್ತಿಕೊಂಡು ಮೋಂಬತ್ತಿಗೆ ಹಿಡಿದೆ. ಜಡೆ ಮುಂದಕ್ಕೆ ಹಾಕಿಕೊಂಡಿದ್ದಾಳೆ. ನಗುತ್ತಿದ್ದಾಳೆ. ಒಂದು ಕಣ್ಣು ಮುಚ್ಚಿಹೋಗಿದೆ. ಸಿಡುಬಿನ ತಾಂಡವ. ಚಿತ್ರದಲ್ಲಿ ವೀಣೆ ಕೇಳಿಸದು. ಅಡುಗೆಯ ಘಮವಿಲ್ಲ. ಆದರೂ ನಗುವಿಗೆಂಥ ಸೊಕ್ಕು? ದುಡೀತಾಳಲ್ವಾ, ಕೈಗೆ ಜಿರಳೆ ಹತ್ತಿದಂತಾಗಿ ಪತಕ್ಕನೆ ಕೊಡವಿದೆ. ಫೋಟೋ ಕೆಳಗೆ ಬಿತ್ತು. ಇನ್ನೊಂದೆತ್ತಿಕೊಂಡೆ. ಮತ್ತೊಂದು, ಮಗದೊಂದು, ಇನ್ನೂ ಒಂದು ...... ಎಲ್ಲ ಅದೇ ಚಿತ್ರದ ಪ್ರತಿಗಳು. ಯಾಕೋ ಅದನ್ನೆಲ್ಲ ನೋಡಿ ದಿಗಿಲು ಇಮ್ಮಡಿಸಿತು. ಬರಬರನೆ ಎಲ್ಲ ಬ್ಯಾಗಿಗೆ ತುಂಬಿದೆ. ಅದರ ಸಮೇತ ಎದ್ದು ನನ್ನ ರೂಮಿಗೆ ಬಂದೆ. ಇನ್ನೂ ಎದೆ ಬಡಕೊಳ್ತಲೇ ಇತ್ತು. ಆದರೆ ಹುಡುಕಾಟ ಮುಗಿದಿಲ್ಲ.

ಲ್ಯಾಬಿನೋಳು ಮಲಗಿದಾಳೆ. ಚಿಕ್ಕಂದಿನಿಂದಲೂ ಹಾಗೇ, ಮೊದ್ದು ನಿದ್ರೆ. ಆದರೆ ಅವಳ ರೂಮಲ್ಲಿ ಕೂತು, ಕೆದರಿ, ಪರದಾಡಕೂಡದು. ಕಥೆ ಬರಿಯೋನಿಗೆ ಅಷ್ಟೂ ಗೊತ್ತಿಲ್ವೆ? ಹುಡ್ಗೀರ ರಹಸ್ಯಗಳೆಲ್ಲಾ ಇರೋದು ವ್ಯಾನಿಟಿ ಬ್ಯಾಗಲ್ಲಿ. ಅದನ್ನೇ ತಂದು ಬಿಡಬೇಕು. ದಿನಾ ಕೆಲಸಕ್ಕೆ ಹೋಗೋಳು. ಲೋಕ ನೋಡ್ತಾಳೆ. ರಹಸ್ಯಗಳಿಲ್ದೇ ಇರ್ತವಾ? ಇನ್ನೂ ಮದ್ವೆಯಾಗಿಲ್ಲ. ಆಗೋ ವಯಸ್ಸು. ನಂಗೇ ಆಗಿಲ್ಲ. ಆಗಿದ್ದರೆ ಕಥೆಗಳು ಹುಟ್ಟಿದ್ವೇನೋ? ಕಡೇ ಪಕ್ಷ ಮಕ್ಕಳು.


ಸದ್ದಿಲ್ಲದೆ ಹೋಗಿ ಅವಳ ಕೋಣೆಯ ಕತ್ತಲಲ್ಲಿ ಹೆಚ್ಚು ತಡಕಾಡದೆ ಮೊಳೆಗೆ ನೇತಾಡ್ತಾ ಇದ್ದ ಕರೀ ಬ್ಯಾಗು ಕೈಗೆತ್ತಿಕೊಂಡೆ. ನೈಟಿ ಹಾಕ್ಕಂಡು ಬೋರಲು ಮಲಗಿದ್ದಳು. ಇವ್ಳಿಗೆ ನೈಟಿ ಬೇರೆ ಕೇಡು ಅಂದ್ಕೊಂಡೆ. ದುಡೀತಾಳಲ್ಲ? ನಿಲ್ಲೋ ಹಾಗಿರಲಿಲ್ಲ. ಬ್ಯಾಗು ತಂದು ರೂಮಲ್ಲಿಟ್ಟುಕೊಂಡೆ.

ಉಳಿದೋರೊಬ್ರೇ, ಅಪ್ಪ! ಅವರು ದೇವರ ಮನೇಲೇ ಮಲಗ್ತಾರೆ. ಆ ಕೋಣೆಗೆ ನಾನು ಕಾಲಿಟ್ಟು ಹತ್ವರ್ಷದ ಮೇಲಾಯ್ತು. ದೇವರ ಸಂಪುಟದ ಮುಂದಿರೋ ಕೆಂಪು ಪೆಟ್ಗೇಲಿ ಏನಿದೆ ಅಂತ ಕೇಳಿದ್ದಕ್ಕೆ ಛಳೀರಂತ ಹೊಡೆದಿದ್ರು. ಅಮ್ಮ ಬಿಡುಸ್ಕಂಡಿದ್ಲಲ್ಲ ಅವತ್ತು? ಪುಟಾಣಿ ಪೆಟ್ಗೆ. ಕೆಟ್ಟ ಕುತೂಹಲ ಹುಟ್ಟಿತ್ತು. ಅದನ್ನ ತರ್ಲೇ

ಬೇಕು. ಅವ್ರ ನಿದ್ದೆ ಬಲು ಸೂಕ್ಷ್ಮ. ಜಲಬಾಧೆಗೇಂತ ಹತ್ಸಲ ಏಳ್ತಾರೆ. ಉಚ್ಚೆ ಸಲೀಸಾಗಲ್ಲ. ಬಚ್ಚಲಲ್ಲೇ ಕೂತು ತಿಣುಕ್ತಾರೆ. ನನ್ ರೂಮಿನ ಬಾಗ್ಲಲ್ಲೇ ನಿಂತು ಕಾದೆ. ಅಂದ್ಕೊಂಡ ಹಾಗೇನೇ ದೇವ್ರ ಮನೆ ದೀಪದ ಬೆಳಕಲ್ಲೊಂದು ನೆರಳು ಕದಲ್ತು. ಅಪ್ಪ ಎದ್ರು. ಮರೆಯಾದೆ. ಒಂದೇ ಕ್ಷಣ. ಅವ್ರು ಬಚ್ಚಲಿಗೆ ಹೋದ ಕೂಡ್ಲೆ ದೇವರ ಕೋಣೆಗೆ ನುಗ್ಗಿದೆ. ಒಂದೇಟಿಗೇ ಕಿಟಾರಂತ ಕಿರುಚ್ಕೊಳ್ಳೋ ಹಾಗಾಗಿತ್ತು. ಬರೀ ರುಂಡ, ರಕ್ತ, ಮಾಂಸ, ನಾಲಿಗೆ, ಮಚ್ಚಗತ್ತಿ .... ಕಾಳಿಕಾದೇವಿ ಫೋಟೋಗಳು. ರಾಕ್ಷಸರ ರುಂಡಗಳು, ಎಮ್ಮೆ ಮೂತಿಗಳ ಚಿತ್ರಗಳು ಇದೆಲ್ಲಾ ಗೋಡೆಗೆ ನೇತ್ಹಾಕ್ಕೊಂಡು ಯಾಕೆ ಮಲಗ್ತಾರೋ? ಹತ್ತು ವರ್ಷದ ಹಿಂದೆ ಇದೇನೂ ಇರಲಿಲ್ಲ. ಅಮ್ಮ ಇದ್ಲು. ಬೇರೆ ದೇವರುಗಳಿದ್ವು. ಈಗ ಬರೀ ಕಾಳಿಕಾ ದೇವಿ. ಆದ್ರೆ ಕೆಂಪು ಪೆಟ್ಗೆ ಮಾತ್ರ ಅಲ್ಲೇ ಇತ್ತು. ಕೈಗೆತ್ತಿಕೊಂಡೋನೇ ಬೆಕ್ಕಿನ ಥರಾ ಓಡಿ ಬಂದು ರೂಮು ಸೇರ್ಕೊಂಡೆ. ಮೋಂಬತ್ತಿ ನವೀತಾ ಇತ್ತು.

ಮೂರೂ ಜನ ಸಿಕ್ಕೋದ್ರು. ಎಲ್ಲಾ ರಹಸ್ಯಗಳೂ ಇಲ್ಲಿವೆ. ನಿರಮ್ಮಳವಾಗಿ ಕೂತು ಮತ್ತೊಂದು ಮೋಂಬತ್ತಿ ಹಚ್ಚಿದೆ. ಲುಂಗಿ ಕಿತ್ತು ಹಾಕಿ ಬರೀ ಚಡ್ಡೀಲಿ ಪದ್ಮಾಸನ ಹಾಕಿ ಕೂತ್ಕೊಂಡು ಮತ್ತೊಂದ್ಸಲ ತಂಗಿ ಬ್ಯಾಗು ಕೆದಕಿದೆ. ಪತ್ರಗಳು, ಫೋಟೋಗಳು, ಜಾತಕದ ಕಾಪಿಗಳು. ಮೂಲೆಗೆಸ್ದೆ. ಇವಳು ಹಾಗಲ್ಲ. ವೀರ್ಯ ಪರೀಕ್ಷೆ ಮಾಡ್ತಾಳೆ. ವಯಸ್ನಲ್ಲಿರೋ ಹುಡ್ಗೀಗೆ ರಹಸ್ಯಗಳದೇನು ಕೊರತೆ? ದಿನಗಟ್ಲೆ ರವಿಕೆ ಸಂದೀಲಿರೋ ಪ್ರೇಮ ಪತ್ರಗಳು ನಿಧಾನವಾಗಿ ಬ್ಯಾಗಿಗಿಳೀತವೆ. ಇನ್ನೇನೇನು ಇಟ್ಕೊಂಡಿದಾಳೋ? ಬ್ಯಾಗು ಮೂಸಿದೆ. ಬರೀ ರೆಕ್ಸಿನ್ ವಾಸನೆ.

ದೇವರೇ ..... ಒಳಗೆ ಏನಾದರೂ ಇರಲೇ ಬೇಕು. ನಿರಾಶೆ ಸಹಿಸಲಾರೆ. ತಿಂಗಳ ಸಂಬಳ ತಂದು ತಂದು ನನ್ನನ್ನು ಸೋಲ್ಸಿದಾರೆ. ಇವತ್ತೊಂದಿನ ಇವ್ರು ನನ್ಕೈಲಿ ಸಿಕ್ಕಿ ಹಾಕಿಕೊಳ್ಳಲಿ.



"ಕರ್ನಾಟಕದ ಎಲ್ಲ ಜನತೆ ಇದರಲ್ಲಿ ವಿಶ್ವಾಸ ಇಟ್ಟಿರುವಾಗ ..... ಇನ್ನು ನೀವು ....?!"

ನಾಳೆ ಒಂದಿನಾನಾದ್ರೂ, ಅವಳ ಅವಮಾನಿತಗೊಂಡ ಕಣ್ಣುಗಳನ್ನು ನೋಡೋ ಭಾಗ್ಯ ನನ್ನದಾಗಬೇಕು. ಏನು ದುಡಿದರೇನಂತೆ? ಕನ್ನಡಕ ಹಾಕ್ಕೊಂಡು ಬಿಸಿಲಲ್ಲಿ ಅಲೆದ್ರೇನಂತೆ? ಕತ್ತಲಲ್ಲಿ ರೋನೆದುರು ಎಲ್ಲ ರಹಸ್ಯ ಬಯಲಾಗ್ತವೆ. ಅವಮಾನವಾಗ್ತದೆ. ಅಪ್ಪನ ತನಕಾ ಸುದ್ದಿ ಹೋಗೋದು ಬ್ಯಾಡ. ಅವ್ರಿಗೆ ಘಾತವಾಗ್ತದೆ. ಇಳೀ ವಯಸ್ಸು. ಅವಳಿಗೆ ಗೊತ್ತಾದರೆ ಸಾಕು, ನನಗೆಲ್ಲಾ ಗೊತ್ತಾಗಿದೇಂತ.

ಬ್ಯಾಗು ತೆರೆದೆ. ಕೈಯಿಟ್ಟು ತಡವಿದೆ, ತಡಕಿದೆ. ಒಳಗೆ ಬೆರಳು ಅಲೆದಾಡಿದವು. ಅದರ ಖಾನೆ ಖಾನೆ ..... ಜಿಪ್ಪು ..... ಬಟನ್ನು ..... ಅಂತರಾಳದ ಥೇಂಬರು .... ಎಲ್ಲ ತಿರುಗಾಡಿದವು. ಬ್ಯಾಗಿನೊಳಗಿನ ತೆಳ್ಳನೆ ಅರಿವೆ ಹಿಡಿದೆಳೆದು ಪರಪರಾಂತ ಹರಿದು ಹಾಕಿದೆ. ಇಡೀ ಬ್ಯಾಗು ಬೋರಲು ಮಾಡಿ ಕೊಡವಿದೆ, ಬಂಜೆಯೊಬ್ಬಳು ಗರ್ಭಕೋಶ ಕೊಡವಿದಂತೆ.

ಮೋಂಬತ್ತಿ ಉರಿದೆದ್ದು ನಿಂತಿತ್ತು. ನಾನು ಕ್ಷಣ ಕ್ಷಣಕ್ಕೂ ಅಧೀರನಾದೆ. ಎಲ್ಲಿತ್ತೋ ಆ ಅಳುವೆಲ್ಲ ..... ಅಸಹಾಯಕತೆಯ ರೂಪದಲ್ಲಿ ನುಗ್ಗಿ ಬಂತು. ಕೂತಲ್ಲೇ ಕೊತಪತನೆ ಕಾಲು

ಕೊಡವಿದೆ. ಏನಿತ್ತು ಅದರಲ್ಲಿ? ಎರಡು ಅಗ್ಗದ ಮಣಿಸರ, ಒಂದು ಟಿಕಳಿ ಪಾಕೀಟು, ಆರು ಪಾಯಿ ನಲವತ್ತುಪೈಸೆ ದುಡ್ಡು ಮತ್ತು ಹಳ್ಳಿನ ಡಾಕ್ಟರನ ಅಪಾಯಿಂಟ್‌ಮೆಂಟ್ ಚೀಟಿ! ನನ್ನ ಹುಡುಕಾಟವೆಲ್ಲ ಮುಗಿದಿತ್ತು. ತಂಗಿಯರ ನಿಸ್ಪೃಹ ಮುಖಗಳು ರೂಮಿನ ಕತ್ತಲಲ್ಲೂ ಹೊಳೆದು ಸುಮ್ಮನಾದವು. ವೀಣೆ ಮಿಡಿಯುತ್ತಿತ್ತು, ಗೀತೆ ಮೊಳಗುತ್ತಿತ್ತು. ನನ್ನಲ್ಲಿ ಉಳಿದದ್ದು ಅರ್ಥ ಹೀನ ಮೌನ ಮಾತ್ರ.

ಮತ್ತೆ ಹುಡುಕುವ ಉತ್ಸಾಹವಿರಲಿಲ್ಲ. ಅಪ್ಪನ ಕೆಂಪು ಪೆಟ್ಟಿಗೆ ತೆರೆಯುವ ಹುಮ್ಮಸ್ಸುಳಿದಿರಲಿಲ್ಲ. ಅದರಲ್ಲಾದರೂ ಏನಿದ್ದೀತು? ಈ ಮೂರು ಕುರೂಪಗಳ ಸೃಷ್ಟಿಕರ್ತ ಇನ್ನೆಂಥದನ್ನು ಅಡಗಿಸಿಟ್ಟುಕೊಂಡಿರುತ್ತಾನೆ. ಅದರ ಜಾಗದಲ್ಲದನ್ನಿಟ್ಟು ಬಂದು ಬಿಡಬೇಕು ಎಂದುಕೊಳ್ಳುತ್ತಲೇ ಅದರ ಬಾಯಿ ತೆರೆದೆ.

ಪುಟ್ಟ ತಗಡಿನ ಪೆಟ್ಟಿಗೆ. ಹಳೆಯದಾದರೂ ಕಿರ್ರೆನ್ನಲಿಲ್ಲ. ಕುತೂಹಲ ಪಠಾರಂತ ಕೆನ್ನೆಗೆ ಹೊಡೆದಂತೆ ಕೆರಳಿದ್ದು ಪೆಟ್ಟಿಗೆಯೊಳಕ್ಕೆ ಕಣ್ಣರಿದಾಗ! ಅದೊಂದು ಬಿಚ್ಚಿಟ್ಟ ರೇಡಿಯೋದಂತಿತ್ತು. ನಂಜನಗೂಡು ಹಲ್ಲುಪುಡಿ ಪೊಟ್ಟಣ, ಸಿಕ್ಕು ಹಣಿಗೆ, ಜಡೆ ಪಿನ್ನು, ಉದುರಿದ ಕೂದಲುಗಳ ಸುತ್ತು, ಬಾಡಿದ ಮಲ್ಲಿಗೆಯ ಪಳೆಯುಳಿಕೆಗಳು, ಅಮ್ಮನದೊಂದು ಹಳೇ ಫೋಟೋ ಮತ್ತು ಒಂದು ಅದು!

ಕುತೂಹಲ ಕೆರಳಿಸಿದ್ದೇ 'ಅದು'.

ಕಣ್ಣಿನ ಆಯಿಂಟ್‌ಮೆಂಟಿನ ಟ್ಯೂಬಿಗಿಂತ ಕೊಂಚ ದೊಡ್ಡ ಸೈಜಿನ ಟ್ಯೂಬು. ಕೆಂಪು ಬಣ್ಣದ್ದು! ಹಿಚುಕಿ ಹಿಚುಕಿ ಮೆತ್ತಗಾಗಿ, ಬರಿದಾಗಿ ಅದರ ಮೂಲ ಸ್ವರೂಪವೇ ಗುರ್ತಿಲ್ಲದಷ್ಟು ಬದಲಾಗಿದ್ದ ಒಂದು ಟ್ಯೂಬು. ಬತ್ತಿ ಬೆಳಕಿಗೆ ಹಿಡಿದು ಓದಿದೆ. 'ಸುರತ ಶಕ್ತಿ ವರ್ಧಕ ಮುಲಾಮು' ಅಂತ ಐದಾರು ಭಾಷೆಗಳಲ್ಲಿ ಬರೆದಿತ್ತು. ಮೂಸಿದೆ, ವಾಕರಿಕೆ ಬಂದಂತಾಯಿತು. ಎಸೆದೆ. ಪೆಟ್ಟಿಗೆಯ ಮತ್ತೊಂದು ಖಾನೆಗೆ ಕೈಯಿಟ್ಟೆ, ಮತ್ತದೇ ಖಾಲಿ ಟ್ಯೂಬುಗಳು. ರಾಯನ ಕಾಲದವು. ಒತ್ತಿ, ಹಿಚುಕಿ ರೂಪಗೆಟ್ಟಿವೆ. ಒಟ್ಟು ಹದಿಮೂರಿದ್ದವು. ಮತ್ತೇನೋ ಬೇರುಗಳು, ಪುಡಿಗಳು, ಮುಲಾಮುಗಳು! ಎಲ್ಲಾ ಬರೀ ಆ ಲೋಕದ ಸಾಮಗ್ರಿಗಳೇ.

'ಅಪ್ಪಾ!' ಅನ್ನುವವನಿದ್ದೆ.

ಒಂದು ಕಾರ್ಡು ಸಿಕ್ಕಿತ್ತು. ನಾಲ್ಕೇ ಸಾಲು. ಸರಪಳಿ ಅಕ್ಷರ. ಸರಿಸುಮಾರು ಮೂವತ್ತು ವರ್ಷದ್ದಿರಬೇಕು. ಪೆಟ್ಟಿಗೆಯಲ್ಲಿ ಅಂಗಾತ ಮಲಗಿತ್ತು. ಓದಿದೆ. ಓದುತ್ತಲೇ ಇದ್ದೆ. ರಾತ್ರಿಯಿಡೀ ಕಳೆದು ಪೂರೆ ಕಳಚಿ ಬೆಳಗಾಗುವ ತನಕ ಓದಿದೆ.

''ನಂಜನಗೂಡು ಗೋವಿಂದರಾಯನಿಗೆ ತಿಳಿಸುವುದೇನೆಂದರೆ ನೀನು ನನ್ನ ಸೌಭಾಗ್ಯವತಿಯೊಡನೆ ಪರಾರು ಆಗಿ ಶಿಡ್ಲಘಟ್ಟದಲ್ಲಿ ಮನೆಯನ್ನು ಮಾಡಿಕೊಂಡಿರುವ ಸಂಗತಿ ತಿಳಿದು ಬಂದಿದೆ. ಪಾಪದೊಂದಿಗೆ ಪಾಪ ಶೇಷವನ್ನೂ ಒಯ್ಯಬೇಕಾದ್ದು ಧರ್ಮ ಅದೆ. ನಾಳೆ ಮುಂಜಾನೆ ಬಸ್ಸಿಗೆ ಅವಳ ಮೂವರು ಮಕ್ಕಳನ್ನು ನಿನ್ನ ಸುಪರ್ದಿಗೆ ಕಳಿಸುತ್ತಿದ್ದೇನೆ. ಕಟ್ಟಿಕೊಂಡು ಹೆಣಗು. ನನ್ನ ಋಣ ಹರಿದಿದೆ.

ಇಂತಿ

ಆದವಾನಿ ಶೇಷಪ್ಪ''

★ ★ ★

ಒಬ್ಬ ಗಂಡಸು ಮೂವರು ಮಕ್ಕಳನ್ನು ಬಸ್ಸಿನಿಂದಿಳಿಸಿಕೊಳ್ಳುವ ಚಿತ್ರವೊಂದೇ ಬೆಳತನಕ ನನ್ನ ಕಣ್ಣ ತಟ್ಟೆಗಳಲ್ಲಿತ್ತು.

ಶೇಷಪ್ಪನ ಹೆಂಡತಿಯ ಮೋಹಕ್ಕೆ ಬಿದ್ದವನು ಪಾಪಶೇಷವನ್ನು ತಂದಿದ್ದ. ಮೂರು ವಿಕಾರ ಸೃಷ್ಟಿಗಳು. ಜೊತೆಗೊಬ್ಬ ಆಕಾಂಕ್ಷೆಗಳ ಮಡದಿ. ಆಗಲೇ ಮೀರುತ್ತಿರುವ ತನ್ನ ವಯಸ್ಸು. ಹೇಗೋ ಎಲ್ಲೋ ದುಡಿದು ತಂದು ಎಲ್ಲರ ಹೊಟ್ಟೆ ತುಂಬಬಹುದು. ಆದರೆ ರಾತ್ರಿಯ ಆಕಾಂಕ್ಷೆಗಳಿಗೆ ಆತನಲ್ಲೇನುಳಿದಿತ್ತು? ಅಮ್ಮ ರಾತ್ರಿಗಳಲ್ಲಿ ಕಾಳಿಯಾಗುತ್ತಿದ್ದಿರಬೇಕು. ಅಪ್ಪ ಜೀವನೋತ್ಸಾಹದ ಟ್ಯೂಬುಗಳನ್ನು ಹಿಚುಕಿ ಹಿಚುಕಿ, ದೇವರ ಕೋಣೆಯ ನೆಲದ ಮೇಲುರುಟಿಕೊಂಡು, ವಿಲವಿಲನೆ ಒದ್ದಾಡಿ ..... ಅಯ್ಯೋ

..... ಅಪವಿತ್ರಾಃ ಪವಿತ್ರೋವ ...... ಸರ್ವಾವಸ್ತಾಂಗತೋಪಿವ ..... ಉಹುಂ ... ಅದು ಸಾಧ್ಯವಾಗುತ್ತಿಲ್ಲ. ಆಕಾಂಕ್ಷೆಗಳ ಗಾಳಿ ಪಟಕ್ಕೆ ಈ ಉಂಡೆ ದಾರ ಸಾಲ್ದು. ಅಮ್ಮ ವ್ಯಗ್ರಳಾಗುತ್ತಿದ್ದಳು. ದರಾದರೇಂದ್ರ, ನಂದಿನೀ ..... ಅಯ್ಯೋ!

ಒಂದು ಬೆಳಗಿನ ಜಾವ ಆಕೆ ಸತ್ತಳು. ನಾವೆಲ್ಲ ಚಿಕ್ಕವರು. ಅಪ್ಪ ಹೆಣ ಸಾಗಿಸಿದ. ದೇವರ ಮನೆಯಲ್ಲಿ ಖಾಲಿ ಉಳಿದ ಗೋಡೆಗಳ ಮೇಲೆ ಕಾಳಿಕಾದೇವಿ ಕ್ಯಾಲೆಂಡರುಗಳು ಬಹುಶಃ ಆಗ ಬಂದಿರಬೇಕು.

ನಿಧಾನವಾಗಿ ಎಲ್ಲ ಮುಚ್ಚಿಟ್ಟೆ. ತಂಗಿಯರ ಬ್ಯಾಗುಗಳನ್ನು ಪ್ರೀತಿಯಿಂದ ತಡವಿ ಎದೆಗೊತ್ತಿಕೊಂಡೆ. ಅವರಿಬ್ಬರ ವಜ್ಜೆ ಎದೆಗೆ ಆತ್ಮೀಯವೆನಿಸಿತ್ತು. ಅವರ ಮುಖಗಳು ಕಣ್ಣ ಮುಂದೆ ನಿಂತಿದ್ದವು. ಕಂಗಳಲ್ಲಿ ಸಂಬಳದ ಗತ್ತುಗಳಿಲ್ಲ. ಮದುವೆ ಹಂದರದ ನೆರಳುಗಳಿವೆ. ಶೇಷಪ್ಪನ ಬೇರು ಕಡಿದ ಸಸಿಗಳು. ಗೋವಿಂದರಾಯನ ಆಲದ ಮೇಲೆ ಮೊಳೆತಿದ್ದು ಅವತ್ತಿಗದು ಸರಿಯೇ. ಆದರೆ ಆಲದ ಮೇಲೆ ಬೇರಿಳಿಯುವುದಿಲ್ಲ. ನಾನು ಮೇಲೆದ್ದೆ. ಬೆಳಗಿನ ಜಾವದ ಮೊದಲ ಕಿರಣ ವರಾಂಡದ ತನಕ ಬಂದು ಅಲ್ಲೇ ತಾರಾಡುತ್ತಿತ್ತು. ಮನೆಯ ಕಿಟಕಿಗಳನ್ನೆಲ್ಲ ತೆರೆದೆ. ಅದು ಸಾಲದು. ನಾನು ಹೊರಗೆ, ಅಂಗಳಕ್ಕೆ ನಡೆಯಬೇಕು. ಸೂರ್ಯಸ್ನಾನದಲ್ಲಿ ಕುರೂಪವೆಲ್ಲ ಕರಗಿ ನಿಚ್ಚಳವಾಗಬೇಕು. ಹೊರಟೆ.

ಅವರಿಬ್ಬರ ಜಾತಕಗಳು ಜೇಬಿನ ಮುದುರುಗಳಲ್ಲಿ ಸ್ಥಿರವಾಗುತ್ತಿದ್ದ ಹೊತ್ತಿನಲ್ಲೇ ತಂಗಿ ಸಣ್ಣ ದನಿಯಲ್ಲಿ ಕಿರುಚುತ್ತಿದ್ದಳು.

'ಅಣ್ಣಾ ...... ಅಪ್ಪ ಮಾತಾಡ್ತಾ ಇಲ್ಲ ಕಣೋ ...... ನೋಡು ಬಾರೋ ..... ಕೂತ್ಕೊಂಡು ಬಿಟ್ಟಿದಾರೆ ಕಣೋ ......' ನನಗೆ ಗೊತ್ತಿತ್ತು. ಆತ ಕಾಳಿಕಾದೇವಿಯ ಕ್ಯಾಲೆಂಡರಿನ ಕಾಲಿಗೆ ತಲೆಯಿಟ್ಟು ಕುಳಿತಲ್ಲೇ ಕಂಗಳನ್ನು ವಿಶಾಲವಾಗಿ ತೆರೆದಿದ್ದ. ಹೋಗಿ ಮುಚ್ಚಿದೆ.

*

ಅವರಿವರ ದೃಷ್ಟಿಯಲ್ಲಿ 'ಅನುಭವ'

★ ಅನುಭವ ಶೂನ್ಯವಾದ ಜ್ಞಾನವು ಕೊಡವಿಲ್ಲದಲ್ಲಿ ನೀರಿನಂತೆ. - ಚೀನಾ ಗಾದೆ

★ ಅನುಭವದ ಮಾತು ಎಲ್ಲಕ್ಕೂ ದೊಡ್ಡ ಮಾತು. - ಆಂಗ್ಲ ಗಾದೆ

★ ಅನುಭವವೆನ್ನುವುದು ಬಹಳ ದುಬಾರಿಯಾದ ಶಾಲೆ. ದಡ್ಡರು ಅದರಲ್ಲಲ್ಲದೆ ಬೇರೆಲ್ಲೂ ಪಾಠ ಕಲಿಯುವುದಿಲ್ಲ. - ಫ್ರ್ಯಾಂಕಲಿನ್

★ ಎಂಥ ಸಾಮಾನ್ಯರಿಗೂ ಅನುಭವವೆಂಬುದು ಸಾಮ್ರಾಟನ ಸೊಕ್ಕು ಕೊಡುತ್ತದೆ. - ರಂ.ಶ್ರೀ.ಮುಗಳಿ

★ ಅನುಭವ, ಅಭ್ಯಾಸಗಳೆರಡರ ಕೊರತೆಯನ್ನು ಅಹಂಕಾರದಿಂದ ತುಂಬಲೆತ್ನಿಸುವುದು ವಿವೇಕಿಗಳಿಗೆ ತರವಲ್ಲ. - ಅ.ನ.ಕೃ.

★ ಬಂದಿದ್ದೆಲ್ಲವನ್ನೂ ನಾವು ಅನುಭವಿಸಿಯೇ ತೀರಬೇಕು. - ಬಾಲ ಸರಸ್ವತಿ

★ ಬಸವನ ಹಿಂದೆ ಬಾಲ, ಲಗ್ನದ ಹಿಂದೆ ಸಾಲ. - ಗಾದೆ

(ಸಂಗ್ರಹ) ರವಿಶಂಕರ್ ತಿಮಲಾಪುರ

ಇದುವೇ ಜೀವ ಇದು ಜೀವನ

ಹಳ್ಳಿಯಲ್ಲಿರುವ ಬಂಧುಗಳ ಮನೆಗೆ ಹೋಗಿದ್ದೆ. ಮನೆಯಲ್ಲಿದ್ದವರು ವಯಸ್ಸಾದ ಪತಿ, ಪತ್ನಿ ಮಾತ್ರ. ಅಲ್ಲಿ ತಲುಪುವಾಗಲೇ ಸಂಜೆಯಾದ್ದರಿಂದ, ರಾತ್ರಿ ಅಲ್ಲಿಯೇ ಉಳಿದುಕೊಳ್ಳಬೇಕೆಂದೂ, ಮರುದಿನ ಬೆಳಗ್ಗೆ ಹಿಂದಿರುಗಿ ಬರಬಹುದೆಂದು ಬಹಳಷ್ಟು ಒತ್ತಾಯಿಸಿದರು. ರಾತ್ರಿ ಮಹಡಿಯ ಮೇಲಿರುವ ಕೋಣೆಯಲ್ಲಿ ನನಗೊಬ್ಬನಿಗೇ ಮಲಗಲು ಏರ್ಪಾಡಾಯಿತು. ಮಧ್ಯರಾತ್ರಿಯ ವೇಳೆಗೆ ಯಾವುದೋ ಕಾರಣಕ್ಕಾಗಿ ಇದ್ದಕ್ಕಿದ್ದಂತೆ ಎಚ್ಚರವಾದಾಗ, ಯಾರೋ ನನ್ನ ಬಲಭುಜದ ಮೇಲೆ ಕೈಯಿಟ್ಟಿರುವಂತೆ ಭಾಸವಾಯಿತು. ಇದು ಭ್ರಮೆಯಲ್ಲ, ನಿಜವೆಂದು ಸ್ಪಷ್ಟವಾದಾಗಂತೂ ಹೆದರಿಕೆಯಿಂದ ಮೈಯೆಲ್ಲಾ ಬೆವರಲು ಆರಂಭವಾಯಿತು. ಕೋಣೆಯಲ್ಲಿ ನನ್ನ ಹೊರತು ಬೇರೆ ಯಾರೂ ಇರಲಿಲ್ಲ. ಮೂಲೆಯಲ್ಲಿ ಇಟ್ಟಿದ್ದ ಲ್ಯಾಂಪ್‌ನ ಮಂದ ಬೆಳಕಿನಲ್ಲಿ ಯಾವುದೂ ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಧಡಕ್ಕನೆ ಹಾಸಿಗೆಯಿಂದ ಎದ್ದುಬಿಟ್ಟೆ. ಆಗಲೂ ಅದೇ ಕೈ ಹೆಗಲಿನ ಮೇಲೆಯೇ ಇತ್ತು. ಕೂಗಿಕೊಳ್ಳಲೂ ಬಾಯಿಯಿಂದ ಧ್ವನಿ ಹೊರಡಲಿಲ್ಲ. ಎಲೆಕ್ಟ್ರಿಸಿಟಿಯಂತೂ ಆ ಹಳ್ಳಿಗೆ ಬಂದಿರಲೇ ಇಲ್ಲ. ನಿಧಾನವಾಗಿ ಸಾವರಿಸಿಕೊಂಡು ದೀಪದ ಹತ್ತಿರ ಹೋದಾಗ ಕ್ರಮೇಣ ಪರಿಸ್ಥಿತಿಯ ಅರಿವಾಗತೊಡಗಿತು. ನಡೆದದ್ದೇನೂ ಇಲ್ಲ. ಹಾಸಿಗೆಯ ಜತೆ ಕೊಟ್ಟಿದ್ದ ದಿಂಬು ಬಹಳಷ್ಟು ತೆಳ್ಳಗಾಗಿದ್ದರಿಂದ ನನ್ನ ಎಡತೋಳನ್ನೇ ತಲೆಯಡಿಗಿಟ್ಟುಕೊಂಡು ಮಗ್ಗುಲಾಗಿ ಮಲಗಿದ್ದೆ. ತಲೆಯಡಿಯ ಭಾಗದಲ್ಲಿ ರಕ್ತ ಸಂಚಾರಕ್ಕೆ ತಡೆ ಉಂಟಾದ್ದರಿಂದ, ಮೊಣಕೈ ತನಕ ಸ್ಪರ್ಶ ಸಂವೇದನೆಯೇ ಇಲ್ಲದೆ ಜಡವಾಗಿ ಹೋಗಿತ್ತು. ನನ್ನ ಬಲಭುಜದ ಮೇಲೆ ಬಿದ್ದಿದ್ದ ಎಡಹಸ್ತವು ಬೇರೆ ಯಾರದೋ ಹಸ್ತದಂತೆ ಭಾಸವಾಗಿ ಇಷ್ಟಕ್ಕೆಲ್ಲಾ ಕಾರಣವಾಗಿತ್ತು. ಮೊದಲೇ ಕಿರುಚಿಕೊಂಡಿದ್ದರೆ ಏನೆಲ್ಲಾ ಅವಾಂತರಗಳಾಗುತ್ತಿದ್ದವೋ ಎಂದುಕೊಂಡು ಮುಸುಕುಬೀರಿ ನೆಮ್ಮದಿಯಾಗಿ ಮಲಗಿಕೊಂಡೆ. ಆವತ್ತು ಅನುಭವಿಸಿದ ಗಾಭರಿ, ಆತಂಕಗಳನ್ನು ನೆನಸಿಕೊಂಡರೆ ಈಗ ನಗು ಬರುತ್ತದೆ.

ಕೃಷ್ಣರಾಜ ಭಟ್.ಪಿ.

ನನ್ನೊಬ್ಬ ಸಹೋದ್ಯೋಗಿ, ಕೃಷ್ಣರಾವ್ ನುರಿತ ಗಣಿತದ ಉಪಾಧ್ಯಾಯ. ವಿದ್ಯಾರ್ಥಿಗಳ ಮೆಚ್ಚುಗೆಗೆ ಪಾತ್ರರಾಗಿದ್ದ ಅವರು ಅನೇಕ ಮನೆಪಾಠಗಳನ್ನು ಇಟ್ಟುಕೊಂಡಿದ್ದರು. ವಿದ್ಯಾರ್ಥಿ ಗಣಿತದಲ್ಲಿ ನೂರಕ್ಕೆ ನೂರು ಮಾರ್ಕುಗಳನ್ನು

ಪರೀಕ್ಷೆಯಲ್ಲಿ ತೆಗೆದುಕೊಂಡರೇ ಅವರಿಗೆ ಸಂತೋಷ. ಅವರ ವಿದ್ಯಾರ್ಥಿಗಳು ಬಹಳ ಜನ 90ರಿಂದ 100 ಮಾರ್ಕುಗಳನ್ನು ಪಡೆದು ಪಾಸಾಗುತ್ತಿದ್ದರು. ಅವರಲ್ಲಿ ಪಾಠ ಹೇಳಿಸಿಕೊಂಡರೆ ಗಣಿತದಲ್ಲಿ ನಪಾಸಾಗುವುದು ಸಾಧ್ಯವೇ ಇಲ್ಲ. ಇದು ಎಲ್ಲಾ ಶಿಕ್ಷಕರ, ವಿದ್ಯಾರ್ಥಿಗಳ ಅಭಿಪ್ರಾಯ. ಒಮ್ಮೆ ಊರಿನ ಪ್ರತಿಷ್ಠಿತ ಸಾಹುಕಾರರು ಕೃಷ್ಣರಾಯರನ್ನು ಮನೆಗೆ ಕರೆಸಿಕೊಂಡು, ''ರಾಯರೇ, ನನ್ನ ಮಗ, ಬಾಲಾಜಿ, 10ನೇ 'ಬಿ'ನಲ್ಲಿ ಓದುತ್ತಾ ಇದ್ದಾನೆ. ಅವನು ಫಸ್ಟ್ ಟರ್ಮ್ ಪರೀಕ್ಷೆಯಲ್ಲಿ ಕೇವಲ 20 ನಂಬರು ತೆಗೆದುಕೊಂಡಿದ್ದಾನೆ. ಅವನಿಗೆ ಪಾಠ ಹೇಳಿಕೊಡಬೇಕಲ್ಲಾ..' ಅಂದರು.

''ಆಗಲಿ, ಮನೆಗೆ ಕಳುಹಿಸಿ, ತಿಂಗಳಿಗೆ 15 ರೂ ನನ್ನ ಫೀಜ್.''

''ಇಲ್ಲಾ, ಮೇಷ್ಟ್ರೇ, ಗುಂಪಿನಲ್ಲಿ ಹೇಳಿಕೊಟ್ಟರೆ ಅವನಿಗೆ ಅರ್ಥವಾಗಲ್ಲ. ನೀವೇ ಮನೆಗೆ ಬನ್ನಿ. ಭಾನುವಾರ ರಜಾ. ದಿನಕ್ಕೆ ಒಂದು ಗಂಟೆ ಹೇಳಿಕೊಟ್ಟರೆ ಸಾಕು. ನೀವು ಕೇಳಿದಷ್ಟು ಕೊಡುತ್ತೇನೆ.''

ಕೃಷ್ಣರಾಯರು ಯೋಚಿಸಿ, ''ತಿಂಗಳಿಗೆ ಒಂದು ನೂರು ಕೊಟ್ಟರೆ ಸಂಜೆ 8ರಿಂದ 9ರವರೆಗೆ ಪಾಠ ಹೇಳಿಕೊಡುತ್ತೇನೆ'' ಎಂದರು. ಆಗಿನ ಕಾಲದಲ್ಲಿ ಅವರ ತಿಂಗಳ ಸಂಬಳ 200 ರೂಪಾಯಿ. ಸಾಹುಕಾರರು ಒಪ್ಪಿದರು.

ಒಂದು ತಿಂಗಳು ಕಳೆಯುವುದರಲ್ಲಿ ಹುಡುಗ ಬೇಕಾದಷ್ಟು ಕಲಿತ. ಒಂದನೇ ತಾರೀಖು ಮಾಸ್ಟರಿಗೆ ಒಂದು ನೂರು ರೂಪಾಯಿಗಳನ್ನು ಸಾಹುಕಾರರು ಕೊಟ್ಟರು.

ಮುಂದಿನ ತಿಂಗಳಲ್ಲಿ ಕೃಷ್ಣರಾಯರಿಗೆ ಪಾಠ ಹೇಳಿಕೊಡಲು ನಾಲ್ಕು ದಿನ ಹೋಗಲು ಆಗಲಿಲ್ಲ. ಆ ತಿಂಗಳು ಸಾಹುಕಾರರು ಪಾಠದ ಬಾಬ್ತು ಹದಿನಾರು ರೂಪಾಯಿ ಹಿಡಿದು ಮಾಸ್ಟರಿಗೆ ಕೊಟ್ಟರು.

ಕೃಷ್ಣರಾಯರು, ''ಹದಿನಾರು ರೂಪಾಯಿ ಕಡಿಮೆ ಇದೆಯಲ್ಲಾ'' ಅಂದರು.

''ಹೌದು, ರಾಯರೇ, ನೀವು ನಾಲ್ಕು ದಿನ ಬರಲಿಲ್ಲವಲ್ಲ. ಅದಕ್ಕೆ ದಿನಕ್ಕೆ ನಾಲ್ಕು ರೂಪಾಯಿಯಂತೆ ನಾಲ್ಕು ದಿನಕ್ಕೆ ಹದಿನಾರು ರೂಪಾಯಿ ಕಡಿಮೆ ಮಾಡಿ ಕೊಟ್ಟಿದ್ದೇನೆ.''

'ಓ, ಸರಿ, ಬಿಡಿ' ಅಂದರು ರಾಯರು.

ಮುಂದಿನ ತಿಂಗಳು ಮಾಸ್ಟರು ಒಂದು ದಿನವೂ ಪಾಠಕ್ಕೆ ತಪ್ಪಿಸಿಕೊಳ್ಳಲಿಲ್ಲ. ಜೊತೆಗೆ ಎಷ್ಟೋ ದಿನ ಒಂದೂವರೆ ಗಂಟೆ ಪಾಠ ಹೇಳಿಕೊಟ್ಟರು. ಸಾಹುಕಾರರಿಗೆ, ''ಮಾಸ್ಟರಿಗೆ 'ಪಾಠ' ಕಲಿಸಿದೆ'' ಎಂದು ಸಂತೋಷ. ಆ ತಿಂಗಳ ಪಾಠದ ಬಾಬ್ತು ಹಣ ಒಂದು ನೂರು ರೂಪಾಯಿಗಳನ್ನು ಮಾಸ್ಟರಿಗೆ ಕೊಟ್ಟಾಗ ಅವರು, ''ಸಾಹುಕಾರರೇ, ನಿಮಗೆ ಗೊತ್ತಿಲ್ಲ. ನಾನು ಲೆಕ್ಕ ಕೊಟ್ಟು, ಬಿಡಿಸಲು ಪ್ರಯತ್ನ ಮಾಡು ಎಂದು ಹೇಳುತ್ತಾ ನಾನು ಸುಮ್ಮನೆ ಕುಳಿತು ಕಾಲ ಕಳೆದ ಎಷ್ಟೋ ದಿನ. ಏನು ಮಾಡಬೇಕು ಅಂತ ಬಾಲಾಜಿಗೆ ಗೊತ್ತಾಗದೇ ಸುಮ್ಮನೆ ಬರೆಯುವುದು, ಹೊಡೆಯುವುದು ಮಾಡುತ್ತಾ ಇದ್ದ. ದಿನಕ್ಕೆಲ್ಲಾ ಒಂದು ಲೆಕ್ಕವೂ ಹೇಳಿ ಕೊಡದೆ, ನಾನು ನೂರು ರೂಪಾಯಿ ತೆಗೆದು ಕೊಂಡರೆ ನನ್ನ ಮನಸ್ಸೇ ಒಪ್ಪುವುದಿಲ್ಲ. ಆದರೆ ನಾಲ್ಕು ದಿನ ಬರಲಿಲ್ಲವಲ್ಲ ಆ ತಿಂಗಳು ನಾನು ಮಾಡಿದ ಕೆಲಸಕ್ಕೆ ನೂರಕ್ಕಿಂತ ಜಾಸ್ತಿ ಕೊಡಬೇಕು. ಅದಕ್ಕೆ ನಿಮ್ಮ ಸಂಭಾವನೆ ಸರಿ ಹೋಯಿತು. ನಾನು ಇಲ್ಲಿರುವ ಟೈಂ ನೋಡಿ, ಅಥವಾ ನಾನು ಬರದೇ ಇರುವ ದಿನ ಲೆಕ್ಕ ಹಾಕಿ ಸಂಭಾವನೆ ಕೊಡಬೇಡಿ ಎಂದು ನಾನು ಪುನಃ ಹೇಳಬೇಕಾಗಿಲ್ಲ, ಅಲ್ಲವೇ?'' ಎಂದರು.

ತಾವು ಮಾಡಿದ್ದು ತಪ್ಪು ಎಂದು ಅರಿತ ಸಾಹುಕಾರರು ಕೃಷ್ಣರಾಯರ ಕ್ಷಮೆಕೋರಿದರು. ಪರೀಕ್ಷೆಯಲ್ಲಿ ಬಾಲಾಜಿ ಲೆಕ್ಕದಲ್ಲಿ 80% ಪಡೆದು ಪ್ರಥಮ ದರ್ಜೆಯಲ್ಲಿ ಪಾಸಾದ. ಸಾಹುಕಾರರು ಕೃಷ್ಣರಾಯರಿಗೆ ಒಂದು ಬೆಲೆಬಾಳುವ ಶಾಲನ್ನು ಉಡುಗೊರೆಯಾಗಿ ಕೊಟ್ಟರು. ●

ಎಚ್.ಆರ್. ಚಂದ್ರವದನರಾವ್

ವಿಡಿಯೋ ಲೇಸರೋಸ್ಕೋಪಿ: ವೈದ್ಯರಿಗೆ ಒಲಿದ ಹೊಸ ವಿಧಾನ

ಆಕೆ ಚೆಲುವೆ. ತನ್ನ ನೃತ್ಯದಿಂದ ನೂರಾರು ನೋಟಗಳನ್ನು ಬಾಚಿಕೊಳ್ಳುತ್ತಿದ್ದ ಸುಪ್ರಸಿದ್ಧ ಡ್ಯಾನ್ಸರ್. ದುರ್ದೈವವೆಂದರೆ 'ಫೈಬ್ರೋಯ್ಡ್' ಎಂಬ ಗಂಟಿಗೆ ಆಕೆಯ ಗರ್ಭಕೋಶವೇ ಬೇಕಿತ್ತು. ವೈದ್ಯರು ತಮ್ಮ ತಪಾಸಣೆಯಲ್ಲಿ ರೋಗವನ್ನೇನೋ ಪತ್ತೆ ಹಚ್ಚಿದರು. ಆದರೆ ಅದರ ನಿವಾರಣೆಗೆ ಆಪರೇಶನ್ ಮಾಡುವುದು ಅನಿವಾರ್ಯವಾಗಿತ್ತು. ಚಿಕಿತ್ಸೆಯಿಂದ ಕಿಬ್ಬೊಟ್ಟೆಯ ಕೆಳಗೆ ಕಲೆ ಉಳಿದು ತನ್ನ ಸೌಂದರ್ಯ ಶಿಥಿಲಗೊಳ್ಳುವುದೆಂಬ ಆತಂಕ ಆ ಚೆಲುವೆಯದು. ಮುಕ್ಕಾದ ಸೌಂದರ್ಯ ಅವಳ ನೃತ್ಯದ ಬೇಡಿಕೆಯನ್ನು ತಗ್ಗಿಸುವುದೆಂಬ ಹಿನ್ನೆಲೆಯಲ್ಲಿ ಅವಳ ಕಳವಳ ಸಕಾರಣವಾಗಿಯೇ ಇತ್ತು. ಆದರೆ ವೈದ್ಯರ ಪಾಳೆಯದಲ್ಲಿ ಅಸಹಾಯಕತೆ.

ಇದೆಲ್ಲ ನಿನ್ನೆಯವರೆಗಿನ ಕಥೆಯಾಯ್ತು. ಇಂದು ವೈದ್ಯಕೀಯ ವಿಜ್ಞಾನ ಮಹತ್ವದ ಹೆಜ್ಜೆಯೊಂದನ್ನು ಮುಂದೆ ಇರಿಸಿದೆ. ಅದರ ಪ್ರತಿಫಲವಾಗಿ ದೇಹದ ಅಂದಕ್ಕೆ ಕುಂದನ್ನುಂಟು ಮಾಡದೇ ಶಸ್ತ್ರಕ್ರಿಯೆ ನೆರವೇರಿಸಿ ಅಂದೇ ಮನೆಗೂ ಕಳಿಸಲು ಸಾಧ್ಯವಾಗಿಸುವ ಅಸ್ತ್ರವೊಂದು ವೈದ್ಯರ ಬತ್ತಳಿಕೆಯಲ್ಲಿ ಸೇರಿಕೊಂಡಿದೆ.

ಅದು ವಿಡಿಯೋ ಲೇಸರೋಸ್ಕೋಪಿ.


ಈ ಹೊಸ ವಿಧಾನ ಉದರದರ್ಶಕ ಹಾಗೂ ಲೇಸರ್ ಚಿಕಿತ್ಸೆಯ ಸಂಯೋಜಿತ ರೂಪವಾಗಿದೆ. ಸ್ಕ್ಯಾನರ್ ಸಂಶೋಧನೆಯಿಂದ ಅಡಿಯಿಂದ ಮುಡಿಯವರೆಗೆ ಇಡೀ ದೇಹವನ್ನು ಯಾವ ಅಡ್ಡ ಪರಿಣಾಮಗಳಿಗೂ ಒಡ್ಡದೆ ಸಮೀಕ್ಷೆ ನಡೆಸಬಹುದಾಗಿದೆ. ಇದರೊಂದಿಗೆ ಜತೆಗೂಡಿ ಮಾನವನ ಆರೋಗ್ಯ ರಕ್ಷಣೆಗೆ ಮುಂದಾದದ್ದು ಲೇಸರ್ ಚಿಕಿತ್ಸೆ. ನಿರ್ದಿಷ್ಟವಾಗಿ ಗುರುತಿಸಿದ ದೇಹದೊಳಗಿನ ಭಾಗವನ್ನು ನಿಖರವಾಗಿ ಕತ್ತರಿಸುವುದನ್ನು ಲೇಸರ್ ಚಿಕಿತ್ಸೆ ಸಾಧ್ಯವಾಗಿಸುತ್ತದೆ.

ಅನಾರೋಗ್ಯಕ್ಕೆ ಕಾರಣವಾದ ರೋಗಮೂಲ

ಡಾ. ಕರವೀರಪ್ರಭು ಕ್ಯಾಲಕೊಂಡ

ದೇಹದ ಯಾವ ಭಾಗದಲ್ಲಿ ಅಡಗಿ ಕುಳಿತಿದೆ ಎಂಬುದನ್ನು ಶೋಧಿಸಿದ ತಕ್ಷಣ ಶಸ್ತ್ರಕ್ರಿಯೆಯ ಸಲಕರಣೆಗಳನ್ನು ಸುಕೋಮಲ ದೇಹದೊಳಗೆ ತೂರಿಸಿ ಪರಿಹಾರ ಕಂಡುಹಿಡಿಯುವ ವಿಧಾನ ಮಾತ್ರ ಗೊತ್ತಿದ್ದ ವೈದ್ಯರು ವಿಡಿಯೋ ಲೇಸರೋಸ್ಕೋಪಿಯಿಂದ ಪುಳಕಗೊಂಡಿದ್ದಾರೆ. ರೋಗಿಗಳೂ ಅಪಾರ ನೋವು, ಅಳಿಸಲಾಗದ ಕಲೆಯನ್ನು ಬಳುವಳಿಯಾಗಿ ಪಡೆದು ಜೋಲು ಮೋರೆಯೊಂದಿಗೆ ಆಸ್ಪತ್ರೆಗಳಿಂದ ಹಿಂದಿರುಗಬೇಕಿಲ್ಲ.

ಔಷಧೋಪಚಾರಕ್ಕೆ ಬಗ್ಗದ ರೋಗರುಜಿನಗಳನ್ನು ದಮನ ಮಾಡಲು ಇದುವರೆಗೂ ಬಳಕೆಯಲ್ಲಿದ್ದ ಶಸ್ತ್ರಕ್ರಿಯೆಗೆ ಹೊಸದೊಂದು ಆಯಾಮವನ್ನು ನೀಡಿದ ಶ್ರೇಯಸ್ಸು ಡಾ. ಕಾಮ್ರಾನ್



ನೆಜಹಾಟ್‌ರಿಗೆ ಸಲ್ಲುತ್ತದೆ. ಎರಡು ದಶಕಗಳಷ್ಟು ಹಿಂದೆಯೇ ಯುರೋಪ್ ಹಾಗೂ ಇಸ್ರೇಲ್‌ನ ಸರ್ಜನ್ ವಲಯದಲ್ಲಿ ಸಾಂಪ್ರದಾಯಕ ಉದರ ದರ್ಶಕದೊಂದಿಗೆ ಲೇಸರ್ ಚಿಕಿತ್ಸೆಯನ್ನು ಬೆಸೆಯುವ ನೂತನ ವಿಚಾರವೊಂದು ಜನಿಸಿತ್ತು. ಆದರೆ ಹಲವಾರು ಪ್ರಾಯೋಗಿಕ ತೊಡಕುಗಳ ದೆಸೆಯಿಂದಾಗಿ ಆ ವಿಚಾರ ತಲೆಯೆತ್ತಲು ಸಾಧ್ಯವಾಗಲಿಲ್ಲ. ಹೊತ್ತಿಗೆಯಲ್ಲಿ ಹೂತಿದ್ದ ಈ ವಿಚಾರವೇ ಡಾ. ಕಾಮ್ರೇನ್‌ರ ಚಿತ್ತಕ್ಕೆ ಚೇತನ ನೀಡಿತು. ಕಾರ್ಯೋನ್ಮುಖರಾದರು. ಆ ತಂತ್ರಕ್ಕೆ ಮೋಹಿತರಾದ ಕಾಮ್ರೇನ್‌ರಿಗೆ ಅಡ್ಡಗಾಲೊಡೆದು ತಡೆಯಲು ಹಲವಾರು ತೊಡರುಗಳು ಸಿದ್ಧವಾಗಿ ನಿಂತಿದ್ದವು.

ಒಂದು ಕಣ್ಣು ಮುಚ್ಚಿ ಇನ್ನೊಂದು ಕಣ್ಣನ್ನು ಸ್ಕೋಪಿನಲ್ಲಿ ಹುದುಗಿಸಿ ವೀಕ್ಷಿಸುವುದು ಮತ್ತು ರೋಗಿಯ ಮೇಲೆ ಒರಗಿ ಶಸ್ತ್ರಕ್ರಿಯೆ ನೆರವೇರಿಸುವುದು ಹೀಗೆ ಎರಡೂ ಚಟುವಟಿಕೆ ಏಕಕಾಲಕ್ಕೆ ನಡೆಯಬೇಕಿತ್ತು. ಶಸ್ತ್ರಚಿಕಿತ್ಸಕನಿಗೆ ಕಟ್ಟಿಹಾಕಿದಂತೆ ಭಾಸವಾಗುತ್ತಿತ್ತು. ಇಂಥ ತಾಂತ್ರಿಕ ತೊಡರುಗಳಿಗೆ ವಿದಾಯ ಹೇಳಿದ್ದು 1987ರಲ್ಲಿ. ಆಗ ಈ ವಿಧಾನದಲ್ಲಿ ಭಾರಿ ಬದಲಾವಣೆ ಮಾಡಿ ಪ್ರಯೋಜನವನ್ನು ಹೆಚ್ಚಿಸಲಾಯಿತು. ಸ್ಕೋಪಿಗೆ ಕ್ಯಾಮರಾ ಜೋಡಿಸಿದ್ದರಿಂದ ಶಸ್ತ್ರಚಿಕಿತ್ಸಕ ರೋಗಿಯ ಪಕ್ಕದಲ್ಲಿ ನೆಮ್ಮದಿಯಿಂದ ನಿಂತು ಎರಡೂ ಕಣ್ಣುಗಳಿಂದ ನೋಡುವ ಅವಕಾಶ ಉಂಟಾಯಿತು. ಬರಿಗಣ್ಣಿಗೆ ಕಾಣದ್ದನ್ನು ವರ್ಧಕದ ಸಹಾಯದಿಂದ ಸವಿಸ್ತಾರವಾಗಿ ವೀಕ್ಷಿಸುವುದಕ್ಕೂ ಸಮಸ್ಯೆಗಳನ್ನು ಹುಡುಕಿ ತೆಗೆಯಲಿಕ್ಕೂ ಅನುಕೂಲವಾಯಿತು.

ಒಬ್ಬ ಹೆಣ್ಣುಮಗಳಿಗೆ ಗರ್ಭದೋಳ್ಪರೆ ಬೇನೆ ಗಂಟು ಬಿದ್ದಿತ್ತು. ಬಂಜೆ ಎಂಬ ನಿಂದನೆಗೆ ಗುರಿಯಾಗಲಿಚ್ಛಿಸದ ಆಕೆ ಪರಿಹಾರ ಕಂಡುಕೊಳ್ಳುವ ಛಲ ತೊಟ್ಟಳು. ಒಮ್ಮೆಯಲ್ಲ ಎರಡು ಸಾರೆ ಶಸ್ತ್ರಕ್ರಿಯೆಗೆ ಒಳಗಾದದ್ದೂ ವಿಫಲವಾಗಿ ದಿಕ್ಕು ತೋಚದಂತಾಯ್ತು. ''ಮಕ್ಕಳಾಗುವ ಭಾಗ್ಯ ನಿನ್ನಲ್ಲಿ ಇಲ್ಲ. ನೀನಾದರೂ ಬದುಕಿ ಉಳಿ

ಯಲು, ನೋವಿನಿಂದ ಮುಕ್ತಳಾಗಲು ಗರ್ಭ ಕೋಶ ತೆಗೆಯುವುದೊಂದೇ ಸುರಕ್ಷಿತ ಮಾರ್ಗ'' ಎಂದು ತರ್ಕಿಸಿದ ವೈದ್ಯರು ಕೈ ಚೆಲ್ಲಿ ಕೂತರು. ಆಸೆಯ ಕೊನೆಯ ಎಳೆಯನ್ನು ಅನುಸರಿಸಿ ಸಾಗಿದ ಆಕೆ ಡಾ. ಕಾಮ್ರಾನ್ ನೆಜಹಾಟ್ ಅವರಿಗೆ ಮೊರೆ ಹೋದಳು.

ಡಾ. ಕಾಮ್ರಾನ್ 'ಸ್ಕಾಲ್ಪೆಲ್' ಬಳಸಲಿಲ್ಲ. ಕಿಬ್ಬೊಟ್ಟೆಯ ಮೇಲೆ ಏಳು ಇಂಚು ಉದ್ದನೆಯ ಗಾಯ ಮಾಡಲಿಲ್ಲ. ಸ್ಥಳೀಯ ಅರಿವಳಿಕೆ (Local anaesthesia)ಯನ್ನು ಇಂಜೆಕ್ಷನ್ ಮೂಲಕ ನೀಡಿ, ಟ್ರೋಕಾರ್ ಹಾಕಿ ಚಿಕ್ಕ ಗಾಯ ಮಾಡಿದರು. ಅದರ ಮುಖಾಂತರ ವಿಡಿಯೋ ಲೇಸರೋಸ್ಕೋಪ್‌ನ್ನು ಒಳ ಸೇರಿಸಿ; ಪೀರಿಕೆಯ ತುದಿಯನ್ನು, 'ಗ್ರಾಸ್ಪರ್'ದ ಕೊನೆಯನ್ನು ತಳಹೊಟ್ಟೆಯಲ್ಲಿ ತೂರಿಸಿ ಕ್ಯಾಮರಾಗೆ ಜೋಡಿಸಿದರು. ಇದು ಚಿಕಿತ್ಸೆಗೆ ಮುಂಚಿನ ತಯಾರಿಯ ಮೊದಲ ಹಂತ.

ಶಸ್ತ್ರಚಿಕಿತ್ಸೆಯ ಎರಡನೇ ಹಂತದಲ್ಲಿ ದೇಹದ ಉದ್ದೇಶಿತ ಭಾಗಗಳೆಲ್ಲ ಟಿ.ವಿ. ಪರದೆಯ ಮೇಲೆ ಆಕಾರ ಪಡೆದವು. ಈಗ ವೈದ್ಯರ ಪರಿಣತ ಬೆರಳುಗಳು ಆಡತೊಡಗಿದವು. ದೃಷ್ಟಿ ಮಾತ್ರ ಪರದೆಯ ಮೇಲೆ ಮೂಡಿದ ಭಾಗಗಳೆಡೆ ಕೇಂದ್ರೀಕೃತ. ಒಡಲ ಒಳಾವರಣವನ್ನು ಸೂಕ್ಷ್ಮಾತಿಸೂಕ್ಷ್ಮವಾಗಿ ಸಮೀಕ್ಷಿಸಲಾಯ್ತು. ಕರಳುಗಳು ಒಂದಕ್ಕೊಂದು ಅಂಟಿಕೊಂಡಿವೆಯೋ ಅಥವಾ ಬೇರೆ ಅಂಗಾಂಗಗಳ ಜೊತೆಗೆ ಬೆಸದುಕೊಂಡಿವೆಯೋ ಮುಂತಾದ ಪರಿಶೀಲನೆಗಳು ಜರುಗಿದವು. ನಂತರ ಲೇಸರ್ ಮುಖಾಂತರ ನೆರವೇರಿಸಿದ ಶಸ್ತ್ರಚಿಕಿತ್ಸೆ ಅಪೇಕ್ಷಿಸಿದ್ದು ಕೇವಲ ತೊಂಭತ್ತು ನಿಮಿಷಗಳ ಅವಧಿ! ಅವಳು ವಾರ್ಡಿನ ಹಾಸಿಗೆಯ ಮೇಲೆ ಮಲಗಿದಳು. ರಕ್ತದ ಶೀಶೆ ಹಚ್ಚುವ ಅಗತ್ಯವಿರಲಿಲ್ಲ. ಐದಾರು ತಾಸಿನ ನಂತರ ಪರೀಕ್ಷೆ ಮಾಡಿಸಿಕೊಂಡು ಮನೆಗೂ ಹೋದಳೆಂದರೆ ನೀವು ನಂಬುತ್ತೀರಾ? ಅಷ್ಟೇ ಅಲ್ಲ ಒಂದು ವಾರದ ವಿಶ್ರಾಂತಿಯ ತರುವಾಯ ಯಥಾಪ್ರಕಾರ ಕೆಲಸ ಮಾಡತೊಡಗಿದಳು. ಮುಂದೆ ಗರ್ಭಿಣಿಯೂ ಆಗಿ 'ಹಾಸುಂಡು ಬೀಸಿ ಒಗೆದಂಥ ಬಂಜೆ ಬದುಕ'ನ್ನೂ ನೀಗಿಕೊಂಡಳು.

ರಜತಪರದೆಯ ಮೇಲೆ ಮೂಡುವ ನಿರ್ಜೀವ ಪಾತ್ರಗಳ ಕಲ್ಪಿತ ಕತೆಯಂತೆ ಕಾಣಿಸುವ ಈ ಘಟನೆಯನ್ನು ನಿಜವಾಗಿಸಿದ್ದು ವಿಡಿಯೋ ಲೇಸರೋಸ್ಕೋಪಿ.

ಡಾ. ಕಾಮ್ರಾನ್ ಇಷ್ಟಕ್ಕೇ ಸಂತುಷ್ಟರಾಗಿ ವಿರಾಮ ಪಡೆಯಲಿಲ್ಲ. ವಿವಿಧ ಶಸ್ತ್ರಚಿಕಿತ್ಸೆಗಳಿಗೂ ಈ ತಂತ್ರವನ್ನೇ ಅಳವಡಿಸಿದರು. ರೋಗಿಷ್ಟ ಅಪೆಂಡಿಕ್ಸ್, ಪಿತ್ತಕೋಶಗಳನ್ನೂ ಕೊಯ್ದು ಹಾಕಲು ಈ ವಿಧಾನ ಸಹಾಯಕ್ಕೆ ಬಂತು. ಸ್ತ್ರೀರೋಗ ತಜ್ಞರ ಶಸ್ತ್ರಕ್ರಿಯೆ ಕ್ಷೇತ್ರಕ್ಕಂತೂ ಇದೊಂದು ಅದ್ಭುತ ವರದಾನವಾಗಿ ಪರಿಣಮಿಸಿದೆ. ಗರ್ಭದೊಳ್ಪರೆ ಬೇನೆಯಿಂದ ನರಳುವವರು ಈ ತಂತ್ರದಿಂದ ಶಸ್ತ್ರಚಿಕಿತ್ಸೆಗೊಳಪಟ್ಟಾಗ ಯಾವ ಅಡ್ಡಪರಿಣಾಮಗಳಿಗೂ ಆಸ್ಪದವಿಲ್ಲದೆ ಯಾತನೆಯಿಂದ ಬಿಡುಗಡೆ ಪಡೆಯಬಹುದಾಗಿದೆ. ಅಲ್ಲದೆ ಗರ್ಭ ಧರಿಸಲೂ ಸಾಧ್ಯ.

ಇನ್ನು, ಆರ್ಥಿಕ ದೃಷ್ಟಿಯಿಂದ ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆ ಹಾಗೂ ವಿಡಿಯೋ ಲೇಸರೋಸ್ಕೋಪಿ ಚಿಕಿತ್ಸೆಗಳಲ್ಲಿ ಯಾವುದು ಹೆಚ್ಚು ಮಿತವ್ಯಯಕಾರಿ?

ಪರ್ಮಿಂಗ್‌ಟನ್ ವಿಶ್ವವಿದ್ಯಾಲಯದ ವೈದ್ಯಕೀಯ ವಿಭಾಗ ಅಧ್ಯಯನ ಕೈಗೊಂಡು ಪ್ರತಿ ಪದ್ಧತಿಯಲ್ಲೂ ಮೂವತ್ತು ರೋಗಿಗಳಿಗೆ ಚಿಕಿತ್ಸೆ ನೀಡಲಾಯಿತು. ಈ ಅಧ್ಯಯನದಿಂದ ಹೊರಬಿದ್ದ ಸ್ಫಟಿಕದಷ್ಟೇ ಸ್ಪಷ್ಟವಾದ ಅಂಶವೆಂದರೆ ಹಣ, ಸಮಯ ಎರಡೂ ದೃಷ್ಟಿಯಿಂದ ವಿಡಿಯೋ ಲೇಸರೋಸ್ಕೋಪಿ ಹೆಚ್ಚು ಮಿತವ್ಯಯಕಾರಿ ಎಂಬುದು.


ಡಾ. ಕಾಮ್ರಾನ್‌ರ ಪ್ರಯೋಗಗಳ ಫಲಿತಾಂಶಗಳಿಂದ ಡಾ. ಅಕಾಯಿ ವಕಾಬಾಯಸಿ ಪ್ರಭಾವಿತರಾದರು. ಅವರು ಕ್ಯಾಲಿಫೋರ್ನಿಯಾದ ಇರ್ವಿನ್ ಬ್ಯಾಕ್‌ಮನ್ ಲೇಸರ್ ಇನ್‌ಸ್ಟಿಟ್ಯೂಟ್‌ನಲ್ಲಿ ಎದೆ ರೋಗ ಶಸ್ತ್ರಚಿಕಿತ್ಸಕರು. ಮೇಜರ್

ಆಪರೇಶನ್ ಅನಿವಾರ್ಯವೆಂದು ಭಾವಿಸಲಾಗಿದ್ದ ಪುಪ್ಪುಸಕ್ಕೆ ಸಂಬಂಧಿಸಿದ ಎರಡು ಪ್ರಕರಣಗಳಲ್ಲಿ ಅವರು ವಿಡಿಯೋ ಲೇಸರೋಸ್ಕೊಪಿ ತಂತ್ರ ಬಳಸಿ ಯಶ ಪಡೆದಿದ್ದಾರೆ.

ಅವರು ನಿಭಾಯಿಸಿದ ಮೊದಲ ಪ್ರಕರಣವೆಂದರೆ ನ್ಯೂಮೋಥೊರ್ರ್ಯಾಕ್ಸ್. ಪುಪ್ಪುಸದ ಹೊರಾವರಣದಲ್ಲಿಯ ಪೂತಿ ಕೋಶ (cyst) ಅಥವಾ ಬೊಬ್ಬೆ ಒಡೆಯುವುದರಿಂದ ವಾಯು ಒಸರಲಾರಂಭಿಸುತ್ತದೆ. ಹೀಗೆ ಒಸರಿದ ವಾಯು ಪುಪ್ಪುಸ ಮತ್ತು ಪುಪ್ಪುಸದ ಮೇಲ್ಹೊದಿಯಾದ ಪಕ್ಕ ಪೊರೆ (Pleura)ನಡುವೆ ಸಂಗ್ರಹವಾಗುವುದು. 'ನ್ಯೂಮೋಥೊರ್ರ್ಯಾಕ್ಸ್' ಎಂದು ಕರೆಯಲಾಗುವ ಈ ಸ್ಥಿತಿಯಿಂದ ವಾಯು ಪುಪ್ಪುಸಗಳ ಮೇಲೆ ಒತ್ತಡ ಹೇರುತ್ತದೆ. ಪರಿಣಾಮವಾಗಿ ಶ್ವಾಸೋಚ್ಛ್ವಾಸದ ಸಮಯದಲ್ಲಿ ಪುಪ್ಪುಸಗಳ ಹಿಗ್ಗುವಿಕೆಗೆ ಅಡ್ಡಿಯುಂಟಾಗಿ ಉಸಿರಾಟ ತ್ವರಿತಗೊಳ್ಳುತ್ತದೆ. ಏದುಸಿರಿನಿಂದ ನರಳುವ ಇಂಥ ರೋಗಿಯ ಎದೆಗೂಡನ್ನು ತೆರೆದು ಹಾನಿಗೊಳಗಾದ ಕಣ ಜಾಲವನ್ನು ಕತ್ತರಿಸಿ ಹೊಲಿಗೆ ಹಾಕುವುದು ಸಾಂಪ್ರದಾಯಿಕ ಚಿಕಿತ್ಸೆಯಾಗಿತ್ತು. ಇದಕ್ಕೆ ಪರ್ಯಾಯವಾಗಿ ನವೀನ ವಿಧಾನ ಬಳಸಿದ ಡಾ. ಅಕಾಯಿ ಎರಡು ಪಕ್ಕೆಲುಬುಗಳ ನಡುವೆ ವಿಡಿಯೋ ಲೇಸರೋಸ್ಕೊಪಿಯನ್ನು ತೂರಿಸಿ ಹಾನಿಗೊಳಗಾದ ಅಂಗ, ಅಂಗಾಂಶ, ಕಣಜಾಲಗಳ ದುರಸ್ತಿಯನ್ನು ಲೇಸರ್ ಮೂಲಕ ಮಾಡಿ ಮುಗಿಸಿದರು. ಚರ್ಮದ ಮೇಲೆ 'ಹ್ಯಾಂಡಿ ಪ್ಲಾಸ್ಟಿ' ಹಚ್ಚಿಸಿಕೊಂಡು ಮನೆಗೆ ತೆರಳಿದ ರೋಗಿಗೆ ಮುಂದೆ ಯಾವ ತೊಂದರೆಯೂ ಕಾಡಲಿಲ್ಲ. ಹೀಗೆ ಪ್ರಯೋಗಕ್ಕೊಳಗಾದ ಹಲವಾರು ರೋಗಿಗಳು ತ್ವರಿತಗತಿಯಲ್ಲಿ ಗುಣಮುಖರಾದರು.

ಡಾ. ಅಕಾಯಿ ಅವರು ವಿಡಿಯೋ ಲೇಸರೋಸ್ಕೊಪಿ ಉಪಯೋಗಿಸಿದ ಎರಡನೆಯ ಪ್ರಕರಣ 'ಬುಲ್ಲಸ್ ಎಂಪಿಸಿಮಾ' ಎಂದು ಕರೆಯಲಾಗುವ ರೋಗವೊಂದಕ್ಕೆ ಸಂಬಂಧಿಸಿದುದು. ಇಂಥ ರೋಗಿಯ ಎದೆ ಗೂಡು ಬ್ಯಾರಲ್ಲಿನಂತೆ ಉಬ್ಬಿಕೊಂಡಿರುತ್ತದೆ. ಒಳಸೇರಿದ ಹವೆಯನ್ನು ಹೊರ ಹಾಕಲು ಎಷ್ಟೇ ಹೆಣಗಿದರೂ ಸಾಧ್ಯವಾಗದೆ ಪುಪ್ಪುಸದಲ್ಲಿಯೇ ಉಳಿಯುವುದರಿಂದ ಉಸಿರಾಡುವಾಗ ತಾಜಾ ಹವೆ ಒಳಗೆ ಹೋಗಲು ಅಡ್ಡಿಯಾಗುತ್ತದೆ. ರೋಗಿ ಹವೆ ಸೇವಿಸಲು ಹಾತೊರೆಯುತ್ತಾನೆ. ಪ್ರಾಣಾಂತಿಕವಾಗಿ ಬಾಯಿ ಬಾಯಿ ಬಿಡುತ್ತಾನೆ. ಪ್ರತಿವರ್ಷ ಕನಿಷ್ಠ 20,000 ಜನರ ಪ್ರಾಣಪಕ್ಷಿಗಳನ್ನು ಹಾರಿಸಿಕೊಂಡು ಹೋಗುವ ಈ ಭೀಕರ ರೋಗಕ್ಕೆ ಈಡಾದವರನ್ನು ಪಾರು ಮಾಡಲು ಇದುವರೆಗೆ ವೈದ್ಯರಲ್ಲಿ ಉಪಾಯಗಳಿರಲಿಲ್ಲ. ಆದರೆ ಡಾ. ಅಕಾಯಿ ಅವರು ವಿಡಿಯೋ ಲೇಸರೋಸ್ಕೊಪಿಯ ಬಾಣ ಪ್ರಯೋಗಿಸಿ 'ಬುಲ್ಲಸ್ ಎಂಪಿಸಿಮಾ'ದ ಮೇಲೂ ವಿಜಯ ಸಾಧಿಸಿದ್ದಾರೆ.

ಕರಳು ಬಾಲದುರಿತ, ಪಿತ್ತಕೋಶದ ಕಲ್ಲು



ಅವಳೆದೆಯ ಕನಸ ಹಕ್ಕಿ
ಕಣ್ಣೆವೆಯ ಗೂಡು ತೊರೆದ
ರಾತ್ರಿ
ತೊಟ್ಟು ಕಳಚಿ ಉದುರುತ್ತಾನೆ
ಆಗಸದ ಚಂದಿರ.

'ತಿಂಗಳೇಶ'

ಗಳು, ಗರ್ಭಕೋಶದೊಳ್ಪರೆಯುರಿತ, ಗರ್ಭಕೋಶದ ಗಂಟುಗಳು, ಹೊರಬಸಿರು (Ectopic Pregnancy), ಪುಪ್ಪುಸದ ಬೇನೆಗಳಿಗೆ ಪರಿಣಾಮಕಾರಿ ಪರಿಹಾರವಾಗಿ ಗೋಚರಿಸಿರುವ ವಿಡಿಯೋ ಲೇಸರೋಸ್ಕೊಪಿ ವಿಧಾನ ರೋಗಿಗಳ ವೇಳೆ, ಹಣ, ರಕ್ತ, ಪ್ರಾಣ ಉಳಿಸಲು ಸಜ್ಜಾಗಿ ನಿಂತಿದೆ. ತುಸು ಬೇಸರದ ಸಂಗತಿಯೆಂದರೆ, ವಿಡಿಯೋ ಲೇಸರೋಸ್ಕೊಪಿ ಶಸ್ತ್ರಕ್ರಿಯೆ ನಡೆಸುವ ತಜ್ಞ ವೈದ್ಯರು ಜಗತ್ತಿನಾದ್ಯಂತ ಕೇವಲ ಬೆರಳೆಣಿಕೆಯಷ್ಟು ಮಾತ್ರ ಇದ್ದಾರೆ. ಭಾರತದಲ್ಲಂತೂ ಇಲ್ಲವೆಂದೇ ಹೇಳಬೇಕು. ಶಸ್ತ್ರಕ್ರಿಯೆಯಲ್ಲಿ ಕ್ರಾಂತಿಯನ್ನೇ ಉಂಟುಮಾಡಿರುವ ಈ ವಿಧಾನ ಹೆಚ್ಚು ವ್ಯಾಪಕ ಬಳಕೆಗೆ ನಿಲುಕುವಂತಾಗುವ ದಿನಗಳಿಗಾಗಿ ಕನಸುಗಣ್ಣುಗಳಿಂದ ಎದುರು ನೋಡಬೇಕಾಗಿದೆ.

ನಿನ್ನೆ ಆಗಸದಲ್ಲಿ ಕಡು ಕತ್ತಲಿತ್ತು. ಇಂದು ಭರವಸೆಯ ಚುಕ್ಕೆಯೊಂದು ಮಿನುಗುತ್ತಿದೆ. ನಾಳೆ ಆ ಚುಕ್ಕೆ ನಮ್ಮೆಲ್ಲರ ಕೈಗೆಟಕುವಷ್ಟು ಹತ್ತಿರವೇ ಸಾಗಿ ಬಂದೀತು!

ನಮ್ರತೆ ಬಲವನ್ನು ಗೆಲ್ಲುತ್ತದೆ

ಚಾಂಗ್‌ಟೌಂಗ್ ಬಹಳ ಖಾಯಿಲೆಯಿಂದ ಮಲಗಿದ್ದರು. ಲೌಟ್ಸೆ (Loutse) ಆತನನ್ನು ಕಾಣಲು ಹೋದರು.

''ತಾವು ಬಹಳ ಸುಸ್ತಾಗಿದ್ದೀರಿ! ಶಿಷ್ಯನಿಗೆ ಹೇಳುವುದು ಏನಾದರೂ ಇದೆಯೆ?'' ಲೌಟ್ಸೆ ಕೇಳಿದರು.

''ನೀನು ನನ್ನನ್ನು ಕೇಳದಿದ್ದರೂ, ನಾನೇ ಹೇಳುತ್ತಿದ್ದೆ'' ಎಂದರು ಗುರು ಚಾಂಗ್‌ಟೌಂಗ್.

''ತನ್ನ ಹುಟ್ಟಿದೂರಿಗೆ ಅಥವಾ ಹಳ್ಳಿಗೆ ಬರುವಾಗ ಇಳಿದು ಏಕೆ ನಡೆದು ಬರಬೇಕು?''

''ನಾವು ನಮ್ಮ ಸಂಸ್ಕೃತಿಯನ್ನು ಮರೆಯಬಾರದು ಎಂದಲ್ಲವ'' ಲೌಟ್ಸೆ ಉತ್ತರಿಸಿದರು.

''ಹಾಂ ಸರಿ. ದೊಡ್ಡ ಎತ್ತರವಾಗಿರುವ ಮರದ ಕೆಳಗೆ ಹೋಗುವಾಗ ಏಕೆ ಓಡಬೇಕು?''

''ನಮ್ಮ ಹಿರಿಯರನ್ನು ಗೌರವಿಸಬೇಕು ಎಂಬುದೇ ಇದರರ್ಥ.''

''ಆಹಾ! ಸರಿಯಾದ ಉತ್ತರ'' ಎಂದರು ಗುರುಗಳು. ಚಾಂಗ್‌ಟೌಂಗ್ ತನ್ನ ಬಾಯನ್ನು ಅಗಲವಾಗಿ ತೆರೆದು ಲೌಟ್ಸೆಯನ್ನು ಅದರೊಳಗೆ ''ನೋಡು ಬಾ'' ಎಂದರು.

''ನನ್ನ ನಾಲಿಗೆ ಇನ್ನೂ ಇದೆಯಾ?''

''ಹೌದು, ಇದೆ.''

''ನನ್ನ ಹಲ್ಲುಗಳು ಇವೆಯೆ?''

''ಇಲ್ಲ.''

''ಏಕೆ ಗೊತ್ತೆ?'' ವೃದ್ಧ ಮಹಾಶಯರು ಕೇಳಿದರು.

''ಗೊತ್ತು. ನಾಲಿಗೆ ಮೃದುವಾಗಿರುವುದರಿಂದ ಬಹಳ ದಿನ ಬಾಳುತ್ತದೆ. ಹಲ್ಲುಗಳು ಬಹಳ ಗಟ್ಟಿ. ಕಠಿಣವಾಗಿರುವುದರಿಂದ ಅವು ಬೇಗ ಉದುರಿ ಹೋಗುತ್ತವೆ ಅಲ್ಲವೆ?'' ಲೌಟ್ಸೆ ಉತ್ತರಿಸಿದರು.

''ಹಾಂ. ಹೌದು. ಈ ಪ್ರಪಂಚದಲ್ಲಿ ತಿಳಿಯಬೇಕಾದ ಮೂಲ ತತ್ವಗಳನ್ನೆಲ್ಲಾ ತಿಳಿದಿರುವೆ. ಇನ್ನು ನಾನು ನಿನಗೆ ಹೇಳಿ ಕೊಡಬೇಕಾದ್ದು ಏನೂ ಉಳಿದಿಲ್ಲ'' ಚಾಂಗ್‌ಟೌಂಗ್ ಸಮಾಧಾನದ ಉಸಿರನ್ನೆಳೆದರು.

(ಆಧಾರ) **ಕಲಾ**

ಕೊಲೆಗಡಕ ವಿಜ್ಞಾನಿಯಾದ

1916ರಿಂದ ಈಚಿನ 43 ವರ್ಷಗಳಲ್ಲಿ ಇನ್ನೊಬ್ಬ ಮನುಷ್ಯನ ಜೊತೆ ಕುಳಿತು ಊಟ ಮಾಡದಿರುವ ಒಬ್ಬಾತ ಈಗಲೂ ಬದುಕಿದ್ದಾನೆ. ಈ ದೀರ್ಘ ಅವಧಿಯನ್ನು ಆತ ಒಬ್ಬಂಟಿಗನಾಗಿ ಒಂದು ಕೋಣೆಯಲ್ಲಿ ಕಳೆದಿದ್ದಾನೆ.

ಆತನ ಬಳಿ ಟೆಲಿವಿಜನ್ ಸೆಟ್ ಇಲ್ಲ. ರೇಡಿಯೋ ಇಲ್ಲ. ಆತ ಸಂಗೀತವನ್ನೂ ಕೇಳುವದಿಲ್ಲ; ಪತ್ರಿಕೆಗಳನ್ನೂ ಓದುವುದಿಲ್ಲ. ಹಾಗಿದ್ದರೂ ಆತ ಬುದ್ಧಿವಂತ. ಪ್ರಖ್ಯಾತನಾದೊಬ್ಬ ವಿಜ್ಞಾನಿ.

ಈ ಅದ್ಭುತ ಮನುಷ್ಯ ಇರುವುದು ಕ್ಯಾಲಿಫೋರ್ನಿಯಾದಲ್ಲಿ. ರಾತ್ರಿ ಕಾಲದಲ್ಲಿ ಪಶ್ಚಿಮ ಕರಾವಳಿಯಲ್ಲಿರುವ ಸಾನ್‌ಫ್ರಾನ್ಸಿಸ್ಕೊ ನಗರದ ದೀಪಗಳು ಅವನಿಗೆ ಗೋಚರವಾಗುತ್ತವೆ. ಅವನ ನಂಬರು 594. ಹೆಸರು ರಾಬರ್ಟ್ ಸ್ಟ್ರೌಡ್, ಅಲ್‌ಕಾಟ್ರಾಝುನಲ್ಲಿ ಇವನೊಬ್ಬ ಕೈದಿ.

ಗಂಗಾಧರ

ಈತನಿಗೆ ಈಗ 69 ವರ್ಷಗಳಾಗಿವೆ. ಜಗತ್ತಿನಲ್ಲಿಯೇ ಅತಿ ಹೆಚ್ಚು ಕಾಲ ಸೆರೆಮನೆಯಲ್ಲಿ ಕಳೆದಿರುವವರಲ್ಲಿ ಈತನೇ ಅಗ್ರಗಣ್ಯನಾಗಿರಬಹುದು. 1909ರಲ್ಲಿ ಬಂಧಿತನಾದ ಈತ ಇನ್ನೂ ಸೆರೆಮನೆಯಲ್ಲಿಯೇ ಇದ್ದಾನೆ. 42 ವರ್ಷಗಳ ಕಾಲ ಏಕಾಂತ ಶಿಕ್ಷೆಯನ್ನನುಭವಿಸಿದ್ದಾನೆ. ಇಷ್ಟು ದೀರ್ಘಕಾಲ ಏಕಾಂತ ಶಿಕ್ಷೆಯನ್ನು ಅನುಭವಿಸಿದವರು ಇನ್ನಾರೂ ಈ ಆಧುನಿಕ ಯುಗದಲ್ಲಿಲ್ಲ.

ಯಾರು ಈ ಸ್ಟ್ರೌಡ್? ಇವನಿಗೆ ಏಕಾಂತ ವಾಸದ ಶಿಕ್ಷೆ ಆದದ್ದಾದರೂ ಏತಕ್ಕೆ?



1901ರಲ್ಲಿ ಮೂರನೆಯ ಇಯತ್ತೆಯಲ್ಲಿರುವಾಗಲೇ ಇವನ ಶಿಕ್ಷಣ ಮುಗಿಯಿತಾದರೂ ಇಂದಾತ ಲ್ಯಾಟಿನ್ ಭಾಷೆಯಲ್ಲಿರುವ ಸಿಸೆರೊನ ಗ್ರಂಥವನ್ನೂ, ಫ್ರೆಂಚ್ ಭಾಷೆಯಲ್ಲಿರುವ ವಿಕ್ಟರ್ ಹ್ಯೂಗೊನ ಪುಸ್ತಕಗಳನ್ನೂ ಭಾಷಾಂತರಿಸುತ್ತಾನೆ. ಹಕ್ಕಿಗಳ ರೋಗಗಳಲ್ಲಿ ಅದ್ಭುತ ಸಂಶೋಧನೆಗಳನ್ನು ಮಾಡಿ ಹಕ್ಕಿಗಳ ಬಗ್ಗೆ

ಏಪ್ರಿಲ್ 1959ರ ಸಂಚಿಕೆಯಿಂದ

ಒಂದು, ಸೆರೆಮನೆಯನ್ನು ಕುರಿತು ಇನ್ನೊಂದು ಪುಸ್ತಕವನ್ನೂ ಬರೆದಿದ್ದಾನೆ. ಈತ ಬರೆದ ಹಕ್ಕಿಗಳ ಮೇಲಿನ ಪುಸ್ತಕವು ಸಾರ್ವಜನಿಕ ವಾಚನಾಲಯಗಳಲ್ಲಿ ಓದಲ್ಪಡುತ್ತದೆ. ಸೆರೆಮನೆಯನ್ನು ಕುರಿತು ಬರೆದ ಪುಸ್ತಕ ವಾಶಿಂಗ್ಟನ್ನಿನ ಕಚೇರಿಯಲ್ಲಿ ಬೀಗಮುದ್ರೆಯಲ್ಲಿದೆ.

1909ರಲ್ಲಿ ಜೇಲಿಗೆ ಹೋದಾಗ ಬಾಬ್ ಸ್ಟ್ರೌಡ್ ಹತ್ತೊಂಬತ್ತು ವರ್ಷದ ಉಂಡಾಡಿ ಹುಡುಗನಾಗಿದ್ದ. ತನ್ನ ಪ್ರೇಯಸಿ ಕಿಟಿ ಎಂಬ ಹುಡುಗಿಯನ್ನು ಹೊಡೆದದ್ದಕ್ಕಾಗಿ ಅಲಾಸ್ಕಾದಲ್ಲಿಯ ಒಬ್ಬ ಮದ್ಯದಂಗಡಿಯವನನ್ನು ಗುಂಡಿಕ್ಕಿ ಕೊಂದಿದ್ದನಾತ. ಬಾಬ್ ಮತ್ತು ಕಿಟಿ ಇಬ್ಬರ ಮೇಲೂ ಕೊಲೆಯ ಆರೋಪ ಹೂರಿಸಲ್ಪಟ್ಟಿತು.

ಕೊಲೆಯ ಆರೋಪವನ್ನು ಸ್ಟ್ರೌಡ್ ಒಪ್ಪಿಕೊಂಡದ್ದರಿಂದ ಕಿಟಿ ಬಿಡುಗಡೆಯಾದಳು. ಸ್ಟ್ರೌಡ್‌ನಿಗೆ 12 ವರ್ಷ ಶಿಕ್ಷೆಯಾಯಿತು.

ಆಗಿನ ಕಾಲದಲ್ಲಿ ಜೇಲುವಾಸ ಕಠಿಣವಾಗಿತ್ತು. ಅಲ್ಲಿಯ ನಿಯಮಗಳು ಬಲು ಕಠೋರವಾಗಿದ್ದವು. ಈ ನಿರಕ್ಷರಿ ತರುಣ ಬಂಡೆದ್ದ. ಅಧಿಕಾರಿಗಳನ್ನು ಧಿಕ್ಕರಿಸಿದ. ಅವನ ಮೇಲೆ ಚಾಡಿ ಹೇಳಿದವನೊಬ್ಬನನ್ನು ಸ್ಟ್ರೌಡ್ ಚಾಕುವಿನಿಂದ ಇರಿದದ್ದರಿಂದ ಅವನನ್ನು ಕನ್ಸಾಸದ ಲೀವನ್ ವರ್ಥದಲ್ಲಿಯ ಫೆಡರಲ್ ಜೇಲಿಗೆ ಸ್ಥಳಾಂತರಿಸಿದರು.

ಒಂದು ದಿನ ಸ್ಟ್ರೌಡ್ ತನ್ನ ಸಹ ಕೈದಿಯೊಬ್ಬನನ್ನು ಗಣಿತ ವಿಷಯದ ಪ್ರಶ್ನೆಯೊಂದರಲ್ಲಿ ಸೋಲಿಸಿದ. ಸ್ಟ್ರೌಡ್‌ನ ಪ್ರತಿಭೆ ಎಚ್ಚತ್ತಿತು. ಅವನು ಸೆರೆಮನೆಯಲ್ಲಿಯೇ ಅಂಚೆ ಮೂಲಕ ಪಾಠಗಳನ್ನು ಹೇಳಿಸಿಕೊಂಡ. ಇಂಜನಿಯರಿಂಗ್ ಖಗೋಳ ವಿಜ್ಞಾನ ಮತ್ತು ಗಣಿತದ ಕ್ಯಾಲ್ಕುಲಸ್‌ನಲ್ಲಿ ಪ್ರಾವೀಣ್ಯವನ್ನು ಹೊಂದಿದ.

1916ರಲ್ಲಿ ಹೊಸತಾಗಿ ಬಂದಿದ್ದ ಕಾವಲುಗಾರನೊಬ್ಬನು ಊಟದ ಕಾಲದಲ್ಲಿ ಮಾತಾಡಿದ್ದಕ್ಕಾಗಿ ಸ್ಟ್ರೌಡ್‌ನಿಗೆ ಅವನನ್ನು ಕಾಣಲು ಬಂದ ಅವನ ತಮ್ಮನನ್ನು ಭೆಟ್ಟಿಯಾಗಗೊಡಲಿಲ್ಲ. ಆಗ ನಡೆದ ಜಗಳದಲ್ಲಿ 1100 ಕೈದಿಗಳೆದುರಿನಲ್ಲಿ ಸ್ಟ್ರೌಡ್ ಆ ಕಾವಲುಗಾರನನ್ನು ಕೊಂದ. ಆನಂತರ ಅವನನ್ನು ಏಕಾಂತ ಕೋಣೆಯಲ್ಲಿಟ್ಟರು.

ಸ್ಟ್ರೌಡ್ ಪ್ರತಿಭಟಿಸಿದ. ಪಾರಾಗಿ ಹೋಗಲು ಯತ್ನಿಸಿದ. ಅವನಿಗೆ ಇದ್ದ ಮಿತ್ರರೆಂದರೆ ಅವನ ತಾಯಿಯೊಬ್ಬಳೇ ಆಗಿದ್ದಳು. ಉಳಿದವರೆಲ್ಲ ಅವನನ್ನು ಮಹಾರೋಗದಂತೆ ದ್ವೇಷಿಸುತ್ತಿದ್ದರು.

ಮೂರು ಸಲ ವಿಚಾರಣೆ ನಡೆದು ಸ್ಟ್ರೌಡ್ ಅಪರಾಧಿಯೆಂದು ನಿರ್ಣಯವಾಗಿ ಅವನಿಗೆ ಗಲ್ಲಿನ ಶಿಕ್ಷೆ ವಿಧಿಸಲ್ಪಟ್ಟಿತು. ಅಪೀಲುಗಳು ತಿರಸ್ಕೃತವಾದವು. ಗಲ್ಲಿಗೆ ಹಾಕುವ ದಿನ ನಿಶ್ಚಯಿಸಲ್ಪಟ್ಟಿತು.

ಈ ವಿಚಾರಣೆಗಳು ಮುಗಿಯಲು ನಾಲ್ಕು ವರ್ಷಗಳು ಹಿಡಿದಿದ್ದವು. ಈ ಕಾಲದಲ್ಲಿ ಏಕಾಂತ ವಾಸದಲ್ಲಿದ್ದ ಸ್ಟ್ರೌಡ್ ಸಂಗೀತಾಭ್ಯಾಸ ಮಾಡಿದ. ಚಿತ್ರಗಳನ್ನು ಬಿಡಿಸಲು ಕಲಿತ. ಮಾನಸಶಾಸ್ತ್ರವನ್ನು ಕುರಿತಾದ ಪುಸ್ತಕಗಳನ್ನೋದಿದ.

ಗಲ್ಲಿನ ದಿನವನ್ನು ಸ್ಟ್ರೌಡ್ ಎದುರು ನೋಡುತ್ತಿದ್ದಂತೆ ಅವನ ತಾಯಿ ವಾಶಿಂಗ್‌ಟನ್ನಿನಲ್ಲಿ ಅಧಿಕಾರಿಗಳ ಬಳಿ ಎಡತಾಕಿದಳು. ಅಧ್ಯಕ್ಷ ವಿಲ್ಸನ್ನರ ಪತ್ನಿಯನ್ನು ಕಾಣುವಲ್ಲಿ ಯಶಸ್ವಿಯಾದಳು. ಅಧ್ಯಕ್ಷರು ಸ್ಟ್ರೌಡ್‌ನ ದೇಹಾಂತ ಶಿಕ್ಷೆಯನ್ನು ಆಮರಣ ಕಾರಾಗೃಹ ವಾಸಕ್ಕಿಳಿಸಿದರು.

''ರಾಬರ್ಟ ಸ್ಟ್ರೌಡ್‌ನನ್ನು ಅವನ ಜೀವಮಾನವೆಲ್ಲ ಪ್ರತ್ಯೇಕವಾಗಿ ಏಕಾಂತದಲ್ಲಿಡಲಾಗುವುದು. ಇತರ ಕೈದಿಗಳೊಂದಿಗೆ ಬೆರೆಯಲು ಅವನಿಗೆ ಎಂದಿಗೂ ಕೊಡುವುದಿಲ್ಲ. ಕೇವಲ ಅವನ ಅತ್ಯಂತ ನಿಕಟ ಆಪ್ತರು ಮಾತ್ರ ಅವನನ್ನು ಭೆಟ್ಟಿಯಾಗಬಹುದು'' ಎಂದು ಲೀವನ್‌ವರ್ಥ್ ಜೇಲಿನ ವಾರ್ಡನ್ನರು ಸಾರಿದರು.

ಆಗ ಸ್ಟ್ರೌಡ್‌ನಿಗೆ 30 ವರ್ಷಗಳಾಗಿದ್ದವು. ಸಾಯುವವರೆಗೂ ಏಕಾಂತವಾಸ ಅವನ ಪಾಲಿಗೆ ಬಂದಿತ್ತು. ಒಂದು ದಿನ ಅವನಿಗಾಗಿ ಪ್ರತ್ಯೇಕಿಸಿದ ಸ್ಥಳದಲ್ಲಿ ಆತ ವ್ಯಾಯಾಮ ಮಾಡುತ್ತಿದ್ದಾಗ ಬಿರುಗಾಳಿಯ ಹೊಡೆತಕ್ಕೆ ಸಿಕ್ಕು ಮುರಿದ ಟೊಂಗೆಯೊಂದು ಬಂದು ಬಿತ್ತು. ಆ ಟೊಂಗೆಯ ಎಲೆಗಳ

ಕಸ್ತೂರಿ ನಡೆದು ಬಂದ ದಾರಿ

ಬುಡದಲ್ಲಿ ಒಂದು ಗೂಡು. ಅದರಲ್ಲಿ ತೊಯ್ದು ಮುದ್ದೆಯಾದ ಮೂರು ಗುಬ್ಬಿಗಳು ಅವನ ಕಣ್ಣಿಗೆ ಬಿದ್ದವು.

ಸ್ಟ್ರೌಡ್ ತನ್ನ ಕರವಸ್ತ್ರದಲ್ಲಿ ಆ ಗುಬ್ಬಿಗಳನ್ನು ಸುತ್ತಿಕೊಂಡು, ತನ್ನ ಕೋಣೆಗೆ ಒಯ್ದ. ಕಾಲು ಚೀಲದಲ್ಲಿ ಅವನ್ನಿಟ್ಟು 25 ವಾಟ್ ಬಲ್ಬಿನ ಬಳಿ ಕಾಲು ಚೀಲವನ್ನು ತೂಗು ಹಾಕಿ ಅವಕ್ಕೆ ಕಾವು ಕೊಟ್ಟ. ಆ ಗುಬ್ಬಿಗಳಲ್ಲಿ ಒಂದರ ಕಾಲು ಮುರಿದಿತ್ತು. ಅದನ್ನು ಕಟ್ಟಿದ.

ಅವನ ಗುಬ್ಬಿಗಳು ಬದುಕಿದವು, ಕೊಬ್ಬಿದವು. ಅವನು ಅವಕ್ಕೆ ನಾನಾ ಬಗೆಯ ಆಟಗಳನ್ನು ಕಲಿಸಿದ. ಒಂದು ದಿನ ಡೆಪ್ಯೂಟಿ ವಾರ್ಡನ್ನರನ್ನು ಕರೆಸಿಕೊಂಡು (ಅವರು ಒಂದು ಕ್ಯಾನರಿ ಹಕ್ಕಿಯನ್ನು ಸಾಕಿದ್ದರು) ''ನೋಡಿ, ಈ ಗುಬ್ಬಿಯ ಹೆಸರು ರಂಟ್. ರಂಟ್ ಎಲ್ಲಿ ಸತ್ತಂತೆ ಬೀಳು'' ಎಂದ.

ಗುಬ್ಬಿ ಅಂಗಾತ ಬಿದ್ದುಕೊಂಡು ಸತ್ತಂತೆ ನಟಿಸಿತು.

''ಆಂ! ಹೇಗೆ ಕಲಿಸಿದಿ?'' ಆಶ್ಚರ್ಯದಿಂದ ಡೆಪ್ಯೂಟಿ ವಾರ್ಡನ್ ಕೇಳಿದರು.

''ಅದಕ್ಕೆ ತುಂಬ ಸಮಯ ಹಿಡಿಯುತ್ತದೆ. ನನ್ನ ಬಳಿ ಸಾಕಷ್ಟು ಸಮಯವಿದೆ.''

ಡೆಪ್ಯೂಟಿ ವಾರ್ಡನ್ ನಕ್ಕು, ''ಸರಿ. ಇಟ್ಟುಕೊ ಈ ಹಕ್ಕಿಗಳನ್ನು'' ಎಂದರು.

ಮುಂದೆ ಸ್ಟ್ರೌಡ್ ಎರಡು ಕ್ಯಾನರಿಗಳನ್ನು ಸಂಪಾದಿಸಿದ. ಒಂದು ರೇಝರ್ ಬ್ಲೇಡ್ ಮತ್ತು ಮೊಳೆಯ ಸಹಾಯದಿಂದ ಬಹುವಾಗಿ ಶ್ರಮಿಸಿ ಒಂದು ದೊಡ್ಡ ಪಂಜರವನ್ನು ತಯಾರಿಸಿದ. ಸ್ಟ್ರೌಡ್‌ನ ಕ್ಯಾನರಿ ಸಂಸಾರ ಬೆಳೆಯಿತು.

ಸ್ಟ್ರೌಡ್‌ನ ಹಕ್ಕಿಯ ಮರಿಗಳಿಗೆ ಮುರುಟು ರೋಗ ಬಂದಾಗ ಆತ ವಿಟಾಮಿನ್‌ಗಳ ಅಭ್ಯಾಸ ಮಾಡಿದ. ಒಂದು ಹಕ್ಕಿ ಸತ್ತಾಗ ಉಗುರುಗಳಿಂದ ಅದರ ದೇಹವನ್ನು ಬಗೆದು ತನ್ನ ಪುಸ್ತಕದಲ್ಲಿ ಟಿಪ್ಪಣಿ ಮಾಡಿಕೊಂಡ. ಅವನ ಪುಸ್ತಕದ ಬೇಡಿಕೆಗಳಿಂದ ಲೀವನ್‌ವರ್ಥ್‌ದ ವಾಚನಾಲಯದ ವ್ಯವಸ್ಥಾಪಕ ಹೈರಾಣಾದ. ಹಕ್ಕಿಗಳ ಬಗ್ಗೆ, ರಸಾಯನ ಶಾಸ್ತ್ರದ ಬಗ್ಗೆ, ಶರೀರ ಶಾಸ್ತ್ರದ ಬಗ್ಗೆ ಎಷ್ಟು ಪುಸ್ತಕಗಳಿದ್ದರೂ ಬೇಕು ಎನ್ನುತ್ತಿದ್ದ ಸ್ಟ್ರೌಡ್ ಸೆರೆಮನೆಯ ಆಸ್ಪತ್ರೆಯಲ್ಲಿ ರದ್ದು ಮಾಡಿದ ವಸ್ತುಗಳಿಂದ ತನ್ನ ಪಕ್ಷಿ ಸಂಸಾರಕ್ಕೆ ಬೇಕಾದ ನಾನಾ ಉಪಕರಣಗಳನ್ನು ಮಾಡಿಕೊಂಡ.

ಸ್ಟ್ರೌಡ್ ಮಾದರಿಯ ಕೈದಿ ಎಂದು ವಾರ್ಡನ್ ಹೇಳುತ್ತಿದ್ದ. ಕನ್ಸಾಸ್ ನಗರಕ್ಕೆ ಬಂದಿದ್ದ ಅವನ ತಾಯಿಗೆ ಸ್ಟ್ರೌಡ್‌ನ ಹಕ್ಕಿಗಳನ್ನು ಒಯ್ಯಲು ಆತ ಅಪ್ಪಣೆಯಿತ್ತ. ಅವಳು ಅವನ್ನು ಮಾರುತ್ತಿದ್ದಳು. ಸೆರೆಮನೆಯಲ್ಲಿರುವಾಗಲೂ ತಾಯಿಯ ಜೋಪಾನ ಮಾಡಬೇಕೆಂಬ ಸ್ಟ್ರೌಡನ ಆಕಾಂಕ್ಷೆ ಈ ರೀತಿಯಲ್ಲಿ ಫಲಿಸಿತು.

ಒಂದು ದಿನ ಇದ್ದಕ್ಕಿದ್ದಂತೆ ಸ್ಟ್ರೌಡನ ಕ್ಯಾನರಿ ಹಕ್ಕಿಗಳಲ್ಲಿ ಎರಡು ಮೂರ್ಛಾರೋಗದಿಂದ ಸತ್ತವು. ಒಂದು ವಾರದೊಳಗಾಗಿ ಅವನ ಪಕ್ಷಿ ಸಂಸಾರದಲ್ಲಿ ಅರ್ಧಕ್ಕರ್ಧ ಖಾಲಿಯಾದವು. ಅವನ ಪಕ್ಷಿಗಳಿಗೆ ಬಂದಿದ್ದ ನಂಜಿನ ಜ್ವರ ಗುಣವಾಗುವ ರೋಗವಲ್ಲ ಎಂದು ಪಕ್ಷಿಗಳ ಬಗ್ಗೆ ಬರೆದ ಪುಸ್ತಕಗಳು ಹೇಳುತ್ತಿದ್ದವು.

ಗಾಬರಿಯಾದ ಸ್ಟ್ರೌಡ್ ವಿಶ್ವವಿದ್ಯಾಲಯಗಳಿಗೆ ಪತ್ರ ಬರೆದ. ಹಕ್ಕಿಗಳ ರೋಗದ ಬಗ್ಗೆ ಸರಕಾರದ ಪರಿಪತ್ರಗಳನ್ನು ತರಿಸಿಕೊಂಡ. ಆತ ಕಲ್ಪನೆಯ ಆಧಾರದ ಮೇಲೆ ಪ್ರಯೋಗಗಳನ್ನಾರಂಭಿಸಿದ. ಸತ್ತ ಹಕ್ಕಿಗಳ ಅಂಗಚ್ಛೇದ ಮಾಡಿ ಪರೀಕ್ಷಿಸತೊಡಗಿದ.

ಅವನ ಒಂದು ಪ್ರಯೋಗ ಯಶಸ್ವಿಯಾಯಿತು. ನಂಜು ಜ್ವರಕ್ಕೆ ಒಂದು ಔಷಧಿಯನ್ನಾತ ಕಂಡು ಹಿಡಿದು ತನ್ನ ಉಳಿದ ಹಕ್ಕಿಗಳನ್ನು ಬದುಕಿ

ಸಿಕೊಂಡ.

ಈಗ ಆತನಿಗೆ ತನ್ನ ಹೆಸರನ್ನು ಬಹಿರಂಗ ಮಾಡದಿದ್ದರೆ ಬೇಕಷ್ಟು ಪತ್ರ ವ್ಯವಹಾರ ಮಾಡುವ ಸವಲತ್ತು ಕೊಡಲ್ಪಟ್ಟಿತು. ಸ್ಟ್ರೌಡ್ ಇಂಗ್ಲಿಷ್ ವ್ಯಾಕರಣವನ್ನು ಕಲಿತು ಒಂದು ಟೈಪ್ ರೈಟರನ್ನು ಸಂಪಾದಿಸಿದ. ಅವನ ವಿದ್ವತ್ತಾಪೂರ ವಾದ ಲೇಖನಗಳು ಹಕ್ಕಿಗಳನ್ನು ಕುರಿತಾದ ಅಮೇರಿಕನ್ ಮತ್ತು ಬ್ರಿಟಿಶ್ ಪತ್ರಿಕೆಗಳಲ್ಲಿ ಪ್ರಕಟವಾದವು. ಹಕ್ಕಿಗಳ ರೋಗ ವಿಚಾರದಲ್ಲಿ ಅವು ತುಂಬ ಜ್ಞಾನವನ್ನೂ ಔಷಧೋಪಚಾರಗಳನ್ನೂ ತಿಳಿಸಿಕೊಟ್ಟವು.

ಸ್ಟ್ರೌಡ್‌ನ ಏಕಾಂತವಾಸದ ಕೋಣೆಯಲ್ಲೀಗ 300 ಕ್ಯಾನರಿ ಹಕ್ಕಿಗಳಿದ್ದವು. ಒಂದು ಜಿಡಿ ಗಾಸನ್ನೂ ತೆಗೆದುಕೊಳ್ಳದೆ ಪತ್ರ ಮುಖೇನ ಅವನು ಬೇನೆ ಬಿದ್ದ ಸಾವಿರಾರು ಹಕ್ಕಿಗಳ ಪ್ರಾಣವನ್ನುಳಿಸಿದ. ಹಕ್ಕಿಗಳನ್ನು ಸಾಕುವವರಿಗೆ ಈ ಹಕ್ಕಿಯ ಡಾಕ್ಟರ್ ಜೀವಾವಧಿ ಶಿಕ್ಷೆಗೆ ಗುರಿಯಾದ ಕೈದಿ ಎಂಬುದು ತಿಳಿಯಲೇ ಇಲ್ಲ.

ಅಷ್ಟರಲ್ಲಿ ಅಮೇರಿಕದ ಜೇಲು ನಿಯಮಗಳಲ್ಲಿ ಬದಲಾವಣೆಯಾಯಿತು. ಹೊಸತಾಗಿ ಕಾರ್‍ಯಾರಂಭ ಮಾಡಿದ ''ಫೆಡರಲ್ ಬ್ಯುರೊ ಆಫ್ ಪ್ರಿಜನ್ಸ್'' 1930ರಲ್ಲಿ ಎಲ್ಲ ಜೇಲುಗಳಿಗೆ ಒಂದೇ ನಿಯಮವನ್ನು ಸಾರಿತು.


ಕೈದಿಗಳು ವ್ಯಾಪಾರವನ್ನು ಮಾಡತಕ್ಕದ್ದಲ್ಲ ಎಂಬ ಆಜ್ಞೆ ಹೊರಟಿತು. 60 ದಿನಗಳಲ್ಲಿ ಎಲ್ಲ ಹಕ್ಕಿಗಳನ್ನೂ ಬಿಟ್ಟುಬಿಡಬೇಕೆಂದೂ ಮತ್ತೆ ಸಾಕತಕ್ಕದ್ದಲ್ಲವೆಂದೂ ಲೀವನ್‌ವರ್ಥ್ ವಾರ್ಡನ್ನರು ಸ್ಟ್ರೌಡನಿಗೆ ಅಪ್ಪಣೆ ಮಾಡಿದರು. ರಾಬರ್ಟ್ ಸ್ಟ್ರೌಡನಿಗೆ ವಜ್ರಾಘಾತವಾಯಿತು. ''ಸ್ವಾಮಿ, ಹನ್ನೊಂದು ವರ್ಷಗಳಿಂದ ಹಕ್ಕಿಗಳೊಡನೆ ಬಾಳಿದ್ದೇನೆ, ಅವೇ ನನ್ನ ಸರ್ವಸ್ವ'' ಎಂದನಾತ.

''ಅಪ್ಪಣೆಗಳನ್ನು ಪಾಲಿಸುವುದೇ ನನ್ನ ಕರ್ತವ್ಯ'' ವಾರ್ಡನ್ ಹೇಳಿದ.

ಹಕ್ಕಿಗಳ ಡಾಕ್ಟರನಾದ ಕೈದಿಯು ಹಕ್ಕಿಗಳಿಂದ ಅಗಲಬೇಕೆಂದು ಆಜ್ಞೆ ಮಾಡಿರುವ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಯಿತು. ತಮ್ಮ ಹಕ್ಕಿಗಳನ್ನು ಬದುಕಿಸಿಕೊಟ್ಟವನೊಬ್ಬ ಕೈದಿ ಎಂಬುದನ್ನರಿತ ಜನರು ನೂರಾರು ಅರ್ಜಿಗಳನ್ನು ಬರೆದರು. ಸಾರ್ವಜನಿಕ ಅಭಿಪ್ರಾಯ ಸ್ಟ್ರೌಡನ ಪರವಾಗಿ ಬಲವಾಗಿ ವಾದಿಸಿತು. ಅಧ್ಯಕ್ಷ ಹೂವರ್‌ರಿಗೆ ಸಹಸ್ರಾರು ಸಹಿಗಳುಳ್ಳ ಅರ್ಜಿಗಳು ಹೋದವು.

ಆಗ ಬ್ಯೂರೋದ ಡಾಯರೆಕ್ಟರರು ಸ್ಟ್ರೌಡನಿಗೆ ತಮ್ಮ ಆಜ್ಞೆ ಅನ್ವಯಿಸುವುದಿಲ್ಲ ಎಂದು ಪ್ರಕಟಿಸಿದರು. ಅವನ ಹಕ್ಕಿಗಳಿಗಾಗಿ ಎಂದು ಇನ್ನೊಂದು ಕೋಣೆ ಕೊಡಲ್ಪಟ್ಟಿತು. ಅಲ್ಲಿ ಅವನ ಪ್ರಯೋಗಗಳಿಗಾಗಿ ವಿದ್ಯುತ್ತನ್ನೂ ಲೆಬೊರೇಟರಿ ಸಲಕರಣೆಗಳನ್ನೂ ಒದಗಿಸಿಕೊಟ್ಟರು. ಕೈದಿ ಸ್ಟ್ರೌಡನಿಗೆ ಹಕ್ಕಿಗಳನ್ನು ಸಾಕಿ ಮಾರಲು ಅಪ್ಪಣೆ ಸಿಕ್ಕಿತು.

1933ರಲ್ಲಿ ತನ್ನನ್ನು ಸಾರ್ವಜನಿಕ ಉಪದ್ರವ



ಕಾರಿಗಳೂ ಶತ್ರುಗಳೂ ಆದವರನ್ನು ಇಡುವ ಅಲಕಾಟಾರ್ಝ್ ಸೆರೆಮನೆಗೆ ಕಳಿಸುವರೆಂದು ಸ್ಟ್ರೌಡನಿಗೆ ಗೊತ್ತಾಯಿತು. ಆದರೆ ಅಧ್ಯಕ್ಷ ರೂಜವೆಲ್ಟರ ಕಾರ್ಯದರ್ಶಿಗಳಲ್ಲಿ ಒಬ್ಬಾತ ಸ್ಟ್ರೌಡನ ಸ್ಥಳಾಂತರ ದಿನವನ್ನು ಮುಂದಕ್ಕೆ ಹಾಕಿಸಿದ.

ಪೆರೋಲ್ ಮೇಲೆ ಬಿಡುಗಡೆ ಮಾಡಬೇಕೆಂದು ಸ್ಟ್ರೌಡ್ ಸಲ್ಲಿಸಿದ ಅರ್ಜಿ 1937ರಲ್ಲಿ ತಿರಸ್ಕೃತವಾಯಿತು. ಮುಂದೆ ತುಸು ದಿನಗಳಲ್ಲಿ ತಾಯಿ ಸತ್ತಳು. ಈ ಅಪಘಾತಗಳಾದ ನಂತರ ಸ್ಟ್ರೌಡ್ ಇನ್ನಿಷ್ಟು ಗಹನವಾದ ಅಭ್ಯಾಸದಲ್ಲಿ ತೊಡಗಿದ. ಅವನು ಪಕ್ಷಿಗಳ ಅನೇಕ ರೋಗಗಳಿಗೆ ಔಷಧವನ್ನು ಕಂಡು ಹಿಡಿದ. ಸೂಕ್ಷ್ಮದರ್ಶಕದ ಸಹಾಯವಿಲ್ಲದೆ ''ಬಿ ಪೆರಾಟಿ ಫಾಸಿಸ್ ಬಿ'' ಯ ಕಾರಣವನ್ನು ಕಂಡುಹಿಡಿದ. ಸೂಕ್ಷ್ಮದರ್ಶಕಕ್ಕಾಗಿ ಆತ ಹಂಬಲಿಸುತ್ತಿದ್ದ.

ಅವನ ಈ ಹಂಬಲವೂ ಈಡೇರಿತು. ವೆಸ್ಲಿಯನ್ ವಿಶ್ವವಿದ್ಯಾಲಯವು ಅವನಿಗೆ ಒಂದು ಹಳೆಯ ಸೂಕ್ಷ್ಮದರ್ಶಕವನ್ನು ಕೊಟ್ಟಿತು.

ಎರಡು ವರ್ಷಗಳ ನಂತರ ಅದ್ಭುತವೊಂದನ್ನು ಸ್ಟ್ರೌಡ್ ಸಾಧಿಸಿದ. ಒಂದು ರೇಝರ್ ಬ್ಲೇಡು ಬಿರುಸು ಕಟ್ಟಿಗೆ ಮತ್ತು ಲೋಹದ ಪಟ್ಟಿಗಳಿಂದ ಆತ ತಯಾರಿಸಿದ ಆಯುಧವೊಂದು ನರವನ್ನು ಒಂದು ಸಾವಿರ ಒಂದಂಶದಷ್ಟು ಸೂಕ್ಷ್ಮವಾಗಿ ಕತ್ತರಿಸಬಲ್ಲುದಾಯಿತು.

ಬಳಿಕಾತ, ''ಹಕ್ಕಿಗಳ ರೋಗದ ಡೈಜೆಸ್ಟ್'' ಎಂಬ ಪುಸ್ತಕವನ್ನು ಚಿತ್ರ ಸಹಿತ ಬರೆಯತೊಡಗಿದ. ಈ ಪುಸ್ತಕ ಇಂಗ್ಲಂಡ್ ಮತ್ತು ಅಮೇರಿಕಗಳಲ್ಲಿ ಪ್ರಚಾರದಲ್ಲಿದ್ದು ಹಕ್ಕಿಗಳ ವಿಚಾರದಲ್ಲಿ ಸೂಚೀ ಪುಸ್ತಕವಾಗಿದೆ.

ವರ್ಷಗಳು ಕಳೆದಂತೆ ಸ್ಟ್ರೌಡ್ ವ್ಯಾಕುಲನೂ ವಿಚಿತ್ರನೂ ಆದನು. ಆತ ಬೇನೆ ಬಿದ್ದ. ನ್ಯೂಮೋನಿಯ ರೋಗದಿಂದ ಸತ್ತು ಸತ್ತು ಉಳಿದ. ಬಣ್ಣಗಳಲ್ಲಿ ಪ್ರಯೋಗ ನಡೆಸಿ ಅತಿ ಸುಂದರ ಬಣ್ಣದ ಕ್ಯಾನರಿ ಹಕ್ಕಿಗಳನ್ನು ಹುಟ್ಟಿಸಿದ. ಪಾಂಟ ಕಂಪನಿಯವರು ಕೊಟ್ಟ ಒಂದು ಬಣ್ಣದಿಂದ ಹಕ್ಕಿಗಳಿಗಾಗಿ ಒಂದು ರೋಗನಿವಾರಕ ಔಷಧಿ ತಯಾರಿಸಿದ.

1942 ಡಿಸೆಂಬರ 15ರಂದು ಸ್ಟ್ರೌಡ್‌ನ ಕೈಕಾಲುಗಳಿಗೆ ಬೇಡಿ ತೊಡಿಸಿ ಅಲಕಾಟ್ರಾಝ್‌ಕ್ಕೆ ಕಳಿಸಲೆಂದು ರೈಲು ಹತ್ತಿಸಿದರು. ಅವನು ಬಿಟ್ಟು ಹೊರಟ ಕೋಣೆಯಲ್ಲಿ ಅನೇಕ ಹಕ್ಕಿಗಳು, ಪಂಜರಗಳು, ಸಲಕರಣೆಗಳು ಪುಸ್ತಕಗಳು ಇದ್ದವು. ಆ ಕೋಣೆಲ್ಲಾತ 26 ವರ್ಷಗಳನ್ನು ಕಳೆದಿದ್ದ.

ಅಲಕಾಟ್ರಾಝುದಲ್ಲಿ ಮತ್ತೆ ಆತನಿಗೆ ಏಕಾಂತ ವಾಸವೇ ಪ್ರಾಪ್ತವಾಯಿತು. ಅವನ ಕೋಣೆ ಹಿಂದಿನ ಜೇಲಿನ ಕೋಣೆಗಿಂತಲೂ ಚಿಕ್ಕದಾಗಿತ್ತು; ಅವನಿಗೆ ಓದಲು ಅಪ್ಪಣೆಯಿತ್ತು. ಪಂಜರಗಳಲ್ಲಿರುವ ಹಕ್ಕಿಗಳ ಬದಲು ಅವನ ಆಸೆ ಈಗ ಸೆರೆಮನೆಗಳಲ್ಲಿರುವ ಕೈದಿಗಳ ಕಡೆಗೆ ತಿರುಗಿತು. ಅವನು ಕಾಯದೆಯ ಅಭ್ಯಾಸ ಮಾಡತೊಡಗಿದ.

ಕೆಲ ಕಾಲದವರೆಗೆ ಸ್ಟ್ರೌಡ್‌ನಿಗೆ ಪುಸ್ತಕಗಳ ವಿಚಾರದಲ್ಲಿ ಹೆಚ್ಚಿನ ಸವಲತ್ತು ಸಿಕ್ಕಿತು. ಆದರೆ ಹೊಸ ವಾರ್ಡನ್ ಬಂದಾಗ ಅವುಗಳನ್ನು ರದ್ದು ಮಾಡಿದ.

1950ರಲ್ಲಿ ಫೆಡರಲ್ ಕೋರ್ಟಿಗೆ ಸಲ್ಲಿಸಿದ ಅರ್ಜಿಯಲ್ಲಿ ಸ್ಟ್ರೌಡ್ ತಾನು ಬರೆದ ಒಂದು ಲಕ್ಷ ಶಬ್ದಗಳ ''ಸೆರೆಮನೆಯ ಇತಿಹಾಸ'' ವೆಂಬ ಪುಸ್ತಕದ ವಿಚಾರವನ್ನು ಬಹಿರಂಗಪಡಿಸಿದ. 1909 ರಿಂದ ತನ್ನ ಸೆರೆಮನೆ ಜೀವನದ ಕಥೆಯನ್ನು ಅದರಲ್ಲಿ ಬರೆದಿರುವುದಾಗಿ ಹೇಳಿದನಾತ. ಆದರೆ ಆ ಪುಸ್ತಕ ಜಪ್ತಿ ಮಾಡಲ್ಪಟ್ಟಿತು.

ಸ್ಟ್ರೌಡನಿಗೆ ಅವನ ಹಕ್ಕಿಗಳ ಪುಸ್ತಕದ ಹೊಸ ಆವೃತ್ತಿಯನ್ನು ಬರೆಯಲು ಅನುಮತಿ ಕೊಡಬೇಕೆಂದು ಪ್ರಕಾಶಕರೊಬ್ಬರು ಮಾಡಿಕೊಂಡ ಅರ್ಜಿ ತಿರಸ್ಕೃತವಾಯಿತು.

34 ವರ್ಷ ಸೆರೆಮನೆಯಲ್ಲಿದ್ದ ನಾಥನ್‌ಲಿಪಾಲ ಎಂಬಾತನ ಬಿಡುಗಡೆ ಕಳೆದ ವರ್ಷ ಆಯಿತು. ಇದರಿಂದ ಸ್ಟ್ರೌಡನ ಬಿಡುಗಡೆಯ ಆಸೆ ಅಂಕುರಿಸಿದೆ. ಅವನ ಬಿಡುಗಡೆಯ ಪ್ರಯತ್ನ ಮಾಡಲು ಪ್ರಸಿದ್ಧ ವ್ಯಕ್ತಿಗಳ ಸಮಿತಿ ರಚಿಸಲ್ಪಟ್ಟಿದೆ. ಈ ಮುದಿ ಕೈದಿ ವಿಜ್ಞಾನಿಯ ಬಿಡುಗಡೆಗಾಗಿ ಈ ಸಮಿತಿ ಶಕ್ತಿ ಮೀರಿ ಯತ್ನಿಸಲಿದೆ. ●



ನಡೆದದ್ದೋ! ನುಡಿದದ್ದೋ!

ಅತಿಥಿಗಳಿಗೆ ಕಥೆ ಹೇಳುವುದು, ಕೇಳುವುದು ಹಳೆಯ ಸಂಪ್ರದಾಯ. ಇಂಥ ಜಾಲದಲ್ಲಿ ನಾನು ಸಿಕ್ಕಿಕೊಳ್ಳುವುದು ಅಪರೂಪವೇನಲ್ಲ. ಸಯೀದಾ ನನ್ನ ಬಗ್ಗೆ ಕಥೆ ಹೇಳುವವನೆಂದು ಅಸಂಖ್ಯಾತ ಕಥೆ ಹೆಣೆದಿದ್ದಳು. ಆ ರಾತ್ರಿ, ಎಲ್ಲಾ ತಪ್ಪೂ ಅವಳದೆ.

ಅಂದು ಮೈ ಕೊರೆಯುವ ಛಳಿ. ತಣ್ಣನ್ನ ಗಾಳಿ. ನಾವು ಡ್ರಾಯಿಂಗ್ ರೂಮ್ ಬಾಗಿಲು ಕಿಟಕಿ ಎಲ್ಲಾ ಮುಚ್ಚಿಕೊಂಡಿದ್ದೆವು. ಥಂಡಿಯ ಸಲುವಾಗಿ ದಪ್ಪ ಪರದೆ ಇಳಿ ಬಿಟ್ಟಿದ್ದೆವು. ಸಯೀದಾ ಎಲ್ಲಾ ಲೈಟೂ ಆರಿಸಿದ್ದಳು. ಫ್ಲೋರ್ ಲೈಟ್ ಮಾತ್ರ ಉರಿಯುತ್ತಿತ್ತು. ಹೀಗಾಗಿ ವಾತಾವರಣ ರಹಸ್ಯಮಯವಾಗಿತ್ತು. ನನಗೆ ಯೋಚಿಸುವುದಕ್ಕೂ ಅವಕಾಶ ಸಿಕ್ಕಿತು.

ನಾನು ಸುಮ್ಮನಿದ್ದೆ. ಅದನ್ನು ನೋಡಿ ''ಹೂಂ! ಪ್ರಾರಂಭಿಸಿ, ಬಹಳ ಯೋಚಿಸಿದ್ದಾ



ಮೂಲ: ಅನ್ವರ್ ಇನಾಯತ್‌ಉಲ್ಲಾ
ಕನ್ನಡಕ್ಕೆ: ಮಾಧವರಾವ್ ಮುಧೋಳ್

ಯಿತು'' ಎಂದರು ಫೋಜಿಯವರು.

''ಇವತ್ತು ಯಾವ ಕಥೆ? ಬೇಟೆಯದೆ?'' ಎಂದು ಜಾಹಿದ್ ಖಾನರು ಕೇಳಿದರು.

''ಬೇಡಿ. ಬೇಡಿ. ಆ ಬೇಟೆಯ ಕಥೆ ಇವತ್ತು ಬೇಡಿ, ಮತ್ತೇನಾದರೂ ಸ್ವಲ್ಪ ಹೊಸಥರದ್ದು ಹೇಳಿ. ಆದರೆ ನಿಜವಾಗಿ ನಡೆದದ್ದು ಇರಲಿ'' ಎಂದು ನರ್ಗಿಸ್ ಬಯಸಿದಳು.

''ಆತ್ಮಗಳ ಬಗ್ಗೆ ಹೇಳಿದರೆ ಮಜಾ ಬರುವುದು'' ಎಂದರು ಸಫದರ್.

''ಇವತ್ತಿನ ಸಂಗತಿ ಹಾಗೇನೆ ಇದೆ,'' ಎಂದೆ ನಾನು.

''ಹಾಯ್ ದೇವರೆ! ಅದು ಬೇಡಿ!! ಆತ್ಮಗಳೆಂದರೆ ನನಗೆ ಬಹಳ ಹೆದರಿಕೆ'' ಎಂದು ನಾಜೇಮಾ ಕಿವಿ ತಟ್ಟಿಕೊಂಡಳು. ಎಲ್ಲ ಹೆಂಗಸರೂ ಅದನ್ನ ಅನುಮೋದಿಸಿದರು.

''ಈ ಮಾತು ಬಹಳ ವಿಚಿತ್ರ'' ಎಂದು ನಾನು ಮೆತ್ತಗೆ ನುಡಿದೆ. ''ಮನುಷ್ಯ ಜೀವದಿಂದಿದ್ದಾಗ ಅವನನ್ನು ಕಂಡು ಹೆದರಬೇಕು. ಸತ್ತ ಮೇಲೆ ಅವನನ್ನು ಕಂಡು ಅಷ್ಟೇಕೆ ಹೆದರಬೇಕೋ ದೇವರಿಗೇ ಗೊತ್ತು. ಇವತ್ತು ನಾಳೆ ಕರಾಚಿಯಲ್ಲಿ ರಾಜಕೀಯ ಭಾಷೆ ನೆಪದಲ್ಲಿ ಏನೆಲ್ಲಾ ನಡೆಯುತ್ತವೆ. ಹಾಗೆ ನಡೆಯುವ ದಂಗೆಗಳು ಆತ್ಮ ಮಾಡಿಸಿದ್ದವುಗಳು ಎಂದೂ ಅಲ್ಲ. ಅವುಗಳನ್ನು ಆತ್ಮ ಮಾಡಿಸುವುದೂ ಇಲ್ಲ'' ಎಂದೆ.

ನಾನು ಮಾತು ನಿಲ್ಲಿಸಿದೆ. ಈ ವಿಚಾರದ ಬಗ್ಗೆ ಯಾರಾದರೂ ಅವಶ್ಯ ಮಾತಾಡಬಹುದೆಂದು ಅನಿಸಿತ್ತು. ಏಕೆಂದರೆ ಕೂಡಿ ಕುಳಿತವರಲ್ಲಿ ಅನೇಕರು ರಾಜಕೀಯ ಸದಸ್ಯರಾಗಿದ್ದರು. ಆದರೆ ನನ್ನ ಊಹೆ ತಪ್ಪಾಯಿತು. ಯಾರೂ ಮಾತಾಡಲಿಲ್ಲ. ಆತ್ಮದ ವಿಚಾರವೆತ್ತುತ್ತಲೂ ಎಲ್ಲರೂ ಸುಮ್ಮನೆ ನನ್ನ ಹತ್ತಿರಕ್ಕೆ ಸರಿದರು.

''ಕೆಲವು ಮಾತಿನ ಬಗ್ಗೆ ಚರ್ಚೆ ನಡೆಯುವಂತಿಲ್ಲ. ಅವುಗಳ ವೈಜ್ಞಾನಿಕ ವಿಶ್ಲೇಷಣೆಯೂ ಸಾಧ್ಯವಿಲ್ಲ. ಹೀಗಿದ್ದರೂ ಅವುಗಳ ಅಸ್ತಿತ್ವ ಇಲ್ಲವೆಂದು ಹೇಳಲಿಕ್ಕಾಗುವುದಿಲ್ಲ'' ಎಂದು ಹೇಳಿ ನನ್ನ ಪೈಪು ಹೊತ್ತಿಸಿ ಕಥೆ ಪ್ರಾರಂಭಿಸಿದೆ. ''ಸಲವತ್ತು ವರ್ಷಗಳ ಹಿಂದಿನ ಮಾತು. ನನಗೆ ಚೆನ್ನಾಗಿ ನೆನಪಿದೆ. ಅಂದು ಗುರುವಾರ. ಆಗ ನಾನು ಹೈದರಾಬಾದಿನಿಂದ ಹದಿನೈದು ಮೈಲಿ ದೂರದ ಹಿಮಾಯತ್‌ಸಾಗರದಲ್ಲಿರುತ್ತಿದ್ದೆ. ಅದು ನಿಜಾಮರ ಆಡಳಿತದಲ್ಲಿತ್ತು. ಅಲ್ಲಿ ಒಂದು ಬಹು ದೊಡ್ಡ ಕೃಷಿ ಫಾರ್ಮಿತ್ತು. ಈ ಸ್ಥಳ ಬಹು ಸುಂದರವಾದುದು. ಅದರ ಒಂದು ಕಡೆ ಎತ್ತರವಾಗಿ ಪ್ರಭಾವ ಬೀರುವ ಪರ್ವತ ಶ್ರೇಣಿ.

ಇನ್ನೊಂದು ಕಡೆಗೆ ಮೈಲಿನುದ್ದಕ್ಕೂ ಹಸಿರು ಹಾಸಿದಂತಿರುವ ಹೊಲಗಳು. ಮಧ್ಯದಲ್ಲಿ ಒಂದು ಚಿಕ್ಕ ಸುಂದರವಾದ ಡಾಕ್ ಬಂಗ್ಲೆ. ಈ ರೂಟಿನ ಮೇಲೆ ಆ ಕಾಲದಲ್ಲಿ ಬಸ್ಸು ಚಲಿಸುತ್ತಿರ ಲಿಲ್ಲ. ಫಾರ್ಮಿನಿಂದ ಐದು ಮೈಲಿನ ಮೇಲೆ ಒಂದು ಹೆದ್ದಾರಿಯಿತ್ತು. ಇದರ ಮೂಲಕ ಹೈದ ರಾಬಾದ ಮಹಬೂಬನಗರದ ಬಸ್ ಓಡಾಡುತ್ತಿ ದ್ದವು. ಪಟ್ಟಣಕ್ಕೆ ಹೋಗಲು ಈ ಹೆದ್ದಾರಿಯವ ರೆಗೆ ನಡೆದು ಬರಬೇಕಿತ್ತು.

ಆ ಗುರುವಾರ ಪಟ್ಟಣದ ಕೆಲಸ ಮುಗಿಸಿ ಹಿಮಾಯತ್ ಸಾಗರಕ್ಕೆ ಬರುತ್ತಿದ್ದೆ. ಅಕಸ್ಮಾ ತ್ತಾಗಿ ದಾರಿಯಲ್ಲಿ ಬಸ್ಸು ಕೆಟ್ಟಿತು. ನಾನು ಹೆದ್ದಾ ರಿಯಲ್ಲಿಯೇ ಇಳಿದೆ. ನಾನು ತಲುಪಬೇಕಾದ ಸ್ಥಳ ದೂರವಿರಲಿಲ್ಲ. ಆದರೆ ಕತ್ತಲೆಯಾಗಿತ್ತು. ಸುತ್ತಲೂ ನೋಡಿದೆ. ರಸ್ತೆಯಲ್ಲಿ ಯಾರೂ ಇರ ಲಿಲ್ಲ. ಭಯವೆನಿಸಿತು. ಬಹುದೂರದವರೆಗೆ ಯಾವ ಜೀವದ ಚಿನ್ಹೆಯೂ ಕಾಣಲಿಲ್ಲ. ಸಂಜೆ ಏಳು ಗಂಟೆಯಾಗಿತ್ತು. ಬಲಕ್ಕೆ ನೋಡಿದೆ. ದೂರ ದಿಗಂತದಲ್ಲಿ ಮಿಣುಕು ದೀಪಗಳು ಕಂಡವು. ಅದು ಹಿಮಾಯತ್‌ಸಾಗರವೆಂದು ಆ ಕಡೆಗೆ ನಡೆದೆ.

ಗಾಳಿ ವಿಶೇಷ ಚಳಿಯಿಂದ ಕೂಡಿತ್ತು. ಆಕಾಶ ದಲ್ಲಿ ಈಗ ತಾನೆ ಉದಯಿಸಿದ ಚಂದ್ರ ತನ್ನ ಮೃದು ಬೆಳಕನ್ನು ಚೆಲ್ಲುತ್ತಲಿದ್ದ. ಪ್ರಾಯಶಃ ಅಂದು ಶುಕ್ಲಪಕ್ಷದ ಸಪ್ತಮಿ ಅಥವಾ ಅಷ್ಟಮಿ ಇರಬೇಕು. ಚಳಿಗಾಳಿಯಿಂದ ತಪ್ಪಿಸಿಕೊಳ್ಳಲು ನನ್ನ ಬೆಚ್ಚನ್ನ ಕೋಟಿನ ಕಾಲರ್‌ಗಳನ್ನು ಎತ್ತರಿಸಿ ಕೊಂಡೆ. ದೇವರ ಹೆಸರು ನೆನೆದು ಹಿಮಾಯತ್ ಸಾಗರಕ್ಕೆ ಹೋಗುತ್ತಿದ್ದ ಕಾಲುದಾರಿಗೆ ಇಳಿದೆ. ಅದು ಹೊಲದಲ್ಲಿ ಹಾದು ಹೋಗುತ್ತಿತ್ತು. ಈ ನಿಃಶಬ್ದ ದಾರಿಯಲ್ಲಿ ಅದೆಷ್ಟೋ ಸಲ ನಾನು ನಡೆದಿದ್ದೆ. ಆದರೆ ಸಂಜೆಯಾದ ಮೇಲೆ ನಡೆದದ್ದು ಇದು ಮೊದಲ ಸಲ. ಈ ಕಾಲುದಾರಿ, ಹೊಲ ದಲ್ಲಿ ಸುಮಾರು ಒಂದೂವರೆ ಮೈಲು ದೂರ ಹೋಗುತ್ತಿತ್ತು. ಇದಾದ ಮೇಲೆ ದಪ್ಪ ಮರಗಳ ಸಾಲು ಪ್ರಾರಂಭವಾಗುತ್ತಿತ್ತು. ಈ ಮರಗಳ ಗುಂಪಿನಲ್ಲಿ ಒಂದು ಹಳೆಯ ಸಮಾಧಿಯಿತ್ತು. ಬೆಳದಿಂಗಳು ಹೆಚ್ಚಾಗಿ ಮರಗಳ ನೆರಳುಗಳು ವಿಚಿತ್ರ ಭಯಾನಕ ರೂಪಗಳನ್ನು ತಳೆಯುವವು. ದೇವರಿಗೇ ಗೊತ್ತು, ನನಗೇಕೆ ಹಾಗೆನಿಸಿತೊ ಪ್ರತಿ ಮರದ ಮರೆಯಲ್ಲೂ ಯಾವುದೋ ಭೂತ ಅಡಗಿ ಕುಳಿತಿದೆಯೆಂದು.

ಬೇಗ ಬೇಗ ನಡೆಯುತ್ತಲೇ ಆಲೋಚಿಸಿದೆ. ಈ ಪ್ರದೇಶದಲ್ಲಿ ಇಷ್ಟೇಕೆ ಸಮಾಧಿಗಳಿವೆ? ಎಂದು ಇವುಗಳ ಸ್ಥಿತಿ ಇಷ್ಟೇಕೆ ಹಾಳಾಗಿದೆ? ಎಂದು. ಯಾವ ಸಮಾಧಿಯ ಹತ್ತಿರದಿಂದ ನಾನು ಹೋಗಬೇಕಿತ್ತೋ ಅದು ಇಸ್ಲಾಮ್‌ಥರದ್ದಿತ್ತು. ಮೊಗಲರು ದಕ್ಷಿಣ ಭಾರತಕ್ಕೆ ಕಾಲಿಡುವುದಕ್ಕಿಂತ ಮೊದಲಿನದಿರಬೇಕು ಅದು. ಅದು ಯಾರದೋ ಸುಂದರ ದರ್ಬಾರಿ ಗಾಯಕಿಯದೆಂದು ಕೇಳಿದ್ದೆ. ಅವಳ ಹೆಸರು ಯಾರಿಗೂ ಗೊತ್ತಿರಲಿಲ್ಲ. ಸಮಾ ಧಿಯ ಮೇಲೆ ಹೊದಿಸಿದ ಸುಂದರ ಬಣ್ಣದ ಬೆಲೆ ಯುಳ್ಳ ಸ್ಫಟಿಕಗಳನ್ನೂ ಅಳಿದುಳಿದುದನ್ನೂ ಪುಂಡರು ಕೊಳ್ಳೆ ಹೊಡೆದುಕೊಂಡು ಹೋಗಿ ದ್ದರು. ಈಗ ಅದರ ನಾಲ್ಕೂ ಕಡೆಗೆ ಹುಲ್ಲು ಉದ್ದವಾಗಿ ಬೆಳೆದಿದ್ದಿತು.

ಸ್ವಲ್ಪ ಸಮಯದ ನಂತರ ಮರಗಳ ಗುಂಪಿ ನಲ್ಲಿ ನಾನು ಅದರ ಹತ್ತಿರ ಬಂದೆ. ಕೂಡಲೇ ನನಗೆ ಚೀರಿದ ಒಂದು ಧ್ವನಿ ಕೇಳಿಸಿತು. ಅದು ಹೆಂಗಸಿನ ಚೀತ್ಕಾರ. ನಾನು ಗಾಬರಿಯಾದೆ. ತಡೆದು ಆ ಕಡೆ ಈ ಕಡೆ ನೋಡಿದೆ. ಸಮಾಧಿಯ ಹಿಂಬದಿಯಲ್ಲಿ ಎರಡು ನೆರಳನ್ನು ಕಂಡೆ. ಒಂದು ಗಂಡಸಿನ ಧ್ವನಿ, ''ಶಬ್ದ ಮಾಡಿದರೆ ಕತ್ತು ಹಿಚು ಕುವೆ'' ಎಂದುದು ಕೇಳಿಸಿತು. ಆ ನಂತರ ಬಿಕ್ಕಿ ಬಿಕ್ಕಿ ದುಃಖಿಸುತ್ತಿರುವ ಹೆಣ್ಣಿನ ಧ್ವನಿ. ಇದನ್ನು ಕೇಳುತ್ತಲೂ ನನ್ನ ಗಾಬರಿ ಎಲ್ಲಿ ಮಾಯವಾ ಯಿತೋ! ಕೂಡಲೇ ನನ್ನ ಸ್ಥಿತಿ ಬೇಟೆಯನ್ನು ಕಂಡ ಅನುಭವಿ ಬೇಟೆಗಾರನಂತಾಯಿತು. ನಾನು ಮೆಲ್ಲಗೆ ಮುಂದೆ ಸರಿದೆ. ಎಚ್ಚರಿಕೆಯಿಂದ ಪೊದೆ ಗಳನ್ನು ಸರಿಸಿದೆ. ಅವರು ನನಗೆ ಸ್ಪಷ್ಟವಾಗಿ ಕಾಣಿಸಿದರು. ಒಬ್ಬ ಎತ್ತರವಾದ ಕಟ್ಟು ಮಸ್ತಾದ ಗಂಡು, ಕೈಯಲ್ಲಿ ದೊಡ್ಡ ಚೂರಿ ಹಿಡಿದು, ಒಬ್ಬ

ತೆಳುವಾದ ಕೋಮಲೆಯಾದ ತರುಣಿಯನ್ನು, ''ಹೇಳು! ನನ್ನ ಜೊತೆಗೆ ಬರುವಿಯೋ ಅಥವಾ ನಿನ್ನ ಗತಿ ಮುಗಿಸಿ ಬಿಡಲೋ?'' ಎಂದು ಗದರಿ ಸುತ್ತಿದ್ದ.

''ಮೂರ್ಖನಾಗಬೇಡ-ನೀನೂ ಜೀವದಿಂದ ಉಳಿಯಲಾರೆ'' ಎಂದು ದುಃಖಿಸುತ್ತಲೇ ಮೆತ್ತಗೆ ತರುಣಿ ನುಡಿದಳು.

''ಬೊಗಳುವುದನ್ನು ನಿಲ್ಲಿಸು ನೆಟ್ಟಗೆ ನನ್ನೊಡನೆ ನಡೆ'' ಎನ್ನುತ್ತ ಗಂಡಸು ಅವಳ ತೋಳುಗಳನ್ನು ಬಿಗಿಯಾಗಿ ಹಿಡಿದು ತನ್ನೆಡೆಗೆ ಎಳೆದುಕೊಂಡ. ಎಳೆಯುತ್ತಲೂ ಅವಳ ಬಾಯಿಯಿಂದ ಚೀತ್ಕಾರ ಹೊರಟಿತು. ಅದನ್ನು ಕೇಳಿ ಗಂಡಸು ಕ್ರೋಧತಪ್ತನಾಗಿ ಅವಳ ಕತ್ತು ಹಿಡಿದು ನಿರ್ದಯದಿಂದ ಹಿಸುಕತೊಡಗಿದ. ಅದೇ ಸಮಯಕ್ಕೆ ಅಷ್ಟು ಧೈರ್ಯ ನನಗೆ ಎಲ್ಲಿಂದ ಬಂದಿತೊ ದೇವರಿಗೇ ಗೊತ್ತು!! ನಾನು ಪೊದೆಯಿಂದ ಹೊರಗೆ ಬಂದು ಗಂಡಸಿನ ಕತ್ತಿನ ಮೇಲೆ ಬಲವಾಗಿ ಎರಗಿದೆ. ಹಿಡಿದಿದ್ದ ಅವನ ಚೂರಿಯನ್ನು ಕಿತ್ತುಕೊಂಡೆ. ಮೊದಲಿಗೆ ಅವನು ಈ ಅನಿರೀಕ್ಷಿತ ದಾಳಿಯಿಂದ ತಬ್ಬಿಬ್ಬಾದ. ಆದರೆ ಮರುಗಳಿಗೆಯಲ್ಲೇ ನನ್ನ ಮೇಲೆರಗಿದ. ಅವನು ಭೀಮಕಾಯದವನಾಗಿದ್ದ. ಕಣ್ಣು ಮಿಟುಕಿಸುವುದರಲ್ಲಿ ಅವನು ನನ್ನನ್ನು ಹಿಸುಕಿ ಹಿಡಿದಿದ್ದ. ನನಗಂತೂ ಆಗ ನನ್ನ ದೇಹದ ಮೂಳೆಗಳೆಲ್ಲ ಪುಡಿಪುಡಿಯಾದಂತೆನಿಸಿತು. ಇನ್ನೇನು ನನ್ನ ಅಸು ನೀಗಬೇಕು. ಅಷ್ಟರಲ್ಲೇ ಅದೇನಾಯಿತೋ ದೇವರಿಗೇ ಗೊತ್ತು ಅವನ ಹಿಡಿತ ಸಡಿಲವಾಯಿತು. ಅವನು ತಡವರಿಸುತ್ತ ನೆಲಕ್ಕುರುಳಿದ. ನಾನು ಚೇತರಿಸಿಕೊಂಡು ಅವನನ್ನು ನೋಡಿದೆ. ಆ ಚೂರಿ ಸ್ಪಷ್ಟವಾಗಿ ಕಂಡಿತು. ಕ್ಷಣ ಮೊದಲು ಅವನ ಕೈಯಲ್ಲಿದ್ದ ಆ ಚೂರಿ, ಈಗ ಅವನ ಬೆನ್ನಿನಲ್ಲಿ ನಟ್ಟಿದ್ದಿತು. ನನ್ನ ಕೈಯ ಮೇಲೆ ಅವನ ಬಿಸಿ ಬಿಸಿ

ರಕ್ತವಿತ್ತು.

ನಾನು ಹೇಳುತ್ತಿರುವುದನ್ನು ತಡೆದು ಪೈಪನ್ನು ಹೊತ್ತಿಸಿದೆ. ಎಲ್ಲರೂ ಮೌನವಾಗಿದ್ದರು. ನನ್ನನ್ನೇ ನೆಟ್ಟ ದೃಷ್ಟಿಯಿಂದ ನೋಡುತ್ತಿದ್ದರು.

ಯಾವುದೋ ಭಯಾನಕ ಸ್ವಪ್ನ ನೋಡುತ್ತಿದ್ದೇನೆ ಎಂದು ನನಗನಿಸಿತು. ಈ ಹಾಳು ಸ್ಥಳವಲ್ಲಿ, ಈ ಕವಿದಿರುವ ಕರಾಳ ರಾತ್ರಿಯ ಅಂಧಕಾರದಲ್ಲಿ ಕೊನೆಗೆ ನಾನು ಮಾಡುತ್ತಿದ್ದುದಾದರೂ ಏನು? ಆ ಸಮಯಕ್ಕೆ ನಾನು ಹಿಮಾಯತ್ ಸಾಗರದಲ್ಲಿರಬೇಕಿತ್ತು. ಈ ಮೃತ ದೇಹ ಈ ನವಯೌವನ ತರುಣಿ, ಇದೆಲ್ಲ ಏನು? ನಾನು ಸುಧಾರಿಸಿಕೊಂಡು ಎದ್ದು ನಿಲ್ಲಲು ಪ್ರಯತ್ನಿಸಿದೆ. ಆಗ ಆ ಯುವತಿ ನನ್ನ ಹತ್ತಿರ ಬಂದು, ಆಸರೆ ಕೊಟ್ಟು, ನನ್ನನ್ನು ಎಬ್ಬಿಸಿ ನಿಲ್ಲಿಸಿದಳು. ಅವಳ ಕೈಗಳ ಮೇಲೂ ರಕ್ತ ಮೆತ್ತಿದ್ದಿತು.

''ನಡೆ! ಓಡಿ ಹೋಗುವ. ಈ ಸ್ಥಳ ಸುರಕ್ಷಿತವಲ್ಲ'' ಎಂದು ಮೆಲ್ಲನೆ ಉಸುರಿ, ಹೆಚ್ಚೂ ಕಡಿಮೆ ನನ್ನನ್ನು ಎಳೆಯುತ್ತಲೇ ನಡೆಯತೊಡಗಿದಳು. ಮತ್ತೆ ''ಎಲ್ಲಿಗೆ ಹೋಗಬೇಕಿತ್ತು?'' ಎಂದು ನನ್ನನ್ನು ಕೇಳಿದಳು.

''ಹಿಮಾಯತ್ ಸಾಗರಕ್ಕೆ'' ಎಂದು, ನನ್ನೆಲ್ಲ ಶಕ್ತಿಯನ್ನೂ ಕೇಂದ್ರಿಕರಿಸಿ ಹೇಳಿದೆ.

''ಅದು ಯಾವ ಕಡೆಗೆ ಇದೆ? ಕೋಟೆಗಿಂತಲೂ ಮುಂದೆಯೆ?'' ಎಂದು ಈ ಹೆಸರನ್ನು ಮೊದಲ ಬಾರಿಗೆ ಕೇಳಿದವಳಂತೆ ಕೇಳಿದಳು.

''ದೇವರ ಸಲುವಾಗಿಯಾದರೂ ಮೆಲ್ಲಗೆ ನಡೆ. ನನ್ನಿಂದ ಉಸಿರು ತಡೆದುಕೊಳ್ಳುವುದಕ್ಕೂ ಆಗುತ್ತಿಲ್ಲ'' ಎಂದು ಹೇಳಿ, ಅವಳನ್ನು ನಾನು ತಡೆಯಲು ಪ್ರಯತ್ನಿಸಿದೆ.

''ಇಲ್ಲ. ಇವನ ಜೊತೆಯವರು ಯಾವ ಕ್ಷಣದಲ್ಲಾದರೂ ಇಲ್ಲಿಗೆ ಬಂದು ಬಿಡಬಹುದು'' ಎಂದು ತಕ್ಷಣ ಉತ್ತರಿಸಿದಳು. ''ಅವರು ಇಲ್ಲಿಗೆ ಬರುವ ಮೊದಲು ನಾನು ಕೋಟೆಯನ್ನು ತಲುಪಬೇಕು''

''ಯಾವ ಕೋಟೆ?'' ಎಂದು ನಾನು ಕೇಳಿದೆ.

''ವಿಚಿತ್ರ ಹುಚ್ಚು ಪ್ರಶ್ನೆ ಮಾಡುತ್ತಿರುವೆ. ಇಲ್ಲಿ ಮತ್ತೆಷ್ಟು ಕೋಟೆಗಳಿವೆ.....? ಬಹುತೇಕ ನೀನು ಪರದೇಶದವನಿರಬೇಕು'' ಎಂದು ಅವಳು ಉತ್ತರಿಸಿದಳು.

''ಇಲ್ಲ. ಬಹಳ ದಿವಸಗಳ ಮೇಲೆ ದಕ್ಷಿಣ ದೇಶಕ್ಕೆ ಬಂದಿದ್ದೇನೆ'' ಎಂದೆ.

''ಅದಕ್ಕೇ ನಿನ್ನ ರೂಪ ಇಷ್ಟು ವಿಚಿತ್ರವಾಗಿದೆ'' ಎನ್ನುತ್ತ ನಿಂತಳು. ಮತ್ತೆ ತಿರುಗಿ ನನ್ನನ್ನು ದೃಷ್ಟಿಸಿ ನೋಡಿದಳು. ಕೂಡಲೇ ಅವಳು, ''ಪೋರ್ತುಗಾಲದವನೆ?'' ಎಂದು ಬೆದರಿ ಕಿರಿಚಿದಳು.

''ಏನು ಅನ್ನುತ್ತಿದ್ದಿ .....? ಪೋರ್ತುಗಾಲದವನು ಇಲ್ಲಿ ಎಲ್ಲಿ .....?'' ಎಂದು ಅವಳನ್ನು ಸಮಾಧಾನಪಡಿಸಲು ಪ್ರಯತ್ನಿಸಿದೆ.

''ಮತ್ತೆ ಈ ನಿನ್ನ ಉಡುಪು? ವೇಷಭೂಷಣ'' ಎಂದು ಮತ್ತೆ ಬೆಚ್ಚಿ ಇನ್ನೊಮ್ಮೆ ಪ್ರಶ್ನಿಸಿದಳು.

''ಸುಮ್ಮಸುಮ್ಮನೆ ಹೆದರುತ್ತಿದ್ದೀಯೆ. ಈಗ ನಿನಗೆ ಯಾರೂ ಏನೂ ಮಾಡಲಾರರು. ನಾವು ಜನವಸತಿಗೆ ತೀರ ಹತ್ತಿರ ಇದ್ದೇವೆ. ಆ ವಿದ್ಯುತ್ ಬೆಳಕನ್ನು ನೋಡುತ್ತಿದ್ದೀಯಲ್ಲ, ಅದೇ ಹಿಮಾಯತ್ ಸಾಗರ ಕೃಷಿ ಫಾರ್ಮ್. ಅಲ್ಲಿ ಟೆಲಿಫೋನ್ ಇದೆ, ಜೀಪೂ ಇದೆ. ಎಲ್ಲಿಗೆ ಹೇಳುವಿಯೋ ಅಲ್ಲಿಗೆ ನಿನ್ನನ್ನು ಮುಟ್ಟಿಸುವೆ'' ಎಂದು ನಾನು ಅವಳಿಗೆ ಸಮಾಧಾನ ಹೇಳಿದೆ. ನಾನು ಹೇಳುತ್ತಿರುವವರೆಗೂ ನನ್ನನ್ನು ಕಣ್ಣರಳಿಸಿ ಅತ್ಯಂತ ವ್ಯಾಕುಲಚಿತ್ತಳಾಗಿ ನೋಡುತ್ತಿದ್ದಳು. ಮತ್ತು ಬಹಳ ಮೆತ್ತಗೆ,

''ವಿದ್ಯುತ್! ಫಾರ್ಮು!! ಜೀಪು ......!!!'' ಎನ್ನುತ್ತ

''ಇವತ್ತು ಯಾವ ತಾರೀಖು'' ಎಂದು ನನ್ನನ್ನು ದಿಟ್ಟಿಸಿ ನೋಡಿ ಬಹು ಮೆಲ್ಲಗೆ ಕೇಳಿದಳು. ನನಗೆ ರೇಗಿ ಹೋಯಿತು.

''ದೇವರ ಸಲುವಾಗಿಯಾದರೂ ಈ ಹುಡುಗಾಟವನ್ನು ಬಿಡು. ಇನ್ನೇನು ಮುಂದೆ ಇದು ಯಾವ ಶತಮಾನ ಎಂದು ಕೇಳೀಯಾ?'' ಎಂದು

ಗದರಿದೆ.

''ಹಾಂ. ಹಾಂ. ಇದು ಯಾವ ಶತಮಾನ?'' ಎಂದು ನಿಜವಾಗಿಯೂ ಕೇಳಿಯೇ ಬಿಟ್ಟಳು.

''ಇಪ್ಪತ್ತನೇ ಶತಮಾನ ಮಹರಾಯಿತಿ. ಇಸ್ಲಾಮಿ ರಜಬ್ಬಿನ ಹದಿನಾಲ್ಕನೆ ದಿನ. ತಿಂಗಳು ಫೆಬ್ರುವರಿ'' ಎಂದು ಸಿಡುಕಿನಿಂದ ನುಡಿದೆ.

''ಹೂಂ! ತಾರೀಖು ಏಳು .....'' ಎಂದು ನನ್ನ ಮಾತಿಗೆ ದನಿಗೂಡಿಸಿದಳು.

ನಾನು, ''ಅಹುದು'' ಎಂದು ತಲೆಯಲ್ಲಾಡಿಸಿದೆ. ಇದನ್ನು ಕೇಳುತ್ತಲೂ,

''ದೇವರೇ, ನಿನಗೆ ಕೃತಜ್ಞತೆಗಳು'' ಎಂದು ಉದ್ಗರಿಸಿದಳು.


''ನಾನೂ ದೇವರಿಗೆ ಕೃತಜ್ಞತೆಗಳನ್ನು ಅರ್ಪಿಸಬೇಕು. ಕೊನೆಗೂ ತಮಗೆ ಕಾಲ ತಾಣದ ಅರಿವಾಯತಲ್ಲ?'' ಎಂದು ತಪ್ತನಾಗಿ ನುಡಿದೆ.

''ಹೌದು! ಹೌದು!!'' ಎಂದು ತಕ್ಷಣ ಉತ್ತರಿಸಿ ಪವಿತ್ರ ಕ್ಷೇತ್ರದತ್ತ ಮುಖ ಮಾಡಿ ಎರಡೂ ಕೈಗಳನ್ನು ಮೇಲಕ್ಕೆತ್ತಿ, ಒಳ್ಳೆಯ ನಾಟಕೀಯ ರೀತಿಯಲ್ಲಿ ''ಓ! ದೇವರೆ! ನಿನಗೆ ಅನಂತ ಪ್ರಣಾಮಗಳು. ಈ ಆಟವನ್ನು ಇಂದು ಕೊನೆಯ ಬಾರಿಗೆ ಆಡಿದ್ದಾಯಿತು. ಇನ್ನು ನನ್ನ ಶಿಕ್ಷೆಯ ದಿನಗಳೂ ಪೂರೈಸಿದವು'' ಎಂದಳು.

ಇದನ್ನು ಕೇಳುತ್ತಲೂ ನನ್ನ ಸಹನೆಯ ಕಟ್ಟೊಡೆಯಿತು. ನಾನು ಮತ್ತೊಮ್ಮೆ ಅತಿ ಸಿಟ್ಟಿನಿಂದ, ''ದೇವರ ಸಲುವಾಗಿಯಾದರೂ ಈ ನಾಟಕವನ್ನು ನಿಲ್ಲಿಸಿ ಮಾನಿನಿ. ತಾವು ನನ್ನನ್ನು ಮೂರ್ಖನೆಂದು ಬಗೆದಿದ್ದೀರಿ ಅಥವಾ ಸಂತೋಷದ ಭರದಲ್ಲಿ, ತಾವು ಅತ್ಯುತ್ತಮ ಕಲಾವಿದೆಯೆಂದು ತಿಳಿದಿದ್ದೀರಿ ನೆಟ್ಟಗೆ ನನ್ನೊಡನೆ ಬನ್ನಿರಿ, ಇಲ್ಲದಿದ್ದರೆ ನಾನು ಹೊರಟೆ. ದೇವರು ತಮ್ಮನ್ನು ರಕ್ಷಿಸಲಿ'' ಎನ್ನುತ್ತ ನಾನು ತಿರುಗಿ ಹಿಮಾಯತ್ ಸಾಗರದ ಕಡೆಗೆ ತೀವ್ರಗತಿಯಿಂದ ಹೊರಟೆ.

''ದೇವರ ಸಲುವಾಗಿಯಾದರೂ ನಿಲ್ಲು ನನ್ನ ಮಾತನ್ನಾದರೂ ಕೇಳು ....'' ಎನ್ನುತ್ತ ರಭಸದಿಂದ ಮುಂದೆ ಬಂದು ನನ್ನ ಕೈ ಹಿಡಿದು ನಿಲ್ಲಿಸಿ,

ಹೆಬ್ಬಾಳದಲ್ಲಿ 'ಬೇಕರಿ' ಶಾಲೆ - ಸುದ್ದಿ



''ನಾವೂ ಅದೇ ಶಾಲೆಗೆ ಹೋಗೋಣವಾಂತ ... ಬ್ರೆಡ್ - ಕೇಕ್ಸ್ ಕೊಡಬಹುದು!''

ನನ್ನ ಭುಜದ ಮೇಲೆ ತನ್ನ ತಲೆಯನ್ನಿರಿಸಿದಳು. ಕೂಡಲೇ ಒಂದು ವಿಚಿತ್ರವಾದ ಮತ್ತು ಬೀರುವ ಸುಗಂಧದ ಕಂಪು ನನ್ನನ್ನು ಆವರಿಸಿತು. ನನಗೇನಾಯಿತೋ ದೇವರಿಗೇ ಗೊತ್ತು. ನಾನು ಅವಳ ಕೈಯನ್ನು ಹಿಡಿದುಕೊಂಡೆ. ಈಗ ಅವಳು ನನ್ನ ತೀರ ಹತ್ತಿರವಿದ್ದಳು ಮತ್ತು ಬೆಳದಿಂಗಳಲ್ಲಿ ಅವಳ ಮುಖ ಸ್ಪಷ್ಟವಾಗಿ ಕಾಣುತ್ತಿತ್ತು. ಮನಮೋಹಕ ವರ್ಣ, ದುಂಡನ್ನ ಮುಖ, ಮಾಟಾದ ಗದ್ದ, ನೀಳ ನಾಸಿಕ, ದೊಡ್ಡ ದೊಡ್ಡ ಹೊಳೆಯುವ ಕಣ್ಣುಗಳು, ದಟ್ಟವಾದ ಕಪ್ಪು ಕೂದಲು. ಅಚ್ಚಿನಲ್ಲಿ ಹಾಕಿ ತೆಗೆದಂಥ ಪ್ರಮಾಣಬದ್ಧ ದೇಹ. ಏನು? ನಾನು ಕನಸು ಕಾಣುತ್ತಿದ್ದೇನೆಯೆ .....? ಇಷ್ಟು ಚೆಲುವಾದ ರೂಪಗಳಂತೂ ಕನಸಿನಲ್ಲಿ ಮಾತ್ರ ಕಾಣುವವು. ಕಾಲ ಚಲಿಸದೆ ಹಾಗೆಯೇ ನಿಂತು ಬಿಡಲಿ ಎಂದು ಮನಸ್ಸಿಗನಿಸಿತು. ಅವಳು ಇದರಂತೆಯೇ ನನ್ನ ಹತ್ತಿರ ನಿಂತಿರಲಿ. ಈ ಸುಂದರ ಕ್ಷಣಗಳು ಶತಮಾನಗಳಾಗಿ ಪರಿಣಮಿಸಲಿ, ಎನಿಸಿತು.

ಅವಳು ಏಕಾಏಕಿ ನಿಟ್ಟುಸಿರು ಬಿಟ್ಟಳು. ಆಗ

ನನಗೆ ಪ್ರಶ್ನೆ ಮೂಡಿತು.

''ಎಲ್ಲಿಗೆ ತಲುಪಿಸಲಿ ನಿನ್ನನ್ನು?'' ಎಂದು ನಾನು ಮೆಲ್ಲಗೆ ಕೇಳಿದೆ.

''ಎಲ್ಲಿಗೂ ಬೇಡ ..... ಈಗಂತೂ, ನೀನು ಬಯಸಿದಲ್ಲಿಗೆ ನನ್ನನ್ನು ಕರೆದುಕೊಂಡು ಹೋಗು. ಇಂದು ಬಹುಪವಿತ್ರವಾದ ಗುರುವಾರ. ಇಂದಿನ ರಾತ್ರಿ ನೀನು ಬಯಸುವವರೆಗೆ ನಾನು ನಿನ್ನ ಜೊತೆ ಇರುವೆ'' ಎಂದು ಉತ್ತರಿಸಿದಳು.

''ಆ ನಂತರ?'' ಎಂದು ಹೊಡೆದುಕೊಳ್ಳುತ್ತಿರುವ ಹೃದಯದಿಂದ ಕೇಳಿದೆ.

''ಆ ನಂತರ ಮತ್ತೆ ತಿಂಗಳವರೆಗೆ ನಾನು ಹೊರಟುಹೋಗುವೆ'' ಎಂದು ನುಡಿದಳು.

''ಆದರೆ ಎಲ್ಲಿಗೆ?'' ಎಂದು ವ್ಯಾಕುಲ ಚಿತ್ತನಾಗಿ ಕೇಳಿದೆ.

''ಹೇಳಿದರೆ, ನೀನು ನಂಬುವುದಿಲ್ಲ'' ಎಂದಳು. ಹಾಗೆನ್ನುತ್ತಲು ನನ್ನ ಮುಖದ ಮೇಲೆ ಉದಾಸೀನತೆಯ ಛಾಯೆ ಮೂಡಿತು. ಇದನ್ನು ಅವಳೂ ಕಂಡಳು. ಮತ್ತು ತಕ್ಷಣ, ''ದೇವರನ್ನು ನಂಬಿಯಾದರೂ ನನ್ನ ಮೇಲೆ ವಿಶ್ವಾಸವಿಡು. ನಾನು ನಿಜ ಹೇಳುತ್ತಿದ್ದೇನೆ. ನೀನು ರೂಪಿ ಗುಲ್ಬದನ್ ಬೇಗಮ್‌ಳ ಹೆಸರನ್ನು ಕೇಳಿರುವಿಯೋ ಇಲ್ಲವೋ? ಆ ಸಮಾಧಿಯನ್ನು ನೋಡಿರುವಿಯಲ್ಲ?'' ಎಂದು ತಿರುಗಿ ಕೈ ಮಾಡಿ ಅದನ್ನು ತೋರಿಸಿದಳು.

''ಅದು ಗುಲ್ಬದನ್‌ಳ ಸಮಾಧಿ. ಅವಳ ಹೆಸರು ರೂಪಿ ಎಂದಿತ್ತು'' ಆದರೆ ಅವಳು ಗುಲ್ಬದನ್ ಬೇಗಮ್‌ಳ ಹೆಸರಿನಿಂದ ಪ್ರಸಿದ್ಧಳಾದಳು. ಅವಳು ಸಾವಿರಾರು ಹೃದಯವನ್ನಾಳುತ್ತಿದ್ದ ಗೋಲ್ಕುಂಡಾ ಕೋಟೆಯ ಸುಪ್ರಸಿದ್ಧ ಗಾಯಕಿ. ರೂಪಸಿ ಇದ್ದಷ್ಟೇ ಕಠೋರ ಹೃದಯದವಳೂ ಆಗಿದ್ದಳು. ಶ್ರೀಮಂತ ತರುಣರನ್ನು ತನ್ನ ಅನುರಾಗದ ಜಾಲದಲ್ಲಿ ಸಿಕ್ಕಿಸಿ ವಿಲಿವಿಲಿ ಒದ್ದಾಡಿಸಿ ಕೊಲ್ಲುವುದರಲ್ಲಿ ಅವಳಿಗೆ ಬಹು ಆಸಕ್ತಿ ಇತ್ತು. ಈ ಭಯಾನಕ ಆಟದಲ್ಲಿ ಅವಳಿಗೆ ಹುಚ್ಚು ಹಿಡಿಯುವಷ್ಟು ಪ್ರೀತಿ ಇತ್ತು. ಈ ಆಟಕ್ಕೆ ಬಲಿಯಾಗಿ ಅದೆಷ್ಟು ತರುಣರು ತಮ್ಮ ಪ್ರಾಣವನ್ನು ತೆತ್ತರೋ!'' ಎಂದು ಹೇಳುತ್ತ ನಿಂತುಕೊಂಡಳು. ಗಾಳಿಯಿಂದ ಅವಳ ಕುರುಳಿನ ತುಂಟ ಸುಳಿಯೊಂದು ಅವಳ ಕಣ್ಣೆದುರು ಬಂದಿತು. ಅದನ್ನವಳು ತನ್ನ ಕೈಯಿಂದ ಎತ್ತಿ ಸರಿಸಿಕೊಂಡಳು.

''ಈ ಕಥೆಯನ್ನು ನೀನು ನನಗೇಕೆ ಹೇಳುತ್ತಿರುವೆ? ನಾನೇನು ಅಷ್ಟು ಮೂರ್ಖನಾಗಿ ಕಾಣುತ್ತಿರುವೆನೆ?'' ಎಂದು ನೀರಸವಾಗಿ ಕೇಳಿದೆ.

''ಇಲ್ಲ, ಇಲ್ಲ, ಇಲ್ಲ - ದೇವರ ಸತ್ಯವಾಗಿಯೂ ಇಲ್ಲ'' ಎಂದು ತೀಕ್ಷ್ಣವಾಗಿ ನುಡಿದಳು. ''ನನ್ನ ಕಡೆಗೆ ನೋಡು! ನೀನು ಇಂಥ ಉಡುಪನ್ನು ನೋಡಿದ್ದೀಯಾ? ನನ್ನ ಮೈಮೇಲಿರುವ ಈ ಆಭರಣಗಳನ್ನು ಲಕ್ಷ್ಯಗೊಟ್ಟು ನೋಡು. ನಿಮ್ಮ ಕಾಲದ ಹೆಂಗಸರು ಇಂಥ ಆಭರಣಗಳನ್ನು ಧರಿಸುತ್ತಾರೆಯೆ? ನಾನು ಲೇಪಿಸಿಕೊಂಡ ಈ ಸುಗಂಧವನ್ನು ನಿಮ್ಮ ಕಾಲದವರು ಉಪಯೋಗಿಸುತ್ತಾರೆಯೆ? ಏನು ಈಗಲೂ ವಿಶ್ವಾಸವಾಗಲಿಲ್ಲವೆ? ನಾನು ರೂಪಿ ಗುಲ್ಬದನ್ ಎನ್ನುವುದು .....! ಗೋಲ್ಕೊಂಡಾ ಕೋಟೆಯ ಪ್ರಸಿದ್ಧ ಗಾಯಕಿ. ಯಾವಳ ದೇಹ ಆ ಎರಡೂವರೆನೂರು ವರ್ಷದ ಹಳೆಯ ಸಮಾಧಿಯ ಅಡಿಯಲ್ಲಿ ಹೂಳಿಡಲಾಗಿದೆಯೋ ಅವಳೇ ನಾನು. ಆದರೆ ಅವಳ ಆತ್ಮ ಅನೇಕ ವರ್ಷಗಳಿಂದ ಈ ಪಾಳುಬಿದ್ದ ಪ್ರದೇಶದಲ್ಲಿ ತನ್ನನ್ನು ಬಿಡುಗಡೆ ಮಾಡುವ ಉಪಕಾರಿಯ ನಿರೀಕ್ಷೆಯಲ್ಲಿ ವಿಮುಕ್ತಿಗಾಗಿ ಅಲೆಯುತ್ತಿದೆ. ಪ್ರತಿ ಶುಕ್ಲಪಕ್ಷದ ಗುರುವಾರದಂದು ಇಲ್ಲಿ ಒಂದು ಭಯಾನಕ ಆಟವನ್ನು ಆಡಲಾಗುತ್ತದೆ. ಪ್ರತಿ ತಿಂಗಳೂ ನಿಷ್ಕರುಣೆಯಿಂದ ನನ್ನನ್ನು ಇದರಂತೆಯೇ ಕೊಲ್ಲಲಾಗುತ್ತದೆ. ಎರಡೂವರೆನೂರು ವರ್ಷಗಳ ಕೆಳಗೆ ಒಂದು ರಾತ್ರಿ ಹೀಗೆಯೇ ನನ್ನನ್ನು ಕೊಲೆ ಮಾಡಿದ್ದರು. ಆದರೆ ದೇವರ ಆಣೆ. ಇನ್ನು ಈ ಆಟ ಇಲ್ಲಿ ಎಂದಿಗೂ ನಡೆಯುವುದಿಲ್ಲ. ಹಿರಿಯರೊಬ್ಬರು ತಮ್ಮ ತರುಣ ಪುತ್ರನ ಕೊಲೆಯನ್ನು ಕಂಡು ನನಗೆ ಶಾಪವನ್ನು ಕೊಟ್ಟಿದ್ದರು. ನೂರಾರು ವರ್ಷಗಳ ಮೇಲೆ ಯಾವುದೋ ಶುಕ್ಲಪಕ್ಷದ ಗುರುವಾರ

ದಂದು ಒಬ್ಬ ಆಗಂತುಕ ಬರುವ. ಅವನು ನನ್ನನ್ನು ಈ ಶಾಪದಿಂದ ಬಿಡುಗಡೆ ಮಾಡುವ. ಅಂದು ಅವನು ಆಡುವ ಮಾತು ನನಗೆ ತಿಳಿಯುವುದಿಲ್ಲ. ಅವನು ಹಾಕಿಕೊಂಡ ಉಡುಪು ನನಗೆ ವಿಚಿತ್ರವೆನಿಸುವುದು ಎಂದು ಅವರು ನುಡಿದಿದ್ದರು. ಇಂದು ಆ ಭವಿಷ್ಯವಾಣಿ ಪೂರ್ಣವಾಯಿತು. ಈಗ ನನಗೆ ಶಾಂತಿ ಸಿಕ್ಕಿತು. ನಾನು ನನ್ನ ಪಾಪದ ಪ್ರಾಯಶ್ಚಿತ್ತವನ್ನು ಮಾಡಿಕೊಂಡಿದ್ದೇನೆ. ದೇವರ ಸಲುವಾಗಿಯಾದರೂ ನನ್ನನ್ನು ಈ ಬಿರುಗಣ್ಣಿನಿಂದ ನೋಡಬೇಡ...... ಇಂದು ಬಹಳ ಪವಿತ್ರವಾದ ರಾತ್ರಿ. ಎಂದು ಅತ್ಯಂತ ಪ್ರೀತಿಯಿಂದ ಮುಗುಳು ನಗುತ್ತ ನನ್ನ ಹಸ್ತವನ್ನು ಮೃದುವಾಗಿ ಅದುಮಿದಳು. ಅವಳ ಕೈ ಬಿಸಿಯಾಗಿತ್ತು. ನನಗೆ ಕೂಡಲೇ ತಲೆ ಸುತ್ತು ಬಂದಂತಾಯಿತು. ಈ ಭೂಮಿ, ಈ ಆಕಾಶ, ಅವಳ ಸುಂದರ ಮುಖ, ಅವಳ ಆಕರ್ಷಕ ದೇಹ ಎಲ್ಲವೂ ಗಿರ್ರನೇ ತಿರುಗಿದಂತಾಯಿತು.

ಕಥೆಯನ್ನು ಇಲ್ಲಿಯವರೆಗೆ ಹೇಳಿ ನಾನು ಸುಮ್ಮನಾದೆ. ನನ್ನ ಪೈಪೂ ಆರಿ ಹೋಗಿತ್ತು. ನಾನು ಜೇಬು ಹುಡುಕಿ ಲೈಟರ್ ತೆಗೆದೆ. ಅದನ್ನು ಹೊತ್ತಿಸಲು ಪ್ರಯತ್ನಿಸಿದೆ. ಎಲ್ಲರೂ ಉಸಿರೇ ಇರದವರಂತೆ ಮಂತ್ರ ಮುಗ್ಧರಾಗಿ ಕುಳಿತು ನನ್ನನೇ ನೋಡುತ್ತಿದ್ದರು. ಕೆಲವು ಕ್ಷಣ ಭಯಾನಕ ನಿಃಶಬ್ದ ಆವರಿಸಿತು.

''ಮತ್ತೇನಾಯಿತು?'' ಎಂದು ಕಂಪಿಸುವ ಧ್ವನಿಯಿಂದ ಸಯೀದಾ ಮೆತ್ತಗೆ ಕೇಳಿದಳು.

''ಮತ್ತೆ ಮತ್ತೆ ನಾನು ಮೂರ್ಛೆ ಹೋಗಿ ಬಿದ್ದು ಬಿಟ್ಟೆ. ಪ್ರಜ್ಞೆ ಬಂದಾಗ ನೋಡಿದರೆ, ನಾನು ಇರುತ್ತಿದ್ದ ಹಿಮಾಯತ್ ಸಾಗರದ ಡಾಕ್ ಬಂಗ್ಲೆಯಲ್ಲಿದ್ದೆ. ಅಂದು ರಾತ್ರಿ ನಾನು ಪಟ್ಟಣದಿಂದ ವಾಪಸ್ಸು ಬಾರದಿದ್ದಾಗ, ಸ್ನೇಹಿತರು ಗಾಬರಿಯಾಗಿ ಪಟ್ಟಣಕ್ಕೆ ಟೆಲಿಫೋನ್ ಮಾಡಿದ್ದರು. ಅಲ್ಲಿಂದ ಅವರಿಗೆ ನಾನು ಹಿಮಾಯತ್ ಸಾಗರಕ್ಕೆ ಹೊರಟು ಹೋಗಿದ್ದೇನೆಂಬ ವಿಷಯ ತಿಳಿಯಿತು. ಜನರು ನನ್ನನ್ನು ಹುಡುಕಲು ಹೊರಟರು. ಡಾಕ್ಟರ್ ಕಾದೀರುದ್ದೀನರ ಹೇಳಿಕೆಯ ಪ್ರಕಾರ ನಾನು ಸಮಾಧಿಯ ಬಳಿಯೇ ಬಿದ್ದಿದ್ದೆ. ಅವರೇ ನನ್ನನ್ನು ಮೊದಲಿಗೆ ನೋಡಿದವರು. ಬಿಳಿ ವಸ್ತ್ರಧರಿಸಿದ ಒಬ್ಬ ಹೆಂಗಸು ನನ್ನ ಹತ್ತಿರ ನಿಂತಿದ್ದನ್ನೂ ಅವರು ನೋಡಿದ್ದರು. ಆದರೆ ಅವರು ಹತ್ತಿರ ಬಂದಾಗ ಅಲ್ಲಿ ಏನೂ ಇರಲಿಲ್ಲ. ಹಾಂ! ಯಾವುದೋ ಚೆನ್ನಾದ ಅತ್ತರಿನ ಮತ್ತು ಬೀರುವ ಸುಗಂಧದ ಕಂಪು ನನ್ನನ್ನು ಆವರಿಸಿತ್ತು '' ಎಂದು ಹೇಳಿ ಮಾತು ನಿಲ್ಲಿಸಿದೆ. ಮತ್ತೊಮ್ಮೆ ನಿಃಶಬ್ದತೆ ಕವಿಯಿತು. ಈಗ ಎಲ್ಲ ಅತಿಥಿಗಳೂ ಇನ್ನೂ ನನ್ನ ಸಮೀಪಕ್ಕೆ ಬಂದರು.

''ನೀವು ಮತ್ತೆ ಮತ್ತೆ ಸುಮ್ಮನೇಕಾಗುತ್ತೀರಿ? ಮತ್ತೇನಾಯಿತು?'' ಎಂದು ನಾಜೂ ಅವರು ವ್ಯಾಕುಲರಾಗಿ ಕೇಳಿದರು.

''ಮತ್ತೆ .....? ಮತ್ತೆ ನಾನು ಪಾಕಿಸ್ತಾನಕ್ಕೆ ಬಂದು ಬಿಟ್ಟೆ. ಆದರೆ ಅವಳು ತನ್ನ ವಚನವನ್ನು

ಸ್ವಾತಂತ್ರ್ಯ



ನಿನ್ನ ಕಣ್ಣ ರೆಪ್ಪೆ ಮುಚ್ಚಿ
ಎದೆಗೂಡಲ್ಲಿ ಕೂಡಿಟ್ಟೆಯಾ
ಹಿಂಸೆ ಕೊಡದ ಬಂಧನಕ್ಕೆ
ಸ್ವಾತಂತ್ರ್ಯದ ಹಂಗಿಲ್ಲ.

ಸುಧಾ ಶರ್ಮಾ

ಪಾಲಿಸುತ್ತಿದ್ದಾಳೆ. ಪ್ರಾಯಶಃ ನಾನು ಜೀವಂತವಿರುವವರೆಗೆ ಅವಳು ಪಾಲಿಸುತ್ತಲೇ ಇರುತ್ತಾಳೆ'' ಎಂದು ಸಾವಕಾಶವಾಗಿ ಹೇಳಿದೆ.

''ಆಗುತ್ತದಾದರೂ ಏನು .....? ಏನು .....? ಈಗಲೂ ಅವಳು ನಿಮಗೆ ಕಾಣುತ್ತಾಳೆಯೇ ......? ನಿಮ್ಮನ್ನು ಭೇಟಿಯಾಗುತ್ತಾಳೆಯೇ?'' ಎಂದು ಜಾಹಿದ್‌ಖಾನ್ ಕೇಳಿದರು. ಅವರ ಧ್ವನಿಯಿಂದ, ಅವರು ನನ್ನ ಮಾತಿನ ಮೇಲೆ ವಿಶ್ವಾಸ ಮಾಡುತ್ತಿಲ್ಲವೆಂಬುದು ಸ್ಪಷ್ಟ ಗೋಚರವಾಗುತ್ತಿತ್ತು. ನನ್ನ ಕಥೆಯನ್ನು ಅವರು ಕಟ್ಟು ಕಥೆಯೆಂದೇ ಭಾವಿಸಿದ್ದರು.

''ಇದು ಗುಟ್ಟಿನ ವಿಷಯ ಇಂಥ ಮಾತುಗಳನ್ನು ತುಂಬಿದ ಸಭೆಯಲ್ಲಿ ಆಡುವುದಕ್ಕಾಗುವುದಿಲ್ಲ. .!.... ಆಂ ..... ಏನಂತೀರಿ ....? ಹಾಂ! ಆಗಲಿ ಇನ್ನೊಂದು ಸಲ ಕಾಫಿ ರೌಂಡು .....? ಹನ್ನೆರಡು ಗಂಟೆ ಹೊಡೆಯುವ ಮೊದಲು ನಾನು ಮಲಗಬೇಕೆಂದಿದ್ದೇನೆ'' ಎಂದು ನಾನು ದಣಿವಿನಿಂದ ಆಕಳಿಸಿದೆ. ಕಾಫಿಯ ವ್ಯವಸ್ಥೆ ಆಗುವ ಮೊದಲಿಗೇನೇ ನಾಜಮಾಳ ಬಾಯಿಯಿಂದ ಚಿಕ್ಕ ಚೀತ್ಕಾರ ಹೊರಟಿತು. ಅವಳು ಬಾಯಿ ಮೇಲೆ ಕೈ ಇಟ್ಟುಕೊಂಡು ಕಣ್ಣುಗಳನ್ನು ಅಗಲವಾಗಿ ಅರಳಿಸಿ ಭಯಭೀತಳಾಗಿ ದೊಡ್ಡ ಕಿಟಕಿಯ ಕಡೆಗೆ ನೋಡುತ್ತಿದ್ದಳು. ಎಲ್ಲರ ದೃಷ್ಟಿಯೂ ಅವರಿಗರಿಯದಂತೆಯೇ ಆ ಕಡೆಗೆ ತಿರುಗಿತು. ಕಿಟಕಿಯ ಪರದೆ ಸರಿಸಲ್ಪಟ್ಟಿತ್ತು. ಒಂದು ಫಡಕು ಬಾಗಿಲವೂ ತೆರೆದಿತ್ತು.

''ಬಹುತೇಕ ಅವಸರದಲ್ಲಿ ತೆರೆದಿರಬೇಕು'' ಅನ್ನುತ್ತಲೇ ಜಾಹಿದ್ ಎದ್ದರು.

''ಇಲ್ಲ ನಾನು ನನ್ನ ಕೈಯಿಂದಲೇ ಚೆನ್ನಾಗಿ ಮುಚ್ಚಿದ್ದೆ'' ಎಂದು ಸಯೀದಾ ನುಡಿದು ಛಟ್ಟನೇ ಎದ್ದು ಕಿಟಕಿಯತ್ತ ನಡೆದಳು. ಮರುಕ್ಷಣ ಅವಳು ಚಿಟ್ಟನೇ ಚೀರಿದಳು. ಆಗ ಎಲ್ಲರೂ ಅವಳೆಡೆಗೆ ಧಾವಿಸಿದರು. ಹೊರಗೆ ನೋಡಿದರೆ ಏನೂ ಇರಲಿಲ್ಲ. ಆದರೆ ಹೊರಗಿನಿಂದ ಯಾವುದೋ ಚೆನ್ನಾದ ಅತ್ತರಿನ ಮತ್ತುಬೀರುವ ಸುಗಂಧದ ಕಂಪು ಸೂಸಿ ಬರುತ್ತಿತ್ತು. ಅದು ನೋಡುನೋಡುತ್ತಿರುವಲ್ಲಿ ಇಡೀ ರೂಮನ್ನೇ ಆಕ್ರಮಿಸಿಕೊಂಡಿತು.

''ಆ ಮರದ ಹತ್ತಿರ ನೋಡಿ .....! ಬಿಳಿಯ ಉಡುಪಿನಲ್ಲಿ ..... ಈಗ ..... ಈಗ ಇದ್ದಳು'' ಎಂದು ಸಯೀದಾ ನಡುಗುತ್ತಿರುವ ಧ್ವನಿಯಲ್ಲಿ ಹೇಳಿದಳು. ಎಲ್ಲರೂ ತುಂಬ ಹೆದರಿದವರಂತೆ ಕಾಣುತ್ತಿದ್ದರು.

ಈ ಗಲಾಟೆಯಲ್ಲಿ ಇಂದು ಶುಕ್ಲಪಕ್ಷದ ಗುರುವಾರ ...., ಅಕಸ್ಮಾತ್ತಾಗಿ ಅದೂ ಏಳನೇ ತಾರೀಖು ಎಂಬುದು ಯಾರ ಗಮನಕ್ಕೂ ಬಂದಿರಲಿಲ್ಲ. ●

(ಉರ್ದು ಪತ್ರಿಕೆ 'ಬೀಸ್ವಿ ಸದಿ' ಕೃಪೆಯಿಂದ)

''ಇಲ್ಲದಿರುವುದಕ್ಕಾಗಿ''

ಒಮ್ಮೆ ನೆಪೋಲಿಯನ್ ರಷ್ಯಾ ದೇಶಕ್ಕೆ ಭೇಟಿ ನೀಡಿದ್ದರು. ಓರ್ವ ಯುವತಿ ನೆಪೋಲಿಯನ್‌ರನ್ನು ''ನೀವು ಫ್ರೆಂಚ್ ಪ್ರಜೆಗಳೆಲ್ಲಾ ರಾಜ್ಯ, ಭೂಮಿ, ಧನ ಹಾಗೂ ಅಂದವಾದ ಸ್ತ್ರೀಯರಿಗಾಗಿ ಯುದ್ಧಗಳನ್ನು ಮಾಡುತ್ತೀರ. ಆದರೆ ನಾವು ರಷ್ಯನ್ನರು ಯಾವಾಗಲೂ ಗೌರವ, ಘನತೆಗಳಿಗಾಗಿ ಯುದ್ಧ ಮಾಡುತ್ತೇವೆ. ಏಕೆ ಹೇಳಬಲ್ಲಿರಾ?'' ಎಂದು ಪ್ರಶ್ನಿಸಿದಳು.

ಅದಕ್ಕೆ ನೆಪೋಲಿಯನ್ ಉತ್ತರ ಕೊಡುತ್ತಾ, ''ನೀವು ಹೇಳುವುದು ನಿಜವೇ! ಯಾರಾದರೂ ಸರಿಯೇ ತಮ್ಮ ಬಳಿ ಇಲ್ಲದಿರುವುದಕ್ಕಾಗಿಯೇ ಯುದ್ಧ ಮಾಡುತ್ತಾರೆ ಅಲ್ಲವೇ?'' ಎಂದು ಚುಟುಕು ಹಾರಿಸಿದರಂತೆ. ●

(ಸಂಗ್ರಹ) ಜೆ.ವಿ.ಪ್ರಭು

ಬೈಕಲ್ ಸರೋವರ

ಪ್ರಪಂಚದಲ್ಲಿ ಆಳವಾದ ಸಿಹಿನೀರಿನ ಸರೋವರವೆಂದರೆ ಬೈಕಲ್ ಸರೋವರ. ಈ ಸರೋವರ ಸೋವಿಯತ್ ದೇಶದ ಸೈಬೀರಿಯಾದ ಮಧ್ಯಭಾಗದಲ್ಲಿದೆ. ಈ ಸರೋವರದ ಆಳ 1620 ಮೀಟರ್‌ಗಳು. ಸುತ್ತಳತೆ 31,500 ಕಿ.ಮೀ.ಗಳು. ಹೆಚ್ಚು ಕಡಿಮೆ ಬೆಲ್ಜಿಯಂ ದೇಶದ ವಿಸ್ತಾರದಷ್ಟಿದೆ. ಈ ಸರೋವರದಲ್ಲಿ ಸುಮಾರು 23,000 ಘನ ಕಿ.ಮೀ. ಗಳಷ್ಟು ನೀರು ತುಂಬುತ್ತದೆ. ಅಂದರೆ ಸೋವಿಯತ್ ರಷ್ಯಾದ ಸುಮಾರು ಶೇ. 80 ರಷ್ಟು ಸಿಹಿನೀರು ಈ ಸರೋವರವೊಂದರಲ್ಲೇ ಶೇಖರವಾಗುತ್ತದೆ. ಬೈಕಲ್ ಸರೋವರದ ಒಂದು ತುದಿಯಿಂದ ಮತ್ತೊಂದು ತುದಿಗಿರುವ ದೂರ ಮಾಸ್ಕೊ ನಗರದಿಂದ ಲೆನಿನ್‌ಗ್ರಾಡ್‌ಗಿರುವ ದೂರಕ್ಕಿಂತಲೂ ಜಾಸ್ತಿ.

ಸರೋವರದ ಅಗಲ 80 ಕಿ.ಮೀ. ಕೆಲವು ಕಡೆ 19ಮೀ.ಗಳಷ್ಟು ಮಾತ್ರ ಅಗಲವಾಗಿದೆ. ಈ ಸರೋವರ ಸುಮಾರು ಮುವ್ವತ್ತು ದ್ವೀಪಗಳನ್ನೊಳಗೊಂಡಿದೆ. ಆ ದ್ವೀಪಗಳೆಲ್ಲ ಬರೀ ಕಲ್ಲುಗಳಿಂದ ತುಂಬಿವೆ. ಇವುಗಳಲ್ಲಿ ಓಲ್ಖಾನ್ ಎನ್ನುವದ್ವೀಪವೊಂದು 7,000 ಚ.ಕಿ.ಮೀ.ನಷ್ಟು ವಿಸ್ತಾರವಾಗಿದೆ. ಬೇರೆ ದ್ವೀಪಗಳು ಚಿಕ್ಕದಾಗಿದ್ದು ಜನವಸತಿಗೆ ಯೋಗ್ಯವಾಗಿಲ್ಲ.

ಪ್ರತಿವರ್ಷ ಈ ಸರೋವರದ ಮೇಲೆ 18 ರಿಂದ 148 ದಿನಗಳು ವೇಗದ ಗಾಳಿ ಬೀಸಿ ಸುಮಾರು ಇಪ್ಪತ್ತು ಚಂಡಮಾರುತಗಳು ಹುಟ್ಟುತ್ತವೆ.

ಅತಿ ಶೀತ ಪ್ರದೇಶವಾದ ಸೈಬೀರಿಯಾದ ಮಧ್ಯಭಾಗದಲ್ಲಿ ಈ ಸರೋವರವಿದ್ದರೂ ಕಪ್ಪುಸಮುದ್ರಕ್ಕಿಂತಲೂ ಹೆಚ್ಚಿನ ಬಿಸಿಲು ದಿನಗಳನ್ನು ಪಡೆಯುತ್ತದೆ. ಬೈಕಲ್ ಸರೋವರ ಹುಟ್ಟಿ ಸುಮಾರು 25 ದಶಲಕ್ಷ ವರ್ಷಗಳಾದರೂ ಅದರ ಬಾಹ್ಯನೋಟ ನೋಡಿದರೆ ಅಷ್ಟು ವರ್ಷಗಳಾದಂತೆ ಕಂಡು ಬರುವುದಿಲ್ಲ. ಈ ಸರೋವರ ಪ್ರತಿವರ್ಷವೂ ಸುಮಾರು ಎರಡು ಸೆ.ಮೀ.ಗಳಂತೆ ಹರಡುವುದನ್ನು ನೋಡಿದ ಭೂಗರ್ಭ ವಿಜ್ಞಾನಿಗಳು ಇದೊಂದು ಸಾಗರವಾಗಿ ರೂಪಗೊಳ್ಳುತ್ತದ ಎನ್ನುತ್ತಾರೆ.

ಮತ್ತೊಂದು ವಿಶೇಷತೆ ಎಂದರೆ, ಬೈಕಲ್ ಸರೋವರ ಭೂಕಂಪನಾ ಪ್ರದೇಶದಲ್ಲಿದೆ. ಮಧ್ಯೆ ವಿಷ್ಮಾದ ಆಳವಾದ ಭೂಕಂಪನಾ ಬಿರುಕಿನ ಮೇಲಿದೆ. ಈ ಬಿರುಕು ವಿಸ್ತರಿಸುತ್ತಾ, ಆಳವಾಗುತ್ತಾ ಹೋಗುವುದರಿಂದ ಈ ಭಾಗದಲ್ಲಿ ಭೂಕಂಪಗಳು ಸಂಭವಿಸುತ್ತವೆ ಎಂದು ಭೂ ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಇನ್ನು ಬೈಕಲ್ ಸರೋವರದಲ್ಲಿ ಸುಮಾರು 2,600 ವಿಧದ ಸಸ್ಯ ಮತ್ತು ಪ್ರಾಣಿಗಳನ್ನು ನಾವು ಕಾಣಬಹುದು. ಈ ಸರೋವರದ ನೀರು ಕುಡಿಯಲು ಯೋಗ್ಯವಾಗಿದೆ. ಉತ್ತಮವಾದ ಖನಿಜಾಂಶವನ್ನು ಹೊಂದಿದೆ. ಈ ಸರೋವರದ ಮೇಲ್ಭಾಗದ ನೀರಿನ ಪದರುಗಳು ಮತ್ತು ತಳಭಾಗದ ನೀರಿನ ಪದರುಗಳು ಆಮ್ಲಜನಕದಿಂದ ತುಂಬಿವೆ.

ಹೀಗೆ, ಈ ಭಾಗದ ಜನಗಳಿಗೆ ಈ ಸರೋವರವೊಂದು 'ವರಪ್ರಸಾದ'ವಾಗಿದೆ.

(ಆಧಾರ)

ಎಚ್. ಗವಿಸಿದ್ದಯ್ಯ

ನೀತಿಕಥೆ

ಕರುಣೆಯ ಕಣ್ಣು

• ಪ. ರಾಮಕೃಷ್ಣ ಶಾಸ್ತ್ರಿ.

ವಿಶ್ವವಿಜೇತ ದೊರೆ ಅಲೆಗ್ಝಾಂಡರ್ ಹಲವಾರು ಯುದ್ಧ ಮಾಡಿದ. ಸಾಲು ಸಾಲಾಗಿ ಜನರನ್ನು ಸೆರೆ ಹಿಡಿದು ಗುಲಾಮರನ್ನಾಗಿ ಮಾಡಿಕೊಂಡ. ಒಂದು ಸಲ ಮಾರ್ಗದ ಮಧ್ಯೆ ಅವನಿಗೆ ಹಣದ ಅವಶ್ಯಕತೆ ಬಿದ್ದಿತು. ಅವನಲ್ಲಿದ್ದ ಸಂಗ್ರಹ ಬರಿದಾಗಿತ್ತು. ಆದ್ದರಿಂದ ಎಲ್ಲಾ ಗುಲಾಮರನ್ನು ಬಳಿಗೆ ಕರೆದು, "ನಿಮಗೆ ಸ್ವಾತಂತ್ರ್ಯ ಬೇಕೆ? ಇಲ್ಲಿ ಕಲ್ಲಿನ ಗಣಿಗಳಿವೆ. ಮೈ ಮುರಿದು ದುಡಿದು ಪ್ರತಿಯೊಬ್ಬರೂ ನನಗೆ ತಲಾ ಒಂದು ಸಾವಿರ ದಿನಾರದಂತೆ ತಂದುಕೊಡಿ. ನಿಮ್ಮನ್ನು ಬಿಡುಗಡೆ ಮಾಡುತ್ತೇನೆ" ಎಂದು ಸಾರಿದ.

ಸ್ವಾತಂತ್ರ್ಯದ ಆಶೆಯಿಂದ ಅನೇಕರು ಸುಡುಬಿಸಿಲಿನಲ್ಲಿ ದುಡಿತವಾರಂಭಿಸಿದರು. ಸರಿಯಾಗಿ ಆಹಾರ, ನೀರಿಲ್ಲದಿದ್ದರೂ ವಿಮುಕ್ತಿಯ ಆಶೆಯೊಂದೇ ಅವರಲ್ಲಿತ್ತು.

ಮೊತ್ತ ಮೊದಲಿಗೆ ಒಬ್ಬ ಯುವಕ ಸಾವಿರ ದಿನಾರ ತಂದು ದೊರೆಯ ಮುಂದಿರಿಸಿದ. ಅಲೆಗ್ಝಾಂಡರ್ ಮುಗುಳ್ನಕ್ಕು "ಸರಿ, ನಿನಗೆ ಬಿಡುಗಡೆಯಾಗಿದೆ, ಹೋಗಬಹುದು" ಎಂದ.

ಯುವಕ ಹೋಗಲಿಲ್ಲ. "ನನಗೆ ಹೋಗಲು ಅವಸರ ಏನಿಲ್ಲ. ಅವನನ್ನು ಬಿಡುಗಡೆ ಮಾಡಿ" ಎಂದು ಇನ್ನೊಬ್ಬ ಯುವಕನೆಡೆಗೆ ಕೈ ತೋರಿಸಿದ. ಆ ಯುವಕನಿಗೆ ಒಂದು ಕಾಲಿರಲಿಲ್ಲ. ಕೈಯೊಂದು ಡೊಂಕು.

"ಇದೇಕೆ ನೀನು ನಿನಗೆ ದೊರಕಿದ ಸ್ವಾತಂತ್ರ್ಯವನ್ನು ದೂರೀಕರಿಸುತ್ತಿ? ನೀನು ದುಡಿದು ಅವನನ್ನೇಕೆ ಬಿಡುಗಡೆ ಮಾಡುತ್ತಿ?" ದೊರೆ ಕೇಳಿದ.


"ನಾನಿನ್ನು ಸಶಕ್ತ. ನಿಧಾನವಾಗಿ ದುಡಿದು ಇನ್ನೊಂದು ಸಾವಿರ ಗಳಿಸಬಲ್ಲೆ. ಆದರೆ ಅವನು ಊನ. ದುಡಿಯಲಾರ. ಎಂದಿಗೂ ಋಣ ತೀರಿಸಿ ಬಿಡುಗಡೆಯಾಗಲಾರ. ಮನೆಯಲ್ಲಿರುವ ಮುದಿ ತಾಯಿಗೆ ಇವನೊಬ್ಬನೇ ಮಗ. ವ್ಯಾಧಿಯಿಂದ ಹಾಸಿಗೆ ಹಿಡಿದಿರುವ ಅವಳನ್ನು ಕಡೆಯ ವೇಳೆಯಲ್ಲಾದರೂ ನೋಡಬೇಕು ಅಂತ ಅವನು ಆಶಿಸುತ್ತಾನೆ. ಅವಳಿಗೂ ಅದೇ ಆಸೆ ಇದ್ದೀತು. ಅವನಿಗಾಗಿಯೇ ರಾತ್ರಿ, ಹಗಲು ದುಡಿದು ಎಲ್ಲರಿಗಿಂತ ಮೊದಲು ಹಣ ಸೇರಿಸಿದೆ" ಎಂದ ಯುವಕ.

ದೊರೆಯ ಹೃದಯ ಕರಗಿತು. ಕಣ್ಣು ಮಂಜಾಯಿತು. "ಇದೋ, ಈ ಹಣವನ್ನು ನಿನ್ನ ಒಳ್ಳೆಯ ಗುಣಕ್ಕೆ ನನ್ನ ಕಾಣಿಕೆ ಅಂತ ಭಾವಿಸಿ ತೆಗೆದುಕೋ. ನಿಮಗಿಬ್ಬರಿಗೂ ಬಿಡುಗಡೆ ಮಾಡಿರುವೆ. ಹೋಗಿ ಇಲ್ಲಿಂದ" ಎಂದ ಆತ.

ಸನ್ಯಾಸಿಯ ಮೂಲ ಹುಡುಕಿ ಹೊರಟರೆ... !

ಭಾರತದ ಸಾಧುಗಳು

* ಚಂದ್ರಕಾಂತ ವಡ್ಡು



ಒಂದು ತೀರ್ಥ ಕ್ಷೇತ್ರದಿಂದ ಮತ್ತೊಂದಕ್ಕೆ ಅಮೂರ್ತವಾದದ್ದೇನನ್ನೋ ಅರಸುತ್ತ ನಿರಂತರ ಅಲೆಯುವಿಕೆಯನ್ನೇ ಬದುಕಿನ ಮಾರ್ಗವಾಗಿ ಸ್ವೀಕರಿಸಿದ ಸಾಧು-ಸಂತರು ಭಾರತದ ತುಂಬೆಲ್ಲ ಕಾಣಸಿಗುತ್ತಾರೆ. ಸಾಧು, ಬಾವಾಜಿ, ಸನ್ಯಾಸಿ, ಸಂತ ಮುಂತಾಗಿ ನೂರೆಂಟು ನಾಮಗಳಲ್ಲಿ ಕರೆಸಿಕೊಳ್ಳುವ ಈ ಅಲೆಮಾರಿಗಳು ಭಾರತದ ಧಾರ್ಮಿಕ ಜೀವನದ ಅವಿಭಾಜ್ಯ ಅಂಗವೆಂದರೂ ಆದೀತು. ತರಹೇವಾರಿ ವೇಷಭೂಷಣಗಳಲ್ಲಿ ಕಾಣಸಿಕೊಳ್ಳುವ ಸಾಧುಗಳೆಲ್ಲರೂ ಯಾವುದೋ 'ಒಂದು' ಸಿದ್ಧಾಂತದ ಸೂರಿನಡಿ ಸಿಲುಕಲಾರರು. ಪ್ರತಿಯೊಬ್ಬರ ರೀತಿ ಅವರದೇ

ಆದ ವೈಶಿಷ್ಟ್ಯವುಳ್ಳದ್ದು; ಭಾಷೆ, ಪ್ರದೇಶಗಳ ಛಾಪು ನಿಚ್ಚಳ. ಬಹುಪಾಲು ಸಾಧುಗಳ ಉಡುಗೆ ಕಾವಿ ಅಥವಾ ಹಳದಿ ಬಣ್ಣದ ನಿಲುವಂಗಿಯಾದರೆ, ದಿಗಂಬರರು ಮತ್ತು ನಾಗಾಸಾಧುಗಳಿಗೆ ಬಟ್ಟೆಯ ಬಂಧನವಿಲ್ಲ. ಅನೇಕರು ತಮ್ಮ ತಲೆಗೂದಲನ್ನು ಸ್ವೇಚ್ಛೆಯಾಗಿ ಬೆಳೆಸಿ ತಲೆಯ ಮೇಲೆ ಕಿರೀಟಪ್ರಾಯವಾಗಿ ಜಟೆ ಕಟ್ಟಿದರೆ, ಕೆಲವರು ಥಳ ಥಳ ಹೊಳೆಯುವಂತೆ ನುಣ್ಣಗೆ ಬೋಳಿಸಿಕೊಂಡಿರುತ್ತಾರೆ ತಲೆಯನ್ನು. ಮತ್ತೆ ಕೆಲವರು ಮೈ ತುಂಬ ಚಿತಾಭಸ್ಮ ಬಳಿದುಕೊಂಡು ತಾವು ಸಾವಿನ ಭಯದಿಂದ ಮುಕ್ತರಾಗಿರುವುದನ್ನು ಸಂಕೇತಿಸುತ್ತಾರೆ. ರುದ್ರಾಕ್ಷಿ, ತಾಯಿತ ವಿವಿಧ ಬೀಜಗಳು ಲೋಹದಲ್ಲಿ ಚಿತ್ರಿಸಿದ ದೇವರ ಮೂರ್ತಿ ಇತ್ಯಾದಿಗಳೆಲ್ಲ ಸಾಧುಗಳ ಕೊರಳು ಬಳಸಿರುತ್ತವೆ. ಮನುಷ್ಯರ ಎಲುಬಿನಿಂದ ಮಾಡಿದ ಕಿವಿಯೋಲೆಗಳನ್ನೂ ಧರಿಸುವುದುಂಟು.

ಹಳ್ಳಿಗಾಡಿನಲ್ಲಿ ಸಾಧುಗಳಿಗೆ ವಿಶಿಷ್ಟ ಸ್ಥಾನ, ಗೌರವ, ಭಕ್ತಿ ಸಿಗುತ್ತವೆ. ಜನರು ಭಕ್ತಿಭಾವದಿಂದ ಕಾಲಿಗೆರಗುತ್ತಾರೆ; ಆದರಾತಿಥ್ಯದಿಂದ ಸಾಧುಗಳಿಗೆ ಆಹಾರ ನೀಡಿ ಪುನೀತರಾಗುವುದು ತಮ್ಮ ಕರ್ತವ್ಯವೆಂದು ಭಾವಿಸುತ್ತಾರೆ. ಅಘೋರಿಗಳು ಮತ್ತು ನಾಥಾ ಸಾಧುಗಳಿಗೆ ಅಪಾರವಾದ ಮಾನಸಿಕ ಶಕ್ತಿ ಇರುವುದಾಗಿ ಭಾವಿಸಲಾಗುವುದರಿಂದ ಜನರೆದೆಗಳಲ್ಲಿ ಭಯದ ಕಂಪನಗಳನ್ನು ಸೃಜಿಸಬಲ್ಲರು. ಅವರ ಶಾಪದ ನುಡಿಗಳು ವಿನಾಶಕಾರಿಗಳೆಂದೂ, ಹಾರೈಕೆಗಳು ಬದುಕಿನ ಸಂತಸಗಳನ್ನು ಇಮ್ಮಡಿಸಬಲ್ಲ ಶಕ್ತಿಯುಳ್ಳವೆಂದೂ ಪರಿಗಣಿಸಲಾಗುತ್ತದೆ. ಆಧುನಿಕ ಶಿಕ್ಷಣ ಪಡೆದ ಪಟ್ಟಣಿಗರಿಗೆ ಭಕ್ತಿಯ ಬದಲು ಸಂಶಯ. ಆದರೆ ಐದು ಸಾವಿರ ವರ್ಷ ಹಿಂದಿನ, ವೇದಪೂರ್ವ ಕಾಲದಷ್ಟು ಇತಿಹಾಸದ ಹಿನ್ನೆಲೆಯುಳ್ಳ ಸಾಧುಗಳ ಸಂತತಿ ಅಖಂಡವಾಗಿ ಮುಂದುವರಿದುಕೊಂಡು ಬಂದಿರುವುದರ ಜೊತೆಗೆ ತಮ್ಮದೇ ಆದ ಸಾಂಸ್ಕೃತಿಕ ವೈಶಿಷ್ಟ್ಯ ಉಳಿಸಿಕೊಂಡಿದೆ ಎಂಬ ಸತ್ಯ ನಮ್ಮದುರಿಗಿದೆ.


ಸಾಧುಗಳ ಮೂಲ ಶೋಧನೆಯಲ್ಲಿ ತೊಡಗಿದರೆ, ಕ್ರಿ.ಪೂ. ಮೂರು ಸಾವಿರ ವರ್ಷಗಳಷ್ಟು ಹಿಂದಿನ ಸಿಂಧೂ ಕಣಿವೆ ನಾಗರೀಕತೆಯ ಪಳೆಯುಳಿಕೆಗಳಲ್ಲಿಯೇ ಅವರ ಅಸ್ತಿತ್ವದ ಕುರುಹುಗಳು ಗೋಚರಿಸುತ್ತವೆ. ಇಲ್ಲಿ ದೊರೆತ ಮಣ್ಣಿನ ಪಳೆಯುಳಿಕೆಗಳ ಮೇಲೆ ಭದ್ರಾಸನ ಭಂಗಿಯಲ್ಲಿ ಕುಳಿತ ಯೋಗಿಗಳ ಚಿತ್ರಗಳನ್ನು ಕಾಣಬಹುದಾಗಿದೆ. ತೋಳು ಎದೆ ಮೇಲಿನ ಕಡಗ, ಕೊರಳ ಸರಗಳನ್ನು ಬಿಟ್ಟರೆ ಬತ್ತಲಾಗಿರುವ ಈ ಯೋಗಿ ಕೊಂಬುಗಳುಳ್ಳ ಟೋಪಿಯನ್ನು ಧರಿಸಿದ್ದಾನೆ. ಅಂದರೆ ಯೋಗ ಮುಂತಾದ ತಾಂತ್ರಿಕ ಸಿದ್ಧಿ ಆ ಕಾಲದಲ್ಲೇ ಇದ್ದು ಅನೇಕ ಸಂತರು ಅದರಲ್ಲಿ ಕಾರ್ಯಶೀಲರಾಗಿರಬಹುದಾದ ಸಾಧ್ಯತೆಗೆ ಜೀವ ಒಡುವ ಸಾಕ್ಷ್ಯಗಳು ದೊರಕಿವೆ. ಕ್ರಿ.ಪೂ. ಸಾವಿರದ ಐನೂರು ವರ್ಷಗಳಷ್ಟು ಹಿಂದಿನ ಭಾರತೀಯ ಪ್ರಾಚೀನ ಸಾಹಿತ್ಯವನ್ನು ಪ್ರತಿನಿಧಿಸುವ ಋಗ್ವೇದದ ಶ್ಲೋಕಗಳಲ್ಲಿ ಎರಡು ಬಗೆಯ ಧಾರ್ಮಿಕ ಸಂತರ ಕುರಿತು ಉಲ್ಲೇಖಿಸಲಾಗಿದೆ. ಅವರಲ್ಲಿ ಮುಖ್ಯರೆಂದರೆ ಋಷಿಗಳು. ದಟ್ಟ ಅರಣ್ಯಗಳಲ್ಲಿ ಪುಟ್ಟ ಕುಟೀರಗಳನ್ನು ಸ್ಥಾಪಿಸಿಕೊಂಡು ತಮ್ಮ ಕುಟುಂಬ ಹಾಗೂ ಶಿಷ್ಯರೊಂದಿಗೆ ಪಾರಮಾತ್ಮ ಸಾಧನೆಯಲ್ಲಿ ತಲ್ಲೀನರಾಗಿರುವುದೇ ಇವರ ಕಾಯಕವಾಗಿತ್ತು. ವೇದಕಾಲೀನ ತ್ಯಾಗಪಂಥದ ಉಳಿಕೆ ಹಾಗೂ ಬೆಳವಣಿಗೆಗೆ ಈ ಋಷಿಗಳೇ ಕಾರಣೀಭೂತರಾಗಿದ್ದು; ಆಧ್ಯಾತ್ಮಿಕ ಸಾಧನೆಯ ಗುರಿ ಹೊಂದಿದವರಿಗೆಲ್ಲ ಮಾದರಿಯಾಗಿ, ಮಾರ್ಗದರ್ಶಿಗಳಾಗಿ ಅತ್ಯಂತ ಪ್ರಭಾವಯುತ ಸ್ಥಾನ ಪಡೆದಿದ್ದರು.

ಎರಡನೆಯ ಗುಂಪಿಗೆ ಸೇರುವವರೆಂದರೆ ಮುನಿಗಳು. ಬಹುಶಃ ವೇದಪೂರ್ವ ಧಾರ್ಮಿಕ ನಂಬಿಕೆಗಳನ್ನು ಉಳಿಸಿಕೊಂಡಿದ್ದ ಇವರು ಋಗ್ವೇದ ಕಾಲದಲ್ಲಿ ಅಷ್ಟೇನೂ ಜನಪ್ರಿಯವಾಗಿರಲಿಲ್ಲ. ಆದರೆ ಅವರ ಧಾರ್ಮಿಕ ದೃಷ್ಟಿಕೋನಕ್ಕೆ ಯಾವ ಭಂಗವಿರಲಿಲ್ಲ. ನೀಳ ಕೇಶರಾಶಿಯ, ಕೆಲವು ಆಭರಣಗಳನ್ನು ಧರಿಸುತ್ತಿದ್ದ ಅಥವಾ ನಗ್ನವಾಗಿಯೇ ಇರುತ್ತಿದ್ದ ಮುನಿಗಳು ವೇದಕಾ

ಲದ ಶ್ರೇಷ್ಠ ದೇವತೆಯಾದ ಇಂದ್ರನ ಮಿತ್ರ ರೆಂದು ಋಗ್ವೇದದ ಶ್ಲೋಕವೊಂದು ವರ್ಣಿಸಿದೆ. ಇವರಿಗೆ ಗಂಧರ್ವರಂತೆ ಗಾಳಿಯಲ್ಲಿಯೇ ತೇಲಾಡುವ ಅದ್ಭುತ ಶಕ್ತಿ ಇತ್ತೆಂಬುದಾಗಿ ಹೇಳಲಾಗಿದೆ.

ಋಷಿಗಳು ಮತ್ತು ಮುನಿಗಳ ಜೊತೆಗೆಯೇ ಯತಿಗಳೆಂದು ಕರೆಯಲ್ಪಡುವ ಸನ್ಯಾಸಿಗಳ ಕುರಿತು ಸಹ ವೇದಕಾಲ ನಂತರದ ಸಾಹಿತ್ಯದಲ್ಲಿ ಉಲ್ಲೇಖಿಸಲಾಗಿದೆ. ಮುನಿಗಳಂತೆಯೇ ಯತಿಗಳೂ ವೈದಿಕರಿಂದ ಕಡೆಗಣಿಸಲ್ಪಟ್ಟಿದ್ದರಲ್ಲದೆ, ಇವರು ಅಸುರ ಶಕ್ತಿಯಲ್ಲಿ ನಂಬಿಕೆಯುಳ್ಳವರಾಗಿದ್ದು ಇಂದ್ರನ ಕೋಪಕ್ಕೆ ತುತ್ತಾಗಬೇಕಾಯ್ತು. ಅಷ್ಟೇ ಅಲ್ಲ ಬಹುಪಾಲು ಯತಿಗಳನ್ನು ಇಂದ್ರ ಕೊಂದು ನರಿಗಳಿಗೆ ಆಹಾರವಾಗಿ ಚೆಲ್ಲಿದನಂತೆ. ಈ ಯತಿಗಳು ಸಿಂಧೂ ಕೊಳ್ಳದ ನಾಗರೀಕತೆಗೆ ಸೇರಿದವರಾಗಿರಬಹುದೆಂಬ ಅನುಮಾನಕ್ಕೆ ಸಾಕಷ್ಟು ಪುಷ್ಟಿ ಇದೆ.

ಅಥರ್ವಣ ವೇದ ಸಾಹಿತ್ಯದಲ್ಲಿ ಮತ್ತೊಂದು ಬಗೆಯ ವಿಲಕ್ಷಣ ಹಾಗೂ ಭಯಾನಕ ವ್ಯಕ್ತಿತ್ವದ ಸನ್ಯಾಸಿಗಳ ವರ್ಗವೊಂದು ಕಾಣಿಸಿಕೊಳ್ಳುತ್ತದೆ. ಕಪ್ಪು ಬಟ್ಟೆ ಧರಿಸುತ್ತಿದ್ದ ಇವರು ತಲೆಗೆ ರುಮಾಲು ಸುತ್ತುತ್ತಿದ್ದರು. ನಾಣ್ಯಗಳಿಂದ ಮಾಡಿದ ಕೊರಳ ಸರಗಳನ್ನು, ದೊಡ್ಡ ಗಾತ್ರದ ಕಿವಿಯೋಲೆಗಳನ್ನು ಬಳಸುತ್ತಿದ್ದ ಇವರು ಕೈಯಲ್ಲಿ ಮೊನಚಾದ ಶೂಲ ಹಾಗೂ ಹದೆಯೇರಿಸದ ಬಿಲ್ಲನ್ನು ತಮ್ಮ ಸಂಚಿಕೆಯ ಲಾಂಛನವಾಗಿ ಹಿಡಿದಿರುತ್ತಿದ್ದರು. ನೆಟ್ಟಗೆ ನಿಂತು ಬಹುಕಾಲ ಉಸಿರಾಟವನ್ನು ನಿಯಂತ್ರಿಸುವಂತಹ ಯೋಗಾಸನ ಭಂಗಿಯೊಂದನ್ನು ಅಭ್ಯಾಸ ಮಾಡಿಕೊಂಡಿದ್ದ ಈ ಸನ್ಯಾಸಿಗಳು ಒಬ್ಬ ಗಾಯಕ ಹಾಗೂ ಒಬ್ಬ ನೃತ್ಯದ ಹುಡುಗಿಯನ್ನು ಜೊತೆಗಿಟ್ಟುಕೊಂಡು ಸ್ಥಳದಿಂದ ಸ್ಥಳಕ್ಕೆ ಪವಿತ್ರ ರಥದಲ್ಲಿ ಕುಳಿತು ಸಂಚರಿಸುತ್ತಿದ್ದರು. ಇವರು ಯಾರಿರಬಹುದು ಎಂಬ ಬಗ್ಗೆ ವಿದ್ವಾಂಸರ ಅಭಿಪ್ರಾಯಗಳಲ್ಲಿ ಖಚಿತತೆ ಇಲ್ಲ; ಕೆಲವರು ಇವರನ್ನು ವೈದಿಕೇತರರು ಎಂದು ಗುರುತಿಸಿದರೆ, ಇನ್ನೂ ಕೆಲ



ವರು ಇವರು ಪೂರ್ವ ಆರ್ಯ ಜನಾಂಗಕ್ಕೆ ಸೇರಿದವರೆಂದು ವಾದಿಸುತ್ತಾರೆ. ಈ ಕುರಿತ ವ್ಯಾಖ್ಯಾನವೇನೇ ಇರಲಿ ಇವರನ್ನು ವೈದಿಕ ಸಮಾಜದ ಚೌಕಟ್ಟಿಗೆ ಒಳಪಡಿಸಲು ಗಂಭೀರ ಪ್ರಯತ್ನ ನಡೆದಿರುವ ಬಗ್ಗೆಯಂತೂ ಅನುಮಾನ ಉಳಿದಿಲ್ಲ. ಇವರನ್ನು ವೈದಿಕ ಸಮಾಜದ ಸದಸ್ಯರನ್ನಾಗಿಸಲೋಸ್ಕರವೇ ಧಾರ್ಮಿಕ ಆಚರಣೆಯೊಂದನ್ನು ಸಂಘಟಿಸಲಾಗಿತ್ತು.

ವೇದಕಾಲೀನ ಸಾಹಿತ್ಯದಲ್ಲಿ [illegible] ಯತಿ, ಮುನಿ, ವ್ರಾತ್ಯರುಗಳೆಲ್ಲ [illegible] ವೈದಿಕರಿಗೆ ವಿರುದ್ಧವಾದ ಭಿನ್ನ ಧರ್ಮ[illegible]ತ್ತಿರಬೇಕು. ಇವರೆಲ್ಲ ವೈದಿಕ [illegible]

ನಿರರ್ಥಕ ಆಹುತಿ, ಬಲಿಗಳನ್ನು ಹಾಗೂ ಪುರೋಹಿತರ ಪ್ರಾಬಲ್ಯವನ್ನು ತಿರಸ್ಕರಿಸಿದವರು. ಬದಲಾಗಿ ಸನ್ಯಾಸ, ಧ್ಯಾನ, ಯೋಗಗಳ ಮೂಲಕ ತಮ್ಮ ಆಧ್ಯಾತ್ಮಿಕ ತುಡಿತಗಳಿಗೆ ಮಾರ್ಗ ಕಂಡುಕೊಂಡರು. ಹಾಗೆ ನೋಡಿದರೆ ಈ ವಿಧಾನಗಳೆಲ್ಲ ಮೂಲ ನಿವಾಸಿಗಳಾದ ವೈದಿಕೇತರರ ಧಾರ್ಮಿಕ ಸಂಪ್ರದಾಯಗಳ ಭಾಗವೇ ಆಗಿದ್ದವು.

ಕ್ರಿ.ಪೂ. ಎಂಟು ಶತಮಾನಗಳ ಹಿಂದೆ ವೈರಾಗ್ಯ, ಸನ್ಯಾಸಗಳೆಡೆ ಸಾಗುವ ಚಳವಳಿ ಎಷ್ಟೊಂದು ಪ್ರಬಲವಾಗಿತ್ತೆಂದರೆ ಇಂಥ ವೈರಾಗಿಗಳಿಗಾಗಿಯೇ ಆರ್ಯ ಸಮಾಜ ವ್ಯವಸ್ಥೆಯಲ್ಲಿ ಸ್ಥಾನ ಕಲ್ಪಿಸಿಕೊಡಬೇಕಾದ ಅಗತ್ಯ ತಲೆದೋರಿತು. ಅಂತೆಯೇ ನಾಲ್ಕು ಹಂತದ 'ಆಶ್ರಮ ಧರ್ಮ'ವನ್ನು ಜೀವನಕ್ಕೆ ಅಳವಡಿಸಲಾಯ್ತು. ಬ್ರಹ್ಮಚರ್ಯ ಹಾಗೂ ಗೃಹಸ್ಥಾಶ್ರಮವೇನೋ ವೈದಿಕ ಸಮಾಜದ ಆದರ್ಶ ಬದುಕಿನಲ್ಲಿ ಅಳವಡಿಸಲ್ಪಟ್ಟಿದ್ದವು. ಇವುಗಳ ಜೊತೆಗೆ ವೈರಾಗಿ ಚಳವಳಿಯ ಒತ್ತಡ, ಜನಪ್ರಿಯತೆಯ ದೆಸೆಯಿಂದಾಗಿ ವಾನಪ್ರಸ್ಥ ಮತ್ತು ಸನ್ಯಾಸಗಳೆರಡನ್ನು ಹೊಸದಾಗಿ ಪರಂಪರೆಯೊಳಗೆ ಸೇರಿಸಲಾಯ್ತು. ಹೀಗೆ ನಾಲ್ಕು ಹಂತದ ಜೀವನಕ್ರಮದ ಬಗೆಗೆ ಮೊಟ್ಟ ಮೊದಲು ಉಲ್ಲೇಖವಾದದ್ದು 'ಧರ್ಮ ಸೂತ್ರ' (ಕ್ರಿ.ಪೂ. 400)ದಲ್ಲಿಯೇ. ಈ ಕಲ್ಪನೆ ಉಪನಿಷತ್ತು ಮತ್ತು ಮಹಾಭಾರತಗಳಲ್ಲಿ ಸಹ ಮೂರ್ತಗೊಂಡಿದ್ದು ಭೌತಿಕ ಸುಖಭೋಗಗಳನ್ನೆಲ್ಲ ತ್ಯಜಿಸಿ ವೈರಾಗ್ಯ ತಾಳಿದವರಿಗೆ ಆಗ ಅಪಾರ ಗೌರವ ನೀಡಲಾಗುತ್ತಿತ್ತು.

ಬಹಳ ಮಟ್ಟಿಗೆ ಸನ್ಯಾಸಿ ಧರ್ಮಗಳಾದ ಜೈನ ಮತ್ತು ಬೌದ್ಧ ಧರ್ಮಗಳ ಪ್ರಚಾರಕ್ಕೆ ಈ ಕಾಲಘಟ್ಟದಲ್ಲಿ ಏರ್ಪಟ್ಟಿದ್ದ ವೈದಿಕ ಆಚರಣೆಗಳ ತಿರಸ್ಕಾರದ ಅಲೆ ಹಾಗೂ ಧಾರ್ಮಿಕ ಭಿಕ್ಷುಗಳಿಗೆ ದೊರಕುತ್ತಿದ್ದ ಉನ್ನತ ಮನ್ನಣೆ ಅನುಕೂಲಕರವಾಗಿ ಪರಿಣಮಿಸಿದವು.

ಜೈನ ಸಂಪ್ರದಾಯದ ಪ್ರಕಾರ ಜೈನ ಧರ್ಮದ ತಿರುಳನ್ನು ಬೋಧಿಸಿದ ಗುರುಗಳು (ತೀರ್ಥಂಕರರು) ಇಪ್ಪತ್ತನಾಲ್ಕು ಜನ. ಆದರೆ ಕೊನೆಯ ಇಬ್ಬರಾದ ಪಾರ್ಶ್ವನಾಥ (ಕ್ರಿ.ಪೂ. 872-772) ಮತ್ತು ಮಹಾವೀರ (ಕ್ರಿ.ಪೂ. 599-467)ರನ್ನು ಮಾತ್ರ ಚಾರಿತ್ರಿಕ ವ್ಯಕ್ತಿಗಳನ್ನಾಗಿ ಗಣಿಸಲಾಗಿದೆ. ಜೈನ ಧರ್ಮದ ಮುಖ್ಯ ಬೋಧನೆಯೆಲ್ಲ ಸನ್ಯಾಸಿ ಮತ್ತು ಸನ್ಯಾಸಿನಿಯರೆಡೆ ನಿರ್ದೇಶಿಸಲ್ಪಟ್ಟದ್ದು; ಗೃಹಸ್ಥರಿಗಾಗಿ ಶಿಫಾರಸು ಮಾಡಿದ ಬದುಕಿನ ಮಾರ್ಗ ಕೇವಲ ಸನ್ಯಾಸ ಶಿಸ್ತಿನ ಮೃದು ರೂಪ ಮಾತ್ರವಾಗಿತ್ತು. ಎಲ್ಲ ಬಗೆಯ ಕರ್ಮಗಳಿಂದ ಮುಕ್ತರಾಗದ ಹೊರತು ಬಿಡುಗಡೆ ಅಸಾಧ್ಯ; ಸನ್ಯಾಸಿಗಳಿಗೆ ಮಾತ್ರ ಸಾಧ್ಯವಾಗಬಹುದಾದ ಅತಿ ಉಗ್ರ ಸಂಯಮವಿಲ್ಲದಿದ್ದರೆ ಕರ್ಮಮುಕ್ತರಾಗುವುದು ಅಸಂಭವ; ಎಷ್ಟೇ ಅಲ್ಪಪ್ರಮಾಣದಲ್ಲಾದರೂ, ಆಕಸ್ಮಿಕವಾಗಿಯಾದರೂ ಯಾವುದೇ ಜೀವಿಗೆ ಗಾಯಗೊಳಿಸಿದರೆ ಅದು ಕರ್ಮ ಪರಿಣಾಮವನ್ನುಂಟು ಮಾಡುತ್ತದೆ. ಇಂಥ ಕಾಠಿಣ್ಯ ಪರಿಪಾಲಿಸಲು ಗೃಹಸ್ಥರಿಗೆ ಸಾಧ್ಯವಿಲ್ಲ. ಜೈನ ಧರ್ಮದ ತೀಕ್ಷ್ಣ ಸನ್ಯಾಸ ತತ್ವಗಳನ್ನು ಎರಡು ಸಾವಿರ ವರ್ಷಗಳಷ್ಟು ಹಿಂದೆಯೇ ನಿರೂಪಿಸಲ್ಪಟ್ಟಿದ್ದರೂ ಅವು ಇವತ್ತಿಗೂ ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಅಥವಾ ಯಥಾಸ್ಥಿತಿಯಲ್ಲಿಯೇ ಆಚರಣೆಯಲ್ಲಿವೆ. ಜೈನ ಧರ್ಮದ ದಿಗಂಬರ ಪಂಥದಲ್ಲಿ ಸನ್ಯಾಸಿಗಳನ್ನು ಮುನಿಗಳೆಂದು ಕರೆದರೆ, ಶ್ವೇತಾಂಬರ ಪಂಗಡದಲ್ಲಿ ಸಾಧುಗಳೆಂದು ಹೆಸರಿಸುವರು. ಇವರೆಲ್ಲ ಕೌಟುಂಬಿಕ ಅನುರಾಗಗಳಿಂದ ಮುಕ್ತರಾಗಬೇಕಾಗುತ್ತದೆ. ಕೋಪ, ಲೋಭ, ಅಸತ್ಯ, ಭಯ ಮತ್ತು ದೈಹಿಕ ಮಾನಸಿಕ ಸುಖಾಸುಭೋಗಗಳಿಂದ ಬಿಡುಗಡೆ ಹೊಂದಬೇಕು. ಯಾವ ಜೀವಿಯನ್ನೂ ಘಾಸಿಗೊಳಿಸದಿರುವ ಉದ್ದೇಶದಿಂದ ಈ ಧರ್ಮಾನುಯಾಯಿಗಳು ಕುಡಿಯುವ ನೀರನ್ನು ಸೋಸಬೇಕು, ಸೂಕ್ಷ್ಮ ಕ್ರಿಮಿಗಳು ಉಸಿರಾಟದೊಂದಿಗೆ ದೇಹ ಸೇರಬಾರದೆಂದು ಮುಸುಕೊಂದನ್ನು ಧರಿಸಬೇಕು, ನೆಲದ ಮೇಲಿನ ಹುಳುಹುಪ್ಪಡಿಗಳು ಆಕಸ್ಮಿಕವಾಗಿ ಅಪ್ಪಚ್ಚಿಯಾಗದಿರಲೆಂದು ಅತ್ಯಂತ ಮೃದುವಾಗಿ ಹೆಜ್ಜೆಯೂರಬೇಕು. ವೈರಾಗ್ಯದ ದ್ಯೋತಕವಾಗಿ

ದಿಗಂಬರ ಮುನಿಗಳು ನಗ್ನವಾಗಿಯೇ ಇದ್ದರೆ, ಶ್ವೇತಾಂಬರ ಸಾಧುಗಳು ಅಚ್ಚ ಬಿಳಿ ಹತ್ತಿ ಅರಿವೆಗಳನ್ನು ಧರಿಸುತ್ತಾರೆ. ಕೆಲವು ಹಿರಿಯ ಸನ್ಯಾಸಿಗಳ ಹೊರತಾಗಿ ಉಳಿದವರೆಲ್ಲ ತಲೆಗೂದಲನ್ನು ಬೋಳಿಸಿಕೊಳ್ಳುತ್ತಾರೆ. ವಿಶೇಷವಾಗಿ ದಿಗಂಬರ ಮುನಿಗಳು ವರ್ಷಕ್ಕೆ ಕನಿಷ್ಠ ನಾಲ್ಕು ಸಾರಿಯಾದರೂ ಬಹಿರಂಗವಾಗಿ ಕೂದಲನ್ನು ಒಂದೊಂದಾಗಿ ಕಿತ್ತುಕೊಳ್ಳಬೇಕಾಗುತ್ತದೆ. ಜೈನ ಸನ್ಯಾಸಿ/ಸನ್ಯಾಸಿನಿಯರ ಖಾಸಗಿ ವಸ್ತುಗಳೆಂದರೆ ಒಂದು ಕಮಂಡಲ, ಹತ್ತಿಯ ಚಾಮರ, ಆಹಾರ ಸಂಗ್ರಹಿಸಲು ಕಟ್ಟಿಗೆಯ ಪಾತ್ರೆ, ಒಂದು ಸಣ್ಣ ಉಣ್ಣೆಯ ಹಾಸಿಗೆ, ಭುಜದ ಮೇಲೆ ಹಾಕಿಕೊಳ್ಳಲು ದಪ್ಪ ಅರಿವೆ, ಕುಡಿವ ನೀರು ಸೋಸಲು ಒಂದು ಚಿಕ್ಕ ಬಟ್ಟೆ ಮತ್ತು ಧರ್ಮ ಗ್ರಂಥಗಳು!

ಯಾವುದೇ ಬಗೆಯ ಅನುರಾಗ ಉಂಟಾಗದಿರಲೆಂದು ಬಹುಪಾಲು ಮುನಿಗಳು, ಸಾಧುಗಳು ಒಂದು ಸ್ಥಳದಿಂದ ಮತ್ತೊಂದಕ್ಕೆ ಸದಾ ತಿರುಗುತ್ತ ಅಲೆಮಾರಿಗಳಾಗಿಯೇ ಇರುತ್ತಾರೆ. ಇವರೆಲ್ಲ ಒಂದು ಸನ್ಯಾಸ ಸಮುದಾಯದಲ್ಲಿ ಕಲೆಯುವ ಏಕೈಕ ಸಂದರ್ಭವೆಂದರೆ 'ಚಾತುರ್ಮಾಸ'. ಮಳೆಗಾಲದ ಈ ನಾಲ್ಕು ತಿಂಗಳು ಅವರ ಎಲ್ಲಾ ಸಮಯ ವಿನಿಯೋಗವಾಗುವುದು ಧಾರ್ಮಿಕ ಗ್ರಂಥಗಳ ಅಧ್ಯಯನ, ಧ್ಯಾನ, ಸಂಸಾರಿಗಳಿಗೆ ಬೋಧನೆ, ಎಸಗಿರಬಹುದಾದ ಪಾಪಗಳಿಗೆ ಪಶ್ಚಾತ್ತಾಪ, ತಪಸ್ಸುಗಳಲ್ಲಿ. ಮಾನಸಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಒಂದು ಉನ್ನತ ಹಂತ ತಲುಪಿದಾಗ ಜೈನ ಸನ್ಯಾಸಿಗಳು ಆಹಾರವನ್ನು ಸಂಪೂರ್ಣ ತ್ಯಜಿಸಿ ಜೀವವನ್ನೇ ಅಂತ್ಯಗೊಳಿಸಿಕೊಳ್ಳುತ್ತಾರೆ. 'ಸಲ್ಲೇಖನ ವ್ರತ'ವೆಂದು ಕರೆಯಲಾಗುವ ಈ ಸ್ಥಿತಿಯೇ ಬಿಡುಗಡೆಯ ಕೊನೇ ಸಿದ್ಧಿ.

ಗೌತಮಸಿದ್ಧಾರ್ಥನಿಂದ ಸ್ಥಾಪಿಸಲ್ಪಟ್ಟ ಬೌದ್ಧ ಧರ್ಮವೂ ಜೈನ ಧರ್ಮ ಉಗಮವಾದ ಭೌಗೋಳಿಕ ಸೀಮೆಯಲ್ಲಿಯೇ ರೂಪು ತಳೆಯಿತು. ಕ್ರಿ.ಪೂ. 568ರಿಂದ 483ರ ಅವಧಿಯಲ್ಲಿ ಬಾಳಿದ ಬುದ್ಧ, ಮಹಾವೀರನ ಕಿರಿಯ ಸಮಕಾ



ಲೀನ. ಬುದ್ಧ ಅತ್ಯುಗ್ರ ಸಂಯಮವನ್ನು ತಿರಸ್ಕರಿಸಿದರೂ ಆತನ ಬೋಧನೆ ಕೂಡ ಪ್ರಾಥಮಿಕವಾಗಿ ಸನ್ಯಾಸಿಗಳೆಡೆ ವಾಲಿರುವಂತಹುದು. ಬುದ್ಧನ ಜ್ಞಾನೋಪದೇಶ ಪ್ರಾರಂಭವಾಗುವುದೇ 'ಭಿಕಾವೇ' (ಭಿಕ್ಷಾರ್ಥಿ) ಎಂಬ ಶಬ್ದದಿಂದ.

ತಮ್ಮ ಆಹಾರಕ್ಕಾಗಿ ಭಿಕ್ಷೆ ಬೇಡುವವರು ಎಂಬ ಅರ್ಥದಲ್ಲಿ ಬೌದ್ಧ ಸನ್ಯಾಸಿಗಳನ್ನು ಭಿಕ್ಷುಗಳೆಂದೂ, ಸನ್ಯಾಸಿನಿಯರನ್ನು ಭಿಕ್ಷುಣಿಗಳೆಂದೂ ಕರೆಯಲಾಗುತ್ತದೆ. ಎಂಟು ವರ್ಷ ಮೀರಿದ ಹೊಸಬರನ್ನು ಬೌದ್ಧ ಕಕ್ಷೆಯ ತೆಕ್ಕೆಯೊಳಗೆ ತೆಗೆದುಕೊಳ್ಳಲಾಗುವುದಾದರೂ ಅವರು ದೀಕ್ಷೆ ಪಡೆದ ಭಿಕ್ಷುಗಳಾಗುವುದು ಇಪ್ಪತ್ತು ವರ್ಷ ವಯಸ್ಸಿನವರಾದಾಗಲೇ. ಅಲ್ಲದೆ ಈ ಅವಧಿಯಲ್ಲಿ ಅವರು ಒಂದು ದೀರ್ಘ ಮತ್ತು ಕಠಿಣತಮವಾದ ಅಧ್ಯಯನವನ್ನು ಪೂರೈಸಬೇಕಾಗುತ್ತದೆ. ದೀಕ್ಷೆ ಪಡೆಯುವ ಕಾಲದಲ್ಲಿ ಹೊಸಬರು 'ನಾನು ಬುದ್ಧ, ಆತನ ಧರ್ಮ ಮತ್ತು ಸಂಘವನ್ನು ಅನುಸರಿಸುತ್ತೇನೆ' ಎಂದು ಪಠಿಸಬೇಕು. ಇದರ ಜೊತೆಗೆ ಸಂಪೂರ್ಣ ವರ್ಜಿಸುವುದಾಗಿ ಪ್ರತಿಜ್ಞೆಗೈಯುವ ಅಂಶಗಳೆಂದರೆ: ಜೀವಜಂತುಗಳ ನಾಶ, ಕಳವು, ಲೈಂಗಿಕ ವರ್ತನೆ,

ಸುಳ್ಳು ನುಡಿ, ಮಾದಕ ಪಾನೀಯ, ಊಟಗಳ ನಡುವೆ ತಿನ್ನುವುದು, ಮನೋರಂಜನೆ, ಖಾಸಗಿ ಆಭರಣ, ಭೋಗ ಮತ್ತು ಬಂಗಾರ-ಬೆಳ್ಳಿ ರೂಪದಲ್ಲಿ ಸಂಪತ್ತನ್ನು ಸಂಗ್ರಹಿಸುವುದು. ಒಮ್ಮೆ ದೀಕ್ಷೆ ಪಡೆದ ನಂತರ ವಿದ್ಯಾರ್ಥಿಯ ತಲೆಯನ್ನು ಬೋಳಿಸಿ ಕಿತ್ತಳೆ ಅಥವಾ ಹಳದಿ ಬಣ್ಣದ ಬಟ್ಟೆಗಳನ್ನು ತೊಡಿಸಲಾಗುತ್ತದೆ. ಹೀಗೆ ಬಾಹ್ಯ ಜಗತ್ತಿನೊಂದಿಗೆ ವೈರಾಗ್ಯ ತಳೆಯುವ ಭಿಕ್ಷು ಒಂದು ಸೊಂಟದ ಬಟ್ಟೆ, ಭಿಕ್ಷಾಪಾತ್ರೆ, ಕ್ಷೌರ ಕತ್ತಿ, ಒಂದು ಸೂಜಿ ಮತ್ತು ನೀರು ಸೋಸುವ ತುಂಡು ಬಟ್ಟೆಯನ್ನು ಮಾತ್ರ ಹೊಂದಿರಲು ಅನುಮತಿ ಇದೆ. ಬ್ರಹ್ಮಚರ್ಯ ಪಾಲಿಸುವುದು ಅವಶ್ಯವಾದರೂ ಭಿಕ್ಷುಗಳು ಜೀವಿತದುದ್ದಕ್ಕೂ ವೈರಾಗ್ಯಕ್ಕೆ ಬದ್ಧವಾಗಿರಬೇಕೆಂದೇನಿಲ್ಲ. ಜೈನ ಮತ್ತು ಹಿಂದೂ ಧರ್ಮಗಳಂತೆಯೇ ಬೌದ್ಧರಿಗೆ ಕೂಡ ಯಾವುದೇ ಸಮಯದಲ್ಲಾದರೂ ಕಟ್ಟಳೆಯ ಕಕ್ಷೆಯಿಂದ ಬಿಡುಗಡೆ ಪಡೆಯುವ ತಾತ್ವಿಕ ಅವಕಾಶವಿದೆ.

ಹಾಗೆ ನೋಡಿದರೆ ಇವತ್ತಿಗೂ ಅಸ್ತಿತ್ವ ಉಳಿಸಿಕೊಂಡಿರುವ ಜೈನ ಮತ್ತು ಬೌದ್ಧ ಧರ್ಮಗಳೆರಡೇ ಆಗಿನ ಕಾಲದ ಸನ್ಯಾಸ ಮಾರ್ಗಗಳಾಗಿರಲಿಲ್ಲ. ಜೈನ ಮತ್ತು ಬೌದ್ಧ ಧರ್ಮಗಳ ಸಾಹಿತ್ಯ, ಶಾಸನಗಳಲ್ಲಿ ಅಸಂಖ್ಯಾತ ಸನ್ಯಾಸಿ, ಯೋಗಿ, ಮಾಂತ್ರಿಕ, ತತ್ವಜ್ಞಾನಿಗಳ ಕುರಿತು ಉಲ್ಲೇಖಿಸಲಾಗಿದೆ. ಹೀಗೆ ಆಗಿ ಹೋಗಿರುವ ಸನ್ಯಾಸಿಗಳನೇಕರು ಮಹಾವೀರ, ಬುದ್ಧರೊಡನೆ ತೀಕ್ಷ್ಣವಾದ ಪಾರಮಾರ್ಥಿಕ ಚರ್ಚೆ ನಡೆಸಿದ್ದಾರೆ. ಈ ವಿರಾಗಿಗಳ ಬೋಧನೆಗಳ ಪರಮ [illegible]ದಿಂದ ನಿರಾಕರಣವಾದದವರೆಗೆ ವ್ಯಾಪಿಸಿರುವಂತಹುದು. ದೀರ್ಘಕಾಲದವರೆಗೆ [illegible] ದೇಹ ದಂಡಿಸುವ, ಮೊಳೆಗಳ ಮೇಲೆ ಮಲಗುವ, ಆಕಳ ಸೆಗಣಿಯನ್ನು ತಿನ್ನುವ ಮುಂತಾದ ತಂತ್ರಗಳೆಲ್ಲ ಆಚರಣೆಯಲ್ಲಿದ್ದವು.

ಪ್ರಾಚೀನ ಭಾರತದ ಇತಿಹಾಸದಲ್ಲಿ ಇಂಥ ಹಾಕುವ ಸಾಧಕರ ಸಾಲಿನಲ್ಲಿ ಏನೆಲ್ಲ ವೈವಿಧ್ಯಮಯ ನಂಬಿಕೆ, ಆಚರಣೆ, ಆಲೋಚನೆಗಳುಳ್ಳ ವ್ಯಕ್ತಿಗಳು ನಿಲ್ಲುತ್ತಾರೆಂಬುದನ್ನು ಗಮನಿಸಿದರೆ ಒಂದು ಕ್ಷಣ ದಂಗು ಬಡಿಯುತ್ತದೆ. ಪುರಾಣ ಕಶ್ಯಪನ ದೃಷ್ಟಿಯಲ್ಲಿ ಒಳ್ಳೆಯದು-ಕೆಟ್ಟದು, ನೈತಿಕ-ಅನೈತಿಕ ಎನ್ನುವುದು ಈ ಪ್ರಪಂಚದಲ್ಲಿ ಇಲ್ಲವೇ ಇಲ್ಲ. ಸಕಲ ಜೀವರಾಶಿಗಳೂ ತಪ್ಪಿಸಿಕೊಳ್ಳಲಾರದಂಥ ಅದೃಷ್ಟದ ನಿಯಂತ್ರಣಕ್ಕೆ ಒಳಪಟ್ಟವರಾಗಿದ್ದಾರಲ್ಲದೆ ಮನುಷ್ಯನ ಎಲ್ಲ ಕೃತ್ಯಗಳೂ ಅರ್ಥಹೀನ. ಯಾವುದೇ ಖಚಿತ ಜ್ಞಾನದ ಸಾಧ್ಯತೆಯನ್ನೇ ನಿರಾಕರಿಸುತ್ತಾನೆ ಸಂಜಯನೆಂಬ ನಿರೀಶ್ವರವಾದಿ. ಪಾಕುಧಾ ಕಾತ್ಯಾಯನ ಒಬ್ಬ ಪರಮಾಣುವಾದಿ. ಈತನ ಪ್ರಕಾರ ಆತ್ಮವನ್ನೊಳಗೊಂಡು ಎಲ್ಲ ಧಾತುಗಳೂ ಶಾಶ್ವತವಾದವು. ಆದರೆ ಇವೆಲ್ಲ ನಿಯಮಿತವಾದ ಪರಿಣಾಮಿಕೆಗೆ ಒಳಪಟ್ಟಿವೆ. ಏಳು ದೇಹಗಳ ಸಿದ್ಧಾಂತವೆಂಬ ಅಸ್ಪಷ್ಟ ಚಿಂತನೆಯನ್ನು ಈತ ಅಭಿವೃದ್ಧಿಪಡಿಸಿದ್ದ.

ಅಜಿತ, ಮಾನವನ ಕೂದಲಿನಿಂದ ಹೆಣೆಯಲ್ಪಟ್ಟ ಕಂಬಳಿಯನ್ನು ಹೊದ್ದುಕೊಳ್ಳುತ್ತಿದ್ದ ಒಬ್ಬ ಭೌತಿಕವಾದಿ. ಈತ ಆತ್ಮದ ಅಸ್ತಿತ್ವ ಹಾಗೂ ಎಲ್ಲ ಬಗೆಯ ಭೌತಿಕವಲ್ಲದವುಗಳ ಇರುವಿಕೆಯನ್ನು ನಿರಾಕರಿಸಿದ್ದ. ಮುಂದೆ ಲೋಕಾಯತ ಹಾಗೂ ಚಾರ್ವಾಕರ ಭೌತಿಕವಾದ ಸಿದ್ಧಾಂತಕ್ಕೆ ಮೂಲ ನೆಲಗಟ್ಟು ಒದಗಿ ಬಂದದ್ದೇ ಈತನಿಂದ.

ಸಾಂಪ್ರದಾಯಿಕ ಮಾರ್ಗಕ್ಕೆ ಪರ್ಯಾಯ ಕ್ರಮಗಳನ್ನು ಹುಟ್ಟು ಹಾಕಿದ ಬೋಧಕರಲ್ಲಿ ಆಜೀವಕ ಪಂಥದ ಮುಖಂಡ ಮಕ್ಖಲಿ ಗೋಸಲ ಪ್ರಮುಖನಾದವನು. ಈತ ಕೆಲವು ಕಾಲ ಮಹಾವೀರನ ಶಿಷ್ಯನಾಗಿದ್ದು ನಂತರ ವ್ಯತಿರಿಕ್ತ ನಿಲುವು ತಾಳಿದ. ಬುದ್ಧನಂತೂ ಈತನನ್ನು ಆ ಕಾಲದ ಅತ್ಯಂತ ಅಪಾಯಕಾರಿ ಮನುಷ್ಯನೆಂದು ಪರಿಗಣಿಸಿದ್ದ. ಅದಕ್ಕೆ ಕಾರಣವೂ ಇಲ್ಲದಿರಲಿಲ್ಲ. ಆಜೀವಕ ಪಂಥದ ಪ್ರವೇಶ ಎಷ್ಟೊಂದು ಕ್ರೂರ ಆಚರಣೆಯಿಂದ ಆಗುತ್ತಿತ್ತೆಂದರೆ, ಹೊಸ ಪ್ರವೇಶಾಕಾಂಕ್ಷಿಯನ್ನು ಕುತ್ತಿಗೆವರೆಗೆ ನೆಲದಲ್ಲಿ ಹೂಳಿ ತಲೆಯ ಮೇಲಿನ ಕೂದಲನ್ನು ಕೀಳಲಾಗುತ್ತಿತ್ತು

- ಅದೂ ಒಂದೊಂದಾಗಿ! ಗೋಸಾಲನ ಶಿಷ್ಯಂದಿರು ನಿತ್ಯ ಒಂದು ಸಾರಿ ಪೂರ್ಣ ಬೆತ್ತಲಾಗಿಯೇ ಭಿಕ್ಷೆ ಎತ್ತಲು ಹೋಗುತ್ತಿದ್ದರು. ಇವರಲ್ಲಿ ಅನೇಕರು ಜೈನರಂತೆ ಆತ್ಮಹತ್ಯೆಯ ಮೂಲಕ ತಮ್ಮ ಜೀವ ತ್ಯಜಿಸಿದರು. ಅತ್ಯಂತ ಸಮರ್ಥ ಮಾಂತ್ರಿಕನಾಗಿದ್ದ ಗೋಸಾಲ ಕ್ರಿ.ಪೂ. 485ರಲ್ಲಿ ಬಲವಾದ ತಿರುಮಂತ್ರದಿಂದಲೇ ತನ್ನ ಅಂತ್ಯ ಕಾಣಬೇಕಾಯ್ತು.

ಹೀಗೆ ಕ್ರಿ.ಪೂ. ಎಂಟು ಮತ್ತು ನಾಲ್ಕನೇ ಶತಮಾನಗಳ ನಡುವಿನ ಭಾರತದ ಬೌದ್ಧಿಕ ಜೀವನ ಅನೇಕ ಹೊಸ ಹೊಸ ತತ್ವ, ಮತ, ಪಂಥ, ಆಚರಣೆ, ನಂಬಿಕೆಗಳಿಗೆ ಆಸ್ಪದ ಮಾಡಿಕೊಟ್ಟಿತ್ತು. ಅತ್ಯಂತ ಕುತೂಹಲಕಾರಿ ಅಂಶವೆಂದರೆ ಭೌತಿಕವಾದಿಗಳನ್ನೊಳಗೊಂಡು ಈ ಎಲ್ಲಾ ತತ್ವ ಪ್ರತಿಪಾದಕರೂ ಅಲೆಮಾರಿ ಸಾಧುಗಳಾಗಿದ್ದರು.

ಈ ಭಾರತೀಯ ಸಾಧುಗಳ ಜನಪ್ರಿಯತೆಯ ವೈಶಾಲ್ಯ ಗ್ರೀಕ್ ಜಗತ್ತಿನವರೆಗೂ ಹರಡಿತ್ತು. ಚಕ್ರವರ್ತಿ ಅಲೆಕ್ಸಾಂಡರನು ಕ್ರಿ.ಪೂ. 326ರಲ್ಲಿ ಸಿಂಧೂ ಕಣಿವೆ ದಾಟಿ ಭಾರತ ಪ್ರವೇಶಿಸಿದಾಗ ಆಧ್ಯಾತ್ಮ ಸಾಧನೆಯಲ್ಲಿ ನಿರತರಾಗಿದ್ದ ನಗ್ನ ಸನ್ಯಾಸಿಗಳ ಗುಂಪೊಂದನ್ನು ಆಕಸ್ಮಿಕವಾಗಿ ಸಂಧಿಸಿದ. ತಕ್ಷಶಿಲೆ ನಗರದ ಹೊರವಲಯದಲ್ಲಿ ಈ ಸನ್ಯಾಸಿಗಳನ್ನು ಕಂಡು ವಿಸ್ಮಯಗೊಂಡ ಅಲೆಕ್ಸಾಂಡರ್ ಅವರಿಗೆ ಅನೇಕ ತತ್ವಜ್ಞಾನದ ಪ್ರಶ್ನೆಗಳನ್ನು ಕೇಳಿ ಅವರ ಸಮರ್ಥ ಉತ್ತರಗಳಿಂದ



ಚಕಿತಗೊಂಡನಂತೆ. ಪರ್ಶಿಯಾಕ್ಕೆ ಹಿಂದಿರುಗುವಾಗ ಸಾಮ್ರಾಟ ಅಲೆಕ್ಸಾಂಡರ್ ಕಲ್ಯಾಣ ಎಂಬ ಸಂತನನ್ನು ಜೊತೆಗೆ ಕರೆದೊಯ್ದನಾದರೂ ಆತ ಸುಸಾ ಎಂಬಲ್ಲಿ ತನ್ನ ಮುದಿ ಶರೀರವನ್ನು ಅಂತ್ಯಗೊಳಿಸಲು ನಿರ್ಧರಿಸಿ ಮೆಕೆಡೋನಿಯನ್ ಸೈನ್ಯದ ಎದುರಿನಲ್ಲೇ ಅಗ್ನಿ ಪ್ರವೇಶಿಸಿದ.

ಮೌರ್ಯ ಸಾಮ್ರಾಟ ಅಶೋಕ (ಕ್ರಿ.ಪೂ. 274-237) ಮತ್ತವನ ಮೊಮ್ಮಗ ದಶರಥಗಯಾದ ಬಳಿ ಬರ್ಬಾರ ಬೆಟ್ಟಗಳಲ್ಲಿ ಆಜೀವಕ ಸನ್ಯಾಸಿಗಳಿಗಾಗಿಯೇ ಗವಿಗಳನ್ನು ನಿರ್ಮಿಸಿ ಕೊಟ್ಟಿದ್ದರು. ಈ ದಾನವನ್ನು ದಾಖಲಿಸಿರುವ ಶಾಸನಗಳು ಸನ್ಯಾಸಿಗಳ ಹೆಸರು ಮತ್ತು ಅವರ ಪಂಥವನ್ನು ಸೂಚಿಸುತ್ತವೆ. ಅವರಲ್ಲಿ ಉಗ್ರ, ಸಂಯಮ ಆಚರಿಸುವ 'ತಪಸ್ಸಿಕ', ಮನುಷ್ಯರ ತಲೆ ಬುರುಡೆ ಧರಿಸುತ್ತಿದ್ದ 'ಕಪಾಲಿಕ', ರಕ್ತಗೆಂಪಿನ ಅರಿವೆ ಧರಿಸುತ್ತಿದ್ದ 'ರಕ್ತಪಾತ', ಶೂಲ ಹಿಡಿಯುತ್ತಿದ್ದ 'ಏಕದಂಡಿ', ಯೋಗ ಪರಿಣಿತರಾದ 'ಯತಿ' ಮುಂತಾದವರು ಪ್ರಮುಖರು.

ನಾಲ್ಕನೇ ಶತಮಾನದ ಸೂತ್ರ ಗ್ರಂಥವೊಂದರಲ್ಲಿ ಸನ್ಯಾಸಿ ಗುಂಪುಗಳ ಸ್ಪಷ್ಟ ವಿಂಗಡಣೆ ಕಂಡು ಬರುತ್ತದೆ. ಆ ಗ್ರಂಥ ಸಾಧುಗಳನ್ನು ಮೂಲಭೂತವಾಗಿ ನಾಲ್ಕು ಪಂಗಡಗಳಾಗಿ ವಿಂಗಡಿಸುತ್ತದೆ.

1) ಅದುಂಬರ: ಹಣ್ಣು ಹಂಪಲುಗಳ ಮೇಲೆ ಬದುಕುತ್ತಿದ್ದ ಇವರು ಕಠಿಣ ಸಂಯಮ ವ್ರತಸ್ಥರಾಗಿದ್ದರು.
2) ವೈರಿಂಚ: ಇವರು ಪ್ರತಿನಿತ್ಯ ವೈದಿಕ ಅಗ್ನಿಹೋತ್ರ, ಆಚರಿಸುತ್ತಿದ್ದರು. ನಾರಾಯಣನನ್ನು ಪೂಜಿಸುತ್ತಿದ್ದರು.
3) ವಾಲ್ಕಿಲ್ಯ: ಗಿಡಗಳ ತೊಗಟೆಯಿಂದ ಮಾಡಿದ ಆಭರಣಗಳನ್ನು ಧರಿಸುತ್ತಿದ್ದರು.
4) ಫಿನಪ: ಆನಂದ ಪರವಶತೆಯಲ್ಲಿ ಮುಳುಗುವ ಮೂಲಕ ಮುಕ್ತಿ ಹೊಂದಬಯಸುವವರು. ಗಿಡದಿಂದ ಉದುರಿ ಕೆಳಗೆ ಬಿದ್ದುದನ್ನು ಮಾತ್ರ ತಿನ್ನುತ್ತಿದ್ದರು.

ಇವುಗಳಲ್ಲಿ ನಾಲ್ಕನೇಯದಾದ ಫಿನಪದಲ್ಲಿ ಮತ್ತೆ ನಾಲ್ಕು ವರ್ಗಗಳಿವೆ. 'ಕುಟಿಚಾಕ'ಗಳು ತಮ್ಮ ಮಕ್ಕಳೇ ನೀಡಿದ ಗುಡಿಸಲುಗಳಲ್ಲಿ ವಾಸವಾಗಿದ್ದು, ಮೂರು ದಂಡಗಳನ್ನು ಹಾಗೂ ಕಮಂಡಲವನ್ನು ಹಿಡಿದಿರುತ್ತಿದ್ದರು. ತಲೆಯ ಮೇಲೆ ಜುಟ್ಟು ಇರುತ್ತಿತ್ತಲ್ಲದೆ ಪವಿತ್ರ ದಾರವನ್ನು ಧರಿಸುತ್ತಿದ್ದರು. ಆಹಾರವನ್ನು ಮಾತ್ರ ತಮ್ಮ ಸ್ವಂತ ಕುಟುಂಬದವರಿಂದ ಸ್ವೀಕರಿಸುತ್ತಿದ್ದರು. 'ಬಹುದಕರು' ಸಹ ತ್ರಿದಂಡ ಹಾಗೂ ಕಮಂಡಲ ಹೊಂದಿ, ಕೇಸರಿ ವರ್ಣದ ಬಟ್ಟೆ ಧರಿಸುತ್ತಿದ್ದರು. ಮಾಂಸ ಮತ್ತು ಉಪ್ಪನ್ನು ಸೇವಿಸದ ಇವರು ಆಹಾರಕ್ಕಾಗಿ ಕೇವಲ ಏಳು ಮನೆಗಳಲ್ಲಿ ಭಿಕ್ಷೆ ಬೇಡುತ್ತಿದ್ದರು. ಮೂರವನೆಯವರಾದ 'ಹಂಸ'ಗಳು ಬಹುಕಾಲ ಸಂಚಾರದಲ್ಲಿಯೇ ಕಳೆಯುವವರು. ಹಳ್ಳಿಗಳಲ್ಲಿ ಒಂದು ಹಗಲು-ರಾತ್ರಿ, ಹಾಗೂ ಪಟ್ಟಣಗಳಲ್ಲಿ ಐದು ಹಗಲು-ರಾತ್ರಿಗಳಿಗಿಂತ ಹೆಚ್ಚು ಒಂದೆಡೆ ನಿಲ್ಲಲಾರದ ಹಂಸಗಳು ತಾವು ಉಪವಾಸವಿರುತ್ತಿದ್ದ ಒಂದು ತಿಂಗಳ ಹೊರತಾಗಿ ಇಡೀ ವರ್ಷ ಭಿಕ್ಷೆ ಬೇಡುತ್ತಿದ್ದರು. ಕೊನೆಯ ಹಾಗೂ ಅತಿ ಉನ್ನತ ಆಧ್ಯಾತ್ಮಿಕ ವರ್ಗವೆಂದರೆ 'ಪರಮ ಹಂಸ' ರದು. ಇವರಂತೂ ಎಲ್ಲ ನಿಮಯ ನಿಬಂಧನೆಗಳಿಂದ ಸ್ವತಂತ್ರರು. ಸ್ಮಶಾನದ ಗಿಡಗಳ ಕೆಳಗೆ, ಪಾಳು ದೇಗುಲಗಳಲ್ಲಿ ಹಾಳು ಬಿದ್ದ ಮನೆಗಳಲ್ಲಿ ವಾಸಿಸುತ್ತಿದ್ದರು. ಪೂರ್ಣ ನಗ್ನರಾಗಿ ಇರುತ್ತಿದ್ದರು ಅಥವಾ ಕೊಳೆಯಾದ ಚಿಂದಿ ಅರಿವೆಗಳನ್ನು ಧರಿಸುತ್ತಿದ್ದರು. ತಮಗೆ ನೀಡಿದ್ದನ್ನೆಲ್ಲ ಉಣ್ಣುತ್ತಿದ್ದ ಅವರು ಜನರನ್ನು ದೂರವಿಡಬೇಕೆಂದು ಕೆಲವೊಮ್ಮೆ ಹುಚ್ಚರಂತೆ ವರ್ತಿಸುವುದೂ ಉಂಟು. ಮಣ್ಣು ಹಾಗೂ ಚಿನ್ನದ ಗಟ್ಟಿಯನ್ನು ಒಂದೇ ಬಗೆಯ ನಿರ್ವಿಕಾರ ಭಾವದಿಂದ ನೋಡಬಲ್ಲವರಾಗಿದ್ದರು. ಶ್ರೀ ರಾಮಕೃಷ್ಣ, ಸ್ವಾಮಿ ಯೋಗಾನಂದರಂತಹ ಹತ್ತೊಂಬತ್ತು ಮತ್ತು ಆರಂಭದ ಇಪ್ಪತ್ತನೆಯ ಶತಮಾನದ ಪ್ರಖ್ಯಾತರೆಲ್ಲ ಇದೇ ವರ್ಗಕ್ಕೆ ಸೇರಿದ 'ಪರಮ ಹಂಸ' ಸಾಧುಗಳು.

ಬಹುಶಃ ಸನ್ಯಾಸದ ಮೂಲ ಉದ್ದೇಶ ತಪ ಬಳಸಿಕೊಂಡು 'ಸಿದ್ಧಿ' ಗಳಿಸುವುದಾಗಿತ್ತು. 'ತಪದ'ದ ಅಕ್ಷರಶಃ ಅರ್ಥ ಬಿಸಿ ಎಂದು. ಇದರ

ಪರಿಕಲ್ಪನೆ ಪುರಾತನವಾದುದು. ಪ್ರಾಚೀನ ಸಾಂಕೇತಿಕತೆಯ ಪ್ರಕಾರ ಬಿಸಿ ಎರಡು ರೂಪದಲ್ಲಿರುತ್ತದೆ. ಅತ್ಯಂತ ಸಾಮಾನ್ಯ ರೂಪವೆಂದರೆ ಲೈಂಗಿಕ ಬಯಕೆ. ವೀರ್ಯವನ್ನು ತಡೆದಿಡಲು ಅನುಸರಿಸುವ ಯೋಗತಂತ್ರಗಳಿಂದ ಉತ್ಪತ್ತಿಯಾಗುವುದು 'ಬಿಸಿ'ಯ ಅತಿ ಉನ್ನತ ರೂಪ. ಉಪವಾಸ, ಪ್ರಾಣಯಾಮದಿಂದ ಉಸಿರು ಹಿಡಿದಿಡುವುದು, ದೀರ್ಘ ಧ್ಯಾನ, ಸ್ವದಂಡನೆಯ ಪ್ರಕಾರಗಳು ಹೀಗೆ ಎಲ್ಲ ಪದ್ಧತಿಗಳೂ ತಪಸ್ ಶಕ್ತಿಯನ್ನು ಉತ್ಪಾದಿಸಬಲ್ಲವು. ಲೈಂಗಿಕ ಕಾಮನೆಗಳನ್ನು ಪರಿತ್ಯಜಿಸಿದ ಬ್ರಹ್ಮಚಾರಿ ಸನ್ಯಾಸಿಗಳು 'ತಪವ'ನ್ನು ಹುಟ್ಟಿಸುವುದಕ್ಕಾಗಿ ತೀವ್ರ ತಪಸ್ಸನ್ನಾಚರಿಸುವುದರಿಂದ ಅವರನ್ನು 'ತಪಸ್ವಿನ್' ಎಂದು ಕರೆಯಲಾಗುತ್ತದೆ.

ತದನಂತರದಲ್ಲಿ ಸನ್ಯಾಸದ ಉದ್ದೇಶ ಹೆಚ್ಚು ವಿಸ್ತಾರವೂ, ಸೂಕ್ಷ್ಮವೂ ಆಯಿತು. ಬದುಕು-ಸಾವುಗಳ ಪುನರಾವರ್ತಿತ ಚಕ್ರದಲ್ಲಿ ಸಿಲುಕಿದ ಮಾನವ ಹಲವಾರು ಮಾನಸಿಕ, ಸಾಮಾಜಿಕ ಅನುರಾಗಗಳಲ್ಲಿ ಮುಳುಗಬೇಕಾಯ್ತು. ಬಿಡುಗಡೆ ಹೊಂದಬೇಕಾದರೆ ಕುಟುಂಬದ ಸಂಕುಚಿತ ಬೇಡಿಕೆಗಳಿಂದ, ಸಮಾಜದಿಂದ ಮುಕ್ತರಾಗುವುದು, ದೇಹ-ಮನಸ್ಸುಗಳೆರಡನ್ನೂ ನಿಯಂತ್ರಣಕ್ಕೊಳಪಡಿಸುವುದು ಮತ್ತು ಆಂತರಿಕ ಆನಂದವನ್ನು ಪ್ರೇರೇಪಿಸುವುದು ಅಗತ್ಯವಾಗಿತ್ತು. ಅಂತೆಯೇ ಆಧ್ಯಾತ್ಮಿಕ ಸ್ವಾತಂತ್ರ್ಯ ಬಯಸುವವರು ಸಮಾಜದಿಂದ ಬೇರೆಯಾಗಿ ಏಕಾಂತವಾಸಿಗಳಾದರು ಅಥವಾ ಇತರ ಸಮಾನ ಮನಸ್ಕರೊಡನೆ ಸೇರಿಕೊಂಡು ಸನ್ಯಾಸ ಸಮುದಾಯವನ್ನು ರೂಪಿ



ಸಿದರು.

ಆದಿ ಶಂಕರಾಚಾರ್ಯರು ಬರುವ ತನಕ (ಕ್ರಿ.ಶ. 788-820) ಜೈನ, ಬೌದ್ಧ ಧರ್ಮಗಳಂತೆ ಹಿಂದೂ ಧರ್ಮದೊಳಗೆ ಸಂಘಟಿತ ಸನ್ಯಾಸ ವ್ಯವಸ್ಥೆ ಎಂಬುದಿರಲಿಲ್ಲ. ಶಂಕರಾಚಾರ್ಯರೇ ಸನ್ಯಾಸದ ನಿಯಮಗಳನ್ನು ರೂಪಿಸಿ ಸನ್ಯಾಸಿಗಳನ್ನು ಹತ್ತು ಗುಂಪುಗಳನ್ನಾಗಿ ಸಂಘಟಿಸಿದರು. ಆ 'ದಶನಾಮಿ'ಗಳೆಂದರೆ:

ಸರಸ್ವತಿ (ವಿದ್ಯೆ), ಪುರಿ (ನಗರ), ವನ (ತೋಪು), ತೀರ್ಥ (ತೀರ್ಥಯಾತ್ರೆ), ಗಿರಿ (ಬೆಟ್ಟ), ಪರ್ವತ, ಭಾರತಿ, ಅರಣ್ಯ, (ಅಡವಿ), ಆಶ್ರಮ ಮತ್ತು ಸಾಗರ. ಈ ಹೆಸರುಗಳೆಲ್ಲ



ಸಾಂಕೇತಿಕವಾಗಿದ್ದು ಸನ್ಯಾಸಿಗಳ ಹೆಸರಿನೊಂದಿಗೆ ಇವುಗಳನ್ನೂ ಸೇರಿಸುವ ಮೂಲಕ ಸನ್ಯಾಸಿ ಯಾವ ಗುಂಪಿಗೆ ಸೇರಿದವನೆಂಬುದನ್ನು ಗುರುತಿಸಲಾಗುತ್ತದೆ.

ಪ್ರಾಪಂಚಿಕ ಜೀವನದೊಂದಿಗೆ ವೈರಾಗ್ಯ ತಾಳಿದ ಯಾರಾದರೂ ಪಡೆಯಬಹುದಾದ ಸನ್ಯಾಸ ದೀಕ್ಷೆ ಸಮಯದಲ್ಲಿ ವಿರಾಜಹೋಮವೆಂಬ ವೈದಿಕ ವಿಧಿಯನ್ನು ಪಾಲಿಸಲಾಗುತ್ತದೆ. ನಂತರ ನೀರಿನೊಳಗೆ ಇಳಿಯುವ ದೀಕ್ಷಾರ್ಥಿ ತನ್ನ ವೈರಾಗ್ಯ ದೀಕ್ಷೆಗೆ ಮೂರು ಜಗತ್ತುಗಳಾದ ಭೂಮಿ, ಆಕಾಶ, ಸ್ವರ್ಗಗಳು ಸಾಕ್ಷಿಯಾಗಬೇಕೆಂದು ಕೋರುವ ಪ್ರೇಷ ಮಂತ್ರವನ್ನು ಮೂರು ಬಾರಿ ಪಠಿಸುತ್ತಾನೆ. ಆಗ ಗುರು ದೀಕ್ಷೆ ಪಡೆದ ಸನ್ಯಾಸಿಗೆ ಹೊಸದೊಂದು ಹೆಸರು ನೀಡುತ್ತಾನೆ. ಇದರೊಂದಿಗೆ ಆ ವ್ಯಕ್ತಿ ತನ್ನ ಪೂರ್ವಾಶ್ರಮದ ಗುರುತಿನ ಮಟ್ಟಿಗೆ ಸಾಯುತ್ತಾನಲ್ಲದೆ ಮತ್ತೆ ಪ್ರಾಪಂಚಿಕ ಜೀವನಕ್ಕೆ ಹಿಂದಿರುಗಲಾರ. ದೀಕ್ಷಾವಿಧಿಗನುಸಾರ ಸಾಧುವಿನ ದೇಹವನ್ನು ಸಾಂಕೇತಿಕವಾಗಿ ಹೂಳಲಾಗುತ್ತದೆ ಅಥವಾ ನೀರಲ್ಲಿ ಮುಳುಗಿಸಲಾಗುತ್ತದೆ. ಆದರೆ ಸುಡುವುದಿಲ್ಲ.

ಪರಂಪರೆಯ ಪ್ರಕಾರ ಒಬ್ಬ ಸನ್ಯಾಸಿ ತನ್ನ ಆತ್ಮ (ಆತ್ಮನ್)ದೊಂದಿಗೆ ಜಗದಾತ್ಮ (ಬ್ರಹ್ಮನ್)ವನ್ನು ಒಂದುಗೂಡಿಸುವ ಧ್ಯಾನದಲ್ಲಿ ದಿನಗಳೆಯಬೇಕಾಗುತ್ತದೆ. ಬಹುಪಾಲು ಸಾಧುಗಳು ತೀರ್ಥಕ್ಷೇತ್ರಗಳನ್ನು ಸಂದರ್ಶಿಸುತ್ತ ಸಂಚರಿಸುತ್ತಾರಲ್ಲದೆ, ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಅತಿ ದೊಡ್ಡ ಸನ್ಯಾಸಿಗಳ ಮೇಳವಾದ ಕುಂಭಮೇಳದಲ್ಲಿ ಭಾಗವಹಿಸುತ್ತಾರೆ. ಅನೇಕ ಸಾಧುಗಳು ಮಾನಸಿಕ ಹಾಗೂ ಆಧ್ಯಾತ್ಮಿಕ ಸಹಾಯವನ್ನು ಅಪೇಕ್ಷಿಸುವವರಿಗೆ ಮಾರ್ಗದರ್ಶಿಗಳಾಗುತ್ತಾರೆ. ಬಹಳಷ್ಟು ಜನ ಸಾಧುಗಳು ಬ್ರಹ್ಮಚಾರಿಗಳಾಗಿಯೇ ಇದ್ದರೂ 'ಪಂಥ'ಗಳಂತಹ ಕೆಲವು ಗುಂಪುಗಳಲ್ಲಿ ವಿವಾಹವಾಗಿ ಕುಟುಂಬ ಹೊಂದುವ ಅವಕಾಶವೂ ಇದೆ. ಒಂದು ಅಂದಾಜಿನ ಪ್ರಕಾರ ತೊಂಬತ್ತರಲ್ಲಿ ಎಪ್ಪತ್ತರಷ್ಟು ಹಿಂದೂ ಸನ್ಯಾಸ ಪಂಥಗಳು ಬ್ರಹ್ಮಚರ್ಯೆಯನ್ನು ಹೇರುತ್ತವೆ.

ಶಂಕರಾಚಾರ್ಯರಲ್ಲದೆ ಇನ್ನೂ ಅನೇಕ ಹಿಂದೂ ಧಾರ್ಮಿಕ ಸುಧಾರಣಾವಾದಿಗಳು ಮತ್ತು ಬೋಧಕರು ವೈರಾಗ್ಯ ತತ್ವಗಳನ್ನು ಸ್ಥಾಪಿಸಿದ್ದಾರೆ. ಅವರಲ್ಲಿ ಮುಖ್ಯರೆಂದರೆ ರಾಮಾನುಜ, ಮಾಧ್ವ, ಚೈತನ್ಯ, ರಮಾನಂದ, ಗೋರಕ್ಷನಾಥ ಮತ್ತು ಬಸವೇಶ್ವರ.

ಅಘೋರಿಗಳಂತೂ ತಾವು ಶಿವನ ಮೂಲದವರೆಂದು ಗುರುತಿಸಿಕೊಳ್ಳುತ್ತಾರೆ. ಇವರು

ಅತ್ಯಂತ ಪುರಾತನ ಪಂಥವಾದ 'ಕಾಪಾಲಿಕಾ'ಗಳ ಮೂಲ ವರ್ಗಕ್ಕೆ ಸೇರಿದವರೆಂಬುದರಲ್ಲಿ ಮಾತ್ರ ಅನುಮಾನವಿಲ್ಲ. ಕಳೆದ ಶತಮಾನದಲ್ಲಿ ಅಸಂಖ್ಯಾತರಾಗಿದ್ದ ಇವರ ಗುಂಪು ಸದ್ಯ ಗಣನೀಯವಾಗಿ ಕ್ಷೀಣಿಸಿದೆ. ಕೆಲವು ಅಘೋರಿಗಳು ಅಬು, ಗಿರ್ನಾರ್ ಬೆಟ್ಟಗಳಲ್ಲಿ ಅಥವಾ ಸ್ಮಶಾನಗಳಲ್ಲಿ ವಾಸಿಸುತ್ತ ಹೆಣಗಳೊಂದಿಗೆ ರಹಸ್ಯ ವಿಧಿಗಳನ್ನು ಆಚರಿಸುತ್ತಾರೆ. ಈ ಆಚರಣೆ ನರಮಾಂಸ ಭಕ್ಷಣೆ ಹಾಗೂ ಸ್ವಮಲ ಸೇವನೆಯಂತಹ ಅಸಹ್ಯಕರ ಅಂಶಗಳನ್ನೊಳಗೊಂಡಿದೆ.

ಇಪ್ಪತ್ತನೆಯ ಶತಮಾನದ ಇಂದಿನ ದಿನಗಳಲ್ಲಂತೂ ಸಾಧುಗಳು ಸಾಂಪ್ರದಾಯಿಕ ಸಂಹಿತೆಯಾದ ವೈರಾಗ್ಯವನ್ನು ಪಾಲಿಸುವುದು ಕಡಿಮೆಯಾಗುತ್ತಿದೆ. ಭಾರತೀಯ ಸಮಾಜ ಸಾಧುಗಳಿಗೆ ನೀಡುತ್ತಿರುವ ಗೌರವಾದರಗಳನ್ನು ಕಬಳಿಸಲು ಮತ್ತು ಸಮಸ್ಯೆಗಳಿಂದ ದೂರ ಸರಿಯುವ ಸುಲಭ ಮಾರ್ಗವನ್ನಾಗಿಯೂ ಅನೇಕ ವಂಚಕ, ಸ್ವಾರ್ಥಿ ಜನ ಸಾಧು ಪಂಥವನ್ನು ಪರಿಗಣಿಸುತ್ತಿದ್ದಾರೆ. ಕೆಲವರಂತೂ ಜನರ ಧಾರ್ಮಿಕ ಭಾವನೆಗಳನ್ನು ಉಪಯೋಗಿಸಿಕೊಂಡು ಹಣ ಮತ್ತು ಪ್ರಭಾವ ಗಳಿಸಲೆಂದೇ ಸಾಧು ವೇಷ ಧರಿಸಬಲ್ಲರು. ಭಕ್ತಾದಿಗಳನ್ನು ಆಕರ್ಷಿಸಲೆಂದು ಪವಾಡಗಳಂತಹ ಮಾಂತ್ರಿಕ ಕಸರತ್ತುಗಳನ್ನು ಬಳಸಿಕೊಳ್ಳುತ್ತಾರೆ. ಇಂಥ ದುರುದ್ದೇಶಗಳ ಪರಿಣಾಮವಾಗಿ ಎಷ್ಟೋ 'ಸಾಧು'ಗಳು ಗಣನೀಯ ಸಂಪತ್ತು ಹಾಗೂ ರಾಜಕೀಯ ಪ್ರಭಾವವನ್ನು ಜಮಾಯಿಸಲು ಸಫಲರಾಗಿದ್ದಾರೆ. ಒಂದು ರೀತಿಯಲ್ಲಿ ಈ ಬೆಳವಣಿಗೆ ಹೊಸದೇನೂ ಅಲ್ಲ. ಹಿಂದೆಯೂ ಸಾಧುಸಂತರು ರಾಜಮಹಾರಾಜರ ದರ್ಬಾರುಗಳಲ್ಲಿ ಗೌರವಿಸಲ್ಪಡುತ್ತಿದ್ದರು. ಮಧ್ಯಯುಗದ ಸನ್ಯಾಸಿಗಳನೇಕರಂತೂ ರಾಜರು ಮತ್ತು ಧನಿಕ ವ್ಯಾಪಾರಿಗಳು ನೀಡಿದ ದಾನಗಳಿಂದ ಸಾಕಷ್ಟು ಹಣ, ಭೂಮಿಯನ್ನು ಸಂಪಾದಿಸಿದ್ದರು.

ಹಲವೊಮ್ಮೆ ಸಾಧುಗಳನ್ನು ಬದಲಾವಣೆ ಮತ್ತು ಪ್ರಗತಿಯ ಹಾದಿಗೆ ಅಡ್ಡಬರುವವರೆಂದು ದೂರಲಾಗುತ್ತದೆ. ಈ ಮಾತಿನಲ್ಲಿ ಒಂದಷ್ಟು ಸತ್ಯದ ಕಣಗಳೂ ಇವೆ. ಕೆಲವು ಸಾಂಪ್ರದಾಯಿಕ ಸನ್ಯಾಸ ಸಂಸ್ಥೆಗಳ ಮುಖ್ಯಸ್ಥರು ತೋರುವ ಶಾಸ್ತ್ರಾನುಸರಣೆಯ ಪ್ರೋತ್ಸಾಹದಲ್ಲಿ ಸ್ವಾರ್ಥ ಸಾಧನೆಯೂ ಸೇರಿರುತ್ತದೆ. ಆದರೆ ಬಹುಪಾಲು ಸಾಧುಗಳು ಜಾತಿ, ಸಂಸಾರಗಳ ಬಂಧನಗಳಿಂದ ಬಿಡುಗಡೆ ಹೊಂದಿದವರಾದ್ದರಿಂದ ಜಾತಿಪೂರಿತ ಸಮಾಜದ ಮೇಲೆ ಏಕಪ್ರಕಾರದ ಪ್ರಭಾವವನ್ನು ಬೀರಬಲ್ಲರು. ಅನೇಕ ಸುಧಾರಣಾವಾದಿ ಸನ್ಯಾಸಿಗಳು ಜಾತಿವಾದಿ ಪುರೋಹಿತರಿಗೆ ಪ್ರತಿಯಾಗಿ ಮಾನವೀಯತೆ ಹಾಗೂ ಸೋದರಭಾವನೆಗಳ ಪರವಾದ ನಿಲುವು ತಾಳಿದ್ದಾರೆ. ಸ್ವಾಮಿ ವಿವೇಕಾನಂದ ಮತ್ತು ಸ್ವಾಮಿ ದಯಾನಂದ ಸರಸ್ವತಿ ಅವರಂತಹ ಆಧುನಿಕ ಪ್ರಗತಿಪರರು, ಮುಕ್ತ ಚಿಂತಕರೂ ಸಹ ಸನ್ಯಾಸಿಗಳಾಗಿದ್ದರೆಂಬುದನ್ನು ಮರೆಯಲಾಗದು.

ಸಾಹಿತ್ಯ, ತತ್ವಜ್ಞಾನ, ಸಾಂಸ್ಕೃತಿಕ ಪರಂಪರೆಗಳನ್ನು ರಾಷ್ಟ್ರದ ಉದ್ದಗಲಕ್ಕೂ ವಿತರಿಸುವ ಅಲೆಮಾರಿ ಸಾಧುಗಳು ಆ ಮೂಲಕ ಭಾರತದ ಸಾಂಸ್ಕೃತಿಕ ಏಕತೆಗೆ ನೀಡುವ ಕೊಡುಗೆ ಅಪಾರವಾದುದು. ಅಷ್ಟೇ ಅಲ್ಲ ಭಾರತದ ಸಾಂಸ್ಕೃತಿಕ, ಧಾರ್ಮಿಕ ಚಿಂತನೆಗಳನ್ನು ಮತ್ತು ಯೋಗ ತಂತ್ರವನ್ನು ಜಗತ್ತಿನ ಮೂಲೆಮೂಲೆಗೆ ಕೊಂಡೊಯ್ದವರು ಸಾಧುಗಳೇ.

ನದಿ ಮತ್ತು ಸನ್ಯಾಸಿಯ ಮೂಲವನ್ನು ಹುಡುಕಬಾರದೆಂದು ಹೇಳುವ ಸೂಕ್ತಿಯೊಂದಿದೆ. ಆದರೆ ಹುಡುಕಿ ಹೊರಟರೆ ಸುರುಳಿ ಸುರುಳಿಯಾಗಿ ತೆರೆದುಕೊಳ್ಳುವ ಸಾಧುಸಂತರ ಲೋಕ ಎಷ್ಟೊಂದು ವ್ಯಾಪಕ, ವೈವಿಧ್ಯಮಯ, ಅದ್ಭುತ! ಅಲ್ಲವೇ?

(ಕೃಪೆ: ದಿ ಇಂಡಿಯಾ ಮ್ಯಾಗಜಿನ್)

ಸಂಸ್ಕೃತಿ, ಪರಿಸರ ಮತ್ತು ನುಡಿಕಟ್ಟು

“ನೀರಿನಲ್ಲಿ ಹೋಮ ಮಾಡಿದ ಹಾಗೆ” ಎನ್ನುವುದು ನಿರರ್ಥಕ ಪರಿಶ್ರಮವನ್ನು ಆಲಂಕಾರಿಕವಾಗಿ ವರ್ಣಿಸುವ ವಿಧಾನ. ಹೋಮ ಮಾಡುವುದು ಬೆಂಕಿಯಲ್ಲಿ; ಆಗ ಹೋಮ ದ್ರವ್ಯ ಸುಟ್ಟು ದೇವತೆಗಳಿಗೆ ತಲುಪುತ್ತದೆ. ನೀರಲ್ಲಿ ಮಾಡಿದರೆ ಅದು ವ್ಯರ್ಥ. ಇದರದೇ ಇನ್ನೊಂದು ರೂಪ “ಬೂದಿಯಲ್ಲಿ ಹೋಮ” ಎನ್ನುವುದು. ಮುಕುಂದ ಮಾಲಾದಂಥ ಪ್ರಾಚೀನ ಸ್ತೋತ್ರದಲ್ಲಿ “ಹುತಂ ಭಸನಿ” ಎಂಬ ಮಾತು ಬರುತ್ತದೆ. ಈ ನುಡಿಕಟ್ಟನ್ನು ಇಂದು ಎಲ್ಲ ವರ್ಗಗಳವರೂ ಬಳಸುತ್ತಾರೆ. ಆದರೆ ಇದು ವೈದಿಕ ಪರಂಪರೆಗೆ ಸೇರಿದ್ದೆಂಬುದು ತುಸು ಮಾತ್ರ ಯೋಚಿಸಿದರೆ ತಿಳಿಯುವ ವಿಚಾರ. ಈ ಪರಂಪರೆಗೆ ಸೇರದ ಜನ ಇದೇ ಭಾಷೆಯಲ್ಲಿ ಇದೇ ತಾತ್ಪರ್ಯವನ್ನು ವ್ಯಕ್ತಪಡಿಸಲು “ಹೊಳೇಲಿ ಹುಣಸೇ ಹಣ್ಣು ತೊಳಧಾಂಗ” ಎನ್ನುತ್ತಾರೆ. ಭಾಷಾ ರೂಢಿಗಳಲ್ಲಿ ಸಾಂಸ್ಕೃತಿಕ ಭೇದಗಳು ವ್ಯಕ್ತವಾಗುವ ಪರಿ ಇದು. ಇಲ್ಲಿ ಕೂಡ ಭೌಗೋಲಿಕ ಪರಿಸರ ಹಾಗು ಆಹಾರ ಕ್ರಮಗಳು ಪ್ರತಿಬಿಂಬವಾಗುತ್ತವೆ. ಹತ್ತಿರ ಹೊಳೆ ಇಲ್ಲದವರಾಗಲಿ ಆಹಾರದಲ್ಲಿ ಹುಣಸೇಹಣ್ಣು ಬಳಸದ ಬಂಗಾಲಿಗಳಂಥ ಜನಾಂಗಗಳಾಗಲಿ ಹೊಳೆಯಲ್ಲಿ ಹುಣಸೇಹಣ್ಣು ತೊಳೆಯುವ ಕಲ್ಪನೆ ಮಾಡಲು ಸಾಧ್ಯವಿಲ್ಲ.

“ಇತಿಶ್ರೀ” ಹೇಳುವ ಮಾತು ಇದೇ ಈಗ ನಾನು ಓದುತ್ತಿರುವ ಕೊಡಗಿನ ಪ್ರಮುಖ ಕೊಡಗ ಲೇಖಕರೊಬ್ಬರ ಹೊಸ ಗ್ರಂಥದಲ್ಲಿ ಬರುತ್ತದೆ. “ಮುಗಿತಾಯ” ಎಂಬ ಅರ್ಥದ ಈ ವಾಗ್ರೂಢಿ ವಿಶಿಷ್ಟ ಬ್ರಾಹ್ಮಣ ಹಿನ್ನೆಲೆಯದು. ಯಾವುದೇ ಧಾರ್ಮಿಕ ಸ್ತೋತ್ರ, ಪುರಾಣ ಇತ್ಯಾದಿ ಸಾಹಿತ್ಯವನ್ನು ಬರೆಯುವ ಅಥವಾ ಓದುವಾಗ ಒಂದು ಅಧ್ಯಾಯವೋ ಗ್ರಂಥವೋ ಕೊನೆಗೊಳ್ಳುವ ನಿಟ್ಟಿನಲ್ಲಿ “ಇತಿಶ್ರೀ ಮದ್ರಾಮಾಯಣೇ ಸುಂದರ ಕಾಂಡೇ ಪಂಚಮಃ ಸರ್ಗಃ” ಇತ್ಯಾದಿಯಾಗಿ ಕೊನೆಗೊಳಿಸುವುದು ರೂಢಿ. ಆದ್ದರಿಂದ ಕೊನೆಗೊಳಿಸುವುದು “ಇತಿಶ್ರೀ” ಎನಿಸಿತು. ಅದು ತನ್ನ ಕ್ಷೇತ್ರ ವಿಸ್ತಾರ ಮಾಡಿಕೊಂಡು, “ಆಸ್ತಿಯನ್ನು ಮೂರು ವರ್ಷಗಳಲ್ಲಿ ಇತಿಶ್ರೀ ಮಾಡಿದ” ಇತ್ಯಾದಿ ಲೌಕಿಕ ವಿಷಯುಗಳಿಗೂ ವ್ಯಂಗ್ಯವಾಗಿಯೂ ಅನ್ವಯವಾಗುತ್ತಿದೆ. ಇದರಂತೆಯೇ, ಮೊದಲಿಂದ ಕೊನೆಯವರೆಗೆ ಎಂಬಲ್ಲಿ “ಅಥದಿಂದ ಇತಿಯವರೆಗೆ” ಎನ್ನುವುದು ರೂಢವಾಗಿದೆ. ಗ್ರಂಥಾರಂಭದಲ್ಲಿ “ಅಥ” ಎನ್ನುವುದೂ ಗ್ರಂಥಾವಸಾನದಲ್ಲಿ “ಇತಿ” ... ಎನ್ನುವುದೂ ಸಂಸ್ಕೃತದಲ್ಲಿ ರೂಢಿ. (ಅಥ= ಇನ್ನು ಮುಂದೆ; ಇತಿ= ಹೀಗೆಂದು.) ಹೀಗೇ ಯಜ್ಞ, ಪೂಜಾ ಕರ್ಮಗಳಿಗೆ ಸಂಬಂಧಿಸಿದ “ಅಧ್ವರ್ಯು” (=ಯಜ್ಞಗಳಲ್ಲಿ ವೇದಿಕೆ, ಅಗ್ನಿಕುಂಡ ಮೊದಲಾದವುಗಳನ್ನು ಕಟ್ಟುವ ಮೊದಲಾದ ಕೆಲಸಗಳನ್ನು ನಡೆಸುವ ವ್ಯವಸ್ಥಾಪಕ ಪುರೋಹಿತ) “ಮಂಗಳ ಹಾಡುವುದು”, “ಷೋಡಶೋಪಚಾರ” (=ದೇವ ಪೂಜೆಯಲ್ಲಿ ಮಾಡುವ ಹದಿನಾರು ವಿಧಿಗಳು - ಇದನ್ನು ವ್ಯಂಗ್ಯವಾಗಿ ಬಯ್ಯುವುದಕ್ಕೂ ಅನ್ವಯಿಸುತ್ತೇವೆ) ಇತ್ಯಾದಿ ಪದಗಳು ವೈದಿಕಾಚಾರದಿಂದ ಅವೈದಿಕ ಸನ್ನಿವೇಶಗಳಿಗೆ ವಲಸೆ ಹೋಗಿವೆ.

ಹೀಗೆ ಕೆಲವೊಂದು ವಾಗ್ವೈಖರಿಗಳು ಸಂಸ್ಕೃತಿ, ಪರಿಸರಗಳ ಉತ್ಪತ್ತಿಗಳಾಗಿದ್ದರೆ ಕೆಲವೊಂದು ಮಾತು ವಿಶ್ವವ್ಯಾಪಿ ಪ್ರತಿಧ್ವನಿಗಳನ್ನು ಹೊಂದಿವೆ. ನಾವು ಉಪಯೋಗವಿಲ್ಲದ, ಕೇಳುವವರಿಲ್ಲದ ಮೊರೆಗೆ “ಅರಣ್ಯ ರುದಿತ”, “ರೋದನ” ಎನ್ನುತ್ತೇವಲ್ಲ; ಇದು ಸಂಸ್ಕೃತದಲ್ಲಿ ಪಂಚತಂತ್ರದಷ್ಟು ಪುರಾತನ. ಭಾರತದ ಅನೇಕ ಭಾಷೆಗಳಲ್ಲಿ ಇದು ನೇರವಾಗಿ, ಇಲ್ಲವೆ ಅನುವಾದದಲ್ಲಿ ಸ್ವೀಕೃತವಾಗಿದೆ. ಈ ನುಡಿಕಟ್ಟು ಒಂದು ಮಹಾಖಂಡದಾಚೆಗೆ ಇಂಗ್ಲೀಷಿನಲ್ಲಿ “a cry in the wilderness” ಎಂಬುದಾಗಿ ಕೇಳಿಸುತ್ತದೆ. ಇದು ಪ್ರತಿಧ್ವನಿಯಲ್ಲ, ಅನುಭವ ಸಾಮ್ಯದಿಂದ ಹುಟ್ಟಿದ ಸಮ ಧ್ವನಿ. ಯಾಕೆಂದರೆ ಬೈಬಲ್ಲಿನ ಹೊಸ ಒಡಂಬಡಿಕೆಯಷ್ಟು ಹಿಂದೆಯೇ ಪಶ್ಚಿಮದಲ್ಲಿ ಈ ನುಡಿಕಟ್ಟು ಕಾಣಸುತ್ತದೆ. ಅರಣ್ಯಕ್ಕೆ ಸಂಬಂಧಿಸಿ ನಮ್ಮಲ್ಲಿ ಬಳಕೆಗೆ ಬಂದಿರುವ ಇನ್ನೊಂದು ವಾಗ್ವೈಖರಿ (ಬಹಳ ಕಾಲದ ಕಷ್ಟ ಪರಂಪರೆ ಎಂಬರ್ಥದಲ್ಲಿ) “ಅರಣ್ಯವಾಸ” ಅಥವಾ “ವನವಾಸ”. ಇದು ಸ್ಪಷ್ಟವಾಗಿಯೆ ರಾಮಾಯಣ ಮತ್ತು ಮಹಾಭಾರತದಲ್ಲಿ ರಾಮನಿಗೂ ಪಾಂಡವರಿಗೂ ಒದಗಿದ ವನವಾಸದ ಸಂಕಟದ ಸಾರ್ವತ್ರೀಕರಣ. ಆದರೆ ತಡೆಯಿರಿ. ಇಂಗ್ಲಿಷ್‌ನಲ್ಲಿ ಯಾವುದೇ ರಾಜಕೀಯ ಪಕ್ಷ ಅಧಿಕಾರ ಕಳೆದುಕೊಂಡು ಪ್ರಭಾವ ಹೀನವಾಗುವುದಕ್ಕೆ “in the wilderness” (ಅರಣ್ಯ ವಾಸ ಅನುಭವಿಸು

ವುದು) ಎನ್ನುತ್ತಾರೆ. ರಾಮಾಯಣ ಕಥೆಯ ಪ್ರಭಾವವಿಲ್ಲದೆಯೆ ಅಲ್ಲಿ ಈ ನುಡಿಕಟ್ಟು ಹುಟ್ಟಿದೆ. ಅರಣ್ಯಗಳು (ಮರಳುಗಾಡೂ 'ಅರಣ್ಯ'ವೇ) ಸರ್ವವ್ಯಾಪಿಗಳು. ಅವುಗಳ ಅಸ್ತಿತ್ವ ಭಾಷೆಗಳಲ್ಲಿ ವ್ಯಕ್ತವಾಗುವುದೂ ಹೆಚ್ಚು ವೇಳೆ ಒಂದೇ ತರಹ ಎನ್ನೋಣವೇ?

''ಕಚ್ಚೆ ಹರುಕ'', ''ಕಚ್ಚೆ ಹರುಕಿ'' ಎನ್ನುವುದು ಲಂಪಟ ಗಂಡು ಹೆಣ್ಣುಗಳನ್ನು ವ್ಯಂಗ್ಯವಾಗಿ ನಿರ್ದೇಶಿಸುವ ನುಡಿಕಟ್ಟುಗಳು. (ಈ ಮಾತಿನ ಅರ್ಥ ವಿವರಿಸಲು ಮಕ್ಕಳೇನಾದರೂ ಕೇಳಿದರೆ ಹಿರಿಯರು ಪೇಚಿಗೆ ಸಿಕ್ಕುವಷ್ಟು 'ಅಶ್ಲೀಲ'ವಾದ ನುಡಿಕಟ್ಟು ಇದು). ಹಿಂದುಗಳೇನೊ ಕಚ್ಚೆ ಹಾಕಿ ಧೋತರ ಉಡುವವರು; ಅಥವಾ ಲುಂಗಿ ಉಡುವುದಾದರೆ ಲಂಗೋಟಿ (=ಕಚ್ಚೆ) ಹಾಕುವವರು. ಆದರೆ ಮುಸ್ಲಿಂ ಆಢ್ಯ ಜನರು ಈ ವೇಷ ವಿಶೇಷವನ್ನು ಹಾಕಿಕೊಳ್ಳುವವರಲ್ಲ. ಅವರಲ್ಲಿ ಕೂಡ ಲಂಪಟರು ವ್ಯಭಿಚಾರಿಗಳು ಇದ್ದಾರಲ್ಲ. ಅವರು ಇಂಥವರನ್ನು ಹೇಗೆ ವ್ಯಂಜಿಸುತ್ತಾರೆ? ''ಇಜಾರ್-ಬಂದ್ ಕಾ ಢೀಲಾ'' ಇಜಾರಿನ (ಇದು ಪಾರಸಿಕ ಪದ) ಲಾಡಿ ಸಡಿಲಾಗಿರುವವನು ಎಂದು ಇದರ ಅರ್ಥ. ಮುಸ್ಲಿಮರು ಇಜಾರು ಧರಿಸುವವರಾದ್ದರಿಂದ ಅವರಲ್ಲಿನ ಲಂಪಟರು ಸಡಿಲು ಕಚ್ಚೆಯವರಲ್ಲ-ಸಡಿಲು ಇಜಾರಿನವರು. ಇಂಥ ವ್ಯಂಗ್ಯ ಮಾತುಗಳು ಸಾಂಸ್ಕೃತಿಕ ಪರಿಸರಕ್ಕನುಗುಣವಾದ ವೈಶಿಷ್ಟ್ಯಗಳೊಡನೆ ಮಾತ್ರವಲ್ಲ, ವೃತ್ತಿ ಹಿನ್ನೆಲೆಯ ಮುದ್ರೆ ಹೊತ್ತುಕೊಂಡು ಕೂಡ ನಿರಂತರವಾಗಿ ಹುಲುಸು ಮೆದುಳುಗಳಿಂದ ಸೃಷ್ಟಿಯಾಗುತ್ತಲೇ ಇರುತ್ತವೆಂದು ತೋರುತ್ತದೆ. ಅಂಚೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದವರೊಬ್ಬರು ಕಚ್ಚೆ ಹಾಕಿಕೊಳ್ಳದೆ ಸೀರೆಯುಡುವುದನ್ನು ''ಬುಕ್ ಪೋಸ್ಟ್'' ಎಂದು ಹೇಳುತ್ತಿದ್ದುದನ್ನು ನಾನು ಕೇಳಿದ್ದೇನೆ. ಬುಕ್ ಪೋಸ್ಟುಗಳನ್ನು ಅಂಟು ಹಚ್ಚಿ ಭದ್ರ ಪಡಿಸುವಂತಿಲ್ಲವೆಂದು ಹೇಳಿದರೆ ಈ ವ್ಯಂಗ್ಯದ ಅರ್ಥ ಸ್ಪಷ್ಟವಾಗುತ್ತದೆ. ಯಾರೂ ಹಣಕಿ ಓದಬಹುದು!

ವ್ಯಂಗ್ಯದ ಪ್ರಗತಿ ಹಾಗಿರಲಿ. ನೇರ ಮಾತುಗಳಲ್ಲಿ ಕೂಡ ಮಾನವನ ವೃತ್ತಿಗಳಿಗೆ ಸಂಬಂಧಿಸಿ ಭಾಷೆಗಳು ಸಂಪನ್ನವಾದ ಉದಾಹರಣೆಗಳಿಗೆ ಲೆಕ್ಕವಿಲ್ಲ. ''ಓತಪ್ರೋತವಾಗಿ ಹಬ್ಬಿತ್ತು'' ಎನ್ನುವಾಗ ನಾವು ನೇಯ್ಗೆ ವೃತ್ತಿಯ ಪದವನ್ನು ಬಳಸುತ್ತೇವೆನ್ನುವ ಪರಿವೆ ನಮಗಿರುವುದಿಲ್ಲ. ''ಓತ+ಪ್ರೋತ''=ಹಾಸು+ಹೊಕ್ಕು-ನೇಯ್ಗೆಯ ಉದ್ದ ಮತ್ತು ಅಡ್ಡ ಬಳಿಗಳು. ''ಪ್ರಬಂಧ ಕಮ್ಮಟ'' ವಿರ್ವಹಿಸಿದ್ದರು ಎಂದು ಪ್ರಬಂಧ ಬರೆಯುವ ಕಲೆಯಲ್ಲಿ ತರಬೇತಿ ಕೊಡುವ ವರ್ಗದ ಬಗ್ಗೆ ಹೇಳುವಾಗ ಕಮ್ಮಾರ ಸಾಲೆಯ ಕೆಲಸಕ್ಕೆ ಬರವಣಿಗೆ ತರಬೇತಿಯನ್ನು ಅನ್ವಯಿಸುತ್ತೇವೆ. ''ಫಲಕಾರಿಯಾಗಲಿಲ್ಲ'' ಎನ್ನುವಾಗ ಕೃಷಿ ಅಥವಾ ತೋಟಗಾರಿಕೆಯಿಂದ ಶಬ್ದವನ್ನು ಸ್ವೀಕರಿಸಿದ್ದೇವೆ. ಹೆಂಡತಿಯನ್ನು 'ಕ್ಷೇತ್ರ' ಎಂದು ಕರೆಯುವಾಗಲೂ ಕೃಷಿ ವ್ಯಾಪಾರದಿಂದ ಪದವನ್ನು ತೆಗೆದುಕೊಂಡಿದ್ದೇವೆ. ಎರಡೂ ''ಬೀಜ'' ಬಿತ್ತುವ ಸ್ಥಾನಗಳು! ''ರಾಜಕೀಯರಂಗ'' ಎನ್ನುವಾಗ ನಾಟಕ ಮೊದಲಾದ ಮನೋರಂಜನಾ ಸ್ಥಳಗಳಿಗಿರುವ ಹೆಸರನ್ನು ರಾಜಕೀಯ ಕ್ರಿಯೆಯ ಕಾಲ್ಪನಿಕ ಕ್ಷೇತ್ರಕ್ಕೆ ಅನ್ವಯಿಸುತ್ತೇವೆ. ಇಂಗ್ಲಿಷ್‌ನಲ್ಲಿ ಕೂಡ ರಂಗ ಎಂಬರ್ಥದ Stage ಪದ ಲಕ್ಷಣಾವೃತ್ತಿಯಿಂದ ಇತರ ಕಾರ್ಯಕ್ಷೇತ್ರಗಳಿಗೆ ಉಪಯೋಗಿಸಲ್ಪಡುತ್ತದೆ.

ಕೆಲವೊಮ್ಮೆ ಶಬ್ದಗಳ ಜಾಡು ಸಿಕ್ಕಿದರೂ ಅವು ಎಲ್ಲಿಗೆ ನಮ್ಮನ್ನು ಒಯ್ಯುವವೆಂದು ಹೇಳುವುದು ಸುಲಭವಾಗುವುದಿಲ್ಲ. ರವೀಂದ್ರರ ''ಶಾಂತಿನಿಕೇತನ''ದಿಂದಾಗಿ ''ನಿಕೇತನ'' (=ವಸತಿ) ಶಬ್ದ ಸುಪರಿಚಿತವಾಗಿದೆ. ನಿಕೇತನಕ್ಕೆ ಈ ಹೆಸರು ಹೇಗೆ ಬಂತು? ''ಕೇತನ'', ''ನಿಕೇತನ'' ಶಬ್ದಗಳ ಮುಖ್ಯಾರ್ಥ ಹೆಗ್ಗುರುತು, ಬಾವುಟ ಎಂದು. ಅಲ್ಲಿಂದ ಮನೆ, ವಾಸಸ್ಥಾನ ಎಂಬ ಅರ್ಥಕ್ಕೆ ಹೇಗೆ ತಿರುಗಿತು? ಸಾಕಷ್ಟು (ಮಹಾಭಾರತದಷ್ಟು) ಪುರಾತನವಾದ ಈ ಪದಾರ್ಥದಿಂದ ನಾವು ಏನನ್ನು ನಿಗಮಿಸಬೇಕು? ದೂರ ದೂರ ಮನೆಗಳಿದ್ದ ಕಾಲದಲ್ಲಿ ಮನೆಗಳಿಗೂ ವಿಶಿಷ್ಟ ಗುರುತು ಅಥವಾ ಬಾವುಟವನ್ನು ಎದ್ದು ಕಾಣುವಂತೆ ಹಚ್ಚುತ್ತಿದ್ದರೇ? ಅರಮನೆಗಳಿಗೆ ದೇವಾಲಯಗಳಿಗೆ, ರಥಗಳಿಗೆ ವಿಶಿಷ್ಟ ಗುರುತಿನ ''ಕೇತನ''ಗಳನ್ನು ಹಚ್ಚುತ್ತಿದ್ದರೆಂಬುದು ಖಂಡಿತ. ಸಾಮಾನ್ಯ ಮನೆಗಳಿಗೂ ಹಚ್ಚುತ್ತಿದ್ದರೆ? ಅಥವಾ ಹಿರಿ ಮನೆಗಳಿಗೆ ಬಾವುಟ ಹಚ್ಚುತ್ತಿದ್ದು ಇದರಿಂದ ಅವುಗಳಿಗೆ ''ನಿಕೇತನ'' ಎಂಬ ಹೆಸರು ವ್ಯಾಪಕವಾದ ಮೇಲೆ ಎಲ್ಲ ಮನೆಗಳಿಗೆ ಅದೇ ಹೆಸರು ಬಳಕೆಗೆ ಬಂತೆ? ಶ್ರೇಷ್ಠ (=ಸೆಟ್ಟಿ) ಎಂಬುದು ಮೊದಲು ವ್ಯಾಪಾರಿಗಳ ತಲೆಯಾಳಿಗೆ ಸಲ್ಲುತ್ತಿದ್ದುದು ಮುಂದೆ ಎಲ್ಲ ವ್ಯಾಪಾರಿಗಳಿಗೂ ಸಂದ ಹಾಗೆ?

– ಪಾವೆಂ ●

ನಿರಾಶ್ರಿತ

ಮರಾಠಿ: ಶ್ರೀಮತಿ ಜ್ಯೋತ್ಸ್ನಾ ದೇವಧರ
ಕನ್ನಡಕ್ಕೆ: ಶ್ರೀಮತಿ ಮೀನಾ ವಾಂಗೀಕರ



“ಶ್ರೀಕಾಂತ್ ಎಲ್ಲಿದ್ದಿಯೋ? ಆ ಟ್ರಕ್ಕಿನವನು ಆವಾಗಿನಿಂದ ಗಲಾಟೆ ಮಾಡುತ್ತಿದ್ದಾನೆ. ಆತ ಬಂದಿರುವುದಾದರೂ ಯಾತಕ್ಕೆ?” ಸುಧಾಬಾಯಿ ಮಗನನ್ನು ಕೇಳಿದರು.

ನಿನ್ನೆ ರಾತ್ರಿ ನಿದ್ರೆಯೂ ಚೆನ್ನಾಗಿ ಆಗಿರಲಿಲ್ಲ. ಮೊನ್ನೆಯಿಂದ ದವಡೆ ನೋವಿನಿಂದ ಸಾಕು ಬೇಕಾಗಿದೆ. ಕಣ್ಣಂತೂ ನೀರು ಸುರಿದು ಸುರಿದು ಸೇದು ಹೋಗಿವೆ. ಇತ್ತೀಚೆಗೆ ಕಣ್ಣ ಮುಂದೆ ಯಾವಾಗಲೂ ಕಪ್ಪು ವಲಯಗಳೇ ತಿರುಗಿದಂತಾಗುತ್ತವೆ. ಕಣ್ಣಿನಲ್ಲಿಯ ದ್ರವ ದೂಷಿತವಾಗಿವೆಯೆಂದು ಡಾಕ್ಟರರು ಹೇಳುತ್ತಾರೆ. ಸಾಯುವ ಮೊದಲು ಎಷ್ಟೊಂದು ಯಾತನೆಗಳನ್ನು ಅನುಭವಿಸಬೇಕೋ ದೇವರೇ ಬಲ್ಲ. ಅದು ಯಾರಿಗೆ ತಪ್ಪಿದೆ?

''ಏ ಶ್ರೀಕಾಂತ, ಏ ಪ್ರಮೀಲಾ'' ಅನ್ನುತ್ತಲೇ ಸುಧಾಬಾಯಿ ಟೆರೆಸಿಗೆ ಬಂದರು. ಎದುರು ಬಹುದೊಡ್ಡ ಟ್ರಕ್ಕಿನಲ್ಲಿ ಜನರು ಮನೆಯಲ್ಲಿಯ ಸಾಮಾನುಗಳನ್ನು ತಂದಿಡುತ್ತಿದ್ದರು.

''ಶ್ರೀಕಾಂತ ..'' ಗಡಿಬಿಡಿಯಿಂದಲೇ ಅವರು ಮೆಟ್ಟಲುಗಳನ್ನಿಳಿದು ಕೆಳಗೆ ಬಂದರು. ಕಣ್ಣಲ್ಲಿಯ ನೀರನ್ನು ನಿಲ್ಲಿಸುವುದೇ ಸಾಧ್ಯವಿರಲಿಲ್ಲ. ಮನೆಯನ್ನು ಪೋಲೀಸರು ಜಪ್ತಿಗಿಪ್ತಿ ಮಾಡಿರುವರೋ ಮುಂತಾದ ಅನೇಕ ಸಂಶಯ ಅವರ ಮನಸ್ಸನ್ನು ಆವರಿಸಿತು. ಅಂತೆಯೇ ಕಳೆದ ಮೂರು-ನಾಲ್ಕು ದಿನಗಳಿಂದ ಶ್ರೀಕಾಂತ ಹಾಗೂ ಪ್ರಮೀಲಾ ಯಾವುದೊ ಗಡಿಬಿಡಿಯಲ್ಲಿದ್ದರು.

''ಈ ಸಾಮಾನುಗಳನ್ನು ಎಲ್ಲಿ ಒಯ್ಯುತ್ತಿದ್ದಿರಿ?'' ಅವರ ಧ್ವನಿಯಲ್ಲಿ ನಡುಕ ಸ್ಪಷ್ಟವಾಗಿತ್ತು.

ಶ್ರೀಕಾಂತ ಮಾತನಾಡಲಿಲ್ಲ. ಹೆಂಡತಿಯ ಕಡೆಗೆ ಮುಖ ತಿರುಗಿಸಿದ.

''ಇದೆಲ್ಲಾ ನಮ್ಮದೇ ಸಾಮಾನು. ನಾವು ಒಂದು ಹೊಸ ಪ್ಲಾಟ್ ಕೊಂಡಿರುವೆವು. ಅಲ್ಲಿ ಇಂದಿನಿಂದ ಇರಲು ಹೋಗುತ್ತಿರುವೆವು.''

ಸೊಸೆಯ ಮಾತಿನಿಂದ ಸುಧಾಬಾಯಿಯವರ ತಲೆಯ ಮೇಲೆ ವಜ್ರಾಘಾತವಾದಂತಾಯಿತು. ಅವರಿಗೆ ಮಾತನಾಡುವ ಶಕ್ತಿಯೇ ಇಲ್ಲವಾಯಿತು. ಹೊರಗಿನ ಒಂದು ಖುರ್ಚಿಯಲ್ಲಿ ಅವರು ಬಂದು ಕುಸಿದೇ ಬಿಟ್ಟರು.

ಅವರಿಬ್ಬರೂ ಸಾಮಾನುಗಳನ್ನು ತುಂಬಿಸುತ್ತಿದ್ದರು. ಫರ್ನಿಚರ್, ಪುಸ್ತಕ, ಬಟ್ಟೆ-ಬರೆ, ಪಾತ್ರೆ-ಪರಡಿ, ಮಂಚ, ಗಾದಿಗಳು ಒಂದೇ ಎರಡೇ! ತಮ್ಮ ಯಜಮಾನರ ಟೇಬಲ್ಲಿನ ಹತ್ತಿರದ ತಿರುಗುವ ಖುರ್ಚಿಯನ್ನು ಹಮಾಲನು ಎತ್ತಿ ತಂದದ್ದು ನೋಡಿದ ಕೂಡಲೇ ಅವರು ಎದ್ದೇ ನಿಂತರು.

''ಈ ಖುರ್ಚಿಯನ್ನು ಒಯ್ಯುವಂತಿಲ್ಲ'' ನಿರ್ಧಾರದ ಧ್ವನಿ. ಅವರಿಬ್ಬರೂ ಕೂಡಲೇ ತಿರುಗಿದರು. ಆಶ್ಚರ್ಯದಿಂದ ನೋಡತೊಡಗಿದರು.

''ಇವರ ಖುರ್ಚಿಯನ್ನು ಒಯ್ಯುವಂತಿಲ್ಲ'' ಸುಧಾಬಾಯಿಯವರು ಮತ್ತೊಮ್ಮೆ ಹೇಳಿದರು.


''ಅಮ್ಮಾ, ಈ ಖುರ್ಚಿಯನ್ನು ಬಿಟ್ಟರೆ ನಾನು ಈ ಮನೆಯಲ್ಲಿಯ ಯಾವ ಸಾಮಾನನ್ನೂ ಒಯ್ಯುತ್ತಿಲ್ಲ'' ಶ್ರೀಕಾಂತ ತನ್ನ ಮಾತನ್ನು ಸ್ಪಷ್ಟಪಡಿಸಿದ.

''ಹೌದು. ಇವೆಲ್ಲ ನಾವೇ ತಂದದ್ದು. ನನ್ನ ತವರು ಮನೆಯಿಂದ ತಂದದ್ದೇ ಒಯ್ಯುತ್ತಿರುವೆವು'' ಪ್ರಮೀಲಾ ಒತ್ತಿ ಹೇಳಿದಳು.

''ಅಮ್ಮಾ, ಅಪ್ಪ ಇದೇ ಖುರ್ಚಿಯಲ್ಲಿ ಕುಳಿತು ಹೋಮಿಯೋಪಥಿಯಲ್ಲಿ ಹಣ ಮತ್ತು ಹೆಸರು ಗಳಿಸಿದರು. ಅವರ ಪೇಶಂಟ್‌ಗಳು ಇನ್ನೂ ಅವರನ್ನು ನೆನೆಸುತ್ತಾರೆ. ಈ ಖುರ್ಚಿ ತುಂಬಾ ಅದೃಷ್ಟಶಾಲಿಯಾಗಿದೆ. ನಾನು ಅವರ ವ್ಯವಸಾಯವನ್ನೇ ಮುಂದುವರಿಸಿದ್ದೇನೆ. ಡಾಕ್ಟರ ಎಂದು ನನಗೆ ಹೆಸರು-ಹಣ ಗಳಿಸಬೇಕಾಗಿದೆ. ನಿನಗೆ ಈ ಖುರ್ಚಿಯಿಂದೇನು ಪ್ರಯೋಜನ?'' ಶ್ರೀಕಾಂತ ವಾದಿಸಿದ.

''ಪ್ರಯೋಜನವಿಲ್ಲವೆ? ಇವರ ನೆನಪು! ಅದರ ಬೆಲೆ ನಿನಗೇನು ತಿಳಿದೀತು? ಯಾಕೆ ಸುಮ್ಮನೆ ಅವರ ಹೆಸರನ್ನು ಎತ್ತುತ್ತಿ? ಇಷ್ಟೊಂದು ಉಪದ್ವ್ಯಾಪ ನಡೆಸಿದ್ದೀರಿ. ಹೊಸ ಮನೆ ಕೊಂಡಿರಿ; ಬೇರೆ ಇರುವುದನ್ನು ನಿರ್ಧರಿಸಿದಿರಿ. ಈಗ ಒಮ್ಮಿಂದೊಮ್ಮೆ ಟ್ರಕ್ ತರಿಸಿ ಸಾಮಾನು ಒಯ್ಯುತ್ತಿರುವಿರಿ? ನಿಮಗೆ ಜನದ್ದಲ್ಲ ಬಿದ್ದರೂ ಮನದ ನಾಚಿಕೆಯಿಲ್ಲವೇನೋ?''

ಶ್ರೀಕಾಂತ ಸುಮ್ಮನಿದ್ದ. ಆದರೆ ಪ್ರಮೀಲಾ



ನನ್ನ ಬದುಕಿನ
ಹಾಳೆಯಲ್ಲಿ ನೀನು
ಮುಕ್ತಕವಾಗುತ್ತೀಯೆಂದರೆ
ಮಹಾಕಾವ್ಯವಾದೆಯಲ್ಲ?

- ಅಶೋಕ ಸಮಗಂಡಿ

ಸುಮ್ಮನಿರಲಿಲ್ಲ.

''ಅಮ್ಮಾ, ನಿಮ್ಮನ್ನು ಕೇಳಿಯೇ ನಾವು ನಮ್ಮ ನಿರ್ಣಯ ಕೈಕೊಳ್ಳಬೇಕೆ? ನಿಮ್ಮನ್ನು ಕೇಳಿದ್ದರ ನೀವು ಖಂಡಿತ ಒಪ್ಪುತ್ತಿರಲಿಲ್ಲ. ನಿಮ್ಮ ಮಗನಿಗೆ ಆಣೆ ಹಾಕಿ, ಅತ್ತು ಕರೆದು ತಡೆಯುತ್ತಿದ್ದಿರಿ. ನನಗೆ ನನ್ನ ಇಚ್ಛೆಯಂತೆ ಬಾಳುವುದಿದೆ. ಅಲ್ಲದೇ ಈ ಫ್ಲಾಟ್‌ಗಾಗಿ ನನ್ನ ಅಣ್ಣಾ ದುಡ್ಡು ಕೊಟ್ಟಿರುವನು.''

''ಈ ಖರ್ಚಿಗೆ ಯಾರೂ ಕೈ ಹಚ್ಚುವಂತಿಲ್ಲ'' ಎಂದು ನಿರ್ಧಾರದ ಧ್ವನಿಯಲ್ಲಿ ಹೇಳಿ ಸುಧಾಬಾಯಿ ಒಳಗೆ ಹೋದರು. ತಮ್ಮ ಕೋಣೆಯಲ್ಲಿ ಕುಳಿತು ಅತ್ತರು. ತುಂಬಾ ಹೊತ್ತು ಅಳುತ್ತಲೇ ಇದ್ದರು.

''ಅತ್ತೆಯವರು ಕೋಪಗೊಂಡರೂ ಅಳದೇ ಇದ್ದುದು ಒಳ್ಳೆಯದಾಯಿತು'' ಪ್ರಮೀಲಾ ಗಂಡನಿಗೆ ಹೇಳಿದಳು.

ಶ್ರೀಕಾಂತನಿಗೆ ಕೋಪ ಬಂದಿತ್ತು. ಯಾರ ಮೇಲೆ? ಹೆಂಡತಿಯ ಮೇಲೋ ಅಮ್ಮನ ಮೇಲೋ ಅಥವಾ ತನ್ನ ಮೇಲೋ?!

''ಮದುವೆ ಆದಾಗಿನಿಂದ ಈ ನಾಲ್ಕೈದು ವರ್ಷ ಅವರು ಅಳುವುದನ್ನೇ ನೋಡುತ್ತಿದ್ದೇನೆ. ನನಗಂತೂ ಅವರ ಅಳುವೆಂದರೆ ಅಸಹ್ಯ ಅನಿಸುತ್ತದೆ.''

''ಓ.ಕೆ. ಓ.ಕೆ. ಎಲ್ಲರ ಮುಂದೆ ನಿನ್ನ ನಿಜ ರೂಪ ತೋರಿಸಬೇಡ. ಅಮ್ಮನಿಗೆ ಒಂದು ಮಾತು ಹೇಳುವಾ ಎಂದು ನಾನು ನಿನಗೆ ಎಷ್ಟು ಸಲ ಹೇಳಲಿಲ್ಲ? ಅವಳು ಒಪ್ಪುತ್ತಿರಲಿಲ್ಲವೆಂಬುದೂ ನಿಜ. ಆದರೂ ಬಾಗಿಲ ಮುಂದೆ ಒಮ್ಮೆಲೇ ಟ್ರಕ್ ನಿಂತದ್ದು ನೋಡಿ ಆಕೆಗೆ ಶಾಕ್ ಆಗಿದೆ.''

ತನ್ನ ಗಂಡ 'ಅಮ್ಮನ ಪುರಾಣ'ವನ್ನು ಪ್ರಾರಂಭಿಸಿದನೆಂದರೆ ನಿಲ್ಲಿಸುವುದಿಲ್ಲವೆಂಬುದು ಪ್ರಮೀಲಾಗೆ ಪರಿಚಿತವಾಗಿತ್ತು. ಅವಳು ತನಗಾಗಿ ಏನೇನು ಮಾಡಿದಳೆಂಬುದನ್ನು ಮತ್ತೆ ಮತ್ತೆ ಹೇಳತೊಡಗುವನು. ಪ್ರತಿಯೊಬ್ಬ ಅಮ್ಮ ತನ್ನ ಮಗನಿಗಾಗಿ ಮಾಡುತ್ತಲೇ ಇರುತ್ತಾಳೆ. ನಾವಂತೂ ಐದು ಜನ ಮಕ್ಕಳು! ನಮ್ಮಮ್ಮ ಏನು ಕಡಿಮೆ ಕಷ್ಟ ಪಟ್ಟಿದ್ದಾಳೆಯೆ!

''ನೀವು ಸ್ಕೂಟರಿನ ಮೇಲೆ ಮುಂದೆ ಹೋಗುವಿರಾ? ಸಾಮಾನುಗಳನ್ನಿಳಿಸಿ ಗೊತ್ತುಪಡಿಸಿದ ಸ್ಥಳಗಳಲ್ಲಿ ಇರಿಸಿಕೊಂಡು ಬಿಡಿರಿ. ಆಮೇಲೆ ಮತ್ತೆ ಜನ ಸಿಗುವುದಿಲ್ಲ'' ಪ್ರಮೀಲಾ ಗಂಡನ ಕಡೆ ನೋಡುತ್ತಾ ಅರ್ಥಪೂರ್ಣ ನಗೆನಕ್ಕಳು.

''ಹೋಗುವೆ. ನೀನು ದುಡ್ಡು, ವಸ್ತ್ರ-ಒಡವೆ ಎಲ್ಲಾ ಜಾಗ್ರತೆಯಿಂದ ತೆಗೆದುಕೊಂಡು ಬಾ'' ಆತನೂ ನಗುತ್ತಲೇ ಹೇಳಿದ.

''ಚಿಂತೆ ಮಾಡಬೇಡಿರಿ. ನಿಮ್ಮ ಆ ಬಾಟಲಿಗಳನ್ನು ಮಾತ್ರ ತೀರ ಜಾಗ್ರತೆಯಿಂದ ಒಯ್ಯಿರಿ. ಎಲ್ಲಾ ಒಂದೇ ರೀತಿಯ ಮಾತ್ರೆಗಳು! ಒಂದಕ್ಕೊಂದು ಸೇರಿಕೊಂಡರೆ ಹೊರಗೆ ಚೆಲ್ಲಬೇಕಾದೀತು. ಮುಚ್ಚಳಗಳನ್ನು ಗಟ್ಟಿಯಾಗಿ ಹಾಕಿರುವಿರಲ್ಲವೆ? ಸ್ಕೂಟರಿನ ಮೇಲೆ ಆ ಪೆಟ್ಟಿಗೆಯನ್ನು ಒಯ್ಯಬಹುದೆ?''

''ಬೇಡ. ಸಾಮಾನಿನ ಜೊತೆಗೆ ಆ ಪೆಟ್ಟಿಗೆಯನ್ನು ಸರಿಯಾಗಿಟ್ಟಿರುವೆ. ನಾನಿನ್ನು ಹೊರಡುವೆ.''

ಶ್ರೀಕಾಂತ ಹೊರಟುಹೋದ ನಂತರ ಪ್ರಮೀಲಾಳಿಗೆ ಹಾಯೆನಿಸಿತು. ಅತ್ತೆಯವರು ತಮ್ಮ ಕೋಣೆಯಲ್ಲಿ ಬಾಗಿಲು ಹಾಕಿಕೊಂಡು ಕುಳಿತದ್ದೂ ಒಳ್ಳೆಯದೇ ಆಯಿತು. ತನ್ನ ತವರು ಮನೆಯಿಂದ ತಂದ ಎಲ್ಲಾ ಸ್ಟೀಲ್ ಡಬ್ಬಗಳನ್ನು ತೆಗೆದುಕೊಳ್ಳಬೇಕು! ಸಣ್ಣಪುಟ್ಟ ಭರಣಿಗಳೂ ಇವೆ. ಅಲ್ಲದೇ ಮದುವೆಯಲ್ಲಿ ಉಡುಗೊರೆಯಾಗಿ ಬಂದ ಅನೇಕ ಸ್ಟೀಲ್ ಪಾತ್ರೆಗಳೂ ಇವೆ. ಈ ನಾಲ್ಕೈದು ವರ್ಷಗಳಲ್ಲಿ ಎಲ್ಲವೂ ಒಂದಾಗಿವೆ. ಭರಣಿಯಲ್ಲಿಯ ಸಾಮಾನು ಎಲ್ಲಿಡಬೇಕು? ಚೆಲ್ಲಿ ಬಿಡಲೆ?

''ಎಲ್ಲಾ ಸಾಮಾನು ಮುಗಿಯಿತೇನಮ್ಮಾ? ಪ್ರತಿಯೊಂದು ಮನೆಯಲ್ಲಿ ಇಷ್ಟು ತಡವಾದರೆ ಹೇಗಾದೀತಮ್ಮಾ?'' ಟ್ರಕ್ಕಿನವ ಹೇಳುತ್ತಿದ್ದ.

''ಆಯಿತು. ಗಾದಿ, ಟ್ರಂಕು, ಫರ್ನಿಚರ್, ಗಾಜಿನ ಕಪಾಟು ಎಲ್ಲಾ ಸರಿಯಾಗಿ ಇಟ್ಟಿರುವಿರಲ್ಲವೆ? ಒಡೆದು ಗಿಡಿದು ಇಡಬೇಡಿ ಮತ್ತೆ! ಟಿ. ವಿ. ನಾಜೂಕಾಗಿ ಇಡಿ, ಗಾದಿಯ ಮೇಲಿಟ್ಟರೆ ಅಲುಗಾಡಲಿಕ್ಕಿಲ್ಲ!''

''ಎಲ್ಲಾ ಸರಿಯಾಗಿಟ್ಟಿರುವೆವು. ಇದು ನಮ್ಮ ದಿನದ ಕೆಲಸ. ಅಮ್ಮಾ, ನಿಮ್ಮ ಫ್ರಿಜ್ ಎಲ್ಲಿದೆ? ಅದನ್ನಿಟ್ಟಂತೆ ಕಾಣಲಿಲ್ಲ''

''ಇಲ್ಲ. ಈ ಡಬ್ಬ ಹಾಗೂ ಬಾಟ್ಲಿಗಳನ್ನು ಹೇಗೆ ತೆಗೆದುಕೊಂಡು ಹೋಗುವಿರಿ?''

''ಬೇಗ ಬೇಗ ಕೊಡಿರಿ. ಎಲ್ಲವನ್ನೂ ಸರಿಯಾಗಿಡುವೆ'' ಟ್ರಕ್ಕಿನವ ಅವಸರಪಡಿಸುತ್ತಿದ್ದ.

ಪ್ರಮೀಲಾ ಹಿಂದುಮುಂದಿನ ಯೋಚನೆ ಮಾಡದೇ ಎಲ್ಲಾ ತುಂಬಿದ ಡಬ್ಬ ಹಾಗೂ ಭರಣಿಗಳನ್ನು ಎತ್ತಿಕೊಟ್ಟಳು. ಫ್ರಿಜ್‌ನಲ್ಲಿ ಆಕೆಯ ಮನಸ್ಸು ಸಿಕ್ಕಿಹಾಕಿಕೊಂಡಿದ್ದರೂ ಅದನ್ನು ಮುಟ್ಟುವ ಸಾಹಸ ಆಕೆಗಾಗಲಿಲ್ಲ.

ಮಗನ ಸ್ಕೂಟರ್ ಹೋದದ್ದು ಸುಧಾಬಾಯಿಗೆ ಕೇಳಿಸಿತು. ಟ್ರಕ್ಕ್ ಕೂಡಾ ಹೊರಟುಹೋಗಿತ್ತು. ಅದರ ಬೆನ್ನ ಹಿಂದೆಯೇ ಒಂದು ರಿಕ್ಷಾ ಬಂದ ಶಬ್ದವಾಯಿತು. ಮುಂದಿನ ಬಾಗಿಲನ್ನು ಎಳೆದುಕೊಂಡ ಸದ್ದು ಕೇಳಿಸಿತು. ಲ್ಯಾಚನ್ನು ತಿರುಗಿಸಿದ್ದೂ ತಿಳಿಯಿತು. ಸುಧಾಬಾಯಿಯವರು ಎದ್ದು ಮುಖ ತೊಳೆದುಕೊಂಡರು. ಕೋಪದಿಂದ ಅವರ ಮನಸ್ಸು ಸ್ವಾಧೀನದಲ್ಲಿರಲಿಲ್ಲ. ಉಳಿದ ಜೀವಮಾನವಿಡೀ ಇವರಿಬ್ಬರ ಮುಖ ನೋಡಬಾರದೆಂದು ಅನಿಸಿತು. ಈ ಕತ್ತೆ ಇಷ್ಟೊಂದು ಹೇಗೆ ಹೆಂಡತಿಯ ಮಾತಿನಂತೆ ನಡೆಯುವನೋ! ಅವಳಾದರೂ ಎಂಥವಳು? ತೀರಾ ಒಳಗಂಟಿನವಳು! ಯಾವುದನ್ನೂ ತಿಳಿಯಗೊಟ್ಟಿಲ್ಲ!

ಅಡುಗೆ ಮನೆಯಲ್ಲಿ ಡಬ್ಬ ಹಾಗೂ ಭರಣಿಗಳ ಸ್ಥಳ ಖಾಲಿಯಿರುವುದನ್ನು ನೋಡಿದಾಗ ಸುಧಾಬಾಯಿಯವರಿಗೆ ತಾವು ತೀರ ಏಕಾಕಿಯಾಗಿ ಅನಾಥರಾದಂತೆ ಅನಿಸಿತು. ಕಾಪಿಲೆ ಜಿಡ್ಡವರಂತೆ ನಿತ್ರಾಣವೆನಿಸಿತು. ಆ ಖಾಲಿ ಅಡುಗೆ ಮನೆಯನ್ನು ನೋಡಿ ಸುಧಾಬಾಯಿ ತುಂಬಾ ಕರುಣ ಧ್ವನಿಯಲ್ಲಿ ''ನೋಡಿ ನೀವಿಲ್ಲದೇ ನಾನು ಎಷ್ಟೊಂದು ತಬ್ಬಲಿಯಾಗಿರುವೆ; ಏನು ಮಾಡಲಿ? ನೀವೇ ಹೇಳಿ'' ಎಂದು ಗಂಡನನ್ನು ಧ್ದೇಶಿಸಿ ಅಂದುಕೊಂಡರು.

ಸುಧಾಬಾಯಿಯವರ ಏಕಾಕಿ ಜೀವನ ಪ್ರಾರಂಭವಾಯಿತು. ಶ್ರೀಕಾಂತ ನಾಲ್ಕೈದು ದಿನಗಳಿಗೊಮ್ಮೆ ಬರುತ್ತಿದ್ದ. ಆದರೆ ಸುಧಾಬಾಯಿ ಅವನೊಂದಿಗೆ ಎಷ್ಟು ಬೇಕೋ ಅಷ್ಟೇ ಮಾತನಾಡುತ್ತಿದ್ದರು. ಅವನು ಎದುರಿಗಿದ್ದಾಗ ಕ್ರೋಧ, ವಾತ್ಸಲ್ಯ, ಪ್ರೇಮ ಎಲ್ಲಾ ಭಾವನೆಗಳು ಮನಸ್ಸಿನಲ್ಲಿ ಉಕ್ಕುತ್ತಿದ್ದುವು. ಆದರೆ ಒಬ್ಬನೇ ಮಗನು ಈ ರೀತಿ ವಿಶ್ವಾಸಘಾತ ಮಾಡಿದ ನಂತರ ಅತನೊಂದಿಗೆ ಒಳ್ಳೆಯ ರೀತಿಯಿಂದ ಹೇಗೆ ವರ್ತಿಸಬೇಕೋ ತಿಳಿಯದಂತಾಗಿತ್ತು. ಅವರ ಮಗಳು ಆಸ್ಟ್ರೇಲಿಯಾದಲ್ಲಿದ್ದಳು. ಅವಳಿಗೂ ಇಲ್ಲಿಯ ಈ ಸಮಾಚಾರ ತಿಳಿಸಲಿಲ್ಲ. ಸುಮ್ಮನೆ ಯಾಕೆ ಅಳಿಯನೆದುರು ಮಗಳಿಗೆ ತಲೆ ಕೆಳಗೆ ಹಾಕುವಂತಹ ಸುದ್ದಿ ಬರೆಯಬೇಕು?

''ಅಮ್ಮಾ, ಸುಮಾಳಿಗೆ ಕಾಗದ ಬರೆದಿಯಾ?'' ಶ್ರೀಕಾಂತ ಕೇಳಿದನು.

''ಏನೆಂದು?''

''ಅದೇ ನಾವು ...''

''ಬೇರೆಯಾಗಿದ್ದೀರೆಂದೇ? ಹೊಸ ಫ್ಲಾಟ್ ಕೊಂಡಿರುವಿರೆಂದೆ?''

''ಹೂಂ''

''ಇಲ್ಲಪ್ಪಾ. ಇಂತಹ ಚಿಕ್ಕ-ಪುಟ್ಟ ಸುದ್ದಿ ದೂರ ಇರುವ ಅವಳಿಗೇಕೆ ಸುಮ್ಮನೆ ತಿಳಿಸಬೇಕು? ಆಮೇಲೆ ಅವಳು ನೀನೊಬ್ಬಳೇ ಹೇಗಿರುವಿ? ಯಾರನ್ನಾದರೂ ಜೊತೆಗಿಡು; ಅದು ಇದು ಎಂದು ಅಲ್ಲಿಂದಲೇ ಹತ್ತು ಸಲಹೆ ಕೊಡುತ್ತಾಳೆ.''

ಅಮ್ಮನ ಈ ಅವತಾರ ನೋಡಿ ಶ್ರೀಕಾಂತ ಆಶ್ಚರ್ಯಗೊಂಡ. ಅಮ್ಮ ತುಂಬಾ ಸಿಡಿಮಿಡಿಗೊಂಡಾಳು, ಅತ್ತು ಕರೆದು ರಂಪ ಮಾಡಿಯಾಳು, ಎಂದು ಆತನ ಊಹೆಯಾಗಿತ್ತು. ಆದರೆ ಏನೂ ವಿಶೇಷ ನಡೆದೇ ಇಲ್ಲವೆಂಬಂತೆ ವರ್ತಿಸುತ್ತಿದ್ದಾಳೆ. ಇಷ್ಟೊಂದು ಮಹತ್ವಪೂರ್ಣವಾದ ಘಟನೆಗೆ ಚಿಕ್ಕಪುಟ್ಟ ಸುದ್ದಿ ಎನ್ನುತ್ತಿದ್ದಾಳೆ!

''ನಿನಗೆ ಬ್ಯಾಂಕು, ಪೋಸ್ಟು ಮುಂತಾದ ಹೊರಗಿನ ಕೆಲಸಗಳಿದ್ದರೆ ಹೇಳು. ನಾನು ಪ್ರತೀ ವಾರ ಬಂದು ಮಾಡಿಕೊಡುತ್ತೇನೆ''

''ಛೆ! ಈಗ ನನಗೆ ಬೇಕಾದಷ್ಟು ಸಮಯವಿದೆ. ಒಂಟಿ ಜೀವ! ಕೆಲಸ-ಬೊಗಸೆ ಏನೂ ಇಲ್ಲ. ಅಡುಗೆಯ ಗಲಾಟೆಯಿಲ್ಲ. ತಲೆಗೆ ಯಾವ ಕಿರಿಕಿರಿಯೂ ಇಲ್ಲ!''

''ಅಂದರೆ?''

''ಅಂದರೇನು ಶ್ರೀ, ಅಲ್ಲಾ ಬೆಳಗಿನ ಹೊತ್ತು ಹತ್ತಿರದ ಹೋಟ್ಲನಿಂದ ಡಬ್ಬಿ ತರುವ ವ್ಯವಸ್ಥೆ ಮಾಡಿರುವೆ. ರಾತ್ರಿ ಹೆಚ್ಚಿನದೇನೂ ಬೇಕಾಗುವುದಿಲ್ಲ. ಏನಾದರೂ ಚೂರು-ಪಾರು ತಿನ್ನುವೆ. ಇಲ್ಲವೇ ಹತ್ತಿರದ ಹೋಟ್ಲಗೆ ಹೋಗಿ ಏನಾದರೂ ತಿಂದು ಬರುವೆ. ನಾನು ತುಂಬಾ ಮಜವಾಗಿರುವೆ ಶ್ರೀ!''

''ಅಲ್ಲಾ, ಅಮ್ಮಾ ನಿನಗೆ ಹೋಟ್ಲಿನ ತಿಂಡಿ ಸ್ವಲ್ಪವೂ ಇಷ್ಟವಾಗುತ್ತಿರಲಿಲ್ಲ. ನಾವು ಹೋದರೆ ಕೂಡಾ ನೀನು ಕೋಪಗೊಳ್ಳುತ್ತಿದ್ದಿ. ಮನೆಯಲ್ಲಿಯೇ ಇಡ್ಲಿ-ದೋಸೆ ಮಾಡಿ ಹಾಕುವುದೆಂದರೆ ನಿನಗೆ ತುಂಬಾ ಇಷ್ಟ ಅಲ್ಲವೆ?''

ಮಗನ ಮಾತು ಕೇಳಿ ಸುಧಾಬಾಯಿಯವರ ಮನಸ್ಸು ಒಂದು ಕ್ಷಣ ಗೊಂದಲಕ್ಕೀಡಾಯಿತು. ಜೀವ ಬಾಯಿಗೆ ಬಂದಂತಾಯಿತು. ಒಂದೇ ಪ್ರೀತಿಯ ಪುತ್ರಳಿಯ ಊಟ ತಿನಿಸು ನೋಡಿಕೊಳ್ಳುವುದು, ಆತನ ಪ್ರಕೃತಿಯನ್ನು ಕಣ್ಣಲ್ಲಿ ಎಣ್ಣೆ ಹಾಕಿದಂತೆ ಕಾಪಾಡುವುದು, ಆತನ ಓದು-ಬರ, ಆಟ-ಪಾಟ, ಇಚ್ಛೆ-ಅನಿಚ್ಛೆಗಳನ್ನು ಪೂರೈಸುವುದೇ ತನ್ನ ಜೀವನವಾಗಿತ್ತು. ಅದರಲ್ಲಿಯೇ ಸುಖವೆನಿಸುತ್ತಿತ್ತು.

ಆದರೆ .... ಅವರು ತಮ್ಮ ಮನಸ್ಸನ್ನು ಗಟ್ಟಿ ಮಾಡಿದರು.

''ಇದು ನೋಡು ಶ್ರೀ ಮನುಷ್ಯನೊಂದಿಗೆ ಆತನ ಅಭಿರುಚಿಗಳಿಗೂ ಮುಪ್ಪು ಬರುತ್ತದೆ. ಆದರೀಗ ನನ್ನ ಸಮಯ ಬಹು ಚೆನ್ನಾಗಿ ಕಳೆಯುತ್ತದೆ. ತಲೆಗೆ ಯಾವ ಕಿರಿಕಿರಿಯೂ ಇಲ್ಲ. ಬಿ.ಪಿ. ಕೂಡಾ ನಾರ್ಮಲ್ ಇದೆ.''

''ಆದರೂ ಔಷಧಿಗಳನ್ನು ನಿಯಮದಿಂದ ತೆಗೆದುಕೊ. ತಂದುಕೊಡಲೇ?''

''ಬೇಡ ಶ್ರೀ. ನಾನೀಗ ಹೋಮಿಯೋಪಥಿಯ ಔಷಧಿಗಳನ್ನು ತೆಗೆದುಕೊಳ್ಳುವುದಿಲ್ಲ. ಡಾ. ಜೋಶಿ ಇಲ್ಲಿಯೇ ಮೂಲೆಯ ಮೇಲಿದ್ದಾರೆ. ಮೊನ್ನೆ ಅವರ ಕಡೆಯಿಂದ ಎಲ್ಲಾ ಚೆಕ್ ಅಪ್ ಮಾಡಿಸಿಕೊಂಡೆ. ಅವರೇ ಔಷಧಿ ಕೊಡುತ್ತಾರೆ.''

''ಅಮ್ಮಾ, ಏನಿದು? ಮನೆಯಲ್ಲಿ ನಾನು ಡಾಕ್ಟರಿರುವಾಗ ನೀನು ಅಲೋಪಥಿಯ ಔಷಧಿ ತೆಗೆದುಕೊಳ್ಳುವಿಯಾ? ಹೋಮಿಯೋಪಥಿಯಿಂದ ಸೈಡ್ ಇಫೆಕ್ಟ್ ಆಗುವುದಿಲ್ಲವೆಂಬುದನ್ನು ನಾನು ನಿನಗೆ ಹೇಳಬೇಕೆ?''

''ಇಲ್ಲ ಶ್ರೀ, ನೀನೀಗ ಏನನ್ನೂ ಹೇಳುವ ಅಧಿಕಾರವನ್ನೇ ಕಳೆದುಕೊಂಡಿದ್ದೀಯ.''

ಸುಧಾಬಾಯಿ ತಮ್ಮ ಮಾತು ಮುಗಿಸಿ ಎದ್ದು ಹೋದರು. ಶ್ರೀ ಕೋಪಗೊಂಡಿದ್ದ. ಬಾಗಿಲನ್ನು ಅಪ್ಪಳಿಸುತ್ತಲೇ ಆತ ಹೊರಬಿದ್ದ. ಅಮ್ಮನ ನಡವಳಿಕೆ ಆತನ ನಿರೀಕ್ಷೆಗೆ ಮೀರಿದ್ದಾಗಿತ್ತು. ಅಷ್ಟೇ

ಅಲ್ಲದೇ ಅದು ತೀರಾ ಅಯೋಗ್ಯವಾದ ವಿಚಿತ್ರ ನಡವಳಿಕೆಯಾಗಿದೆಯೆಂದು ಶ್ರೀಗೆ ಅನಿಸಿತು.

''ನಾವು ಬೇರೆ ಇರಲು ಹೋದರು ಅವರಿಗೆ ಏನೂ ಅನಿಸುವುದಿಲ್ಲವೆಂದು ನಾನು ನಿಮಗೆ ಮೊದಲೇ ಹೇಳಿರಲಿಲ್ಲವೆ?'' ಪ್ರಮೀಲಾಳ ಸಮರ್ಥನೆ ನಡೆದಿತ್ತು.

''ಹಾಗಿಲ್ಲ. ಅವಳು ಬೇಕೆಂತಲೇ ಈ ರೀತಿ ವರ್ತಿಸುತ್ತಿದ್ದಾಳೆ. ಮಾತನಾಡುತ್ತಾಳೆ. ನಾವು ಅವಳಿಗೆ ಅಪಮಾನ ಮಾಡಿದೆವು. ಅವಳಿಗೆ ಹೇಳಿ-ಕೇಳಿ ಮನೆ ತೆಗೆದುಕೊಂಡಿದ್ದರೆ ಅವಳು ನಮಗೆ ಸಹಾಯವನ್ನೇ ಮಾಡುತ್ತಿದ್ದಳು.''

''ನಿಮಗೆ ಹಾಗೆನಿಸುವುದಷ್ಟೇ! ನನಗಲ್ಲ. ಸಹಾಯ ಮಾಡಲು ಅವರ ಹತ್ತಿರ ಇದೆಯಾದರೂ ಏನು ಮಹಾ? ತಮ್ಮನ್ನು ತಾವು ನೋಡಿಕೊಂಡರೆ ಸಾಕು!''

''ಪ್ರಮೀಲಾ, ಏನೇ ಆದರೂ ಅವಳು ನನ್ನ ಅಮ್ಮ. ನಾನು ಅವಳಿಗೆ ಬೇಕಾದ ಸಹಾಯ ಮಾಡಿಯೇ ತೀರುವೆ!''


''ಅಯ್ಯೋ, ಸಾಕು ಬಿಡಿ. ಮೊನ್ನೆ ಅಲ್ಲಿ ಹೋಗಿ ಬಂದಾಗ ಎಷ್ಟೊಂದು ಕೋಪಗೊಂಡಿದ್ದಿರಿ. ನೀವು ಕೋಪಗೊಳ್ಳಬಹುದು, ನಾನಲ್ಲ ನಾನು ಹೊರಗಿನವಳು. ಸೊಸೆಯಲ್ಲವೆ?''

''ಇನಫ್ ... ಸಾಕಿನ್ನು. ಅಮ್ಮನ ಆರೋಗ್ಯ ಮಾತ್ರ ಸುಧಾರಿಸಿದೆ. ಚಟುವಟಿಕೆಯಿಂದ ಓಡಾಡುತ್ತಿದ್ದಳು. ಅವಳು ತನ್ನ ದಿನಕ್ರಮವನ್ನು ಒಳ್ಳೆಯ ರೀತಿಯಲ್ಲಿ ಯೋಜಿಸಿಕೊಂಡಿದ್ದಾಳೆ. ಅವಳು ಹೀಗೆ ವರ್ತಿಸುವಳೆಂದು ನಾನು ಕನಸು-ಮನಸ್ಸಿನಲ್ಲಿಯೂ ನೆನೆಸಿರಲಿಲ್ಲ. ಅವಳು ಮನಸ್ಸಿಗೆ ಹಚ್ಚಿಕೊಂಡು ಕೊರಗುವಳು. ಎಲ್ಲಿ ಕಾಹಿಲೆ ಬೀಳುವಳೋ ಎಂದು ಭಯವೆನಿಸುತ್ತಿತ್ತು'' ಶ್ರೀಕಾಂತ ತನ್ನ ಭಾವನೆಗಳನ್ನು ವ್ಯಕ್ತಪಡಿಸಿದ.

''ಹೂಂ. ಅವರೀಗ ಕ್ಲಬ್ಬಿಗೆ ಹೋಗುತ್ತಾರೆ. ರಮಿ ಆಡುತ್ತಾರೆ. ಮನೆಗೆ ಗೆಳತಿಯರನ್ನು ಕರೆದು ಹರಟೆ ಹೊಡೆಯುತ್ತಾರೆ. ಲಾಯಬ್ರರಿಗೆ ಹೋಗಿ ಓದಲು ಪುಸ್ತಕಗಳನ್ನು ತರುತ್ತಾರೆ. ತಿರುಗಾಡಲು ಹೋಗುತ್ತಾರೆ. ಮಜವಾಗಿದ್ದಾರೆ!''

''ಇರಲಿ ಬಿಡು! ತನ್ನ ಜೀವ ರಮಿಸಿಕೊಳ್ಳುತ್ತಾಳಲ್ಲಾ, ಅವಳಿನ್ನೂ ಅರವತ್ತು ಕೂಡಾ ದಾಟಿಲ್ಲ. ಈ ಕಾಲದಲ್ಲಿ ಎಪ್ಪತ್ತರ ನಂತರ ಮುಪ್ಪು ಬರುತ್ತದೆ, ಪ್ರಮೀಲಾ''

ಸ್ವಲ್ಪ ಹೊತ್ತು ಪ್ರಮೀಲಾ ಸುಮ್ಮನಿದ್ದಳು. ಆಮೇಲೆ ಸಾಹಸಪಟ್ಟು ಮೆಲ್ಲನೇ ಹೇಳಿದಳು.



''ನೋಡಿ, ಮೊನ್ನೆ ಅತ್ತೆಯವರ ಪಕ್ಕದ ಮನೆಯ ಸಾಥಲೆಬಾಯಿ ಸಿಕ್ಕಿದ್ದರು. ಅವರು ಇತ್ತೀಚೆಗೆ ಸುಧಾಬಾಯಿಯವರ ಕಡೆಗೆ ಮಾವನ ವರ ಗೆಳೆಯ ... ಯಾರವರು ಸಾಪತಸೇಕರ್ ಅವರು ಮೇಲಿಂದ ಮೇಲೆ ಬರುತ್ತಾರಂತೆ!''

''ಆ ಸಾಥಲೆಬಾಯಿ ಒಬ್ಬ ಮೂರ್ಖಳಾದರೆ ನೀನೂ ಅಂತಹವಳೆ! ನೀನಾದರೂ ಇಂತಹ ಮಾತು ಕೇಳಿ ಬಂದು ನನಗೇಕೆ ಹೇಳುವಿ? ನಿನಗೆ ಅತ್ತೆ ಬೇಡವಾಗಿದ್ದಳು. ಹಟದಿಂದ ಮನೆಬಿಟ್ಟು ಬಂದಿಯಲ್ಲ ... ಸ್ವತಂತ್ರವಾಗಿ ಇರುವಿಯಲ್ಲ ... ಮತ್ತೆ ಅಮ್ಮ ಸ್ವತಂತ್ರಳಾಗಿದ್ದರೆ ನಿನಗೇಕೆ ಹೊಟ್ಟೆಕಿಚ್ಚು?''

''ನನಗೇನು ಮಾಡುವುದಿದೆ? ಮೊದಲೇ ಏಕೆ ಹೇಳಲಿಲ್ಲವೆಂದು ಆಮೇಲೆ ನೀವೇ ಅನ್ನಬೇಡಿ ಅಷ್ಟೆ!''

''ಸಾಕು ಸಾಕು'' ಜಿಗುಪ್ಸೆಯಿಂದ ಶ್ರೀಕಾಂತ ಹೇಳಿದ. ಸತ್ಯ ಸಂಗತಿಯೆಂದರೆ ಅವರಿಬ್ಬರೂ ಒಬ್ಬರ ಮೇಲೊಬ್ಬರು ಕೋಪಗೊಂಡಿದ್ದರು. ಯಾವ ದೋಷ ಇಲ್ಲದೇ, ಮದುವೆಯಾಗಿ ಸುಮಾರು ಐದು ವರ್ಷಗಳಾಗಿದ್ದರೂ, ಮಗು ವಾಗಿರಲಿಲ್ಲ.

''ನನಗೂ ತಡವಾಗಿಯೇ ಶ್ರೀ ಹುಟ್ಟಿದ. ನಿಮಗೂ ಆಗುವುದು'' ಎಂದು ಸುಧಾಬಾಯಿ ಧೈರ್ಯ ಹೇಳುತ್ತಿದ್ದರು.

ಶ್ರೀಕಾಂತ ಮತ್ತು ಪ್ರಮೀಲೆ ಈ ಅಸಮಾಧಾನದಿಂದಾಗಿ ಒಬ್ಬರ ಮೇಲೆ ಒಬ್ಬರು ಕೋಪಗೊಳ್ಳುತ್ತಿದ್ದರು. ಅಂತೆಯೇ ಅವರಲ್ಲಿ ಆಗೀಗ ಮಾತಿನ ಚಕಮಕಿಯಾಗುತ್ತಿತ್ತು.

ಶ್ರೀಕಾಂತನ ಮದುವೆಯಾಗಿ ಎರಡೇ ತಿಂಗಳಲ್ಲಿ ಆತನ ತಂದೆ ಆಕಸ್ಮಾತ್ತಾಗಿ ಹಾರ್ಟಫೇಲಿನಿಂದಾಗಿ ತೀರಿಕೊಂಡರು. ಶ್ರೀಕಾಂತ ಹಾಗೂ ಸುಧಾಬಾಯಿ ದುಃಖದಲ್ಲಿ ಮುಳುಗಿಹೋದರು. ಸುಧಾಬಾಯಿಯ ಕಣ್ಣೀರು ನಿಲ್ಲಲೇ ಇಲ್ಲ. ಹೊಸ ಸೊಸೆಯ ಹಬ್ಬ ಹುಣ್ಣಿಮೆಯೆಂದು ಆಸ್ಥೆಯಿಂದ ಮಾಡುವ ಉತ್ಸಾಹವೇ ಬತ್ತಿಹೋದಂತಾಗಿತ್ತು. ಅವಳ ಕಾಲ್ಗುಣವೇ ಕೆಟ್ಟದೆಂದು ಹೊರಗೆ ಅಂದು ತೋರಿಸದಿದ್ದರೂ ಮನಸ್ಸಿನಲ್ಲಿ ಅವಳ ಬಗ್ಗೆ ಆ ಭಾವನೆಯುಂಟಾಗಿತ್ತು.

ಅದರಲ್ಲಿಯೂ ಪ್ರಮೀಲೆಯ ಸ್ವಭಾವ ಹೊಂದಿಕೊಳ್ಳುವಂಥ ಹಾಗಿದ್ದರೆ ಅವರು ತಮ್ಮ ದುಃಖವನ್ನು ಮರೆತು ಅವಳ ಉತ್ಸಾಹದಲ್ಲಿ ಸಹ ಭಾಗಿಯಾಗುತ್ತಿದ್ದರು. ಆದರೆ ಅವಳು ತನ್ನ ತವರು ಮನೆಯ ಪ್ರತಿಷ್ಠೆಯನ್ನೇ ದೊಡ್ಡದು ಮಾಡಿ, ಅತ್ತೆಯವರ ಅಸ್ತಿತ್ವಕ್ಕೆ ಯಾವ ಬೆಲೆಯನ್ನೂ ಕೊಡಲಿಲ್ಲ. ತವರು ಮನೆಯಲ್ಲಿಯೇ ಎಲ್ಲಾ ಹಬ್ಬಹುಣ್ಣಿಮೆಗಳನ್ನು ಮಾಡಿಸಿಕ್ಕೊಂಡಳು. ಮಾವನವರ ಪರಿಚಯವಾಗುವ ಮುಂಚೆಯೇ ಅವರು ತೀರಿಕೊಂಡಿದ್ದರು. ಇನ್ನು ನೀನೇ ಮನೆಯ ಒಡತಿಯೆಂದು ಅವಳ ಅಮ್ಮ ತಲೆತುಂಬಿದ್ದಳು. ಆದರೆ ಸುಧಾಬಾಯಿಯವರು ಅಷ್ಟೇನೂ ಮೆತ್ತಗಿನ ಸ್ವಭಾವದವರಾಗಿರಲಿಲ್ಲ. ಅವರು ತಮ್ಮ ಮನೆಯಲ್ಲಿಯ ತಮ್ಮ ವರ್ಚಸ್ಸು ಹಾಗೂ ಹಿರಿತನದ ಸ್ಥಾನವನ್ನು ಉಳಿಸಿಕೊಂಡಿದ್ದರು. ಹೇಗೋ ನಾಲ್ಕೈದು ವರ್ಷ ಪ್ರಮೀಲೆ ಇವರೊಂದಿಗೆ ಇದ್ದಳು. ಆದರೆ ಆಕೆಗೆ ಬೇರೆ ಇರುವುದಿತ್ತು. ತನ್ನ ಮನೆಯ ಒಡತಿಯಾಗಬೇಕಿತ್ತು. ಮನ ಬಂದಂತೆ ಬಾಳಬೇಕಿತ್ತು. ಕೊನೆಗೂ ಆಕೆ ಬೇರೆ ಆದಳು.

''ಅಮ್ಮಾ, ಈ ಬಾಗಿಲು ಹೊಸದಾಗಿ ಮಾಡಿಸಿದೆಯಾ?''

ಹೊರ ಬಾಗಿಲಾಚೆ ಹೊಸ ಜಾಳಿಗೆಯ ಬಾಗಿಲನ್ನು ನೋಡಿ ಶ್ರೀಕಾಂತ ಆಶ್ಚರ್ಯಚಕಿತನಾಗಿದ್ದ. ತಾನಿಲ್ಲದೇ ಅಮ್ಮನಿಗೆ ಯಾವ ತೊಂದರೆಯೂ ಆಗುತ್ತಿಲ್ಲವೆಂದು ದುಃಖಿತನಾಗಿದ್ದ.

''ಅಲ್ಲ ಮತ್ತೆ, ಒಬ್ಬಳೇ ಇರುವಾಗ ಈ ಬಾಗಿಲಿನಿಂದ ಯಾರು ಬಂದರೂ ಕಾಣುತ್ತದೆ. ಇತ್ತೀಚೆಗೆ ಮನೆಯೊಳಗೆ ನುಗ್ಗಿ ಒಬ್ಬರೇ-ಇಬ್ಬರೇ ಇರುವವರ ಜೀವ ತೆಗೆಯುತ್ತಾರೆಂಬುದು ನೀನು ಓದುವುದಿಲ್ಲವೇ?''

''ನಿಜ. ನಿನಗೊಬ್ಬಳಿಗೆ ಇರಲು ಹೆದರಿಕೆ ಅನಿಸುತ್ತಿರಬಹುದು. ಅಲ್ಲಿ ಬರುತ್ತಿಯಾ?''

''ಥೆ, ಇಲ್ಲಪ್ಪಾ, ನನಗೆ ನನ್ನ ಮನೆ ಬಿಟ್ಟು

ಒಂದು ದಿವಸ ಕೂಡಾ ಬೇರೆ ಕಡೆ ಇರಲು ಇಷ್ಟ ವಾಗುವುದಿಲ್ಲ. ಈಗಂತೂ ಈ ಬಾಗಿಲಿನಿಂದಾಗಿ ಹೆಚ್ಚು ಸುರಕ್ಷಿತವೆನಿಸುತ್ತದೆ. ಮನುಷ್ಯರಿಗಿಂತಲೂ ಈ ಬಾಗಿಲ ಮೇಲೆ ನನಗೆ ಹೆಚ್ಚಿನ ಭರವಸೆ ಅನಿಸುತ್ತದೆ. ಅದೇನೂ ಈ ಮನೆ ಬಿಟ್ಟು ಹೋಗಲಾರದು.''

''ಅಮ್ಮಾ, ಈ ರೀತಿ ಚುಚ್ಚು ಮಾತು ನೀನೆಂದೂ ಆಡುತ್ತಿರಲಿಲ್ಲ.''

''ಹೌದು. ಒಬ್ಬಳೇ ಇರುವೆನಲ್ಲ ಅಂತೆಯೇ ಹೆಚ್ಚು ಜಾಗರೂಕಳಾಗಿರುವೆ.''

''ಬಾಗಿಲ ಕೆಲಸ ಇಷ್ಟು ಬೇಗ ಹೇಗಾಯಿತು? ಈವಾಗ ಬಡಗಿ, ಮೇಸ್ತ್ರಿಗಳು ಚಿಕ್ಕಪುಟ್ಟ ಕೆಲಸ ಮಾಡಲು ಬರುವುದಿಲ್ಲ. ಮಾಡುತ್ತೇವೆ ಎಂದು ಹೇಳಿದರೂ ಹೊತ್ತಿಗೆ ಸರಿಯಾಗಿ ಮಾಡುವುದಿಲ್ಲ. ನಮ್ಮ ಮನೆಯಲ್ಲಿ ಎರಡು ಸೆಲ್ಫಗಳನ್ನು ಬಡಿಸಬೇಕಾಗಿದೆ. ಎರಡು ತಿಂಗಳಾದರೂ ಯಾರೂ ಸಿಕ್ಕಿಲ್ಲ.''

ಸುಧಾಬಾಯಿಯವರು ಕೇಳಿಸಿಕೊಂಡರೂ ಕೇಳಿಸದಂತಿದ್ದರು.

''ಇಷ್ಟು ಸಲ ಕರೆದರೂ ನೀನು ಆ ಮನೆಗೆ ಒಮ್ಮೆಯೂ ಬಂದಿಲ್ಲಮ್ಮಾ!''

''ಬರಬೇಕೆಂದು ಅನಿಸುವುದಿಲ್ಲ. ನಿಮ್ಮ ಆ ಮೆಟ್ಟಲುಗಳನ್ನಂತೂ ಹತ್ತುವುದೇ ಕಷ್ಟ. ಇನ್ನು ಮೇಲೆ ನನ್ನ ಮನಸ್ಸಿನ ವಿರುದ್ಧವಾಗಿ ಯಾವುದನ್ನೂ ಮಾಡುವುದಿಲ್ಲವೆಂದು ನಿರ್ಧರಿಸಿದ್ದೇನೆ. ಇನ್ನು ಮೇಲೆ ಸ್ವಂತಕ್ಕಾಗಿ ಬಾಳಬೇಕು. ನಿಮ್ಮಂತೆ! ಅಂದುಕೊಂಡಿರುವೆ.''

''ಆರೋಗ್ಯವೂ ಚೆನ್ನಾಗಿದೆ!''

''ಹೌದು. ಈಗ ಯಾವ ತೊಂದರೆಗಳೂ ಇಲ್ಲ. ಅವರಿಗಾಗಿ ಇದನ್ನು ಮಾಡಿ, ಇವರಿಗಾಗಿ ಅದನ್ನು ಮಾಡಿ ಅಂತ ಯಾವ ಕಿರಿಕಿರಿಯೂ ಇಲ್ಲ. ದಿನವೂ ಬೆಳಿಗ್ಗೆ ಸಾಯಂಕಾಲ ತಿರುಗಾಡಿ ಬರುವೆ ಎಷ್ಟೊಂದು ಉತ್ಸಾಹ ಅನಿಸುವುದು ಗೊತ್ತೆ?''

''ಕತ್ತಲಲ್ಲಿ ಒಬ್ಬಳೇ ಹೋಗಬೇಡ. ಯಾರಾದರೂ ಕೊರಳಲ್ಲಿಯ ಸರ ಎಳೆದರೆ? ಗದ್ದಲಲ್ಲಿ

> **ನೋಟ**
> ನಿನ್ನ ಕಣ್ಣ ಮಿಂಚಲ್ಲಿ
> ಹೀಗೆ ಸುಟ್ಟುಬಿಡು ನನ್ನ
> ಫೀನಿಕ್ಸ್ ಪಕ್ಷಿಯ ಹಾಗೆ
> ಮತ್ತೆ ಹುಟ್ಟುತ್ತೇನೆ
> **ಸುಧಾ ಶರ್ಮಾ**

ಯಾರಾದರೂ ಧಕ್ಕೆ ತಗುಲಿಸಿದರೆ? ಬಿದ್ದರೆ ಏನು ಗತಿ?''

''ಛೆ! ನನ್ನ ಚಿಂತೆ ನೀನು ಮಾಡಲೇಬೇಡ. ಅಲ್ಲಿ ನನ್ನ ವಯಸ್ಸಿನ ಅನೇಕ ಹೆಂಗಸರು ನಿಯಮಿತವಾಗಿ ತಿರುಗಾಡಲು ಹೋಗುತ್ತಾರೆ. ನಮ್ಮದೊಂದು ಗೆಳತಿಯರ ಗುಂಪು ತಯಾರಾಗಿದೆ. ಒಟ್ಟು ಸೇರಿ ಊಟ, ಪ್ರವಾಸ, ಹರಟೆ, ಇಸ್ಪೀಟಾಟ ಎಲ್ಲವೂ ನಡೆಯುತ್ತವೆ. ನಾನು ಮಜವಾಗಿದ್ದೇನೆ ಬಿಡು.''

''ಅಮ್ಮಾ, ನೀನು ತುಂಬಾ ಬದಲಾಗಿದ್ದೀಯ.''

''ಅದೂ ನಿಮ್ಮದೇ ಉಪಕಾರ! ನೀವೇ ನನಗೆ ಸುಖದ ಮಾರ್ಗವನ್ನು ತೋರಿದಿರಿ ಎನ್ನಬೇಕು. ಇಲ್ಲವಾದರೆ ನನ್ನ ಬಾಳು ಎಂತಹುದಾಗಿತ್ತು! ಕೇವಲ ಇನ್ನೊಬ್ಬರಿಗಾಗಿ ಮಾಡುತ್ತಲೇ ಇರುವುದು. ಅವರಿಗೋ ನನ್ನ ಅವಶ್ಯಕತೆಯಿಲ್ಲ, ಬೆಲೆಯೂ ಇಲ್ಲ!''

''ನಾನು ಹೊರಡುತ್ತೇನೆ'' ಒಮ್ಮೆಲೇ ಶ್ರೀಕಾಂತನೆಂದ.

''ಇರು ಸ್ವಲ್ಪ. ನಿನಗೆ ಸಮಯವಿದ್ದರೆ ನನ್ನ ಜೊತೆ ಅಕ್ಕಸಾಲಿಗನ ಕಡೆ ನಡೆ.''

''ಯಾಕೆ? ಹೊಸ ಒಡವೆ ಮಾಡಿಸುವಿಯೇನು?''

ಮಗನ ಚುಚ್ಚು ಧ್ವನಿ ತಿಳಿದರೂ, ಕೋಪ ನುಂಗಿಕೊಂಡು ಅವರೆಂದರು.

''ನನ್ನ ಬಳೆ ಮಾರಬೇಕಾಗಿದೆ. ಚಿನ್ನಕ್ಕಿಂದು ಒಳ್ಳೆಯ ಬೆಲೆಯಿದೆ.''

''ಯಾಕೆ? ನಾನು ನಿನಗೆಷ್ಟು ಬೇಕೋ ಅಷ್ಟು

ದುಡ್ಡು ಕೊಡುವೆ.''

''ಛೆ. ನಿನಗೇ ದುಡ್ಡು ಬೇಕಾಗುವುದು. ಬೆಲೆಗಳು ಗಗನಕ್ಕೇರಿವೆ! ಈ ಬಾಗಿಲಿಗೇ ಸಾವಿರಗಟ್ಟಲೆ ಖರ್ಚಾಯಿತು. ಅಲ್ಲದೆ ಪ್ಯಾಸೇಜಿನಲ್ಲಿ ಒಂದು ಗಂಟೆ ಬಡಿಯುವ ಗಡಿಯಾರ ಹಾಕಿರುವೆ ನೋಡು. ಅದರ ಟಿಕ್, ಟಿಕ್, ಅದರ ಗಂಟೆಗಳು ಇಪ್ಪತ್ತನಾಲ್ಕು ಗಂಟೆ ಜೊತೆಯಾಗುತ್ತವೆ! ಒಂಟಿತನ ಅನಿಸುವುದಿಲ್ಲ.''

''ಆದರೆ ಮನೆಯಲ್ಲಿಯ ಹಳೆಯ ಒಡವೆಯನ್ನೇಕೆ ಮಾರುವುದು?''

''ಯಾರಿಗಾಗಿ ನಾನಿನ್ನು ಒಡವೆ ಇಡಬೇಕು? ಹೇಳು ನೋಡುವಾ. ನನಗೆ ಸುಖ-ಸಮಾಧಾನಗಳಾದರೂ ದೊರಕಲಿ''

''ನೀನು ಒಮ್ಮೇಲೆ ಹೀಗೆ ನಮ್ಮನ್ನು ದೂರ ಮಾಡುವಿಯೆಂದು ಅನಿಸಿರಲಿಲ್ಲ.''

''ನನಗೂ ನೀನು ಹೆಂಡತಿಯ ಮಾತು ಕೇಳಿ ಹೀಗೆ ವರ್ತಿಸುವೆಯೆಂದು ಅನಿಸಿರಲಿಲ್ಲ. ಬಹಳ ವರ್ಷಗಳ ನಂತರ ನೀನು ಹುಟ್ಟಿದೆಯೆಂದು ನಾವಿಬ್ಬರೂ ಕೈಗಳ ತೊಟ್ಟಿಲನ್ನು ಮಾಡಿ, ಕಣ್ಣುಗಳ ದೀಪ ಮಾಡಿ ನಿನ್ನನ್ನು ಬೆಳೆಸಿದೆವು. ಇವರು ಅಕಸ್ಮಾತ್ತಾಗಿ ಕುಳಿತಲ್ಲಿಯೇ ಹೋದರು. ನಿನ್ನ ಆಧಾರವನ್ನು ನೀನು ಒಂದೇ ಹೊಡೆತದಿಂದ ಇಲ್ಲವಾಗಿಸಿದಿ. ನನ್ನನ್ನು ಒಂದು ಸಲ ಕೇಳಬೇಕೆಂದು ಕೂಡಾ ನಿನಗೆ ಅನಿಸಲಿಲ್ಲ. ನನ್ನ ಅನುಮತಿಯ ಪ್ರಶ್ನೆಯೂ ನಿನ್ನ ಮನದಲ್ಲಿ ಬರಲಿಲ್ಲ. ಆದದ್ದು ಒಳ್ಳೆಯದಕ್ಕೇ ಆಯಿತೆನ್ನಬೇಕು. ಕೈಕಾಲುಗಳು ಗಟ್ಟಿಯಾಗಿವೆ. ಆನಂದ ಅನುಭವಿಸುವ ಇಚ್ಛೆಯಿದ್ದಾಗಲೇ ಒಂಟಿ ಜೀವನ ನನ್ನ ಪಾಲಿಗೆ ಬಂದಿತು. ಮುಪ್ಪಿನ ಕಾಲದಲ್ಲಿ, ಕಾಹಿಲೆ ಬಿದ್ದವಳಿದ್ದರೆ, ನಿಮ್ಮ ಆಶ್ರಯದಲ್ಲಿಯೇ ತೊಳಲಾಡಬೇಕಿತ್ತು. ದೇವರೇ ದಯ ಮಾಡಿದ ಎನ್ನಬೇಕಪ್ಪೇ!

''ನಡೆ, ಅಕ್ಕಸಾಲಿಗನ ಕಡೆ ಹೋಗುವಾ'' ಶ್ರೀಕಾಂತ ಮೆಲ್ಲನೆ ನುಡಿದ.

''ಹೋಗುವಾ.''

* *

''ನಿಮಗೆ ಈ ಜನ್ಮಕಂತೂ ಜಾಣತನ ಬರಲಿಲ್ಲ. ಅಲ್ಲಾ, ಅಷ್ಟು ಒಳ್ಳೆಯ ಬಳೆಗಳನ್ನು ಮಾರಿದರೆ? ಹಳೆಯ ಕಾಲದ ಅಪ್ಪಟ ಚಿನ್ನ. ಎಷ್ಟು ಸುಂದರವಾದ ಬಳೆಗಳವು! ಛೆ! ಹತ್ತು ಸಾವಿರ ರೂಪಾಯಿ ಕೊಟ್ಟುಬಿಡಬೇಕಿತ್ತು. ಕೊನೆಗೆ ಉಳಿದದ್ದೆಲ್ಲಾ ನಮ್ಮದೇ ಅಲ್ಲವೇ?'' ಪ್ರಮೀಲಾ ಸಿಡಿಮಿಡಿಗೊಂಡಿದ್ದಳು.

''ಇಲ್ಲ ಪ್ರಮೀಲಾ, ಅಮ್ಮನದೇನೂ ಭರವಸೆಯಿಲ್ಲ. ಅಮ್ಮ ಈಗ ವರ್ತಿಸುವ ರೀತಿ ನೋಡಿದರೆ ಆಕೆ ಆ ಮನೆ, ವಸ್ತು-ಒಡವೆ ಎಲ್ಲವನ್ನೂ ಯಾವುದಾದರೂ ಸಂಸ್ಥೆಗೆ ದಾನ ಮಾಡಿದರೂ ನನಗೇನು ಆಶ್ಚರ್ಯವಾಗಲಾರದು.''

''ಏನು? ನಿಮ್ಮ ತಲೆಗಿಲೆ ಕೆಟ್ಟಿದೆಯೇನು?'' ಪ್ರಮೀಲೆ ಹೆದರಿದ್ದಳು.

''ಹೌದು. ಅಮ್ಮ ತುಂಬಾ ದೃಢಮನಸ್ಸಿನವಳಾಗಿ ವರ್ತಿಸುತ್ತಿದ್ದಾಳೆ. ನಾನಲ್ಲಿ ಹೋದಾಗಲೂ, 'ಒಂಟಿಯಾಗಿರುವೆ, ಕಾಹಿಲೆಯಿರುವೆ, ಬೇಜಾರಾಗಿದೆ' ಎಂದು ಯಾವ ದೂರೂ ಹೇಳುವುದಿಲ್ಲ. ಏನನ್ನೂ ತೋರಿಸಿಕೊಡುವುದಿಲ್ಲ. ನೀನು ಆ ಡಬ್ಬಿಗಳನ್ನು ತಂದಿಯಲ್ಲ. ಆ ಸ್ಥಳದಲ್ಲಿ ಅಮ್ಮ ಸುಂದರವಾದ ಪ್ಲಾಸ್ಟಿಕ್ ಭರಣಿಗಳನ್ನಿಟ್ಟಿದ್ದಾಳೆ. ಇವುಗಳನ್ನು ಸೋಪಿನ ನೀರಿನಿಂದ ತೊಳೆದರೆ ಸ್ವಚ್ಛವಾಗುತ್ತವೆ. ಒಂದು ಸಲ ಊಟದ ಡಬ್ಬಿ ತರುವೆ. ಎಲ್ಲಾ ಕಿರಿಕಿರಿಗಳೇ ಇಲ್ಲದಂತಾಗಿದೆ ಎನ್ನುತ್ತಾಳೆ.''

''ನೀವು ಹೇಳುವುದಾದರೂ ಏನು? ಆಶ್ಚರ್ಯವೇ! ನಿಜವಾಗಿಯೂ ಅವರಿಗೆ ಅಡುಗೆ ಮಾಡುವುದೆಂದರೆ ಎಷ್ಟೊಂದು ಪ್ರಿಯವಾಗಿತ್ತು. ಅವರ ಕೈಯ ಅಡುಗೆ ತುಂಬಾ ರುಚಿಕಟ್ಟಾಗುವುದು. ಅನೇಕ ರೀತಿಯ ಅಡುಗೆ ಮಾಡುತ್ತಿದ್ದರು. ಉಪ್ಪಿನಕಾಯಿಯಂತೂ ಅವರ ಕೈಯಿಂದಲೇ ಮಾಡಿದ್ದು ತಿನ್ನಬೇಕು!''

''ಹೌದು. ಆದರೆ ನಿನಗೀ ದುರ್ಬುದ್ಧಿ ಬಂತಲ್ಲವೇ? ನನಗಂತೂ ಸ್ವಲ್ಪವೂ ಇಚ್ಛೆಯಿರಲಿಲ್ಲ.'' ಗಂಡನ ಮಾತಿಗೆ ಅವಳು ತಕ್ಷಣ-

''ಹಾಗಾದರೆ ನೀವೂ ಅಲ್ಲಿಗೇ ಹೋಗಿರಿ .. ಇಲ್ಲದಿದ್ದರೂ .....''

"ಇಲ್ಲದಿದ್ದರೂ ಏನು ಹೇಳು .. ನಿನ್ನದಾದರೂ ಎಷ್ಟು ಬೆಳಕು ಕಂಡದ್ದಿದೆ. ..!"

ಎಂದಿನಂತೆ ಮಗುವಿಲ್ಲವೆಂಬ ಅಸಮಾಧಾನದ ಅಂತ್ಯ ಜಗಳದಲ್ಲಾಯಿತು. ಒಬ್ಬರು ಇನ್ನೊಬ್ಬರಿಗೆ ಹೆಸರಿಟ್ಟು ದೋಷಾರೋಪಣೆ ಮಾಡಿಯಾಯಿತು.

★ ★ ★

"ಅಮ್ಮಾ, ಈ ಸಲ ಉಪ್ಪಿನಕಾಯಿ ಮಾಡಿಲ್ಲವೆ?"

"ಇಲ್ಲಪ್ಪಾ, ಒಂದು ಬಾಟಲಿ ಕೊಂಡು ತಂದರೆ ನನ್ನ ಕೆಲಸ ಮುಗಿಯಿತು." ಅಮ್ಮ ದೊಡ್ಡ ಸಮಾಧಾನದಿಂದ ಹೇಳುತ್ತಿದ್ದಳು.

"ನಿನ್ನ ಕೈಯ ಉಪ್ಪಿನಕಾಯಿ ತಿನ್ನಬೇಕೆನಿಸುತ್ತದೆ ಎಂದು ಇವಳು ಅನ್ನುತ್ತಿದ್ದಳು!"

"ಹೌದಾ? ಇಷ್ಟು ವರ್ಷ ಸಂಸಾರ ಮಾಡಿದ ಮೇಲೆ ಅವಳಿಗೆ ಇವೆಲ್ಲಾ ಬರಬೇಕು. ಬೇರೆ ಮನೆ ಮಾಡಿದ ಮೇಲೆ ಎಲ್ಲವೂ ಬೇರೆಯೇ ಅಲ್ಲವೆ? ಮೊದಲಿನ ರುಚಿಯ ಬದಲಾವಣೆ ತಾನಾಗಿಯೇ ಆಗುತ್ತದೆ."

ಶ್ರೀಕಾಂತ ಸುಮ್ಮನಾದ. ಪ್ರಮೀಲಾಗೆ ಉಪ್ಪಿನಕಾಯಿ ತಿನ್ನಬೇಕೆನಿಸುತ್ತದೆಯೆಂದರೆ ಅಮ್ಮ ಮೊಮ್ಮಗನ ಆಶೆಯಿಂದ ಸಂತೋಷಪಟ್ಟಾಳು ಎಂದು ಆತ ಎಣಿಸಿದ್ದ. ಸುಳ್ಳು ಹೇಳಿಯಾದರೂ ಹೆಂಡತಿ ಮತ್ತು ಅಮ್ಮ ಒಂದೆಡೆ ಸೇರಬೇಕೆಂಬುದು ಆತನ ಆಶೆಯಾಗಿತ್ತು. ಅಮ್ಮನ ನಿರಾದರದ ನಡವಳಿಕೆಯಿಂದ ಶ್ರೀಕಾಂತ ದುಃಖಿತನಾದ. ನಿರಾಶನಾದ. ಅಮ್ಮನ ಮನೆಗೆ ಹೋಗಿ ಬರುವುದು ತಾನಾಗಿಯೇ ಕಡಿಮೆಯಾಯಿತು. ಆದರೂ ಅಮ್ಮ ಹೇಳಿ ಕಳುಹಿಸಲಿಲ್ಲ. ಯಾಕೆ ಬಂದಿಲ್ಲವೆಂದು ವಿಚಾರಿಸಲಿಲ್ಲ. ಸುಧಾಬಾಯಿ ತನ್ನ ವಯಸ್ಸಿನ ಪೊರೆಬಿಚ್ಚಿ ಮತ್ತೆ ತರುಣಿರಾಗಿದ್ದರು. ಸ್ವಾವಲಂಬಿಯಾಗಿದ್ದರು, ಸ್ವತಂತ್ರರಾಗಿದ್ದರು.

"ಅಲ್ಲಾ ಶ್ರೀ ನಿನಗೆ ಗೊತ್ತೇ ಇಲ್ಲವೆ? ಮೊನ್ನೆ ಸುಧಾಬಾಯಿ ಯಾವುದೋ ಪ್ರವಾಸಿ ಕಂಪನಿಯೊಂದಿಗೆ ದಕ್ಷಿಣದ ಪ್ರವಾಸಕ್ಕೆ ಹೋಗಿ



"ಅಳಿಯಂದಿರೇ .... ಹಬ್ಬದ ಉಡುಗೊರೆಯಾಗಿ ಈ ಜಾಗವನ್ನು ಒಂದು ವಾರ ಕಾಲ ಬಳುವಳಿಯಾಗಿ ಕೊಡ್ತಾ ಇದೀನಿ ...."

ರುವರು. ಕನ್ಯಾಕುಮಾರಿ, ರಾಮೇಶ್ವರ, ಕೊಡೈಕೆನಾಲ್, ಪಾಂಡೀಚೇರಿ, ಮದ್ರಾಸ್ ಮತ್ತೆ ಎಲ್ಲೆಲ್ಲೋ ...."

ಪಕ್ಕದ ಮನೆಯ ಅಂಬುಬಾಯಿ ಹೇಳುತ್ತಿದ್ದರು. ಅಮ್ಮನ ಮನೆಗೆ ಬೀಗವಿತ್ತು.

"ಆಶ್ಚರ್ಯ. ಅಮ್ಮ ನನಗೇನೂ ಹೇಳಿರಲಿಲ್ಲ."

ನಿನ್ನ ದಾರಿ ನೋಡುತ್ತಿದ್ದರು. ನೀನು ತುಂಬಾ ದಿನ ಇತ್ತ ಕಡೆ ಬಂದಿರಲಿಲ್ಲವೇನು?"

"ಇಲ್ಲ."

"ನನ್ನ ಮಗ ಸೊಸೆಯರೇ ನನ್ನ ಮೇಲೆ ಉಪಕಾರ ಮಾಡಿದರು. ನನ್ನನ್ನು ಸಂಸಾರದ ಕಿರಿಕಿರಿಯಿಂದ ಮುಕ್ತಗೊಳಿಸಿದರು. ನಾನಾಗಿಯೇ ಖಂಡಿತ ಹೀಗೆ ಮಾಡುತ್ತಿರಲಿಲ್ಲ. ಅಂಬುಬಾಯಿ, ಪ್ರೌಢಾವಸ್ಥೆಯಲ್ಲಿಯ ಸ್ವಾತಂತ್ರ್ಯದಿಂದ ವಯಸ್ಸು ಕಡಿಮೆಯಾಗುವುದು. ನೀವೂ ಸ್ವತಂತ್ರರಾಗಿರಿ' ಎಂದು ಸುಧಾಬಾಯಿ ನನಗೆ ಹೇಳುತ್ತಿರುತ್ತಾರೆ."

"ಶ್ರೀ, ಆದರೆ ನಾನೆಲ್ಲಿ ಸುಧಾಬಾಯಿಯಂತೆ

ಭಾಗ್ಯಶಾಲಿ! ಸೊಸೆ ನೌಕರಿಗೆ ಹೋಗುವವಳೆಂದು ಮೊಮ್ಮಕ್ಕಳನ್ನು ನೋಡಿಕೊಳ್ಳುವೆ. ನನ್ನ ಸಂಸಾರ ಮುಗಿದ ನಂತರ ಮಗ ಸೊಸೆಯರ ಸಂಸಾರ ಮಾಡುವುದು ನನ್ನ ಪಾಲಿಗೆ ಬಂದಿದೆ!''

ಅಂಬುಬಾಯಿ ಏನೇನೋ ಹೇಳುತ್ತಿದ್ದರು. ಶ್ರೀ ಮಾತ್ರ ಏನೋ ಕಳೆದುಕೊಂಡವನಂತೆ ಅಸಹಾಯಕನಾಗಿ ನಿಂತಿದ್ದ.

''ಒಬ್ಬಳೇ ಎಲ್ಲಾ ವ್ಯವಸ್ಥೆ ಹೇಗೆ ಮಾಡಿದಳೋ? ಅವಳ ಆರೋಗ್ಯ ಚೆನ್ನಾಗಿದೆಯಲ್ಲವೇ?'' ಶ್ರೀಕಾಂತನ ಧ್ವನಿಯಲ್ಲಿಯ ಆತಂಕ ಸ್ಪಷ್ಟವಾಗಿತ್ತು.

''ಚೆನ್ನಾಗಿರದೆ ಏನು? ಒಳ್ಳೆ ಕುಣಿದಾಡುತ್ತಾರೆ. ನಿಜವಾಗಿಯೂ ಆರೋಗ್ಯವಾಗಿದ್ದಾರೆ. ಮೇಲೆ ಸಹಾಯಕ್ಕೆ ಸಾಪತನೆಕರ ಇದ್ದೇ ಇರುವರಲ್ಲಾ. ಅವರೂ ಪ್ರವಾಸಕ್ಕೆ ಹೋಗಿರುವರು. ಅವರ ಮಗ-ಸೊಸೆ ಕೂಡಾ ಇದ್ದಾರೆನ್ನು.''

''ಒಳ್ಳೆಯದಾಯಿತು ಬಿಡಿ. ಅಮ್ಮನಿಗೆ ಇಷ್ಟು ಗುರುತಿನ ಜೊತೆ ದೊರಕಿದ್ದು ಸುದೈವವೇ. ಅಂಬೂಬಾಯಿ, ನಿಮ್ಮ ಹಾಗೆ ಹೇಗೋ ಜೋತಾಡುತ್ತಾ, ಯಾರಿಗಾದರೂ ಭಾರವಾಗಿ ಬಾಳುವುದಕ್ಕಿಂತ ಇದು ಖಂಡಿತ ಒಳ್ಳೆಯದು. ಉಳಿದ ಆಯುಷ್ಯ ಅಮ್ಮ ತನ್ನ ಮನಬಂದಂತೆ ಕಳೆದರೆ ತಪ್ಪೇನು? ಇಂದಿನ ತನಕ ಸಂಸಾರ ಮಾಡಿದ್ದಾಳಲ್ಲವೆ?''

''ಅಲ್ಲಾ ಶ್ರೀ, ವಯಸ್ಸಿಗೆ ತಕ್ಕಂತೆ ವರ್ತಿಸುವುದೇ ಉಚಿತವಲ್ಲವೇ? ಈ ವಯಸ್ಸಿನಲ್ಲಿ ....''

''ಅಮ್ಮ ಈ ವಯಸ್ಸಿನಲ್ಲಿಯೂ ಉತ್ಸಾಹದಿಂದ ಬಾಳುತ್ತಾಳೆ. ನಿಮ್ಮನ್ನು ನೋಡಿ, ಎಷ್ಟು ಅವಸ್ಥೆ ಪಡುತ್ತೀರಿ. ತೊಡಕಿನಲ್ಲಿ ಸಿಕ್ಕಿಹಾಕಿಕೊಂಡಿದ್ದೀರಿ. ಎಷ್ಟೊಂದು ಕಷ್ಟಪಡುತ್ತೀರಿ. ಮನಸ್ಸಿನ ಆಧಾರದಿಂದಲೇ ವಯಸ್ಸಿನ ಸಾಮರ್ಥ್ಯ ಹೆಚ್ಚುತ್ತದೆ.''

ಶ್ರೀಕಾಂತ ಅಂಬುಬಾಯಿಯವರನ್ನು ಸುಮ್ಮ ಸಾಗಿಸಿದರೂ ಅಂತಃಕರಣದಲ್ಲಿ ಆತ ತುಂಬಾ ನೊಂದಿದ್ದ. ಅಮ್ಮನ ವರ್ತನೆಯ ಒಗಟನ್ನು ಬಿಡಿಸುವುದು ಅಸಾಧ್ಯವೆನಿಸಿತು. ಅವಳ ವರ್ತನೆ ತೀರ ಅನಿರೀಕ್ಷಿತ.

ಛೆ! ನಾವೇ ಅನಿರೀಕ್ಷಿತವಾಗಿ ವರ್ತಿಸಿದೆವು. ಪ್ರಮೀಳೆಯ ಮಾತಿನಂತೆ ನಡೆದು ಅಮ್ಮನನ್ನು ಒಂದು ಮಾತು ಕೇಳದೇ ಬೇರೆಯಾದೆವು. ಈಗ ನನಗೇ ಮನೆಯಿಲ್ಲದಂತಾಗಿದೆ.

ಆ ಮನೆ ಪ್ರಮೀಳೆಯದು. ಈ ಮನೆ ಅಮ್ಮನದು. ನಾನೇ ಮನೆಯಿಲ್ಲದವನು. ನಿರಾಶ್ರಿತ! ●

'ಮಹಾತ್ಮಾ' ಪದವಿಯ ಹಿನ್ನೆಲೆ

ಒಂದು ಸಾರ ಗಾಂಧೀಜಿಯವರು ಆರ್ಯ ಸಮಾಜದ ಸ್ವಾಮಿ ಶ್ರದ್ಧಾನಂದರು ಸ್ಥಾಪಿಸಿದ ಗುರುಕುಲ ಕಾಂಗ್ರಿಗೆ ಹೋಗಿದ್ದರು. ಸ್ವಾಮಿ ಶ್ರದ್ಧಾನಂದಜಿಯವರು ಯಾವುದೋ ಒಂದು ಕಾರ್ಯದಲ್ಲಿ ತೊಡಗಿದ್ದರು. ಗಾಂಧೀಜಿಯವರು ಅಲ್ಲಿಗೆ ಹೋದ ಕೂಡಲೇ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಅಲ್ಲಿಯ ಕಾರ್ಯಗಳನ್ನೆಲ್ಲ ತಿಳಿದುಕೊಂಡು, ಗಾಂಧೀಜಿಯವರು ಸ್ವಾಮಿ ಶ್ರದ್ಧಾನಂದರಿಗೆ ''ನೀವು ಈ ಸಂಸ್ಥೆಯಲ್ಲಿ ಭಾರಿ ಕೆಲಸ ಮಾಡುತ್ತಿದ್ದೀರಿ, ನಿಮಗೆ ನಾನು 'ಮಹಾತ್ಮಾ' ಎಂದು ಕರೆಯುತ್ತೇನೆ'' ಎಂದು ಹೇಳಿದರು.

ಅದಕ್ಕೆ ಶ್ರದ್ಧಾನಂದರು ''ನಾನು ಇದೊಂದು ಸಂಸ್ಥೆಯಲ್ಲಿ ಕೆಲಸ ಮಾಡುತ್ತೇನೆ. ಆದರೆ ನೀವು ಭಾರತ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಅಹರ್ನಿಶಿ ಹೋರಾಡುತ್ತಿರುವಿರಿ. ಆದ್ದರಿಂದ ನೀವು 'ಮಹಾತ್ಮಾ'ರೇ ಹೊರತು ನಾನಲ್ಲ''ವೆಂದು ಹೇಳಿದರು. ಅಂದಿನಿಂದ ಗಾಂಧೀಜಿಯವರಿಗೆ ಅದೇ ಹೆಸರು ರೂಢಿಯಾಗಿದೆ.

(ಸಂಗ್ರಹ) ***ಎಂ.ಎಂ.ಶಿವಪ್ರಕಾಶ***

ನರಭಕ್ಷಕ ರೆಡ್ ಇಂಡಿಯನ್ನರೊಂದಿಗೆ

ಬಳ್ಳುಸಾಗರ ಪಾಂಡುರಂಗಯ್ಯ

1943ರ ಜುಲೈ ತಿಂಗಳ ಒಂದು ದಿನ ಅಮೆಜಾನ್ ನದಿಯ ಮುಖಭೂಮಿಯಿಂದ ಸುಮಾರು ಒಂದು ಸಾವಿರ ಮೈಲಿ ಮೇಲಕ್ಕೆ, ಪೂರ್ವ-ಪಶ್ಚಿಮವಾಗಿ ಹಬ್ಬಿರುವ, ''ರಿಓಸ್ ಡಾಸ್ ಮಾರ್ಟಸ್''ನ ಆ ಭಯಾನಕ ಪರ್ವತ ಪ್ರಾಂತ್ಯವನ್ನು ಆಲ್ಫರ್ಡ್ ರೂಸ್ ತಲುಪಿದ. ಆತನ ಜತೆಗೆ ಆತನ ಇಬ್ಬರು ಸ್ನೇಹಿತರು ಮತ್ತು ಬ್ರೆಜಿಲ್‌ನ ನಿವಾಸಿಗಳಾದ ಕೆಲವು ಕೂಲಿಕಾರರು ಇದ್ದರು. ದಕ್ಷಿಣ ಅಮೇರಿಕದ ಅತ್ಯಂತ ದಟ್ಟ ವಾದ ಈ ಪ್ರದೇಶದಲ್ಲೇ ರಹಸ್ಯಮಯಿಯಾದ 'ಮೃತ್ಯು ನದಿ' ಹರಿಯುತ್ತಿದೆ. ರೆಡ್ ಇಂಡಿಯ ನ್ನರ ವಿಷಪೂರಿತ ಬಾಣಗಳ ಆಘಾತಕ್ಕೆ ಸಿಲುಕಿ ಜರ್ಝರಿತರಾದ ವಿದೇಶೀ ಪ್ರವಾಸಿಗಳ ಅಸಂಖ್ಯ ರಕ್ತ-ಸಿಕ್ತ ಹೆಣಗಳು ಈ ನದಿಯಲ್ಲಿ ಕಳೆದ ನೂರಾರು ವರ್ಷಗಳಿಂದ ತೇಲಿಕೊಂಡು ಹೋಗುತ್ತಲೇ ಇವೆ! ಆದ್ದರಿಂದಲೇ ಈ ನದಿ 'ಮೃತ್ಯು ನದಿ'ಯೆಂದು ಕುಪ್ರಸಿದ್ಧವಾಗಿದೆ! ಈ ನದಿಯನ್ನು ದಾಟಿದ ನಂತರ ಕಾಡು ಇನ್ನಷ್ಟು ದಟ್ಟವಾಗುತ್ತದೆ. ರಾಕ್ಷಸಾಕಾರದ ಗಗನಚುಂಬಿ ವೃಕ್ಷಗಳ ಸಮೂಹ ಪ್ರವಾಸಿಗನನ್ನು ದಿಗ್ಭ್ರಮೆ ಗೊಳಿಸುತ್ತದೆ. ನರಭಕ್ಷಕ ರೆಡ್ ಇಂಡಿಯನ್ನರು ಕಳೆದ ನೂರಾರು ವರ್ಷಗಳಿಂದ ಆಧುನಿಕ ನಾಗರಿಕತೆಯ ಯಾವ ಪ್ರಭಾವಕ್ಕೂ ಸಿಲುಕದೆ, ಯಾರೊಬ್ಬರ ಆಧಿಪತ್ಯವನ್ನೂ ಸ್ವೀಕರಿಸದೆ, ತಮ್ಮ ಸ್ವತಂತ್ರ ಜೀವನವನ್ನು ಈ ದಟ್ಟಡವಿಗಳಲ್ಲಿ ಸಾಗಿಸುತ್ತಾ ಬಂದಿದ್ದಾರೆ. ಕಳೆದ ಎರಡು ಶತಮಾನಗ

ಇಂವಲೂ ಬ್ರೆಜಿಲ್ ಸರಕಾರ ಈ ಜನಾಂಗವನ್ನು ತನ್ನ ವಶಪಡಿಸಿಕೊಳ್ಳುವ ವಿಫಲ ಪ್ರಯತ್ನಗಳನ್ನು ಮಾಡುತ್ತಲೇ ಬಂದಿತ್ತು. ಆದರೂ ಅದು ತನ್ನ ಆಶಾವಾದತ್ವವನ್ನು ಕಳೆದುಕೊಳ್ಳದೆ ಈಗ ಅಲ್ಫರ್ಡ್ ರೂಸನನ್ನು ಆ ಜನಾಂಗದೊಡನೆ ಸಂಪರ್ಕ ಸಾಧಿಸಲು ಮತ್ತು ಸಾಧ್ಯವಾದರೆ ಶಾಂತಿ ಸಂಧಾನಗಳನ್ನೂ ಏರ್ಪಡಿಸಲು ಕಳುಹಿಸಿಕೊಟ್ಟಿತ್ತು.

ಈ ಹಿಂದೆ ಒಬ್ಬನೇ ಒಬ್ಬ ವ್ಯಕ್ತಿ ಮಾತ್ರ ರೆಡ್ ಇಂಡಿಯನ್ನರ ಬಳಿಗೆ ಹೋಗಿ ಜೀವಂತ ಹಿಂದಿರುಗಿದ್ದ! ಆತನೇ ಸಾಹಸೀ ಅನ್ವೇಷಕ ಡಾ. ಜೆನಿಸಿಯೋ ಪಿಮೆಂಟಲ್ ಬಾರ್ಬೋಸಾ! ಆತನ ನಾಲ್ಕಾರು ಜೊತೆಗಾರರನ್ನು ರೆಡ್ ಇಂಡಿಯನ್ನರು ಬಲಿ ತೆಗೆದುಕೊಳ್ಳದೆ ಬಿಟ್ಟಿರಲಿಲ್ಲ. ಆದರೆ ಬಾರ್ಬೋಸಾ ತನ್ನ ಚಾತುರ್ಯದಿಂದ ಮತ್ತು ಅದೃಷ್ಟದ ಬಲದಿಂದ ಜೀವಂತವಾಗಿ ತನ್ನ ತಾಯ್ನಾಡಿಗೆ ಮರಳಿದ್ದ. ಇತಿಹಾಸದ ಪುಟಗಳಲ್ಲಿ ಅಡಗಿದ್ದ ಇಂತಹ ಎಷ್ಟೋ ಭಯಾನಕ ಘಟನೆಗಳ ವಿವರವನ್ನೂ ರೂಸ್ ಕೂಲಂಕಷವಾಗಿ ಅಭ್ಯಸಿಸಿದ್ದ. ಆದ್ದರಿಂದ ತಾನು ಮುಂದಿಡುವ ಪ್ರತಿಯೊಂದು ಹೆಜ್ಜೆಯ ಬಗೆಗೂ ಸಾಕಷ್ಟು ಮುನ್ನೆಚ್ಚರಿಕೆಯನ್ನು ಅವನು ನಿರ್ಧರಿಸಿದ್ದ.

ಅಲ್ಫರ್ಡ್ ರೂಸನ ಪ್ರಮುಖ ಸಹಾಯಕ ಮತ್ತು ಮಿತ್ರನಾದ ಗೇಯರ್‌ಮ್ಯಾನ್ ಈ ಸಾಹಸ ಯಾತ್ರೆಯಲ್ಲಿ ಅವನ ಸಂಗಡಿಗನಾಗಿದ್ದ. ಮತ್ತೊಬ್ಬ ಸಹ ಯಾತ್ರಿಕನಾಗಿದ್ದ ಪ್ಯಾಟ್‌ಕೆಲಿ ತನ್ನ ಜೀವನದ ಅಧಿಕಾಂಶವನ್ನು ಈ ಭಾಗದಲ್ಲೇ ಕಳೆದಿದ್ದ. ರೆಡ್ ಇಂಡಿಯನ್ನರ ರೀತಿ-ನೀತಿಗಳ, ಆಚಾರ-ವಿಚಾರಗಳ, ಜೀವನ ವಿಧಾನಗಳ ಆಳವಾದ ಅಧ್ಯಯನವನ್ನು ಅವನು ಮಾಡಿದ್ದ. ಮೇಲಾಗಿ ಅವರ ಭಾಷೆಯನ್ನೂ ಅಲ್ಪ-ಸ್ವಲ್ಪ ಮಟ್ಟಿಗೆ ಅರ್ಥ ಮಾಡಿಕೊಳ್ಳಬಲ್ಲವನಾಗಿದ್ದ. ಇಂತಹ ಅನುಭವೀ ಸಂಗಾತಿಯನ್ನು ಪಡೆದದ್ದು ರೂಸನ ಸುದೈವವೇ ಆಗಿತ್ತು!

ಬ್ರೆಜಿಲ್‌ನ ಈ ಪ್ರದೇಶದಲ್ಲಿ ಶಸ್ತ್ರಾಸ್ತ್ರಗಳನ್ನು ಕೊಂಡೊಯ್ಯುವುದು ನಿಷಿದ್ಧವಾಗಿದ್ದರೂ, ರೂಸನ ತಂಡ ಆಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾಗಿತ್ತು. ಸರ್ಕಾರದ ವಿಶೇಷ ಅನುಮತಿ ಅವರಿಗೆ ದೊರಕಿತ್ತು. 'ಮೃತ್ಯು ನದಿ'ಯ ದಡದಲ್ಲಿ ರೂಸನ ತಂಡ ಬೀಡುಬಿಟ್ಟಿತು. ನದಿಯ ಆ ದಂಡೆಯಲ್ಲಿ ವೃಕ್ಷರಾಜಿಯಿಂದ ಆಚ್ಛಾದಿತವಾದ, ರೆಡ್ ಇಂಡಿಯನ್ನರ ಅಜೇಯ ಕೋಟೆಯೆನಿಸಿದ, 'ಸೇರಾ-ಡು-ರೊಂಕಾಡೋರ್' ಪರ್ವತ ತಲೆಯೆತ್ತಿ ನಿಂತಿತ್ತು. ರೂಸ್ ತನ್ನ ದುರ್ಬೀನನ್ನು ಕೈಗೆತ್ತಿಕೊಂಡು ಆ ಪರ್ವತ ಪ್ರದೇಶವನ್ನು ಅತ್ಯಂತ ಜಾಗರೂಕತೆಯಿಂದ ಪರಿಶೀಲಿಸತೊಡಗಿದ. ಸ್ವಲ್ಪ ಹೊತ್ತಿನಲ್ಲೇ ನದಿಯ ಆ ದಂಡೆಯಲ್ಲಿ ಕಂಡು ಬಂದ ಚಲನ-ವಲನಗಳಿಂದ ಅವನು ಅಧೀರನಾದ. ಬಲಿಷ್ಠ ರೆಡ್ ಇಂಡಿಯನ್ ತರುಣರ ಸಣ್ಣ-ಸಣ್ಣ ಗುಂಪುಗಳು, ಬಿಲ್ಲು-ಬಾಣಗಳಿಂದ ಸಜ್ಜಾಗಿ ಪೊದೆಗಳ ಮರೆಯಲ್ಲಿ ಅಡಗಿಕೊಳ್ಳುತ್ತಾ ಮೆಲ್ಲ-ಮೆಲ್ಲಗೆ ಮುಂದೆ ಬರತೊಡಗಿದ್ದವು. ಆ ನಗ್ನ ತರುಣರ ಮುಖಾಕೃತಿ ಭಯಂಕರವಾಗಿತ್ತು. ತಾವು ಬಂದು ಇಲ್ಲಿ ಬೀಡುಬಿಟ್ಟ ಪ್ರಥಮ ದಿನವೇ ರೆಡ್ ಇಂಡಿಯನ್ನರು ತಮ್ಮನ್ನು ಪತ್ತೆ ಹಚ್ಚಿದ್ದನ್ನು ಕಂಡು ರೂಸನಿಗಾದ ಅಚ್ಚರಿ ಅಷ್ಟಿಷ್ಟಲ್ಲ. ತಮ್ಮ ಮೇಲೆ ಆ ಆದಿವಾಸಿಗಳು ಏಕಾ-ಏಕಿ ಆಕ್ರಮಣ ಮಾಡಿದರೇನು ಗತಿ ಎಂದು ಅವನು ಚಿಂತಿತನಾದ. ಆದರೆ ಸುದೈವದಿಂದ ಅಂತಹ ಯಾವ ಘಟನೆಯೂ ನಡೆಯಲಿಲ್ಲ.

ಮೃತ್ಯು ಮುಖದ ಸಮೀಪಕ್ಕೆ ಬಂದಾಗಿತ್ತು. ಮುಂದೆ ಏನೇ ಆದರೂ ಹಿಂಜರಿಯದೆ, ಧೈರ್ಯದಿಂದ ಮುಂದುವರಿದು, ಬರುವ ವಿಪತ್ತುಗಳನ್ನೆಲ್ಲಾ ಎದುರಿಸಿಯೇ ಬಿಡುವುದು ಎಂದು ರೂಸ್ ನಿರ್ಧರಿಸಿದ. ಅವನ ನಿರ್ಧಾರಕ್ಕೆ ಅವನ ಜೊತೆಗಾರರೂ ದನಿಗೂಡಿಸಿದರು. ವೃಥಾ ಕಾಲಹರಣ ಮಾಡದೆ ಅವರು ಅಲ್ಲಿ-ಇಲ್ಲಿ ದೊರೆತ ಬಲಿಷ್ಠ ಮರದ ದಿಮ್ಮಿಗಳಿಂದ ಎರಡು ತೆಪ್ಪಗಳನ್ನು ತಯಾರಿಸಿದರು. ತಮ್ಮೊಡನೆ ಹಗ್ಗಗಳನ್ನು ತರಲು ಅವರು ಮರೆತುಬಿಟ್ಟಿದ್ದರು. ಆದರೆ ಕಾಡಿನ ಬಳ್ಳಿಗಳು ಹುರಿ ಮಾಡಿದ ಹಗ್ಗಗಳಿಗಿಂತ

ಮಜಬೂತಾಗಿರುವುದನ್ನು ಗಮನಿಸಿ, ಅವುಗಳಿಂದ ತಮಗೆ ಬೇಕಾದ ಹಗ್ಗಗಳನ್ನು ಹೊಸೆದುಕೊಂಡರು. ತಮ್ಮ ಶಸ್ತ್ರಾಸ್ತ್ರಗಳು ರೆಡ್ ಇಂಡಿಯನ್ನರ ಕಣ್ಣಿಗೆ ಬೀಳಬಾರದೆಂದು, ಸನಿಹದಲ್ಲಿಯೇ ಇದ್ದ ಪೊದೆಗಳಲ್ಲಿ ಬೇಕೆಂದಾಗ ತತ್‌ಕ್ಷಣ ಕೈಗೆ ಸಿಗುವ ಹಾಗೆ ಅವುಗಳನ್ನು ಅಡಗಿಸಿಟ್ಟರು. ಬ್ರೆಜಿಲ್‌ನ ಈ ಪ್ರದೇಶಗಳಲ್ಲಿ ಆತ್ಮರಕ್ಷಣೆಯ ಸಲುವಾಗಿಯೂ ರೆಡ್ ಇಂಡಿಯನ್ನರ ಮೇಲೆ ಗುಂಡು ಹಾರಿಸುವುದನ್ನು ನಿಷೇಧಿಸಲಾಗಿತ್ತು.

ಒಂದೆರಡು ವಾರಗಳ ರೆಡ್ ಇಂಡಿಯನ್ನರ ಚಲನ-ವಲನಗಳನ್ನು ಅಭ್ಯಸಿಸಿದ ಮೇಲೆ 'ಮೃತ್ಯು ನದಿ'ಯನ್ನು ಪ್ರಯೋಗಾತ್ಮಕ ರೀತಿಯಲ್ಲಿ ದಾಟುವ ಯೋಜನೆಯೊಂದನ್ನು ರೂಸ್ ಸಿದ್ಧಪಡಿಸಿದ. ಆ ಪ್ರಕಾರವಾಗಿ ಒಂದು ಮುಂಜಾನೆ ತನ್ನ ಮಿತ್ರ ಗೇಯಲ್ ಮ್ಯಾನ್ ಮತ್ತು ಒಂದು ಕುದುರೆಯೊಡನೆ ಸಂಪೂರ್ಣ ನಿಶ್ಶಸ್ತ್ರನಾಗಿ ನದಿಯ ಆ ದಂಡೆಯನ್ನು ತೆಪ್ಪದ ಸಹಾಯದಿಂದ ತಲುಪಿದ. ಅವನು ತನ್ನೊಡನೆ ಒಂದು ದೊಡ್ಡ ಚೂರಿ, ಮಾಂಸದ ತುಂಡುಗಳು ಮತ್ತು ಉಪ್ಪಿನ ಪ್ಯಾಕೆಟ್‌ಗಳು ತುಂಬಿದ್ದ ಕೆಲವಾರು ಡಬ್ಬಗಳನ್ನು ಮಾತ್ರ ತೆಗೆದುಕೊಂಡಿದ್ದ. ದಾರಿಗಡ್ಡಲಾಗಿ ಬೆಳೆದಿದ್ದ ಪೊದೆಗಳನ್ನು, ಬಳ್ಳಿಗಳನ್ನು ಸವರುವ ಉದ್ದೇಶದಿಂದ ಮಾತ್ರ, ಚೂರಿಯನ್ನು ಸೊಂಟದಲ್ಲಿಟ್ಟುಕೊಳ್ಳುವುದು ಅನಿವಾರ್ಯವಾಗಿತ್ತು.

ನದಿಯ ದಡದಿಂದ ತುಸುದೂರದಲ್ಲಿ ತೆಪ್ಪವನ್ನು ನಿಲ್ಲಿಸಿಕೊಂಡಿರಲು ತನ್ನ ಸ್ನೇಹಿತ ಗೇಯಲ್ ಮ್ಯಾನನಿಗೆ ಸೂಚನೆಯನ್ನಿತ್ತು ರೂಸ್ ಕುದುರೆಯನ್ನೇರಿದ. ಅರ್ಧ ಗಂಟೆಯೊಳಗೆ ತಾನು ಹಿಂದಿರುಗದೇ ಹೋದರೆ ಏನೋ ದುರ್ಘಟನೆ ಸಂಭವಿಸಿರುವುದೆಂಬುದಾಗಿ ತಿಳಿದು ವಾಪಸ್ಸು ಕ್ಯಾಂಪಿಗೆ ಹೊರಟುಹೋಗಲು ಅವನಿಗೆ ಆದೇಶವನ್ನಿತ್ತು ಅತ್ಯಂತ ಜಾಗರೂಕತೆಯಿಂದ ಅವನು ಮುಂದುವರಿಯತೊಡಗಿದ. ಆ ಭೀಕರ ಕಾನನದ ರಹಸ್ಯ ಗರ್ಭದಲ್ಲಿ ಮುಂದುವರಿಯುತ್ತಿದ್ದಂತೆ ಅವ್ಯಕ್ತ ಭಯ ಅವನ ಹೃದಯವನ್ನಾವರಿಸತೊಡಗಿತು. ಯಾವ ಪೊದೆಯ ಹಿಂದೆ, ಯಾವ ಮರದ ಮೇಲೆ ಮೃತ್ಯು ಹೊಂಚು ಹಾಕುತ್ತಾ ಕುಳಿತಿದೆಯೋ ಎಂಬ ಭೀತಿಯಿಂದ ಅವನ ಮನಸ್ಸು ಅಸ್ವಸ್ಥವಾಗತೊಡಗಿತು. ಆದರೆ ಅಂತಹ ಯಾವ ದುರ್ಘಟನೆಯೂ ನಡೆಯದಿದ್ದಾಗ ಅವನು ಧೈರ್ಯದಿಂದ ನಿರಾತಂಕವಾಗಿ ಉಸಿರಾಡತೊಡಗಿದ.



"ಬಸ್ ಬರೋವರೆಗೆ..... ಟೈಂಪಾಸ್‌ಗೋಸ್ಕರವಾದರೂ ...... ಮಾತಾಡಿ ಮೇಡಂ!"

ಈಗ ಇನ್ನೂ ಮುಂದುವರಿಯುವುದು ಉಚಿತವಲ್ಲವೆಂದು ಅವನಿಗನ್ನಿಸತೊಡಗಿತು. ಏಕೆಂದರೆ ಅರ್ಧ ಗಂಟೆಯ ಅವಧಿಯಲ್ಲಿ ಇನ್ನು ಕೇವಲ ಹತ್ತು ನಿಮಿಷ ಮಾತ್ರ ಉಳಿದಿತ್ತು. ಅವನು ಬಂದ ದಾರಿಯಲ್ಲೇ ಹಿಂತಿರುಗಿ ಹೊರಟ. ಆದರೆ ಸ್ವಲ್ಪ ದೂರ ಹೋಗುವುದರೊಳಗಾಗಿ ತಾನು ದಾರಿ ತಪ್ಪಿಬಿಟ್ಟೆನೇ ಎಂಬ ಸಂಶಯ ಅವನಿಗುಂಟಾಯಿತು. ಏಕೆಂದರೆ, ಅವನು ಬರುವಾಗ ಮಾರ್ಗ ಮಧ್ಯದಲ್ಲಿ ಅಲ್ಲಲ್ಲಿ ಮಾಂಸದ ತುಂಡುಗಳು ಮತ್ತು ಉಪ್ಪಿನ ಡಬ್ಬಗಳನ್ನು ಬೀಳಿಸುತ್ತಾ ಹೋಗಿದ್ದ. ಆದರೆ ಈಗ ಅವುಗಳಲ್ಲಿ ಒಂದು ಡಬ್ಬವೂ ಕಾಣಿಸುತ್ತಿರಲಿಲ್ಲ. ಇಲ್ಲೇ ಎಲ್ಲಿಯೋ ಪೊದೆಗಳ ಹಿಂದೆ ಅವಿತುಕೊಂಡಿರುವ ರೆಡ್ ಇಂಡಿಯನ್ನರು ಅವನ್ನೆಲ್ಲಾ ಎತ್ತಿ

ಕೊಂಡಿರಬೇಕೆಂದು ಕೂಡಲೇ ಅವನ ತೀಕ್ಷ್ಣಮತಿಗೆ ಹೊಳೆಯಿತು. ಆ ಜನ ಯಾವ ಗಳಿಗೆಯಲ್ಲಿ ತನ್ನ ಮೇಲೆ ಆಕ್ರಮಣ ಮಾಡುತ್ತಾರೋ ಎಂಬ ಶಂಕೆಯಿಂದ ರೂಸ್ ತನ್ನ ಕುದುರೆಯನ್ನು ದೌಡಾಯಿಸತೊಡಗಿದ. ನದಿ ಸಮೀಪಿಸುತ್ತಿದ್ದಂತೆ ಅವನಲ್ಲಿ ಧೈರ್ಯ ಮೂಡಲಾರಂಭಿಸಿತು. ಆದರೆ ನದಿಯ ಹತ್ತಿರ ಬರುತ್ತಿದ್ದಂತೆಯೇ ದಾರಿ ಮಧ್ಯದಲ್ಲಿ ಅವನಿಗೊಂದು ಆಶ್ಚರ್ಯ ಕಾದಿತ್ತು. ಒಂದು ಪೊದೆಯ ಬಳಿ ಸ್ವಲ್ಪ ಜಾಗವನ್ನು ಸ್ವಚ್ಛ ಮಾಡಿ ಒಂದು ಬಿಲ್ಲು ಮತ್ತು ಏಳು ಬಾಣಗಳನ್ನು ಇಟ್ಟಿರುವುದು ಅವನ ಗಮನಕ್ಕೆ ಬಂದಿತ್ತು. ಸುತ್ತಲೂ ಅತ್ಯಂತ ಜಾಗರೂಕತೆಯಿಂದ ನೋಡುತ್ತಾ ರೂಸ್ ಕುದುರೆಯಿಂದ ಇಳಿದ. ಸಾವಧಾನವಾಗಿ ಆ ಬಿಲ್ಲು-ಬಾಣಗಳನ್ನು ಕೈಗೆತ್ತಿಕೊಂಡು ಪರೀಕ್ಷಿಸಿದ. ಆ ಬಿಲ್ಲನ್ನು ಅತ್ಯಂತ ಕಲಾತ್ಮಕ ರೀತಿಯಲ್ಲಿ ತಯಾರಿಸಲಾಗಿತ್ತು. ಬಾಣಗಳು ತುಂಬಾ ಹರಿತವಾಗಿದ್ದುವು. ಆದರೆ ಇವನ್ನು ಯಾವ ಕಾರಣದಿಂದ ಇಡಲಾಗಿದೆ ಎಂಬುದನ್ನು ತಿಳಿಯಲು ಎಷ್ಟೇ ಪ್ರಯತ್ನಪಟ್ಟರೂ ಅವನಿಂದ ಸಾಧ್ಯವಾಗಲಿಲ್ಲ. ಶಾಂತಿಯ ಸಂದೇಶವೋ? ಅಥವಾ ಯುದ್ಧದ ಆಹ್ವಾನವೋ? ಯಾತರ ದ್ಯೋತಕ ಈ ಬಿಲ್ಲು-ಬಾಣಗಳು!

ರೂಸನ ಸ್ನೇಹಿತ ಪ್ಯಾಟ್‌ಕೆಲಿಗೂ ಈ ಬಗ್ಗೆ ಏನೂ ತೋಚಲಿಲ್ಲ. ಆದರೆ ಮುಂದಿನ ಎರಡು ದಿನಗಳಲ್ಲಿ ಯಾವ ರೆಡ್ ಇಂಡಿಯನ್ನರೂ ಇವರ ಕ್ಯಾಂಪಿನ ಚಟುವಟಿಕೆಗಳನ್ನು ಗಮನಿಸಲು ಬಾರದೇ ಇದ್ದುದನ್ನು ಕಂಡು ಅವರಿಗೆ ಅಪಾರ ಸಂತಸವುಂಟಾಯಿತು. ಬಹುಶಃ ಶಾಂತಿಯ ಸಂದೇಶವನ್ನು ನೀಡಲು ಅವರು ಇಚ್ಛಿಸುತ್ತಿದ್ದಿರಬೇಕು ಎಂದು ಯೋಚಿಸಿ ರೂಸ್ ಸಮಾಧಾನ ಚಿತ್ತನಾದ.

ಈಗ ರೂಸನ ಮನಸ್ಸಿನಲ್ಲಿ ವಿಚಿತ್ರ ಸಂಕಲ್ಪವೊಂದು ಮೂಡತೊಡಗಿತು. ಅದೆಂದರೆ, ಏನಾದರೂ ಸಾಹಸ ಮಾಡಿ ರೆಡ್ ಇಂಡಿಯನ್ನರ ಫೋಟೋ ತೆಗೆಯುವುದು! ಅದು ಅಂತಹ ಲಘುವಾದ ಸಂಗತಿಯೇನಾಗಿರಲಿಲ್ಲ. ಇದುವರೆಗೂ ಯಾವ ಯಾತ್ರಿಕನೂ ರೆಡ್ ಇಂಡಿಯನ್ನರ ಫೋಟೋ ತೆಗೆಯುವ ಸಾಹಸಕ್ಕೆ ಕೈ ಹಾಕಿರಲಿಲ್ಲ. ಒಂದು ವೇಳೆ ಯಾವನಾದರೂ ಅಂತಹ ಸಾಹಸವನ್ನು ಮಾಡಿದ್ದರೆ, ತಾನು ತೆಗೆದ ಫೋಟೋಗಳನ್ನು ನಾಗರಿಕ ಜಗತ್ತಿಗೆ ತೋರಿಸಲು ಅವನು ಬದುಕಿ ಉಳಿದಿರಲಿಲ್ಲ!

ನಾಲ್ಕಾರು ದಿನಗಳ ತರುವಾಯ ಒಂದು ರಾತ್ರಿ ಸದ್ದಿಲ್ಲದಂತೆ ರೂಸ್ ತನ್ನ ಕ್ಯಾಂಪನ್ನು ಕಿತ್ತು, ಸಾಮಾನು-ಸರಂಜಾಮುಗಳನ್ನು ತೆಪ್ಪದ ಮೇಲೆ ಹೇರಿ, ನದಿಯ ಕೆಳಭಾಗದತ್ತ ಪ್ರಯಾಣವನ್ನು ಮುಂದುವರಿಸಿದ. ಎರಡು-ಮೂರು ಮೈಲಿಗಳಷ್ಟು ದೂರ ಪ್ರಯಾಣಿಸುವಷ್ಟರಲ್ಲೇ ಬೆಳಗಾಯಿತು. ಅಲ್ಲಿಯೇ ನದಿಯ ದಡದ ಮೇಲೆ, ಪ್ರಶಸ್ತ ಸ್ಥಳವೊಂದನ್ನು ಹುಡುಕಿ ಕ್ಯಾಂಪನ್ನು ಸಿದ್ಧಪಡಿಸಲಾಯಿತು. ಅನಂತರ, ತನ್ನ ಸ್ನೇಹಿತ ಮ್ಯಾನ್, ಒಂದು ಕುದುರೆ ಮತ್ತು ಬ್ರೆಜಿಲ್ ನಿವಾಸಿಯಾದ ಒಬ್ಬ ಕೂಲಿಯಾಳು- ಇವರನ್ನು ಕರೆದುಕೊಂಡು ರೂಸ್ ನದಿಯ ಆಚೆ ದಡವನ್ನು ತಲುಪಿದ.

ಮ್ಯಾನ್ ಮತ್ತು ಆ ಆದಿವಾಸಿ ಕೂಲಿಯಾಳುಗಳಿಗೆ ತೆಪ್ಪದಲ್ಲೇ ಇರಬೇಕೆಂದೂ ಮತ್ತು ತೆಪ್ಪವನ್ನು ನದಿಯ ಧಾರೆಗೆ ಸಮೀಪವಾಗಿ ನಿಲ್ಲಿಸಿಕೊಳ್ಳಬೇಕೆಂದೂ ಮತ್ತು ಎರಡು ದಿನಗಳೊಳಗಾಗಿ ತಾನು ಹಿಂತಿರುಗಿ ಬರದೇ ಹೋದರೆ, ಅವರು ವಾಪಸ್ಸು ಹೊರಟುಹೋಗಿ ಸಮೀಪದ ಸರ್ಕಾರಿ ಅಧಿಕಾರಿಗಳಿಗೆ ಸುದ್ದಿಯನ್ನು ಮುಟ್ಟಿಸಬೇಕೆಂದೂ ಸೂಕ್ತ ನಿರ್ದೇಶನವನ್ನಿತ್ತು ರೂಸ್ ಮುಂದಿನ ಸಾಹಸ ಯಾತ್ರೆಗೆ ತೊಡಗಿದ. ಸೂರ್ಯ ಇನ್ನೂ ಸಂಪೂರ್ಣವಾಗಿ ಉದಯಿಸಿರಲಿಲ್ಲ. 'ಸೆರಾ-ಡು-ರೊಂಕಡೋರ್' ಪರ್ವತದ ಕೆಳಗಿನ ತಪ್ಪಲುಗಳಲ್ಲಿ ದಟ್ಟವಾಗಿ ಮುಸುಕಿದ್ದ ಮಂಜು ಇನ್ನೂ ಕರಗಿರಲಿಲ್ಲ.

ಸುಮಾರು ಹತ್ತಿಪ್ಪತ್ತು ಗಜ ದೂರ ಹೋಗಿರಬಹುದು. ಇದ್ದಕ್ಕಿದ್ದಂತೆ ಬೆನ್ನಿನ ಮೇಲೆ ನೇತಾಡುತ್ತಿದ್ದ ಬಂದೂಕಿನತ್ತ ರೂಸನ ಲಕ್ಷ್ಯ ಹರಿಯಿತು. ಕೂಡಲೇ ಅವನು ಅದನ್ನು ತೆಗೆದು

ಸಮೀಪದ ಪೊದೆಯೊಂದರೊಳಗೆ ಅಡಗಿಸಿಟ್ಟ. ಮರೆತು ಆ ಬಂದೂಕನ್ನೇನಾದರೂ ಅವನು ತೆಗೆದುಕೊಂಡು ಹೋಗಿದ್ದಿದ್ದರೆ ಅವನು ಜೀವಸಹಿತವಾಗಿ ಮರಳಿ ಬರುತ್ತಿದ್ದನೋ, ಇಲ್ಲವೋ!

ಪರ್ವತದ ಹಾದಿ ಅತ್ಯಂತ ದುರ್ಗಮವಾದುದಿತ್ತು, ಸ್ವಲ್ಪ ಎಚ್ಚರ ತಪ್ಪಿದರೂ ಮೃತ್ಯುವಿನ ಉಣಿಸಾಗಬೇಕಾಗುತ್ತಿತ್ತು. ಆದ್ದರಿಂದ ರೂಸ್ ನಿಧಾನವಾಗಿ, ಮೈಯೆಲ್ಲಾ ಕಣ್ಣಾಗಿಸಿ ಮುಂದುವರಿಯುತ್ತಿದ್ದ. ಈ ಪರ್ವತ ಗರ್ಭದಲ್ಲೆಲ್ಲೋ ಯಾವುದೋ ಅತಿ ಪ್ರಾಚೀನ ನಗರವೊಂದರ ಅವಶೇಷಗಳಿರುವುದಾಗಿಯೂ ಮತ್ತು ತಪ್ಪಲೊಂದರಲ್ಲಿ ಅತ್ಯಮೂಲ್ಯವಾದ ವಜ್ರದ ಗಣಿ ಇರುವುದಾಗಿಯೂ ಸಮೀಪದ ಜನರು ದೃಢವಾಗಿ ನಂಬಿದ್ದರು. ಇಂತಹ ಆಕರ್ಷಕ ಕಥೆಗಳನ್ನು ಕೇಳಿ, ಅವುಗಳಿಂದ ಮೋಹಿತರಾಗಿ, ಅಸಂಖ್ಯ ಜನ ಯಾತ್ರಿಕರು ಈ ಪ್ರದೇಶದ ಅನ್ವೇಷಣೆಗೆ ಕೈ ಹಾಕಿ ತಮ್ಮ ಅಮೂಲ್ಯ ಪ್ರಾಣವನ್ನು ಕಳೆದುಕೊಂಡಿದ್ದರು. ರೂಸನ ಮನದ ಮೂಲೆಯಲ್ಲೂ ಆ ಗುಪ್ತ ನಿಧಿಯನ್ನು ಪತ್ತೆ ಹಚ್ಚಬೇಕೆಂಬ ಆಕಾಂಕ್ಷೆ ಹುದುಗಿತ್ತು. ನಿಜವಾಗಿಯೂ ಆ ಪರ್ವತದ ತಪ್ಪಲುಗಳಲ್ಲಿ ಏನಿದೆ ಎಂಬುದನ್ನು ಶೋಧಿಸಲು ಅವನು ಉತ್ಸುಕನಾಗಿದ್ದ. ಆದರೆ ಹಿಂದಿನ ರಾತ್ರಿ, ಪ್ಯಾಟ್‌ಕೆಲಿ ನುಡಿದಿದ್ದ - ''ಅವರು ಶಾಂತಿಯ ಸಂದೇಶವನ್ನು ನೀಡಬಯಸಿದ್ದರೆ, ಬಾಣಗಳನ್ನು ಇಡಿಯಾಗಿ ಇಡುತ್ತಿರಲಿಲ್ಲ. ಅವನ್ನು ಮುರಿದು ಇಡುತ್ತಿದ್ದರು!''

ಈಗಾಗಲೇ ಅವನು ಸಾಕಷ್ಟು ದೂರ ದಾರಿಯನ್ನು ಕ್ರಮಿಸಿದ್ದ. ಸೂರ್ಯ ಆಗಲೇ ಮೇಲೇರತೊಡಗಿದ್ದರಿಂದ ವಾತಾವರಣದಲ್ಲಿ ಸೆಖೆ ಹೆಚ್ಚಾಗತೊಡಗಿತ್ತು. ಮಂಜೂ ಕರಗಿಹೋಗಿತ್ತು. ಅಲ್ಲಲ್ಲಿ ಮಂಗಗಳು ಆ ಮರದಿಂದ ಈ ಮರಕ್ಕೆ ನೆಗೆದಾಡುವುದರಲ್ಲಿ ಮಗ್ನವಾಗಿದ್ದವು. ಚಿತ್ರ-ವಿಚಿತ್ರ, ಬಗೆಯ ಪಕ್ಷಿಗಳು ಕಲಕಲನಾದ ಮಾಡುತ್ತಿದ್ದವು. ಕುದುರೆಯ ಖುರಪುಟ ಧ್ವನಿಯನ್ನು ಕೇಳಿದ ಕಾಡು ಮೊಲಗಳು, ಕಾಡುಹಂದಿಗಳು, ವಿಷಸರ್ಪಗಳು ಸರಕ್ಕನೆ ಪೊದೆಯೊಳಕ್ಕೆ ಸರಿದು ಮಾಯವಾಗುತ್ತಿದ್ದವು. ಆದರೆ ಇದುವರೆಗೂ ಯಾವ ರೆಡ್ ಇಂಡಿಯನ್ನನೂ ಕಣ್ಣಿಗೆ ಬಿದ್ದಿರಲಿಲ್ಲ.

ರೂಸನ ಆತ್ಮವಿಶ್ವಾಸ ಈಗ ದ್ವಿಗುಣಿತವಾಯಿತು. ಯಾವ ಆಪತ್ತೂ ಇಲ್ಲದೆ ತಾನು ಪರ್ವತವನ್ನು ತಲುಪಬಹುದೆಂದು ಅವನು ಉಲ್ಲಸಿತನಾಗಿದ್ದ. ಹೀಗೇ ಮತ್ತಷ್ಟು ದೂರ ಕ್ರಮಿಸಿದಾಗ ಒಂದು ಕಡೆ ಇದ್ದಕ್ಕಿದ್ದಂತೆ ಕುದುರೆ ನಿಂತುಬಿಟ್ಟಿತು. ಕಣ್ಣರಳಿಸಿ ಅತ್ತಿತ್ತ ನೋಡಿದಾಗ ರೂಸನ ಕಣ್ಣಿಗೆ ಏನೂ ಕಾಣಿಸಲಿಲ್ಲ. ಆದರೆ ಮತ್ತಷ್ಟು ಚೆನ್ನಾಗಿ ಪರೀಕ್ಷಿಸಿದಾಗ, ಸುಮಾರು ಹದಿನೈದು-ಇಪ್ಪತ್ತು ಗಜ ದೂರದಲ್ಲಿ ರಾಕ್ಷಸಾಕಾರದ ಮರವೊಂದರ ಬದಿಯಲ್ಲಿ ಬಲಿಷ್ಠ ರೆಡ್ ಇಂಡಿಯನ್ ತರುಣನೊಬ್ಬ ನಿಂತಿರುವುದು ಗೋಚರಿಸಿತು. ಕಂಚಿನ ಮೂರ್ತಿಯಂತೆ ಅವನು ಸ್ಥಿರವಾಗಿ ನಿಂತಿದ್ದ. ಕೈಯಲ್ಲಿ ಹೆದೆಯೇರಿಸಿದ ಬಿಲ್ಲಿತ್ತು. ಮುಖದಲ್ಲಿ ಕಾಠಿಣ್ಯ ತುಂಬಿ ತುಳುಕುತ್ತಿತ್ತು.

ಇನ್ನೇನು ತನ್ನ ಕಥೆ ಮುಗಿದಂತೆಯೇ ಎನಿಸಿತು ರೂಸನಿಗೆ. ಏನು ಮಾಡಬೇಕೆಂದು ತೋಚದೆ, ಕ್ಷಣ ಕಾಲ ಅವನು ದಿಙ್ಮೂಢನಂತೆ ಕುಳಿತುಬಿಟ್ಟ. ಆದರೆ ಸುಮ್ಮನಿರುವುದೂ ಅನರ್ಥಕಾರಿಯಾಗಿತ್ತು! ಆದ್ದರಿಂದ ಅವನು ಸ್ನೇಹಪೂರ್ಣ ಸಂಕೇತಗಳನ್ನು ಮಾಡತೊಡಗಿದ. ಮುಖದ ತುಂಬಾ ಮುಗುಳ್ನಗೆಯನ್ನು ತಂದುಕೊಂಡು, ಆ ರೆಡ್ ಇಂಡಿಯನ್ ತರುಣನಿಗೆ ಬಗ್ಗಿ-ಬಗ್ಗಿ ನಮಸ್ಕಾರ ಮಾಡತೊಡಗಿದ. ತನ್ನ ಬೆನ್ನ ಹಿಂದೆ ಕುದುರೆಯ ಮೇಲಿದ್ದ ಡಬ್ಬಗಳತ್ತ ಬೆರಳು ಮಾಡಿ ತೋರಿಸುತ್ತಾ, ಕೆಲವು ದಿನಗಳ ಹಿಂದೆ ಇಂತಹ ಕಾಣಿಕೆಗಳನ್ನು ಅರ್ಪಿಸಿದವನು ತಾನೇ ಎಂದು ಎದೆ ಮುಟ್ಟಿ ಸೂಚಿಸಬಯಸಿದ. ಆದರೆ ಇವನ ಯಾವ ಸಂಜ್ಞೆಗಳೂ ಆ ತರುಣನ ಮುಖಭಾವವನ್ನು ಬದಲಿಸಲು ಶಕ್ತವಾಗಲಿಲ್ಲ. ಅವನು ಇವನ ಅಸ್ತಿತ್ವವನ್ನು ಗಣನೆಗೆ ತೆಗೆದುಕೊಂಡಂತೆ ಕಾಣಲಿಲ್ಲ. ಕೊನೆಗೆ ಆ ತರುಣನನ್ನು ಅವನ ಪಾಡಿಗೆ ಬಿಟ್ಟು ರೂಸ್ ಪರ್ವತದತ್ತ ಮುಂದುವರಿಯತೊಡಗಿದ. ಕೊನೆಗೊಮ್ಮೆ ನಿರ್ವಿಘ್ನವಾಗಿ

ಪರ್ವತದ ತಪ್ಪಲನ್ನು ತಲುಪಿದ. ಅಲ್ಲಿಯ ಸೃಷ್ಟಿ ಸೌಂದರ್ಯವನ್ನು ಕಂಡು ಅವನು ಮೂಕವಿಸ್ಮಿತನಾದ! ಆದರೆ ಆ ಸೌಂದರ್ಯದ ಗರ್ಭದಲ್ಲೇ ರುದ್ರ ಗಾಂಭೀರ್ಯ, ನಿಗೂಢ ಭೀಕರತೆ ನೆಲೆಸಿರುವುದನ್ನು ಮರೆಯುವ ಹಾಗಿರಲಿಲ್ಲ!

ಕೆಲ ಕಾಲ ಆ ಪ್ರದೇಶವನ್ನೆಲ್ಲಾ ರೂಸ್ ಸೂಕ್ಷ್ಮವಾಗಿ ಪರಿಶೀಲಿಸಿದ. ಆದರೆ ಅವನಿಗೆ ಅಲ್ಲಿ ಯಾವುದೇ ಪ್ರಾಚೀನ ನಗರದ ಧ್ವಂಸಾವಶೇಷಗಳೇ ಆಗಲೀ ಅಥವಾ ವಜ್ರದ ಗಣಿಗಳ ಕುರುಹಾಗಲೀ ಕಂಡುಬರಲಿಲ್ಲ. ಕ್ಷಣ ಕಾಲ ಅವನು ನಿರಾಶೆಯಿಂದ ನಿರುತ್ಸಾಹಿತನಾದ. ಆದರೆ ತಾನು ಬಂದದ್ದು ಬೇರೆಯೇ ಪ್ರಮುಖ ಕೆಲಸಕ್ಕೆ ಎಂಬುದನ್ನು ಜ್ಞಾಪಿಸಿಕೊಂಡು ಅವನು ತನ್ನನ್ನು ತಾನೇ ಸಾಂತ್ವನಗೊಳಿಸಿಕೊಂಡ. ಇನ್ನು ಹೆಚ್ಚು ಕಾಲ ಅಲ್ಲಿ ಕಳೆಯುವುದರಲ್ಲಿ ಅವನಿಗೆ ಅರ್ಥವಿಲ್ಲವೆನಿಸಿತು. ಬಂದ ದಾರಿಯಲ್ಲೇ ಹಿಂತಿರುಗಲು ನಿರ್ಧರಿಸಿದ. ಸ್ವಲ್ಪ ದೂರ ಹೋಗುವುದರೊಳಗಾಗಿ ಅವನಿಗೊಂದು ವಿಚಿತ್ರ ಕಾಣಿಸಿತು. ತಾನು ಈ ಮೊದಲು ಬಂದಿದ್ದ ದಾರಿಯ ಮಧ್ಯದಲ್ಲಿ ಅಲ್ಲಲ್ಲಿ ಧೂಮಸ್ತಂಭಗಳು ಮೇಲೇಳುತ್ತಿರುವುದನ್ನು ಅವನು ಗಮನಿಸಿದ. ಇದು ಆ ಜನರ ಸಾಂಕೇತಿಕ ಭಾಷೆಯಾಗಿತ್ತು. ಯಾರೋ ವಿದೇಶಿಯನೊಬ್ಬ ತಮ್ಮ ಪ್ರದೇಶದಲ್ಲಿ ಅತಿಕ್ರಮಣ ಮಾಡಿರುವ ಸಂದೇಶವನ್ನು ಬೇರೆ ಬೇರೆ ಭಾಗಗಳಲ್ಲಿ ವಾಸಿಸುತ್ತಿದ್ದ ಇತರ ರೆಡ್ ಇಂಡಿಯನ್ನರಿಗೆ ತಿಳಿಯಪಡಿಸಲು ಆ ಧೂಮಸ್ತಂಭಗಳು ನಿರ್ಮಿಸಲ್ಪಟ್ಟಿವೆ!

ತನ್ನೆದುರಿನ ದೃಶ್ಯವನ್ನು ನೋಡುತ್ತಲೇ ತನ್ನ ಹೃದಯದ ಚಲನೆಯೇ ನಿಂತಂತೆ ಅವನಿಗೆ ಭಾಸವಾಯಿತು. ಇನ್ನು ತನ್ನ ಕೊನೆ ಸಮೀಪಿಸಿದಂತೆಯೇ ಎಂದೆನ್ನಿಸತೊಡಗಿತು. ಸುಮಾರು ನಲವತ್ತು-ಐವತ್ತು ಜನ ನೀಳ ದೇಹದ, ಬಲಿಷ್ಠಕಾಯರಾದ ರೆಡ್ ಇಂಡಿಯನ್ ಜನ ದಾರಿಗಡ್ಡವಾಗಿ ವರ್ತುಲಾಕಾರವಾಗಿ ಸುತ್ತಲೂ ನಿಂತುಕೊಂಡಿದ್ದರು. ಕೈಯಲ್ಲಿ ಬಿಲ್ಲು-ಬಾಣಗಳನ್ನು ಧರಿಸಿದ್ದರು. ಅವರ ಕಣ್ಣುಗಳಲ್ಲಿ ಕ್ರೌರ್ಯ ತುಂಬಿ ತುಳುಕುತ್ತಿತ್ತು.

ಅಷ್ಟರೊಳಗೆ ಅವರ ಸರದಾರನಂತೆ ಕಾಣಿಸುತ್ತಿದ್ದ ವ್ಯಕ್ತಿಯೊಬ್ಬ ಮುಂದೆ ಬಂದು ಗಂಭೀರ ಸ್ವರದಲ್ಲಿ, 'ಪಮ್, ಪಮ್' ಎಂದು ನುಡಿದು, ಪ್ರಶ್ನಾರ್ಥಕ ದೃಷ್ಟಿಯಿಂದ ರೂಸನನ್ನು ಪರೀಕ್ಷಿಸತೊಡಗಿದ. ಆ ಕೂಡಲೇ ರೂಸನಿಗೆ ಆ ಶಬ್ದದ ಅರ್ಥ ಹೊಳೆಯಿತು. "ನಿನ್ನ ಬಳಿ ಬಂದೂಕಿದೆಯೇ?" ಎಂದು ಅವನು ವಿಚಾರಿಸುತ್ತಿದ್ದ! ತತ್‌ಕ್ಷಣವೇ ರೂಸ್ ತನ್ನೆರಡು ಬಾಹುಗಳನ್ನು ಚಾಚಿ,. ಗಾಳಿಯಲ್ಲಿ ಅಲ್ಲಾಡಿಸುತ್ತಾ ತನ್ನ ಬಳಿ ಯಾವುದೇ ಆಯುಧವಿಲ್ಲವೆಂದು ಸೂಚಿಸಿದ. ಆದರೆ ಅವನ ಹೆಗಲ ಮೇಲೆ ನೇತಾಡುತ್ತಿದ್ದ 25 ಮಿಲಿಮೀಟರಿನ ಕ್ಯಾಮರಾವನ್ನು ಅವರಿನ್ನೂ ಸಂದೇಹಭರಿತ ದೃಷ್ಟಿಯಿಂದ ನೋಡತೊಡಗಿದ್ದರು. ಅದೊಂದು ಆಧುನಿಕ ರೀತಿಯ ಮೆಷಿನ್ ಗನ್ ಇರಬಹುದೆಂದು ಅವರು ತರ್ಕಿಸತೊಡಗಿದ್ದರು. ರೂಸನಿಗೆ ಅವರ ಸಂದೇಹ ಅರ್ಥವಾಯಿತು. ಅವರ ಸಂದೇಹ ನಿವಾರಣೆ ಮಾಡುವುದು ಅತ್ಯವಶ್ಯಕವಾಗಿತ್ತು. ಅವನು ಕ್ಯಾಮೆರಾವನ್ನು ಕೈಗೆತ್ತಿಕೊಂಡು, ಅವರ ನೇರಕ್ಕೆ ಹಿಡಿದು, ಮೂರ್ನಾಲ್ಕು ಬಾರಿ 'ಕ್ಲಿಕ್, ಕ್ಲಿಕ್' ಅನ್ನಿಸಿದ. ಅದರಿಂದ ಯಾವುದೇ ರೀತಿಯ ಭಯಂಕರ ಶಬ್ದ ಕೇಳಿ ಬರದಿದ್ದಾಗ, ಅದು ಭಯಾನಕವಾದ ಮೆಷಿನ್‌ಗನ್ ಅಲ್ಲ ಎಂಬ ವಿಷಯ ಅವರಿಗೆ ಖಚಿತವಾಯಿತು. ದುರ್ಬೀನಿನಂತಹ ಯಾವುದೋ ವಸ್ತುವಿರಬೇಕೆಂದು ಅವರು ಅಷ್ಟಕ್ಕೇ ಸುಮ್ಮನಾಗಿ, ಕುದುರೆಯಿಂದ ಕೆಳಗಿಳಿಯುವಂತೆ ಅವನಿಗೆ ಸಂಜ್ಞೆ ಮಾಡಿದರು. ಅವರ ವರ್ತನೆಯಲ್ಲಿ ಮೃದುತ್ವ ಮತ್ತು ಸರಳತೆಗಳನ್ನು ಕಂಡು ರೂಸನಿಗೆ ಹೋದ ಜೀವ ಮರಳಿ ಬಂದಂತಾಯಿತು. ಅವನು ಧೈರ್ಯದಿಂದ ಕುದುರೆಯಿಂದ ಕೆಳಗಿಳಿದು ಅವರೆದುರು ನಿಂತುಕೊಂಡ.

ಈ ಹಿಂದೆ ಪ್ರಶ್ನಿಸಿದ್ದ ಅವರ ಸರದಾರ ತನ್ನ ಕೆಲ ಸಂಗಡಿಗರಿಗೆ ಏನೋ ಹೇಳಿ, ಉಳಿದವರನ್ನು ತನ್ನ ಜೊತೆಗೆ ಕರೆದುಕೊಂಡು ಕಾಡಿನೊಳಕ್ಕೆ ಹೊರಟುಹೋದ. ರೂಸನ ಬಳಿ ನಾಲ್ಕೈದು ಜನ

ಮಾತ್ರ ಉಳಿದರು. ಅವರು ಅವನನ್ನು ಯಾವುದೋ ಅಪರಿಚಿತ ದಾರಿಯಲ್ಲಿ ಕರೆದು ಕೊಂಡು ಹೋಗತೊಡಗಿದರು. ಸ್ವಲ್ಪ ದೂರ ಹೋದ ನಂತರ ಹತ್ತೆಂಟು ಗುಡಿಸಲುಗಳು ಕಾಣಿಸಿದವು. ಇವರನ್ನು ನೋಡುತ್ತಲೇ ನಗ್ನರಾಗಿದ್ದ ನಾಲ್ಕಾರು ಹೆಂಗಸರು, ಮಕ್ಕಳು-ಮರಿಗಳು ಪೊದೆಗಳ ಹಿಂದೆ ಅಡಗಿಕೊಂಡರು. ಅಲ್ಲಿ ವಿಶಾಲವಾದ ಬಯಲೊಂದರಲ್ಲಿ ಸಾಲಾಗಿ ಕಲ್ಲಿನ ಒಲೆಗಳನ್ನು ಹೂಡಲಾಗಿತ್ತು. ಅದರ ಮೇಲೆ ಇಡಲಾಗಿದ್ದ ಬೃಹದಾಕಾರದ ಮಣ್ಣಿನ ಮಡಿಕೆಗಳಲ್ಲಿ ಯಾವುದೋ ಒಂದು ಖಾದ್ಯ ಪದಾರ್ಥವನ್ನು ತಯಾರಿಸಲಾಗುತ್ತಿತ್ತು. ಒಂದು ಮಡಿಕೆಯೊಳಗೆ ಇಣುಕಿ ನೋಡಿದಾಗ, ಕ್ರಿಕೆಟ್ ಚೆಂಡಿನಷ್ಟು ಗಾತ್ರದ ದುಂಡು-ದುಂಡಗಿನ ಏನೋ ವಸ್ತುಗಳು ಅದರೊಳಗೆ ಬೇಯುತ್ತಿದ್ದುದು ರೂಸನಿಗೆ ಕಾಣಿಸಿತು. ಅದೇನೆಂದು ಆಗ ಅವನಿಗೆ ಅರ್ಥವಾಗಲಿಲ್ಲ.

ಸ್ವಲ್ಪ ಹೊತ್ತಿನ ನಂತರ ಆ ಮಡಿಕೆಯನ್ನು ಕೆಳಗಿಳಿಸಲಾಯಿತು. ಎಲ್ಲರೂ ಸುತ್ತಲೂ ಊಟಕ್ಕೆ ಕುಳಿತರು. ರೂಸನಿಗೆ ಕುಳಿತುಕೊಳ್ಳುವಂತೆ ಸಂಜ್ಞೆ ಮಾಡಿದರು. ಕೆಲ ಸಮಯದ ಹಿಂದೆ ಬೇರೆಯಾಗಿ ಹೋಗಿದ್ದ ರೆಡ್ ಇಂಡಿಯನ್ನರೂ ಬಂದು ಕುಳಿತುಕೊಂಡರು. ಒಂದಿಬ್ಬರು ಮಣ್ಣಿನ ತಟ್ಟೆಗಳನ್ನು ಎಲ್ಲರ ಕೈಗೂ ಕೊಟ್ಟರು. ಮತ್ತೊಂದಿಬ್ಬರು ಉದ್ದನೆಯ ಮರದ ಸೌಟಿನಿಂದ ಮಡಿಕೆಗಳಲ್ಲಿದ್ದ ಪದಾರ್ಥವನ್ನು ಬಡಿಸತೊಡಗಿದರು. ತನ್ನ ತಟ್ಟೆಯಲ್ಲಿ ಬಡಿಸಿದ್ದೇನು ಎಂದು ಆಗ ರೂಸನಿಗೆ ಅರ್ಥವಾಯಿತು. ಆ ದುಂಡನೆಯ ವಸ್ತುಗಳು ಕಾಡು ಮಂಗಗಳ ತಲೆಯಾಗಿದ್ದವು! ರೂಸನಿಗೆ ಅದನ್ನು ಕಂಡು ವಾಂತಿ ಬರುವಂತಾಯಿತು. ಆದರೆ ತಿನ್ನದೆ ಬೇರೆ ದಾರಿಯೇ ಇರಲಿಲ್ಲ. ಕಣ್ಣು ಮುಚ್ಚಿಕೊಂಡು ಒಲ್ಲದ ಮನಸ್ಸಿನಿಂದ ನಿಧಾನವಾಗಿ ತಿನ್ನತೊಡಗಿದ. ಅಡುಗೆಗೆ ಉಪ್ಪನ್ನು ಹಾಕಿರಲಿಲ್ಲ. ವಿಪರೀತ ಖಾರ ಬೇರೆ. ಅಂತೂ ಆ ಜನರ ಭಯದಿಂದ ಊಟದ ಶಾಸ್ತ್ರ ಮುಗಿಸಿದ.

ಊಟ ಮುಗಿದ ನಂತರ, ''ನೀನು ಯಾರು? ಎಲ್ಲಿಂದ ಬಂದೆ? ಏಕೆ ಬಂದೆ?'' ಎಂದು ಮುಂತಾಗಿ ಆ ಸರದಾರ ಸಂಜ್ಞೆಗಳಿಂದ ಪ್ರಶ್ನಿಸತೊಡಗಿದ. ತಾನು ಸಮುದ್ರವನ್ನು ದಾಟಿ ಬಹಳ ದೂರದಿಂದ ಬಂದಿರುವುದಾಗಿಯೂ, ಅವರೊಡನೆ ಮಿತ್ರತ್ವವನ್ನು ಸಂಪಾದಿಸಲು ಸರ್ಕಾರದವರು ತನ್ನನ್ನು ಕಳುಹಿಸಿಕೊಟ್ಟಿರುವುದಾಗಿಯೂ ರೂಸ್ ಸಂಕೇತಾತ್ಮಕ ಭಾಷೆಯಲ್ಲಿ ವಿವರಿಸಿದ.

ಆಗಲೇ ಸಂಜೆಯಾಗತೊಡಗಿತ್ತು. ತಾನು ಹಿಂದಿರುಗಬೇಕೆಂದು ರೂಸ್ ಅವರಿಗೆ ತಿಳಿಸಿದ. ಅವರ ಸರದಾರ ಅವನನ್ನು ನದಿಯವರೆಗೆ ಕಳುಹಿಸಿಕೊಡಬೇಕೆಂದು ತನ್ನ ಅನುಚರರಿಗೆ ಆಜ್ಞಾಪಿಸಿದ. ರೂಸ್ ತನ್ನ ಕುದುರೆಯನ್ನೇರಿದ. ನಾಲ್ಕಾರು ಜನ ರೆಡ್ ಇಂಡಿಯನ್ನರು ಅವನ ಬೆಂಗಾವಲಿಗೆ ಹೊರಟು ನಿಂತರು. ರೂಸ್ ಅವರಿಗೆ ವೃಥಾ ತೊಂದರೆಯನ್ನು ತೆಗೆದುಕೊಳ್ಳಬಾರದಾಗಿಯೂ, ತಾನೊಬ್ಬನೇ ಹಿಂದಿರುಗುವುದಾಗಿಯೂ ಸಂಜ್ಞೆಯಿಂದ ಅವರಿಗೆ ತಿಳಿಯಪಡಿಸಿದ. ಅವರು ಅಷ್ಟಕ್ಕೇ ಸುಮ್ಮನಾದರು.

ಕೆಲವು ಗಂಟೆಗಳ ನಂತರ ನಿರ್ವಿಘ್ನವಾಗಿ ನದಿಯನ್ನು ಸಮೀಪಿಸಿದಾಗ ಅವನಿಗಾದ ಹರ್ಷ ಅಷ್ಟಿಷ್ಟಲ್ಲ! ತನ್ನ ಸ್ನೇಹಿತ ಮ್ಯಾನ್‌ನನ್ನು ಆನಂದಭರಿತ ಸ್ವರದಲ್ಲಿ ಕೂಗಿ ಕರೆದ. ತೆಪ್ಪ ಹತ್ತಿರ ಬರುತ್ತಲೇ ಅವಸರವಸರವಾಗಿ ಅದನ್ನು ಹತ್ತಿ ಕುಳಿತುಕೊಂಡು, ತನ್ನ ಕುದುರೆಯನ್ನು ಮಗ್ಗುಲಲ್ಲೇ ನಿಲ್ಲಿಸಿಕೊಂಡು ಅದನ್ನು ಪ್ರೇಮದಿಂದ ಮುದ್ದಿಸಿದ. ತೆಪ್ಪ ವೇಗವಾಗಿ ಕ್ಯಾಂಪಿನತ್ತ ಸಾಗತೊಡಗಿತು.

ಜಗತ್ತಿನ ಯಾವುದೇ ವ್ಯಕ್ತಿ ಅಲ್ಲಿಯವರೆಗೂ ಮಾಡದಿದ್ದಂತಹ ಸಾಹಸವನ್ನು ಆಲ್ಬರ್ಟ್ ರೂಸ್ ಮಾಡಿ ಮುಗಿಸಿದ್ದ! ಅವನು 'ಮೃತ್ಯು ನದಿ'ಯನ್ನು ದಾಟಿದ್ದಲ್ಲದೇ ಆ ಭಯಂಕರ ನರಭಕ್ಷಕ ಜನಾಂಗದೊಡನೆ ಸಂಪರ್ಕ ಸಾಧಿಸಿದ್ದ! ಅವರ ಫೋಟೋಗಳನ್ನು ತೆಗೆದಿದ್ದ! ಎಲ್ಲಕ್ಕೂ ಮಿಗಿಲಾಗಿ, ಅವರ ಸಂಗಡ ಕುಳಿತುಕೊಂಡು ಅವರ ಅಡುಗೆಯ ರುಚಿ ಸವಿದಿದ್ದ! ●

ಜೀವನದರ್ಶನ

ಕೆ.ಟಿ. ಪಾಂಡುರಂಗಿ

ಚುರುಕು ಬುದ್ಧಿ-ಜಾಣಬುದ್ಧಿ

ಮನುಷ್ಯರನ್ನು ಸಾಮಾನ್ಯವಾಗಿ ಮಂದ ಬುದ್ಧಿಯವರು, ಮಧ್ಯಮಬುದ್ಧಿಯವರು ಮತ್ತು ಬುದ್ಧಿವಂತರು ಎಂದು ವರ್ಗೀಕರಣ ಮಾಡುತ್ತೇವೆ. ಬುದ್ಧಿವಂತರೆಲ್ಲರೂ ಜಾಣರು ಎಂದು ಹೇಳಲು ಬರುವುದಿಲ್ಲ. ಜಾಣ ಶಬ್ದಕ್ಕೆ ಕುಶಲತೆ, ವಿವೇಕ ಎಂಬ ಎರಡು ಮುಖಗಳಿವೆ. ಯಾವುದೇ ವಿಷಯವನ್ನು ಶೀಘ್ರವಾಗಿ ಗ್ರಹಿಸುವುದು, ಅದನ್ನು ದಕ್ಷತೆಯಿಂದ ಕಾರ್ಯಗತಗೊಳಿಸುವುದು ಇವು ಕುಶಲತೆ ಎನಿಸುವವು. ಆದರೆ ಇಂಥ ವಿಷಯಗ್ರಹಣ ಮತ್ತು ಕಾರ್ಯದಕ್ಷತೆಗಳನ್ನು ಉಪಯೋಗಿಸುವ ಉದ್ದೇಶಕ್ರಮ ಸದ್ಭಾವನೆಯಿಂದ ಕೂಡಿದ್ದರೆ ವಿವೇಕವೆನಿಸುವುದು. ಇಂಥ ಸದ್ಭಾವನೆ ಇಲ್ಲದಿದ್ದರೆ ಕೇವಲ ವಿಷಯಗ್ರಹಣ ಶಕ್ತಿ ಕಾರ್ಯ ಶಕ್ತಿ ಚುರುಕುಬುದ್ಧಿ ಎನಿಸುವವು. ಆದರೆ ಜಾಣಬುದ್ಧಿ ಎನಿಸಲಾರವು. ಇವುಗಳನ್ನು ದುರುಪಯೋಗಪಡಿಸುವ ಪ್ರವೃತ್ತಿಯಿದ್ದರಂತೂ ಅದು ಕಪಟ ಬುದ್ಧಿ ಎನಿಸುವುದು.

ಆದ್ದರಿಂದ ಎಲ್ಲ ಬುದ್ಧಿವಂತರೂ ಜಾಣರಾಗಿರುವುದಿಲ್ಲ. ವಿವೇಕವಿಲ್ಲದ ಬುದ್ಧಿವಂತ ಜಾಣನಲ್ಲ. ಸ್ವಹಿತ ಪರಹಿತಗಳಿಗೆ ಧಕ್ಕೆ ಬರದಂತೆ ತನ್ನ ಬುದ್ಧಿಯನ್ನು ಉಪಯೋಗಿಸುವವನೇ ಜಾಣ. ಇದಿಲ್ಲದವನು ಕೇವಲ ಚುರುಕು ಬುದ್ಧಿಯವನು ಅಥವಾ ಕಪಟ ಬುದ್ಧಿಯವನು. ಇನ್ನು ವಿವೇಕದ ಜೊತೆಗೆ ವಿನಯವೂ ಜಾಣತನದ ಒಂದು ಅಂಗ. ವಿನಯವಿಲ್ಲದಿದ್ದರೆ ಪ್ರತಿಷ್ಠೆಯು ಅಡ್ಡಬಂದು ಬುದ್ಧಿವಂತನಾದವನೂ ಅವಿವೇಕದ ಹಾದಿ ಹಿಡಿಯುವನು. ಜಾಣತನವೆಂದರೆ ಕೇವಲ ಬುದ್ಧಿಯ ಚತುರತೆಯಲ್ಲ. ಅದು ನಡತೆಯ ಶಿಸ್ತೂ ಒಳಗೊಂಡಿರಬೇಕು. ನಡತೆಯ ಪ್ರಾಮಾಣಿಕತೆಯಿಲ್ಲದವನು ಚತುರನಾಗಿರಬಹುದು. ಆದರೆ ಜಾಣನಾಗಲಾರ. ಹೀಗೆ ಕುಶಲತೆ- ವಿವೇಕ- ವಿನಯಗಳ ಸಂಗಮವಿರುವವರು ಜಾಣರು.

ಅದಿಲ್ಲದೆ ಕೇವಲ ಕುಶಲತೆಯಿರುವವರು ಚುರುಕುಬುದ್ಧಿಯವರು ಅಥವಾ ಚತುರರು. ಕೇವಲ ಚುರುಕು ಬುದ್ಧಿಯವರು ಸಾಮಾನ್ಯವಾಗಿ ಸ್ವಾರ್ಥಿಗಳೂ ಕಪಟಿಗಳೂ ಆಗಿರುವರು. ಸ್ವಪ್ರತಿಷ್ಠೆಯ ಸ್ವಭಾವದವರೂ ಆಗಿರುವರು. ಬೇರೆಯವರ ಅಪಹಾಸ್ಯ ಮಾಡುವುದೂ ಇವರ ಸ್ವಭಾವವಾಗಿರುವುದು. ಆದರೆ ಜಾಣರು ಹಾಗಲ್ಲ. ಇವರು ವಿವೇಕದಿಂದ ಮಾತನಾಡುವರು. ವಿನಯದಿಂದ ವರ್ತಿಸುವರು. ಯಾವುದನ್ನೂ ಪ್ರತಿಷ್ಠೆಯ ವಿಷಯವನ್ನಾಗಿ ಮಾಡುವುದಿಲ್ಲ. ಸ್ವಾರ್ಥಿಗಳಾಗಿರುವುದಿಲ್ಲ. ಕಪಟವನ್ನೂ ಮಾಡುವುದಿಲ್ಲ. ಆದ್ದರಿಂದ ಜೀವನದಲ್ಲಿ ಕೇವಲ ಚುರುಕುಬುದ್ಧಿಯವರ ಸಹವಾಸಕ್ಕಿಂತ ಜಾಣರ ಸಹವಾಸ ಉತ್ತಮ.

ನಿಮ್ಮ ಶಬ್ದ ಭಂಡಾರ ಬೆಳೆಯಲಿ

ಶಬ್ದಭಂಡಾರವು ಹಣದ ಭಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1. ಯಥೇಚ್ಛ
   (ಅ) ಉಪದ್ರವಕಾರಿ
   (ಆ) ಬಲು ಕೀಳು
   (ಇ) ಮನಸು ಬಂದಾಗ
   (ಈ) ಬಯಸಿದಷ್ಟು
2. ಯಕ್ಷಿಣಿ
   (ಅ) ಒಂದು ಬೀಜ ಗಣಿತ ಸೂತ್ರ
   (ಆ) ಹೆಣ್ಣು ಪಿಶಾಚಿ
   (ಇ) ಎಕ್ಕೆ ಗಿಡ
   (ಈ) ಸೊರಗುವಿಕೆ
3. ಬೇವಾರ್ಸಿ
   (ಅ) ಬೇವಿನ ಎಣ್ಣೆ
   (ಆ) ಗತಿಗೇಡಿ
   (ಇ) ಉತ್ತರಾಧಿಕಾರಿ
   (ಈ) ಸ್ವೇದಬಿಂದು
4. ಚೌರ್ಯಾರ್ಶಿ
   (ಅ) ಕಳ್ಳರ ಗುರು
   (ಆ) ಚಾಕುವಿನ ಅಲಗು
   (ಇ) ಎಂಭತ್ತನಾಲ್ಕು
   (ಈ) ಕಳ್ಳನಂಥವ
5. ಕುಟಿಲ
   (ಅ) ಕೊಂಕು
   (ಆ) ಒನಕೆ
   (ಇ) ಕೆರಸೆ
   (ಈ) ವ್ಯಭಿಚಾರದಿಂದ ಬದುಕುವ
6. ತರುವಲಿ
   (ಅ) ಹುಡುಗ
   (ಆ) ಮರದ ಪೊಟರೆ
   (ಇ) ದನ ಕಾಯುವವ
   (ಈ) ಬಗೆ ಬಗೆಯ
7. ಲೋಕೋತ್ತರ
   (ಅ) ಪ್ರಜಾಪ್ರತಿನಿಧಿ
   (ಆ) ಪರಮಾತ್ಮ
   (ಇ) ಅತಿ ಶ್ರೇಷ್ಠ ತರದ
   (ಈ) ಜವಾಬ್ದಾರಿ ಇಲ್ಲದ
8. ವಾರ್ತಾಲಾಪ
   (ಅ) ಸುಳಿ
   (ಆ) ಒಂದು ಬಗೆಯ ಪಾತ್ರ
   (ಇ) ಸರದಿಯ ಮೇಲೆ ಅಳುವುದು
   (ಈ) ಮಾತುಕತೆ
9. ಆಶ್ವಾಸನ
   (ಅ) ನಿಟ್ಟುಸಿರು
   (ಆ) ಆಶೆ ತೋರಿಸುವುದು
   (ಇ) ಉಸಿರಾಟ
   (ಈ) ಸಮಾಧಾನ ಹೇಳುವಿಕೆ
10. ಕೃತಕೃತ್ಯ
    (ಅ) ನಿರುದ್ಯೋಗಿ
    (ಆ) ಮಾಡತಕ್ಕದ್ದನ್ನು ಮಾಡಿದವ
    (ಇ) ಉದ್ಯೋಗಿ
    (ಈ) ಕತ್ತರಿಸುವಿಕೆ
11. ಗಾರು
    (ಅ) ಅವರು
    (ಆ) ಹಕ್ಕಿ
    (ಇ) ಒರಟು
    (ಈ) ಬಾಚು
12. ದೇಹಿ
    (ಅ) ಬೇಡುವಿಕೆ
    (ಆ) ನೀಡುವಿಕೆ
    (ಇ) ಸುಡುವುದು
    (ಈ) ಪ್ರೇಮಿಕ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1. ಯಥೇಚ್ಛ
(ಈ) ಬಯಸಿದಷ್ಟು, (ಆದ್ದರಿಂದ) ವಿಪುಲ, ಧಾರಾಳ. ಉದಾ: ಯಥೇಚ್ಛವಾಗಿ ಸಿಗುವ ವಸ್ತು. (ಸಂ. ಯಥ=ಹೇಗೆ+ ಇಚ್ಛಾ=ಬಯಕೆ)

2. ಯಕ್ಷಿಣಿ
(ಅ) ಹೆಣ್ಣು ಪಿಶಾಚಿ, ಅದನ್ನು ವಶಪಡಿಸಿ ಕೊಂಡು ನಡೆಸುವ ಪವಾಡ, ಇಂದ್ರಜಾಲ ವಿದ್ಯೆ (ಸಂ.)

3. ಬೇವಾರ್ಸಿ
(ಅ) ದಿಕ್ಕಿಲ್ಲದವ, ಗತಿಗೇಡಿ, ಅನಾಥ. ಉದಾ: ಬೇವಾರ್ಸಿ ಹುಡುಗ (ಪಾರಸಿಕ, ಬೇ=ಇಲ್ಲ;+ಅರಬ್ಬಿ, ವಾರಿಸ್=ಉತ್ತರಾಧಿಕಾರಿ)

4. ಚೌರ್‍ಯಾಶಿ
(ಇ) ಎಂಭತ್ತನಾಲ್ಕು. ಉದಾ: ಚೌರ್‍ಯಾಶಿ ಲಕ್ಷ ಜೀವರಾಶಿಗಳು (ಮರಾಠಿ: ಪ್ರಾಕೃತ-ಚಉರಾಸಿ - ಸಂ. ಚತುರಶೀತಿ)

5. ಕುಟಿಲ
(ಅ) ಕೊಂಕು, ಬಾಗಿದ ಉಂಗುರುಂಗರವಾದ, ವಕ್ರ; ಮೋಸದ. ಉದಾ: ಕುಟಿಲ ಕುಂತಲ; ಕುಟಿಲ ಬುದ್ಧಿ. (ಸಂ.)

6. ತರುವಲಿ
(ಅ) ಹುಡುಗ ಅಥವಾ ಹುಡುಗಿ; ತಬ್ಬಲಿ, ಪರದೇಶಿ. ಉದಾ: ತರುವಲಿ ಬುದ್ಧಿ (ದೇಶ್ಯ)

7. ಲೋಕೋತ್ತರ
(ಇ) ಶ್ರೇಷ್ಠ, ಮಿಗಿಲು; ಅಸಾಧಾರಣ, ದಿವ್ಯ. ಉದಾ: ಲೋಕೋತ್ತರಪ್ರತಿಭೆ. (ಸಂ. ಲೋಕ+ಉತ್ತರ=ಮೇಲಿನದು)

8. ವಾರ್ತಾಲಾಪ
(ಈ) ಮಾತುಕತೆ, ಚರ್ಚೆ. ಉದಾ: ಸ್ನೇಹಿತರ ಸಂಗಡ ವಾರ್ತಾಲಾಪದಲ್ಲಿದ್ದ. (ಸಂ. ವಾರ್ತಾ=ಸುದ್ದಿ+ಆಲಾಪ=ಮಾತಾಡುವಿಕೆ)

9. ಆಶ್ವಾಸನ
(ಈ) ದುಃಖಿತರಿಗೆ ಸಮಾಧಾನ ಹೇಳುವುದು, ಭರವಸೆ. ಉದಾ: ರಾಜಕಾರಣಿಗಳ ಆಶ್ವಾಸನಗಳನ್ನು ನಂಬಬೇಡ. (ಸಂ.)

10. ಕೃತ ಕೃತ್ಯ
(ಅ) ಮಾಡಬೇಕಾದ್ದನ್ನು ಮಾಡಿದವ, ಯಶಸ್ವಿ, ಸಫಲ. ಉದಾ: ಮದುವೆ ಮಾಡಿ ಕೃತ ಕೃತ್ಯನಾದ. (ಸಂ. ಕೃತ=ಮಾಡಿದ+ಕೃತ್ಯ=ಮಾಡಬೇಕಾದ್ದು.)

11. ಗಾರು
(ಇ) ಒರಟು, ನಯವಲ್ಲದ್ದು; ದಿಗಿಲು, ಗಾಬರಿ; ಒಣಗುವಿಕೆ. ಉದಾ: ಗಂಡನ ಅಗಲಿಕೆಯಿಂದ ಗಾರಾದವಳು. (ದೇಶ್ಯ)

12. ದೇಹಿ
(ಅ) ಕೊಡೆಂದು ಬೇಡುವುದು. ಉದಾ: ಒಬ್ಬರ ಮುಂದೆ ದೇಹಿ ಎಂದವನಲ್ಲ. (ಸಂ. ದೇಹಿ=ಕೊಡು)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ನಮ್ಮ ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

6- 8 ಸರಿಯಿದ್ದರೆ ... ಸಾಧಾರಣ
9-10 " ... ಉತ್ತಮ
11-12 " ... ಅತ್ಯುತ್ತಮ

ಕಾಡು ಕಡಿದು ಊರು ಮಾಡಿದರು



ಹಿಂದಿನ ಸಂಚಿಕೆಯಲ್ಲಿ.....

ಬಿಸಿಲಿನ ಕಿರಣಗಳಿಗೂ ಭೇದಿಸಲಾಗದಂತಹ 'ಬಿಸಿಲೆ' ಅಭಯಾರಣ್ಯಕ್ಕೆ ಘಟ್ಟದ ಕೆಳಗಿನಿಂದ ಪರಿವಾರವೊಂದು ವಲಸೆ ಬಂದು ನೆಲೆಸುತ್ತದೆ. ಅಪಾರ ನಿಸರ್ಗ ಪ್ರೇಮವನ್ನು ಎದೆಯೊಳಗೆ ಹುದುಗಿಸಿಕೊಂಡ ಹಾಲಜ್ಜ ಪರಿವಾರದ ಹಿರೀಕ. ಅರಣ್ಯದ ಗರ್ಭ ಪ್ರವೇಶಿಸಿ ಆಸರೆಗಾಗಿ ಗುಡಿಸಲುಗಳನ್ನೇನೋ ಕಟ್ಟಿಕೊಂಡರು. ಆದರೆ ವೃಕ್ಷರಾಶಿಯನ್ನು ವಧಿಸಿ ನಿರ್ಮಿಸಿಕೊಂಡ ಗುಡಿಸಲೊಳಗೆ ನೆಮ್ಮದಿಯ ನೆರಳೇನೂ ನೆಲೆಗೊಳ್ಳಲಿಲ್ಲ. ಅಂಬೆಗಾಲಿಟ್ಟು ಆಡುತ್ತಿದ್ದ ಹಾಲುಮುಖದ ಕೂಸು ರಾಧಿಯ ಜೀವವನ್ನು ವಿಷ ಸರ್ಪವೊಂದು ಸೆಳೆದೊಯ್ಯುತ್ತದೆ. ದುಷ್ಟಬುದ್ಧಿಯ ವಿರೂಪಾಕ್ಷನ ನಾಟಕದ ಪಾತ್ರವಾಗಿ ಅವತರಿಸುವ ಖೇಮದ್ರುಮ ನಕಲಿ ಅರಣ್ಯಾಧಿಕಾರಿಯ ವೇಷದಲ್ಲಿ ತಂಡವನ್ನು ಹೀರತೊಡಗುತ್ತಾನೆ. ಅಡವಿಯ ಬದುಕು ತಂದೊಡ್ಡುವ ಕಷ್ಟಕಾರ್ಪಣ್ಯಗಳು, ನಗರ ಜೀವನದ ಕಪಟ ಸಂಚಿಗೆ ಸಂಕೇತವಾಗಿ ಬಂದ ಖೇಮದ್ರುಮ–ಹೀಗೆ ಜಂಜಡದ ಬಲೆಯೊಳಗೆ ಸಿಲುಕುವ ಪರಿವಾರದ ದೈನಂದಿನ ಘಳಿಗೆಗಳೆಲ್ಲ ಅತಂತ್ರದ ಉಯ್ಯಾಲೆಯಲ್ಲಿ ತೂಗತೊಡಗುತ್ತವೆ.

ಉತ್ತರಾರ್ಧ

ಸೊಂಟದ ಮೇಲೆ ಹೊರೆ ಹೊತ್ತು ಬರುತ್ತಿದ್ದ ರಾಣಿಯ ಕಡೆ ಪಾಂಡುವಿನ ದೃಷ್ಟಿ ಹರಿಯಿತು. ಅವಳು ಮತ್ತು ಚಂದಿ, ಈ ದಿನ ಗುಮ್ಮಿಗೆ ಸ್ನಾನಕ್ಕೆ ಹೋಗಿದ್ದರು. ಜೊತೆಗೆ ಕೃಷ್ಣ ಹೋಗಿರಬೇಕು. ಬರುತ್ತ ಒಂದೊಂದು ಬಿಂದಿಗೆ ನೀರು ಹೊತ್ತು ತಂದಿದ್ದಾರೆ. ತಲೆಗೆ ಸ್ನಾನ ಮಾಡಿ ಬಂದಿರಬೇಕು. ಬಟ್ಟೆ ಸುತ್ತಿದ್ದರು.

ಇದ್ದಕ್ಕಿದ್ದ ಹಾಗೆ ಪಾಂದು ಯೋಚಿಸಿದ ಕೈಲಿ ಅಷ್ಟು ಹಣ ಸೇರಿದೆ. ಇಷ್ಟರಲ್ಲಿ ಇನ್ನಷ್ಟು ಸೇರಿಸಬಹುದಿತ್ತು. ಆ ವಿರೂಪಾಕ್ಷನಿಗೆ ತಿಂಗಳು ತಿಂಗಳೂ ಹಣ ಕೊಡದೆ ಹೋಗಿದ್ದರೆ ಇನ್ನಷ್ಟು ಹಣ ಖಂಡಿತವಾಗಿಯೂ ಸೇರುತ್ತಿತ್ತು. ಏನಾದರಾಗಲಿ ಮುಂದೆ ಮಿತಮಿತವಾಗಿ ಸಂಸಾರದ ಖರ್ಚನ್ನು ನಿಭಾಯಿಸಿ ಊರಲ್ಲೋ ಹಾಸನದಲ್ಲೋ ಎಲ್ಲೋ ಒಂದು ಕಡೆ ಒಂದಿಷ್ಟು ಹೊಲ, ತೋಟ ಒಂದು ಮನೆ ಸಂಪಾದಿಸಿಕೊಂಡು ಈ ಅರಣ್ಯ ಬಿಟ್ಟು ಹೋಗಬೇಕು ಎಂದುಕೊಂಡ. ಅಷ್ಟರವರೆಗೆ ಬದುಕು ಸುಗಮವಾಗಿ ನಡೆಯಬೇಕಲ್ಲ. ದೂರದ ಗುಮ್ಮಿಗೆ ನೀರಿಗಾಗಿ ಹೋಗುವ ಬದಲು ಇಲ್ಲೇ ಒಂದು ಬಾವಿಯನ್ನು

ತೋಡಿಸಬಾರದೇಕೆ. ನಮ್ಮ ಪುಣ್ಯಕ್ಕೆ ಸೆಲೆ ಇದ್ದರೆ ನೀರು ಮೇಲಲ್ಲೇ ಸಿಗಬಹುದು ಎಂದು ಯೋಚಿಸಿದ. ಮನಸ್ಸಿಗೆ ಬಂದಷ್ಟೇ ತಡ ಬಾವಿಗೆ ಒಂದು ಜಾಗ ಗುರುತು ಮಾಡಿಕೊಂಡ.

'ಬಿಸಿಲೆ'ಯಲ್ಲಿ ಆಶ್ರಯ ಪಡೆದ ಈ ತಂಡ ತನಗೆ ಬೇಕುಬೇಕಾದಲ್ಲಿ ಕಾಡುಗಳನ್ನು ಧ್ವಂಸ ಮಾಡಿ ಸ್ಥಳವನ್ನು ಆಕ್ರಮಿಸಿಕೊಂಡಿತು. ಸೂರ್ಯನ ಬಿಸಿಲೇ ಕಾಣದ ಬಿಸಿಲೆಯಲ್ಲಿ ಈಗ ಸೂರ್ಯನ ಬೆಳಕು ಯಥೇಚ್ಛವಾಗಿ ದೊರಕುತ್ತಿದೆ. ಹಾಲಜ್ಜನಿಗೆ ಇದು ಇಷ್ಟವಿಲ್ಲ. ಕಾಡುಗಳೆಲ್ಲ ಹಾಳಾದುವು ಎಂದು ಪೇಚಾಡುತ್ತಾನೆ.

''ಕೆಲಸಕ್ಕೆ ಬಾರದ ಚಿನ್ನಸ್ವಾಮಿಯನ್ನು ಕರೆದುಕೊಂಡು ಬಂದೆ, ಕಾಡು ಅನಾವಶ್ಯಕವಾಗಿ ಕಡಿದು ಆ ಜಾಗದಲ್ಲಿ ಅವನು ಬಿತ್ತಿದ್ದು ಇಲ್ಲ ಬೆಳೆದದ್ದು ಇಲ್ಲ. ಮಹಾ ಸೋಂಭೇರಿ'' ಎನ್ನುತ್ತಿದ್ದ.

''ಬೀರಿ ಮುಖ ನೋಡಿ, ಅವನು ನಮ್ಮೊಡನೆ ಹೊರಟಾಗ ಸಮ್ಮತಿ ಕೊಟ್ಟೆ ಈಗ ಯಾಕಾದ್ರು ಕರ್‍ಕೊಂಡು ಬಂದ್ನೋ ಅಂತ ಅನ್ನಿಸ್ತಿದೆ. ಆದ್ರೆ ಬೀರಿ, ಬೀರಿ ಮಕ್ಕಳನ್ನು ನಾವು ಕೈ ಬಿಡೋಕಾಗುತ್ತಾ. ಒಂದು ಮನೆಯವರ ಹಾಗೆ ಹೊಂದಿಕೊಂಡಿದ್ದೋಳು. ಯಾವ ಜನ್ಮದ ಋಣಸಂಬಂಧನೋ. ನಂಗೂ ಒಬ್ಬು ತಂಗಿ ಇದ್ದಿದ್ರೆ, ಅವಳ ಕಷ್ಟಕ್ಕೆ ಆಗ್ತಿರ್ಲಿಲ್ಲ'' ಎಂದು ಪಾಂಡು ಅಂದಾಗ, ಹಾಲಜ್ಜ ಬೇರೆ ಮಾತಿಲ್ಲದೆ ಸುಮ್ಮನಾಗಿದ್ದ. ಈಗ ಪಾಂಡು ಅವನ ತಮ್ಮಂದಿರು ಅವರೆಲ್ಲ ಬಾವಿ ಅಗೆಸುತ್ತಿರುವುದನ್ನು ನೋಡಿ ಹಾಲಜ್ಜ,

''ಇದೇನು ಮಾಡ್ತಿಯೋ ಪಾಂಡು'' ಎಂದಿದ್ದ.

''ಅಜ್ಜ ಬಾವಿ ತೋಡಿಸ್ತಿದ್ದೇನೆ''

''ಅದಂತು ಒಳ್ಳೆ ಕೆಲಸ ಆತು, ಸ್ನಾನಕ್ಕೆ ಆ ಗುಮ್ಮಿಗೆ ಹೋಗಿ ಬರೋಕೆ ನನ್ನಿಂದಾಗ್ತಿರಲಿಲ್ಲ. ಇಷ್ಟಕ್ಕೂ ನೀವಾದ್ರೂ ಎಷ್ಟು ದಿನ ಅಂತ ನೀರು ಹೊರೋಕೆ ಸಾಧ್ಯ.''

''ಅದಕ್ಕೆ ಈಗ ಇಲ್ಲಿ ಬಾವಿ ತೋಡಿಸ್ತರೋದು''

ಸಂಜೆಯ ತಿರುಗಾಟಕ್ಕೆ ಹೊರಟಿದ್ದ ಅಜ್ಜ ಹತ್ತಿರ ಬಂದು ಆಗಲೇ ನಾಲ್ಕಡಿ ಆಳ ಕೊರೆದಿದ್ದ ಬಾವಿ ಒಳಗೆ ಇಣಕಿ ನೋಡಿಕೊಂಡು ಸಂತೋಷಿಸುತ್ತಾ ಕಾಡಿನ ಆ ಎತ್ತರದ ಜಾಗದ ಕಡೆಗೆ ಹೆಜ್ಜೆ ಹಾಕಿದ. ಹಾಲಜ್ಜನಿಗೆ ವಯಸ್ಸಾಗಿದ್ದರೂ ಕೈಕಾಲುಗಳ ಶಕ್ತಿ ಉಡುಗಿದ್ದರೂ, ಕಿವಿ ಸ್ಪಷ್ಟವಿದೆ. ಕಣ್ಣಿನ ದೃಷ್ಟಿಯೂ ನಿಚ್ಚಳವಿದೆ. ಆದ್ದರಿಂದ ಸೂರ್ಯ ಪಶ್ಚಿಮ ದಿಗಂತವಾಗಿ ಮುಳುಗುವವರೆಗೂ ಆ ಜಾಗ ಬಿಟ್ಟು ಕದಲುತ್ತಿರಲಿಲ್ಲ. ಯಾರೆಷ್ಟು ಹೇಳಿದರೂ ಅಜ್ಜ ಅಲ್ಲಿಗೆ ಹೋಗುವುದನ್ನು ನಿಲ್ಲಿಸುತ್ತಿರಲಿಲ್ಲ. ಆ ದಿನ ಪೊಮ್ಮಗ ಬಾವಿ ತೋಡಿಸುತ್ತಿದ್ದಾನೆಂಬ ಸಂಭ್ರಮ ಅಜ್ಜನಿಗೆ. ನೀರು ಜಿನುಗುವ ಜಾಗವಾದ್ದರಿಂದ ನೀರು ಮೇಲೆ ಸಿಗಬಹುದು. ಒಂದಾಳು ಎತ್ತರದಲ್ಲಿ ನೀರು ಸಿಕ್ಕಿದರೂ ಸಿಗಬಹುದು ಎಂದು ಯೋಚಿಸುತ್ತ ಸಂಜೆಯ ಬಿಸಿಲಿಗೆ ಮೈಚಾಚಿ ಹಾಲಜ್ಜ ಆ ಎತ್ತರದ ಜಾಗದಲ್ಲಿ ಕುಳಿತಿದ್ದ. ಇದ್ದಕ್ಕಿದ್ದಂತೆ ಅರಣ್ಯದೊಳಗೆ ಬೆಂಕಿ ಕಾಣಿಸಿಕೊಂಡಿತು. ಅದು ಚೈತ್ರಮಾಸ. ಚೈತ್ರಮಾಸ ಬಂತು ಎಂದರೆ ಕಾಡಿನ ಸೌಂದರ್ಯವೆಲ್ಲ ಕಳೆಗುಂದುತ್ತದೆ. ಮರಗಳ ಎಲೆಗಳೆಲ್ಲ ಉದುರಿ ನೆಲದ ಮೇಲೆಲ್ಲ ತರಗಲೆಗಳೂ ರಾಶಿ ಬಿದ್ದಿರುತ್ತವೆ. ಬೋಳು ಬೋಳಾದ ಮರಗಳು ನಗ್ನ ಸುಂದರಿಯ ನೆನಪನ್ನು ತರುತ್ತವೆ. ಕಾಡಿನ ಒಣ ಕೊಂಬೆಗಳು ಒಂದಕ್ಕೊಂದು ಉಜ್ಜಿಕೊಂಡಾಗ ಉತ್ಪನ್ನವಾಗುವ ಭಾರಿ ಶಾಖದಿಂದ ಬೆಂಕಿ ಉತ್ಪನ್ನವಾಗುತ್ತದೆ. ಅದನ್ನೇ 'ಕಾಳ್ಗಿಚ್ಚು' ಕಾಡಿನ ಬೆಂಕಿ ಎಂದು ಕರೆಯುತ್ತಾರೆ. ಸಣ್ಣಗೆ ಕಂಡು ಆ ಬೆಂಕಿಯನ್ನು ಅಜ್ಜ ಕೂತಲ್ಲೇ ಕೂತು ನೋಡಿದ. ಆ 'ಕಾಳ್ಗಿಚ್ಚು' ತನ್ನ ಕೆನ್ನಾಲಿಗೆಯನ್ನು ಚಾಚಿ ನಭೋಮಂಡಲವನ್ನು ಮುಟ್ಟಿದಂತೆ ಕಂಡಾಗ ಅರಣ್ಯದೊಳಗೆ ಇದ್ದ ಜಿಂಕೆ, ಮೊಲ, ಕಾಡುಕೋಳಿ, ಹಾರುವ ಬೆಕ್ಕು, ಹಕ್ಕಿಪಕ್ಷಿಗಳ ಆರ್ತನಾದ ಮುಗಿಲು ಮುಟ್ಟಿತು. ಹತ್ತಿರದಲ್ಲಿ ಎರಡು ಬಿಳಿ ಮೊಲಗಳು ಬೆಂಕಿಯಲ್ಲಿ ಸುಟ್ಟು ಭಸ್ಮವಾಗಲಿರುವುದನ್ನು ನೋಡಲಾರದೆ ಹಾಲಜ್ಜ ಲಗುಬಗೆಯಿಂದ ಎದ್ದು ಬೆಂಕಿ ಎದ್ದ ಕಾಡಿನ ಭಾಗದೊಳಗೆ ನುಗ್ಗಿ ಬಿಟ್ಟ. ಅವನ ಮನಸ್ಸಿನ ತುಂಬ ತುಂಬಿ

ದ್ದದ್ದು ಬೆಂಕಿಯಲ್ಲಿ ಬಿದ್ದು ಭಸ್ಮವಾಗಲಿರುವ ಜಿಂಕೆ, ಮೊಲಗಳ ಆರ್ತನಾದ, ಅವುಗಳ ಬಚಾವಿಗಾಗಿ ಹಾಲಜ್ಜ ಮುಂದೆ ಮುಂದೆ ನುಗ್ಗಿದ. ಕೈಗೆ ಸಿಕ್ಕಿದ ಎರಡು ಮೊಲಗಳ ಜೊತೆಗೆ ಅವನ ಶರೀರಕ್ಕೂ ಬೆಂಕಿ ತಗುಲಿತು. ಅಜ್ಜ ಬೆಂಕಿ ಬಿದ್ದ ಆ ಜಾಗದಿಂದ ಹೊರ ಬರುವಷ್ಟರಲ್ಲಿ ಪೂರ ಸುಟ್ಟು ಹೋದ.

ಬಾವಿ ತೋಡುವುದರಲ್ಲಿ ಮಗ್ನರಾಗಿದ್ದವರಿಗೆ ಕಾಡಿನ ಒಂದು ಭಾಗದಲ್ಲಿ 'ಕಾಳ್ಗಿಚ್ಚು' ಉತ್ಪನ್ನವಾದ್ದು ಗಮನಕ್ಕೆ ಬರಲೇ ಇಲ್ಲ. ನೀರು ಬಂದ ಸಂಭ್ರಮದಲ್ಲಿ ಗಂಗೆ ಪೂಜೆಗೆ ಅಣಿಯಾಗುತ್ತಿದ್ದ ರಾಣಿಗೆ ಇಷ್ಟರಲ್ಲೇ ದುರಂತವನ್ನು ಎದುರಿಸಬೇಕಾಗಿದೆ ಎನ್ನುವ ಗಮನವಿಲ್ಲ. ಸಂಭ್ರಮದಿಂದ ಅವಳೂ ಆರತಿ ಕುಂಕುಮದ ಭರಣಿಯೊಂದಿಗೆ ಚಂದ್ರಿಯ ಜೊತೆಗೆ ಬಾವಿಯ ಬಳಿಗೆ ಬಂದಳು. ಮೊದಲು ಬಾವಿ ತೋಡಿದ ಯಜಮಾನನ ಹಣೆಗೆ ಕುಂಕುಮ ಇಟ್ಟು, ಬಾವಿಗೂ ಕುಂಕುಮ ಹಾಕಿ ಇಬ್ಬರೂ ಸೇರಿ ಗಂಗೆಗೆ ಆರತಿ ಬೆಳಗಿದರು. ಅಷ್ಟರಲ್ಲಿ ಬೀರಿ ಓಡುತ್ತ ಓಡುತ್ತ ಬಂದು,

''ರಾಣಿಯಕ್ಕ ಕಾಡಿನ ಆ ಭಾಗಕ್ಕೆ ಕಾಳ್ಗಿಚ್ಚು ಹತ್ತಿಕೊಂಡಿದೆ'' ಎಂದಳು. ಅವಳು ಅಷ್ಟೆಂದದ್ದೇ ಎಲ್ಲರ ದೃಷ್ಟಿ ಆ ಕಡೆಗೆ ಹರಿಯಿತು. ಪಾಂಡು ರಾಣಿಯೊಂದಿಗೆ ಹಾಲಜ್ಜನನ್ನು ವಿಚಾರಿಸಿಕೊಂಡ.

''ಹಾಲಜ್ಜ ಕಾಡಿನ ಆ ಕಡೆ ಹೋದವನು ಬಂದಿಲ್ಲ'' ಎಂದಳು ರಾಣಿ. ಅವಳು ಅಷ್ಟು ಹೇಳುತ್ತಲೇ ಆ ಕಡೆಗೆ ಓಡತೊಡಗಿದಳು. ಅವಳ ಹಿಂದೆ ಮತ್ತೆ ಎಲ್ಲರೂ ಕೆಸರು ಮಣ್ಣಿನ ಕೈಕಾಲುಗಳನ್ನು ಸಹ ತೊಳೆಯದೆ ಅತ್ತ ಓಡಿದರು.

'ಹಾಲಜ್ಜ' ಗಿರಿ ಕೂಗಿದ.

ಅವನ ಕೂಗು ಕಾಡಿನಲ್ಲಿ ಪ್ರತಿಧ್ವನಿಸಿತೇ ಹೊರತು ಹಾಲಜ್ಜನಿಂದ ಪ್ರತಿಕ್ರಿಯೆ ಬರಲಿಲ್ಲ.

''ಓ! ..... ಹಾಲಜ್ಜ'' ಈಗ ಗಿರಿ ಮತ್ತಷ್ಟು ಗಟ್ಟಿಯಾಗಿ ಕೂಗಿದ.

ಊಹೂಂ ..... ಹಾಲಜ್ಜ ಹಿಂದಕ್ಕೆ ಬರಲಾರದ ಊರಿಗೆ ಪ್ರಯಾಣ ಬೆಳೆಸಿದ್ದಾನೆಂದು ಇವರಿಗೇನು ಗೊತ್ತು, ಹಾಲಜ್ಜನಿಂದ ಪ್ರತಿಕ್ರಿಯೆ ಬರದಿದ್ದಾಗ, ಅನುಮಾನದಿಂದ ಉಸಿರು ಬಿಗಿಹಿಡಿದು ಓಡಿದರು ಎಲ್ಲ. ಹಾಲಜ್ಜ ದಿನಾ ಕುಳಿತುಕೊಳ್ಳುತ್ತಿದ್ದ ಜಾಗದಲ್ಲಿ ಅವನಿರಲಿಲ್ಲ. ಅಲ್ಲೇ ಮಗ್ಗುಲಿಗೆ ದೃಷ್ಟಿ ಹರಿಸಿದರು. ಬೆಂಕಿಯ ಜ್ವಾಲೆ ಈಗ ನಂದಿದೆ. ಅಲ್ಲೇ ಬೆಂಕಿಯಲ್ಲಿ ಸುಟ್ಟು ಕರಕಲಾದ ಹಾಲಜ್ಜನ ಹೆಣ ಸಿಕ್ಕಿತು. ಅವನು ತನ್ನೆರಡು ಕೈಗಳಲ್ಲಿ ಮೊಲಗಳನ್ನು ತಬ್ಬಿಕೊಂಡಿದ್ದ. ಎಲ್ಲರ ಕಣ್ಣಲ್ಲಿ ನೀರಿಳಿಯಿತು, ಹಾಲಜ್ಜನಿಗೆ ಪಶುಪಕ್ಷಿ ಪ್ರಾಣಿಗಳಲ್ಲಿದ್ದ ಪ್ರೀತಿ ಕಾಡು ಮರಗಳಲ್ಲಿದ್ದ ಮಮಕಾರ ಈಗರ್ಥವಾಯ್ತು ಎಲ್ಲರಿಗೂ. ಕಾಡು ಕಡಿದು ಊರು ಮಾಡಬೇಡಿ ಎಂದು ಅಜ್ಜ ಗೋಗರೆದು ಬಾವಿಗಾಗಿ ಮರಗಳನ್ನು ಕಡಿದಾಗ, ಮನೆಗಾಗಿ ಮರಗಳನ್ನು ಕಡಿದಾಗ, ಗಾಂಜಾ ಬೆಳೆಸುವುದಕ್ಕಾಗಿ ಮರಗಳನ್ನು ಕಡಿದಾಗ, ಆ ಮಾತು ಕಿವಿಗೆ ಬೀಳಲಿಲ್ಲವೋ ಎಂಬಂತೆ ನಿರ್ಲಕ್ಷಿಸಿದ್ದರು. ಈಗ ಅವನ ಮಾತು ನೆನಪಿಗೆ ಬಂದು ಅವರೆಲ್ಲರ ಹೃದಯ ಒಡೆದು ನುಚ್ಚುನೂರಾದಂತೆ ವ್ಯಥಿಸಿತು. ಪಾಂಡು ಎಲ್ಲರಿಗೆ ಕೇಳುವ ಹಾಗೆ ಹೇಳಿದ.

''ಹಾಲಜ್ಜ ಇನ್ನು ನಾವು ಈ ಕಾಡಿನ ಮರಗಳನ್ನು ಮುಟ್ಟುವುದಿಲ್ಲ. ಕಾಡು ಕಡಿದು ಊರು ಮಾಡುವುದಿಲ್ಲ'' ಎಂದ. ಅಲ್ಲೇ ಅಜ್ಜನ ಹೆಣವನ್ನು ಸುಟ್ಟು ಬೂದಿ ಮಾಡಿ ಬಂದರು ಮನೆಗೆ. ರಾಣಿಯ ಮಗು ಇನ್ನೂ ಎದ್ದಿರಲಿಲ್ಲ. ಸದಾಕಾಲವೂ ಗೂರಲು ರೋಗದಲ್ಲಿ ನರಳುತ್ತ ಚೇತರಿಸಿಕೊಳ್ಳಲಾರದೆ ಮಲಗಿಯೇ ಇರುತ್ತಿದ್ದ ಸುಬ್ರಮಣಿಗೆ ಅಜ್ಜ ಸತ್ತ ಸುದ್ದಿಯನ್ನೇ ತಿಳಿಸಲಿಲ್ಲ.

ಹಾಲಜ್ಜನನ್ನು ಕಳೆದುಕೊಂಡ ಮೇಲೆ ಅವರೆಲ್ಲ ಕ್ಷಣ ಕ್ಷಣಕ್ಕೂ ಅವನನ್ನು ನೆನೆಯುತ್ತಿದ್ದರು. ರಾಣಿ ಬಾವಿಯಲ್ಲಿ ನೀರು ಕಂಡ ದಿನ ಕಾಡು ಕುರುಬರನ್ನು ಕರೆದು ಹೋಳಿಗೆ ಅನ್ನ ಮಾಡಿ ಬಡಿಸಬೇಕೆಂದುಕೊಂಡಿದ್ದಳು. ಸಂತೋಷದ ಸಮಾರಂಭವವನ್ನು ಮುದದಿಂದ ಕಳೆಯಬೇಕು ಎಂದುಕೊಂಡಿದ್ದರು. ಆದರೆ ಅಲ್ಲಿ ಆದದ್ದೇ ಬೇರೆ. ಹಾಲಜ್ಜನ ಸಾವನ್ನು ಆ ರೀತಿ ಕಾಣುತ್ತೇವೆ ಎಂದು ಯಾರೂ ಅಂದುಕೊಂಡಿರ

ಲಿಲ್ಲ. ಈ ನೋವು ಹಸಿಹಸಿಯಾಗಿರುವಾಗಲೇ ವಿರೂಪಾಕ್ಷ, ಖೇಮದ್ರುಮವನನ್ನು ಕರೆದು ಕೊಂಡು ಬಿಸಿಲಿಗೆ ಬಂದ. ಅವನನ್ನು ದೂರದಲ್ಲಿ ನೋಡುತ್ತಿದ್ದ ಹಾಗೆ,

''ಅಪ್ಪ ಆ ವಿರೂಪಾಕ್ಷ ಕೊನೆಗೂ ಅರಣ್ಯಾಧಿ ಕಾರಿಗಳನ್ನು ಕರೆದುಕೊಂಡು ಬಂದಿರಬೇಕು. ಅದೋ ನೋಡು ಎಂದು ಗಿರಿ ಅನ್ನುತ್ತಿದ್ದಂತೆಯೆ ಗುಡಿಸಲ ಹತ್ತಿರಕ್ಕೆ ಬಂದ ವಿರೂಪಾಕ್ಷ. ಈಗ ಆ ಅರಣ್ಯಾಧಿಕಾರಿ ತನ್ನನ್ನು ಅರಣ್ಯ ಬಿಟ್ಟು ಹೋಗಲು ಹೇಳಿದರೆ ಏನು ಮಾಡುವುದು, ದೇವರೇ ಈ ಮಕ್ಕಳನ್ನು, ಕಾಪಿಲೆ ಮಲಗಿರುವ ಅಪ್ಪನನ್ನು ಕರೆದುಕೊಂಡು ಎಲ್ಲಿಗೆ ಹೋಗಲಿ. ಇಷ್ಟರವರೆಗೆ ಅಲೆಮಾರಿ ಜೀವನ ಕಷ್ಟವಾಗಿ ಕಾಣಲಿಲ್ಲ. ಇನ್ನು ವಯಸ್ಸು ಕ್ಷೀಣಿಸುತ್ತಿದ್ದ ಹಾಗೆ ಅಲೆಮಾರಿ ಬದುಕಿಗೆ ಜೀವ ತಡೆಯದೇ ಹೋಗುತ್ತದೆ, ಅವನೇನಾದರೂ ಲಂಚಕ್ಕೂ ಬಗ್ಗದೇ, ಏಳಲೇಬೇಕು ಎಂದರೆ ಎಂದು ಯೋಚಿ ಸುತ್ತಿರಬೇಕಾದರೆ ವಿರೂಪಾಕ್ಷ ಹೇಳಿದ.

''ನೋಡು ಪಾಂಡು ಇವರೇ ಅರಣ್ಯಾಧಿಕಾರಿ ಖೇಮದ್ರುಮ'' ಇದೆಂತಹ ಹೆಸರು ನಮ್ಮಂತಹ ವರ ಬಾಯಿಯಿಂದ ಉಚ್ಚರಿಸಲಾರದ ಹೆಸರು. ನೆನಪಿನಲ್ಲೂ ಉಳಿಯಲಾರದ ಹೆಸರು. ಖೇಮ ದ್ರುಮ ಅವನು ಒಂದೆರಡು ಸಾರ ಮನಸ್ಸಿನಲ್ಲಿ ಹೇಳಿಕೊಂಡವನು, ''ಬನ್ನಿ ಸ್ವಾಮಿ ಕುಳಿತು ಕೊಳ್ಳಿ'' ಎಂದ.


''ಅವರು ಕೂತ್ಕೊಳ್ಳಕ್ಕೆ ಬರ್ಲಿಲ್ಲ ನಿಮ್ಮನ್ನು ಈ ಅರಣ್ಯದಿಂದ ಹೊರಗೆ ದಬ್ಬಲು ಬಂದಿದ್ದಾರೆ.''

''ಸ್ವಾಮಿ ನಾವು ಮಕ್ಕಳೊಂದಿಗರು. ನೀವು ಇಲ್ಲಿಂದ ನಮ್ಮನ್ನು ಕಳುಹಿಸಿದರೆ, ನಾವು ಎಲ್ಲಿ ಹೋಗಿ ಬದುಕಬೇಕು. ಊರಲ್ಲಿ ನಮಗೆ ಜಾಗ ಕೊಡುವವರಾರು? ನಮಗೆ ಮನೆಮಠ ಒಂದೂ ಇಲ್ಲದ್ದಕ್ಕೆ ಇಲ್ಲಿಗೆ ಬಂದ್ವು. ನೀವು ಕಾಡು ಕಡಿ ಬೇಡಿ ಅಂದ್ರೆ ಇನ್ನು ಮುಂದೆ ಮುಟ್ಟೋದಿಲ್ಲ.''

''ಇದುವರೆಗೆ ಆದ ನಷ್ಟಕ್ಕೆ ಯಾರು ಹೊಣೆ''

''ಸ್ವಾಮಿ ನಾವು ಮಕ್ಕಳೊಂದಿಗರು''

''ಇರಬಹುದಯ್ಯ ಅದೆಲ್ಲ ಸರ್ಕಾರ ಕೇಳೋದಿಲ್ಲ'' ಖೇಮದ್ರುಮ ವಿರೂಪಾಕ್ಷನ ಮುಖ ನೋಡಿದ.


ನಿನ್ನ ಅಕ್ಕನ ಹತ್ತಿರ ಈ ಪತ್ರವನ್ನು ಕೊಡುತ್ತೀಯಾ .. ನಾಲಕ್ಕಾಣೆ ಕೊಡ್ತೀನಿ!

ತಿಂಗಳಿಗೆ ಇಷ್ಟು ಅಂತ .... ಒಟ್ಟಿಗೆ ಕೊಟ್ಟುಬಿಡಿ!

''ಈ ಅರಣ್ಯ ನಿಮ್ಮಪ್ಪನ ಸೊತ್ತಲ್ಲ, ಇಲ್ಲಿರೋ ಸಂಪತ್ತು ನಿಮಗೆ ಸೂರೆ ಬಿಟ್ಟಿಲ್ಲ ....''

''ಸ್ವಾಮಿ ಈ ಅರಣ್ಯದಿಂದ ನಾವು ಸುಖಪಟ್ಟಿರೋದು ಅಷ್ಟರಲ್ಲೇ ಇದೆ. ಇಲ್ಲಿ ನಾವು ಅನುಭವಿಸುತ್ತಿರುವ ಕಷ್ಟ ನಮಗೇ ಗೊತ್ತು. ಇಲ್ಲಿ ಬಂದು ನೆಲೆಸಿದ್ವು, ನಮ್ಮ ಕೈ ಮಗು ರಾಧ ಹಾವು ಕಡಿದು ಸತ್ತೋಯ್ತು. ಮನೆಗೆ ಎರಡು ಆಡು ಇರಲಿ ಅಂತ ತಂದ್ವು, ಅದರಲ್ಲಿ ಒಂದು ಆಡನ್ನು ಚಿರತೆ ಕೊಂದು ಹಾಕ್ತು. ಮೊನ್ನೆ ಕಾಳ್ಗಿಚ್ಚಿಗೆ ನಮ್ಮಜ್ಜ ಬಲಿಯಾದ'' ಎಂದು ಹೇಳುತ್ತ ಪಾಂಡು ಕಣ್ಣೊರೆಸಿಕೊಂಡ.

''ಅದೆಲ್ಲ ನಮ್ಮ ಹತ್ರ ಯಾಕೆ ಹೇಳೋಕೆ ಬರ್ತಿರ್ರೋ. ಕಾಡು ಅಂದ್ಮೇಲೆ ಕಾಳ್ಗಿಚ್ಚು ಇರುತ್ತೆ. ಹುಲಿ ಚಿರತೆಗಳೂ ಇರುತ್ವೆ, ನಿಮ್ಮನ್ನಿಲ್ಲಿವಾಸ ಮಾಡಿ ಅಂತ ಯಾರೂ ಹೇಳ್ಲಿಲ್ವಲ್ಲ'' ಎಂದು ಖೇಮದ್ರುಮನ ಕಡೆ ತಿರುಗಿ ಹೇಳಿದ ವಿರೂಪಾಕ್ಷ.

''ನಿಮ್ಮನ್ನು ಹೊರಗೆ ಹಾಕೋಣ ಅಂತ ಬಂದ್ವು ಈಗೇನು ಮಾಡ್ತೀರ'' ಎಂದು ಮೂಲ

ಮಾತಿಗೆ ಬಂದ ಖೇಮದ್ರುಮ.

''ಸ್ವಾಮಿ ಮೊದಲೇ ಹೇಳಿದೆ ನಾವು ಬಡವ್ರು, ನಮ್ಮನ್ನು ನೀವು ಇಲ್ಲಿಂದ ಹೊರಗೆ ಕಳಿಸಿದ್ರೆ ನಾವೆಲ್ಲಿ ಹೋಗಬೇಕು''

''ಹಾಗಾದ್ರೆ ಒಂದು ಕೆಲಸ ಮಾಡು ಈಗ ನಿನ್ನ ಹತ್ರ ಎಷ್ಟಿದೆಯೋ ಅಷ್ಟು ಕೊಟ್ಟುಬಿಡು'' ಎಂದ ಖೇಮದ್ರುಮ.

''ಸ್ವಾಮಿ ತಿಂಗಳ ಕೊನೆಯವರೆಗೆ ಖರ್ಚಿಗೆ ಇರಲಿ ಅಂತ ಒಂದಿನ್ನೂರು ಇಟ್ಟಿದ್ದೆ. ಅದು ಬಿಟ್ಟರೆ ನನ್ನ ಹತ್ತಿರ ಒಂದು ಕವಡೆಕಾಸು ಇಲ್ಲ.''

''ಇರೋದನ್ನೇ ಕೊಡು'' ಎಂದ ಖೇಮ ದ್ರುಮ.

''ಇನ್ನು ಮೇಲಿಂದ ತಿಂಗಳು ತಿಂಗಳು ನೀವು ಮುನ್ನೂರು ರೂಪಾಯಿ ಅಂಗಡಿಗೆ ತಂದುಕೊಡ ಬೇಕು. ಅರಣ್ಯಾಧಿಕಾರಿ ಪ್ರತಿತಿಂಗಳೂ ಅರಣ್ಯ ಮೊಳಗೆ ಬರೋ ಹಾಗಿಲ್ಲ. ಎಲ್ಲಾದರೂ ಯಾರಾ ದರೂ ಕಂಡರೆ ಅನುಮಾನ ಬರುತ್ತೆ. ಆಮೇಲೆ ನಿಮಗೂ ಉಳಿಗಾಲವಿಲ್ಲ ಅವರಿಗೂ ...'' ಎಂದು ವಿರೂಪಾಕ್ಷ ಹೇಳಿದ.

''ಆಗಲಿ ಸ್ವಾಮಿ'' ಎಂದ ಪಾಂಡು. ಅವರಿ ಬ್ಬರು ಮತ್ತೆ ಚಿನ್ನಸ್ವಾಮಿಯ ಗುಡಿಸಲಿಗೆ ಹೋದರು. ಖೇಮದ್ರುಮನನ್ನು ನೋಡಿದರೆ ಅವನು ಅರಣ್ಯಾಧಿಕಾರಿ ಅಲ್ಲ ಎಂದು ಹೇಳುವ ಹಾಗಿಲ್ಲ. ಒಳ್ಳೆ ಬಟ್ಟೆ ಬರೆ ತೊಟ್ಟಿದ್ದ. ಕತ್ತಿಗೆ ಟೈ, ಕಾಲಿಗೆ ಬೂಟ್ಸು ಧರಿಸಿದ್ದ. ಅವನು ತಮ್ಮ ಗುಡಿಸ ಲತ್ತ ಬರುತ್ತಿರುವುದನ್ನು ನೋಡಿ ಜೀರಿಯ ಎದೆ ಹೊಡೆದುಕೊಳ್ಳತೊಡಗಿತು. ಗಂಡ ದುಡಿದರೆ ತಾನೇ ಸಂಪಾದಿಸಲು, ಹಾಗೆಂದು ಹೇಳಿದರೆ ಅವನು ನಂಬಬೇಕಲ್ಲ ಮನೆಯ ಮುಂದೆ ಬೆಳೆ ಸಿದ್ದ ಗಾಂಜಾ ತನ್ನ ಮತ್ತು ಮಕ್ಕಳ ಕಷ್ಟದ ಫಲ. ಅವಳ ಕಣ್ಣಲ್ಲಿ ಆಗಲೇ ನೀರು ತೊಟ್ಟಿಕ್ಕಿತು. ಖೇಮದ್ರುಮನ ಗಡಸು ಮಾತಿಗೆ ಚಿನ್ನಸ್ವಾಮಿ ಉತ್ತರಿಸದೆ ಸುಮ್ಮನೆ ಕುಳಿತಿದ್ದ.

''ಏಯ್ ಏನೋ ಕಿವಿ ಕೇಳಿಸದವನ ಹಾಗೆ ಕುಳಿತಿದ್ದೀಯ, ಎಳೆದು ದಬ್ಬಬೇಕೇನು ಕಾಡಿ ನಿಂದ ಹೊರಗೆ'' ಎಂದ.

''ಬೇಡಿ ಸ್ವಾಮಿ'' ಎಂದು ಬಾಯಿಗೆ ಸೆರಗು ಹಿಡಿದು ಬಿಕ್ಕಿದಳು ಜೀರಿ.

ಹಾಗಾದರೆ ಒಂದಿನ್ನೂರು ರೂಪಾಯಿ ಈಕ ಡೆಗೆ ಎಸಿ''

''ನನ್ನ ಹತ್ರ ಹಣ ಇದ್ರಲ್ವೆ ನಿಮಗೆ ಎಸೆ ಯೋಕೆ''

''ಸ್ವಾಮಿ ಅವರೆಲ್ಲಿ ದುಡೀತಾರೆ ಅಂದ್ಕೊಂಡ್ರಿ. ದುಡಿಯೋಳು ನಾನು ಈ ಹುಡುಗ್ರು, ಕೈಲಿ ಕವಡೆ ಕಾಸಿಲ್ಲ. ದಿನದ ಬದುಕು ನಡೆಸೋದೆ ಕಷ್ಟವಾಗಿದೆ''

''ಅದೇನೋ ನನಗೆ ಗೊತ್ತಿಲ್ಲ. ಪಾಂಡು ಇನ್ನೂರು ಕೊಟ್ಟಿದ್ದಾನೆ. ನೀವು ಒಂದೈವತ್ತು ಕಡಿಮೆ ಮಾಡಿ ಕೊಡಿ.''

''ಪಾಂಡು ಇನ್ನೂ ಹೆಚ್ಚಿಗೆ ಕೊಡಬಹು ದಿತ್ತು. ನಮ್ಮದನ್ನು ಹೋಗಿ ಅವನ ಹತ್ತಿರವೇ ವಸೂಲಿ ಮಾಡಿ. ನಾವೇನು ಸುಮ್ನೆ ಬರಲಿಲ್ಲ. ಅವನು ಕರ್ಕೊಂಡು ಬಂದ ನಾವು ಬಂದ್ವಿ'' ಎಂದ ಚಿನ್ನಸ್ವಾಮಿ.

''ಇಲ್ಲ ಸ್ವಾಮಿ ಅವನು ಹೇಳೋದೆಲ್ಲ ಸುಳ್ಳು. ಅವರೇನು ನಮ್ಮನ್ನ ಕರೀಲಿಲ್ಲ. ನಾವಾಗಿ ನಾವು ಅವರ ಹಿಂದೆ ಹೊರಟು ಬಂದ್ವು.''

''ಅದೆಲ್ಲ ಪುರಾಣ ನಮಗೆ ಬೇಡ. ನಮಗೆ ಬೇಕಾಗಿರೋದು ಹಣ. ಇಲ್ದೆ ಹೋದ್ರೆ ಈ ಗುಡಿ ಸಲು ಕೆಡವಿ ಈಗ್ಲೆ ನಿಮ್ಮನ್ನ ಹೊರಗೆ ಹಾಕ್ತೇವೆ'' ಎಂದ ಖೇಮದ್ರುಮ.

ಜೀರಿ ದಿಕ್ಕು ತೋಚದೆ ಗೋಳೋ ಎಂದು ಅಳತೊಡಗಿದಳು.

ಲಗುಬಗೆಯಿಂದ ಒಳಗೆ ಹೋದ ಪಾಂಡು, ಕಳೆದ ಹದಿನೈದು ದಿನದ ಹಿಂದೆ ತೆಗೆದಿದ್ದ ತಾಜಾ ಜೇನುತುಪ್ಪದ ಎರಡು ಬಾಟಲಿಗಳನ್ನು ಹೊರಗೆ ತೆಗೆದುಕೊಂಡು ಬಂದು,

''ಇದೋ ಇಲ್ಲಿ ಬನ್ನಿ'' ಎಂದು ಅವರನ್ನು ಕರೆದ. ಅವರು ಹತ್ತಿರ ಬರುತ್ತಲೆ,

''ಸ್ವಾಮಿ ಆ ಹೆಣ್ಣು ಮಗಳನ್ನು ಗೋಳಾಡಿಸ ಬೇಡ. ಆ ಪಾಪಿ ಒಂದು ನಯಾಪೈಸೆಯ ಕೆಲಸ ಮಾಡೋದಿಲ್ಲ ಮೂರು ಹೊತ್ತು ಬೀಡಿ ಸೇದ್ತಾ ಕೂತಿರ್ತಾನೆ. ಬೇಕಾದ್ರೆ ನೀವೇ ಒಂದಿನ ಎಲ್ಲಾ ಕೂತು ನೋಡಿ, ದುಡಿಯೋದೆಲ್ಲ ಆ ಹೆಣ್ಣು



''ನೋಡಿ, ಸುಮ್ನೆ ಗಲಭೆ ಅಂದ್ರೆ ಬರೋಲ್ಲ ನಾವು ..... ಕನಿಷ್ಠ ಇಬ್ಬರಾದರೂ ಸತ್ತ ಮೇಲೆ ಹೇಳಿ ಒಟ್ಟಿಗೇ ಬರ್ತೀವಿ ....''

ಮಗಳೇ ನೋಡಿ. ನಿನ್ನೆ ನಾನು ಈ ಬಾವಿ ತೋಡಿಸಿದೆ. ಇಷ್ಟು ದಿನ ನಾಲ್ಕು ಫರ್ಲಾಂಗ್ ದೂರದಿಂದ ನೀರು ಹೊರಬೇಕಾಗಿತ್ತು. ಹೆಣ್ಣು ಹೆಂಗಸು ಎಷ್ಟು ಕಷ್ಟಪಡಬಹುದು ನೀವೇ ಹೇಳಿ''

''ಅದೆಲ್ಲ ಕೇಳೋಕೆ ನಾವು ಇಲ್ಲಿಗೆ ಬಂದಿಲ್ಲ. ಹಣ ಕೊಡೋಕೆ ಆಗ್ದೆ ಹೋದ್ರೆ. ಇನ್ನೆರಡು ದಿನ ಟೈಂ ಕೊಡ್ತೇವೆ ಅವರು ಗುಡಿಸಲು ಖಾಲಿ ಮಾಡ್ಲಿ'' ಎಂದ ಖೇಮದ್ರುಮ.

''ನೋಡಿ ಸ್ವಾಮಿ ಅವರ ಪರವಾಗಿ ಅಷ್ಟೋ ಇಷ್ಟೋ ನಾನೇ ಕೊಡ್ತೇನೆ. ಊರು ಬಿಟ್ಟು ಬರೋವಾಗ ಒಟ್ಟಿಗೆ ಬಂದ್ವು. ಮಕ್ಕಳೊಂದಿಗರು ಕೈ ಬಿಡೋ ಹಾಗಿಲ್ಲ. ಈಗ ಈ ಎರಡು ಬಾಟಲು ತಾಜಾ ಜೇನುತುಪ್ಪ ಇದೆ. ಇದನ್ನೆ ತಗೊಂಡು ಹೋಗಿ ಅವರನ್ನು ಬಿಟ್ಟು ಬಿಡಿ'' ಎಂದ.

''ಅಬ್ಬಬ್ಬ ಎಂದರೆ ಇದು ನೂರು ರೂಪಾಯಿ ಬಾಳಿದರೆ ಹೆಚ್ಚು,'' ಅವನ ಹಣವನ್ನು ನೀನೇ ಮುಟ್ಸೋ ಹಾಗಿದ್ರೆ ತಿಂಗಳಿಗೆ ನಾನ್ನೂರು ನೀನೇ ಕೊಟ್ಟುಬಿಡು ಎಂದ ಖೇಮದ್ರುಮ.

''ಆಯ್ತು'' ಎಂದು ಹೇಳಿ ಅವರನ್ನು ಸಾಗ ಹಾಕಿದ ಪಾಂಡು. ಹಾಲಜ್ಜನನ್ನು ಕಳೆದುಕೊಂಡಿದ್ದ ಮನಸ್ಸು ಪೂರಾ ಸೋತಿತ್ತು, ಆಗಲೇ ಮತ್ತೆ ಈ ಅಧಿಕಾರಿಯ ಕಿರಿ ಕಿರಿ ಕೇಳುತ್ತ ನಿಲ್ಲಲು ಸಾಧ್ಯವಿಲ್ಲದ್ದಕ್ಕಾಗಿ ಆಯ್ತು ಎಂದು ಒಂದೇ ಮಾತಿಗೆ ಒಪ್ಪಿಕೊಂಡು ಅವನನ್ನು ಸಾಗ ಹಾಕಿದ. ಅವರಿಬ್ಬರು ಅತ್ತ ಹೋಗುವುದರಲ್ಲೇ ಚಿನ್ನಸ್ವಾಮಿ, ಪಾಂಡುವಿನ ಮನೆಗೆ ಬಂದು ಬಾಯಿಗೆ ಬಂದಂತೆ ಬೈಯತೊಡಗಿದ.

''ನಾನು ಅಷ್ಟು ವರ್ಷ ನಿಮ್ಮ ಜೊತೆಗೆ ದುಡ್ದೆ''

''ನೀನೇನು ದುಡಿದಿದ್ದೀಯ ಅಂತ ಮಾತಾಡ್ತೀಯ. ನಿನ್ನ ಹೆಂಡ್ತಿ ಬೀರಿ ದುಡಿದ್ಲು ನಿಜ. ಅದಕ್ಕಾಗಿ ನನ್ನ ಹೆಂಡತಿ ನಿನಗೂ ನಿನ್ನ ಹೆಂಡ್ತಿ ಮಕ್ಳಿಗೂ ವಂಚನೆ ಇಲ್ಲದೆ ಊಟಕ್ಕಿಟ್ಲು. ಅಲ್ಲಿಗಲ್ಲಿಗೆ ಸರಿಹೋಯ್ತಲ್ಲ'' ಎಂದ.

''ಬೀರಿ ನನ್ನ ಹೆಂಡ್ತಿ, ಅವಳು ದುಡಿದ್ರೇನು ನಾನು ದುಡಿದ್ರೇನು. ಈಗ ನೀನು ನನಗೆ ಕೊಡಬೇಕಾದ ಬಾಬ್ತು ಕೊಟ್ರೆ ಸರಿ. ಬೇಕಾದಷ್ಟು ದುಡಿದು ಸಂಪಾದಿಸಿದ್ದೀಯ. ಅರಣ್ಯಾಧಿಕಾರಿಗೆ ಪುಕ್ಕಟೆ ಕೊಟ್ಟು ಕಳಿಸಿದೆ. ಅದೇ ಹಣ ನನಗೆ ಕೊಟ್ಟಿದ್ರೆ ಆಗ್ತಿರ್ಲಿಲ್ವ'' ಎಂದ.

''ಅರಣ್ಯಾಧಿಕಾರಿಗೆ ಕೊಡದೆ ಹೋದ್ರೆ ಅವನು ಕತ್ತು ಹಿಡಿದು ನಮ್ಮನ್ನು ಹೊರಹಾಕ್ತಾನೆ. ಆಮೇಲೆ ನಾವೆಲ್ಲಿ ಹೋಗೋಣ. ನನ್ನ ಹತ್ರ ಇದ್ದು ಕೊಡಲಿಲ್ಲ. ಸಂಸಾರದ ಖರ್ಚಿಗೆ ಇಟ್ಟುಕೊಂಡದ್ದು ಕೊಟ್ಟೆ'' ಎಂದ.

''ನಿಮಗೇನು ಬಂದಿದೆ, ಅವರಾಗೋದಕ್ಕೆ ನಿಮ್ಮನ್ನು ಸಹಿಸಿಕೊಂಡಿದ್ದಾರೆ. ನಡೀರಿ'' ಎಂದು ಅವನ ರಟ್ಟೆ ಹಿಡಿದು ಬೀರಿ ಎಳೆದುಕೊಂಡು ಹೋದಳು. ಚಿನ್ನಸ್ವಾಮಿ ವಟಗುಟ್ಟುತ್ತಲೇ ಅವಳ ಹಿಂದೆ ಹೋದ. ಹಾಲಜ್ಜ ಇದ್ದಿದ್ದರೆ ಇಷ್ಟು ಹೊತ್ತಿಗೆ ಏನಾದರೊಂದು ಮಾತು ಹೇಳಬೇಕಿತ್ತು. ಮತ್ತೆ ಅಪ್ಪನ ಗತಿಸಿದ ನೆನಪು ಬಂದು ಆ ಹೃದಯವಿದ್ರಾವಕ ದೃಶ್ಯ ಕಣ್ಣಿಗೆ ಕಟ್ಟಿದಂತಾಗಿ ಪಾಂಡುವಿನ ಕಣ್ಣು ಮಂಜುಗೂಡಿತು. ಅವನು ರಾಣಿಯ ಕಡೆ ತಿರುಗಿ ಹೇಳಿದ.

''ನೋಡು ರಾಣಿ ಇನ್ಮೇಲಿಂದ ಕಾಡು ಕಡೀಬಾರದು. ವನದೇವಿ ಸಿಟ್ಟಾಗಿದ್ದಾಳೆ. ಎಲ್ಲಾ ಕಡೆಯಿಂದ್ಲೂ ಮನಸ್ಸಿಗೆ ಒಂದು ರೀತಿ ಕಿರಿ ಕಿರಿ ಆಗಿದೆ. ಇರೋದ್ರಲ್ಲೇ ಹೊಂದಿಸಿಕೊಂಡು ಹೋಗಬೇಕು ಬಾವಿ ತೋಡಿಸಿದ್ದಾಯ್ತು ಪಂಪು ಸೆಟ್ಟು ಹಾಕ್ಸಿ, ಇರೋ ಜಾಗದಲ್ಲೇ ಒಂದಿಷ್ಟು ತರಕಾರಿ ಬೆಳೆಯೋಣ ಹಣ ಕೈ ಸೇರಿತು ಅಂದ್ರೆ ದುಂದು ವೆಚ್ಚ ಮಾಡೋ ಹಾಗಿಲ್ಲ. ಸ್ವಲ್ಪ ಸ್ವಲ್ಪ ಸೇರ್ಸಿ ಒಂದು ತೋಟ ಹೊಲ ಮನೆ ಕೊಂಡ್ಕೊಂಡು ಈ ಅರಣ್ಯ ಬಿಟ್ಟು ಹೋಗಬೇಕು'' ಎಂದ.

ರಾಣಿಯ ಕಣ್ಣು ಅರಳಿತು. ಹಾಲಜ್ಜ ತೋಟ ಮಾಡಲಿಲ್ಲ. ಮಾವ ಅವನು ಪರಗದ್ದೆ ಹೊಲಮನೆಗಾಗಿ ದುಡಿದು ಹಣ್ಣಾದ. ಊರು ಬಿಟ್ಟು ಬಂದ ತನ್ನ ಗಂಡ ಭಾರಿ ದೊಡ್ಡ ಆಶಾಸೌಧ ಕಟ್ಟುತ್ತಿದ್ದಾನೆ. ಎಲ್ಲಾ ಕೈಗೂಡಿದರೆ ಯಾಕಾಗಬಾರದು ಎಂದುಕೊಂಡಳು.

''ಈ ಮಾತು ನನ್ನ ನಿನ್ನಲ್ಲೇ ಇರಲಿ. ಕಿವಿಯಿಂದ ಕಿವಿಗೆ ಹರಡುವುದು ಬೇಡ. ಅರಣ್ಯಾಧಿಕಾರಿಯ ಕಿವಿಗೆ ಬಿದ್ದರೆ, ಅರಣ್ಯ ಸೂರೆಮಾಡಿದ್ದ ಹಣವನ್ನು ಸರ್ಕಾರಕ್ಕೆ ಕಟ್ಟು ಅಂತ ನೋಟೀಸು ಜಾರಿ ಮಾಡಬಹುದು'' ಎಂದ. ''ಅವೆಲ್ಲ ವ್ಯವಹಾರದ ವಿಷಯ ನೀವು ಗಂಡಸರು ನಮಗೂ ಹೇಳಬೇಡಿ'' ಎಂದಳು ರಾಣಿ. ಅವಳೂ ಜಾಣೆ. ಸಂಸಾರವನ್ನು ಹೇಗೆ ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎನ್ನುವುದನ್ನು ತಿಳಿದುಕೊಂಡಿದ್ದಾಳೆ.

●

ಭವಿಷ್ಯದ ಬಗ್ಗೆ ಪಾಂಡುವಿಗೆ ಹೆಚ್ಚಿನ ಆಕಾಂಕ್ಷೆ ಇದೆ. ತೀಕ್ಷ್ಣಮತಿಯಾದ ಅವನು ಮೊದಲೇ ಯೋಚಿಸಿದ್ದಾನೆ. ಅರಣ್ಯವನ್ನು ಪ್ರವೇಶಿಸಿದಾಗಿನಿಂದ, ಅಲ್ಲಿಯ ಸಂಪನ್ಮೂಲದ ಲಾಭ ಪಡೆಯುತ್ತಿದ್ದಂತಲ್ಲ ಒಂದಲ್ಲ ಒಂದು ದಿನ ಅರಣ್ಯಾಧಿಕಾರಿಯ ಕೈಗೆ ಸಿಕ್ಕಿ, ಎಲ್ಲರೂ ಅವನಿಂದ ದಬ್ಬಲ್ಪಡಬೇಕಾಗುತ್ತದೆ ಎನ್ನುವುದನ್ನು ತಿಳಿದುಕೊಂಡಿದ್ದಾನೆ. ಅದಕ್ಕಾಗಿಯೇ ಅವನು ಉಳಿತಾಯದ ಯೋಜನೆಯನ್ನು ಮನಸ್ಸಿನಲ್ಲೇ ಹಾಕಿಕೊಂಡಿದ್ದ. ಅದರ ಅರಿವನ್ನು ಯಾರಿಗೂ ಕೊಟ್ಟಿರಲಿಲ್ಲ. ಇದ್ದುದರಲ್ಲೇ ರಾಣಿ ಹೊಂದಿಸಬೇಕು. ಗಿರಿಯನ್ನು ಬಿಟ್ಟರೆ ಉಳಿದವರಾರು ಹೆಚ್ಚು ಬಟ್ಟೆ ಬರೆಗಳನ್ನು ಅಚ್ಚುಕಟ್ಟಾಗಿ ಹಾಕುತ್ತಿರಲಿಲ್ಲ. ಅಣ್ಣ ಹಣ ಏನು ಮಾಡುತ್ತಾನೆ ಎಂದು ಕೇಳುವ ಅಧಿಕಾರ ದಾಶರಥಿಗಾಗಲಿ ಕೃಷ್ಣನಿಗಾಗಲಿ ಇರಲಿಲ್ಲ. ಇಷ್ಟಕ್ಕೂ ಅಣ್ಣನ ಆಶ್ರಯದಲ್ಲಿ ಬೆಳೆದ ಅವರಿಬ್ಬರಿಗೂ ಗಿರಿಯಷ್ಟು ವ್ಯವಹಾರ ಜ್ಞಾನ ಸಹ ಇರಲಿಲ್ಲ. ಚಂದ್ರಿಗೂ ಅಕ್ಕ ಇದ್ದುದರಲ್ಲಿ ಚೆನ್ನಾಗಿ ನೋಡಿಕೊಳ್ಳುತ್ತಾಳೆ ಇನ್ನೇಕೆ ಆ ಚಿಂತೆ. ವಲಸೆ ಬಂದ ಪಾಂಡುಗೆ ಬದುಕು ಅನೇಕ ರೀತಿಯ ಪಾಠ ಕಲಿಸಿದೆ. ಬಡಜನರನ್ನು ಸುಲಿಗೆ ಮಾಡಿ ಬದುಕುವ ಶ್ರೀಮಂತರು ಒಂದು ಕಡೆ. ಒಂದಕ್ಕೆ ಎರಡು ಬೆಲೆ ಹೇಳಿ ಏಮಾರಿಸುವ ಸಗಟು ಮಾರಾಟಗಾರರು ಒಂದು ಕಡೆ ಲಂಚ ಪಡೆದು ತಮ್ಮ ಗುಡಾಣವನ್ನು ಬೆಳೆಸಿಕೊಳ್ಳುವ ಭ್ರಷ್ಟಾಚಾರಿಗಳು ಇವೆಲ್ಲವನ್ನು ನೋಡುತ್ತ ಹೋದಹಾಗೆಲ್ಲ ಪ್ರಕೃತಿಯು ತಾನಾಗಿ ನಿರ್ಮಿಸಿದ ಸಂಪತ್ತನ್ನು ಕೊಳ್ಳೆಹೊಡೆಯುವುದಾಗಲಿ, ಅದನ್ನು ತಮ್ಮ ಬದುಕಿಗಾಗಿ ಉಪಯೋಗಿಸುವುದಾಗಲಿ ಮಹಾಪರಾಧ ಎನ್ನಿಸಲಿಲ್ಲ. ಕಾಡಿನ ಮರಗಳನ್ನು ನಿರ್ದಯವಾಗಿ ಕಡಿಯುತ್ತ ಬಂದಿದ್ದ. ದಿನದ ದುಡಿಮೆಯಲ್ಲಿ ಬಂದ ಲಾಭದಲ್ಲಿ ಅರ್ಧಭಾಗ ತೆಗೆದಿಟ್ಟು, ವಾರಕ್ಕೆರಡು ಬಾರಿ ತಾನೇ ಹಾಸನಕ್ಕೆ ಹೋಗಿ ಎರಡು ಮೂರು ಬ್ಯಾಂಕುಗಳಲ್ಲಿ ಖಾತೆ ತೆಗೆದು ಹಣ ಉಳಿತಾಯ ಮಾಡುತ್ತ ಬಂದಿದ್ದಾನೆ. ಗುಟ್ಟನ್ನು ತಮ್ಮಂದಿರಾರಿಗೂ ಬಿಟ್ಟುಕೊಟ್ಟಿರಲಿಲ್ಲ. ಗುಟ್ಟು ಬಿಟ್ಟುಕೊಟ್ಟರೆ ಅದು ಹೋಗಿ ಚಿನ್ನಸ್ವಾಮಿಯ ಕಿವಿಗೆ ಬೀಳುತ್ತದೆ. ತಮ್ಮ ಮೇಲಿನ ಹಗೆ ಇನ್ನು ಹೆಚ್ಚುತ್ತದೆ. ಆದ್ದರಿಂದಲೇ ಅರಣ್ಯಾಧಿಕಾರಿ ಖೇಮದ್ರುಮನಿಗೆ ಲಂಚ ಕೊಡಲು ಮುಂದಾಗಿದ್ದಾನೆ.

ಒಂದು ದಿನ ಪಾಂಡು ನೀರು ಸೇದಿ ಗಾಂಜಾ ಬೆಳೆಸಿದ್ದ ಜಾಗಕ್ಕೆ ಹರಿಯಬಿಟ್ಟಿದ್ದ. ಸಣ್ಣ ತೂಬಿನ ಮೂಲಕ ನೀರು ಹಾದು ಗಾಂಜಾದ ಗಿಡಗಳ ಬುಡಕ್ಕೆ ಪಸರಿಕೊಳ್ಳುತ್ತಿತ್ತು. ಅರ್ಧ ಗಂಟೆಯ ಕೆಲಸ. ಅದನ್ನು ಶ್ರದ್ಧೆಯಿಂದ ದಿನವೂ ಮಾಡುವುದು ಅವನೇ. ಸಣ್ಣಪುಟ್ಟ ಕೆಲಸಗಳ

ವಹಿವಾಟನ್ನಷ್ಟೇ ತಮ್ಮಂದಿರು ನೋಡಿಕೊಳ್ಳುತ್ತಿದ್ದರು. ಕೃಷ್ಣನಿಗೆ ಮದುವೆ ವಯಸ್ಸಾಯ್ತು. ಹೆಣ್ಣು ನೋಡಿ ಮದುವೆ ಮಾಡಬೇಕು. ಚಂದ್ರಿ ಮಗುವಿನ ಸೊಟ್ಟ ಕಾಲು ತಿರುಚಿಟ್ಟ ಹಾಗಿದೆ. ದೊಡ್ಡಾಸ್ಪತ್ರೆಗೆ ತೋರಿಸಿದರೆ ಸರಿಯಾಗುವುದೇನೋ ಎಂದಿದ್ದ ದಾಶರಥಿ. ಅದಕ್ಕೆಲ್ಲ ಹಣ ಬೇಕು. ಯಾವುದಕ್ಕೂ ಸ್ವಂತದೊಂದು ಮನೆಯಾಗಲಿ ಆಮೇಲೆ ನೋಡೋಣ ಎಂದು ಯೋಚಿಸುತ್ತಿದ್ದಾನೆ. ಅಷ್ಟರಲ್ಲಿ ಚಿನ್ನಸ್ವಾಮಿ, ಜೊತೆಗೆ ಯಾರನ್ನೋ ಕರೆದುಕೊಂಡು ಬರುವುದು ಕಂಡಿತು. ನೀರು ಸೇದುವುದನ್ನು ಬಿಟ್ಟು ಪಾಂಡು ಅವರ ಕಡೆ ದೃಷ್ಟಿ ಹರಿಸಿದ. ಚಿನ್ನಸ್ವಾಮಿ ಅವನನ್ನು ತನ್ನ ಗುಡಿಸಲಿಗೆ ಕರೆದುಕೊಂಡು ಹೋದ. ಸ್ವಲ್ಪ ಹೊತ್ತು ಇದ್ದು ಆ ಹೊಸಬ ಹೋದ ಮೇಲೆ ಬೀರಿ ಬಂದು ಪಾಂಡುವಿನೊಂದಿಗೆ ಹೇಳಿದಳು.

''ನೋಡಣ್ಣ ಇವರಿಗೆ ಸ್ವಲ್ಪವೂ ಬುದ್ಧಿಯಿಲ್ಲ. ಅದಾರೋ ಏನೋ ಗುರುತು ಪರಿಚಯ ಇಲ್ಲ. ಈ ಜಾಗ ತೋರಿಸಿದ್ದಾರೆ. ನಾಳೆ ಅವನು ಅವನ ಸಂಸಾರವನ್ನು ಕರೆದುಕೊಂಡು ಇಲ್ಲಿಗೆ ಬರ್‍ತಾನಂತೆ. ನಮ್ಮ ಗುಡಿಸಲ ಮಗ್ಗುಲಿಗೆ ಗುಡಿಸಲು ಹಾಕುತ್ತಾನಂತೆ. ನನಗಂತೂ ಸ್ವಲ್ಪವೂ ಇಷ್ಟವಿಲ್ಲ.''

ಪಾಂಡು ನೀರು ಸೇದುವುದು ಬಿಟ್ಟು, ಚಿನ್ನಸ್ವಾಮಿ ಮನೆ ಕಡೆಗೆ ದಾಪುಗಾಲು ಹಾಕುತ್ತ ''ನಿನಗೇನು ತಲೆಗಿಲೆ ಕೆಟ್ಟಿಲ್ವಾ ಚಿನ್ನಸ್ವಾಮಿ ಅವರಿಗೆಲ್ಲ ನೀನು ಈ ಅರಣ್ಯ ಭಾಗ ತೋರಿಸಿದರೆ ನಾಳೆ ನಮಗೆ ಉಳಿಗಾಲವಿಲ್ಲ'' ಎಂದು ರೇಗಿದ.

''ಇದು ಯಾರ ಅಪ್ಪನ ಆಸ್ತಿಯಲ್ಲ. ಯಾರು ಬೇಕಾದರೂ ಬರಬಹುದು ಇಲ್ಲಿ ನೆಲೆಸಬಹುದು. ನೀನು ನಾನು ಬಂದಿಲ್ಲವೇ. ನಮ್ಮನ್ನು ಬರಬೇಡಿ ಅಂತ ಯಾರಾದರೂ ತಡೆದರೆ. ಅಂದ ಮೇಲೆ ಬರುವವರಿಗೆ ನಾವ್ಯಾಕೆ ತಡೆಯಬೇಕು.''

''ನಿನಗೇನು ಅರ್ಥವಾಗೋದಿಲ್ಲ. ನಿನ್ನ ಹತ್ತಿರ ಮಾತನಾಡಿ ನಾನು ಬಾಯಿ ಕೆಡಿಸಿಕೊಳ್ಳಬೇಕಷ್ಟೆ. ನಿನ್ನ ಹಣೆಬರಹ ಏನಾದ್ರು ಮಾಡ್ಕೊ. ಮುಂದೆ ಅವನಿಂದ ನಿನಗೇನಾದ್ರೂ ತೊಂದರೆ ಆದ್ರೆ ಮಾತ್ರ ನನ್ನ ಕರೀಬೇಡ'' ಎಂದು ಹೇಳಿ ಪಾಂಡು ವಾಪಸ್ಸಾದ. ಒಂದಾ ಹೇಳಿದ್ದಾದರೂ ಅರ್ಥಮಾಡಿಕೊಳ್ಳಬೇಕು, ಇಲ್ಲ ಸ್ವತಃ ಬುದ್ಧಿ ಇರಬೇಕು. ಎರಡೂ ಇಲ್ಲದವನ ಮುಂದೆ ತಾನು ಎಷ್ಟು ಬಡಕೊಳ್ಳಬಹುದು ಎಂದುಕೊಂಡ ಪಾಂಡು ಅಲ್ಲಿಗೆ ಸುಮ್ಮನಾಗಿ ಬಿಟ್ಟಿದ್ದ.

ಮರುದಿನ ಹಾಸಿಗೆ ಬಟ್ಟೆ, ಒಂದು ಟ್ರಂಕು ಪುಟ್ಟದೊಂದು ಗೋಣೀ ಚೀಲದಲ್ಲಿ ಅಗತ್ಯದ ಸಾಮಾನುಗಳನ್ನು ತುಂಬಿಕೊಂಡು ಚಿನ್ನಸ್ವಾಮಿಯ ಸ್ನೇಹಿತ, ಹೆಂಡತಿ ಎರಡು ಮಕ್ಕಳೊಂದಿಗೆ ಜಿಸಿಲೆಗೆ ಬಂದ. ಅವನು ಬಂದ ಮರುದಿನದಿಂದ ಕೆಲಸ ಪ್ರಾರಂಭಿಸಿದ. ಅವನು ಅವನ ಹೆಂಡತಿ ಇಬ್ಬರೂ ಸೇರಿ, ಕಾಡು ಕುರುಬರ ನೆರವು ಪಡೆದು ಕೊಂಚ ವಿಶಾಲವಾಗಿಯೇ ಜೋಪಡಿ ಹಾಕಿಸಿದರು. ತಮ್ಮಿಬ್ಬರ ಜೋಪಡಿಗಿಂತ ದೊಡ್ಡದಿದೆಯಲ್ಲ, ಪರವಾಗಿಲ್ಲ ಮನುಷ್ಯ ಘಾಟಿ ಎಂದು ಕಾಣುತ್ತದೆ ಎಂದುಕೊಂಡ ಪಾಂಡು. ಅದೇ ಕಾಡು ಕುರುಬರ ಸಹಾಯದಿಂದ ಸರಸರ ಅಂತ ಅಷ್ಟು ಕಾಡು ಕಡಿಸಿದ. ಅಜ್ಜ ಹೇಳುತ್ತಿದ್ದ ಹಾಗೆ ಇನ್ನು ಕೆಲವೇ ವರ್ಷದಲ್ಲಿ ಕಾಡು ನಿರ್ನಾಮಗೊಂಡು, ಕಾಡು ಊರಾಗುತ್ತದೆ, ಇದರಲ್ಲಿ ಸಂಶಯವಿಲ್ಲ ಎಂದುಕೊಂಡ. ತಾನು ತನ್ನ ಕುಟುಂಬ ನಿರ್ದಯೆಯಿಂದ ಕಾಡುಗಳನ್ನು ಸವರುತ್ತ ಬಂದಾಗ ಆಗದ ದುಃಖ ಈಗ ಆ ಹೊಸಬ ಕಡಿದು ಹಾಕಿದಾಗ ಸಂಕಟವಾಯಿತು. ಪಕ್ಷಿಗಳ ಆರ್ತನಾದ ಈಗ ಕಿವಿಗೆ ಕರ್ಕಶವಾಗಿ ಕೇಳಿಸಿತು. ಪಾಂಡು ಈಗ ಮೂಕ ಸಂಕಟವನ್ನು ಅನುಭವಿಸಿದ. ತಮ್ಮಿಂದೇನೋ ಮಹಾಪರಾಧವಾದಂತೆ ವಿಲಿವಿಲಿ ಒದ್ದಾಡಿದ. ಆ ಹೊಸಬ ಬಹಳ ಬೇಗ ಮುಂದುವರೆಯುತ್ತಾನೆ. ಅವನ ಚಾಕಚಕ್ಯತೆ ಲವಲವಿಕೆ ಕಂಡೇ ಪಾಂಡುವಿಗೆ ಅನ್ನಿಸಿತ್ತು.

''ಲಕ್ಷ್ಮಿ ... ಲಕ್ಷ್ಮಿ'' ಅವನು ಹೆಂಡತಿಯನ್ನು ಕೂಗಿದ.

''ಅಲ್ಲೇ ಹೊರಗೆ ಒಲೆ ಹೂಡಿ ರೊಟ್ಟಿ ತಟ್ಟು, ಮಕ್ಕಳು ರೊಟ್ಟಿ ತಿಂದು ಮಲಗಲಿ. ಗುಡಿಸಲು ಚೆನ್ನಾಗಿ ಒಣಗದೇ ಒಳಗೆ ಹೋಗಿ ಮಲಗುವುದು ಬೇಡ. ಎರಡು ದಿನ ಚಿನ್ನಸ್ವಾಮಿಯ

ಮನೆಯಲ್ಲೇ ಇರೋಣ'' ಎಂದ.

ಅವಳು ತಲೆ ಅಲುಗಿಸುತ್ತಾ ಹೂಂ ಗುಟ್ಟಿದಳು. ಅವಳು ಮಸಾಲೆ ಪುಡಿ ಹಾಕಿ ಅಚ್ಚುಕಟ್ಟಾಗಿ ಅಡಿಗೆ ಮಾಡಿರಬೇಕು. ಚಂದ್ರಿಯ ನಡೆಯಲಾರದ ಹುಡುಗಿ ಗುಡಿಸಲ ಬಾಗಿಲಲ್ಲಿ ತಲೆ ಹಾಕಿ ನೋಡುತ್ತಿತ್ತು ಚಿನ್ನಸ್ವಾಮಿಯ ಎರಡು ಹುಡುಗರು ದೊಡ್ಡವರಾದ್ದರಿಂದ, ಅವು ಸಹ ತಮ್ಮ ಗುಡಿಸಲ ಬಾಗಿಲಲ್ಲಿ ನಿಂತು ನೋಡುತ್ತಿದ್ದುವು. ತನ್ನ ಮಗಳು ಉಮಾ ಮಾತ್ರ ಓಡಿದ್ದಾಳೆ ಅವರ ಮನೆಯ ಬಾಗಿಲಿಗೆ ನೋಡಲು.

''ಉಮಾ'' ಎಂದು ಪಾಂಡು ಕರೆದ. ಹುಡುಗಿ ಹಿಂದಕ್ಕೆ ಬರಲಿಲ್ಲ. ಬೀರಿಗೆ ಒಂದು ಪಾತ್ರೆಯಲ್ಲಿ ಹಾಕಿಸಿಕೊಟ್ಟಳಂತೆ, ಅದನ್ನು ಉಮಾ ತಿಂದು ಬಂದು, ರಾಣಿಯ ಹತ್ತಿರ ಹೇಳಿಕೊಳ್ಳುತ್ತಿದ್ದುದನ್ನು ಕೇಳಿದ ಪಾಂಡು. ಮಸಾಲೆ ತಿಳಿದುಕೊಂಡು ತಾನು ಆ ರೀತಿಯ ಅಡಿಗೆ ಮಾಡುವುದಾಗಿ ಹೇಳಿದಳು ರಾಣಿ.

''ಏನೂ ಬೇಡ ನೀನು ಅವರ ಮಾತಿಗೆ ಹೋಗುವುದು ಬೇಡ. ನಿನ್ನ ಪಾಡಿಗೆ ನೀನಿರು'' ಎಂದ ಪಾಂಡು.

ರಾಣಿ ಸುಮ್ಮನಾದಳು. ಆದರ ಅದೇ ಸಂಜೆ ಆ ಲಕ್ಷ್ಮಿ ಒಂದು ಪಾತ್ರೆ ಹಿಡಿದುಕೊಂಡು ಬಂದಳು ಆಡಿನ ಹಾಲಿಗಾಗಿ. ತಾವು ಒಂದು ಆಡು ಕೊಳ್ಳುವವರೆಗೆ ವರ್ತನೆ ಹಾಕಬೇಕು ಎಂದು ಕೇಳಿದಳು.

''ಯಾಕೆ ಪಕ್ಕದಲ್ಲಿ ಬೀರಿ ಇದ್ದಾಳಲ್ಲ'' ಎಂದಳು ರಾಣಿ.

''ಪಕ್ಕದಲ್ಲಿ ಹೆಚ್ಚು ಸ್ನೇಹ ಬೇಡ. ನಿಷ್ಠೂರಕ್ಕೆ ಕಾರಣವಾಗುತ್ತದೆ. ಅದರಲ್ಲೂ ನೀವು ಹೆಂಗಸರು ವಿಶ್ವಾಸ ಮಾಡಿಕೊಳ್ಳುವುದು ಬೇಗ. ಮನಸ್ಸು ಮುರಿದುಕೊಳ್ಳುವುದು ಬೇಗ'' ಎಂದರು ನಮ್ಮ ಯಜಮಾನರು. ಆದಕ್ಕಾಗಿ ನಿಮ್ಮ ಮನೆಯಲ್ಲಿ ವರ್ತನೆ ಹಾಕಿಸಿಕೊಳ್ಳೋಣ ಅಂತ'' ಎಂದಳು. ಅಲ್ಲೇ ಕೂತು ಬೀಡಿ ಸೇದುತ್ತಿದ್ದ ಪಾಂಡು ಕಡೆಗೆ ಮುತ್ತುಗದ ಎಲೆ ಕುತ್ತುತ್ತಲೇ ನೋಡಿದಳು ರಾಣಿ.

ಏನು ಮಾಡೋಕಾಗುತ್ತೆ ಕೊಟ್ಟು ಕಳುಹಿಸು ಎನ್ನುವ ಹಾಗಿತ್ತು ಅವನ ದೃಷ್ಟಿ. ಎದ್ದು ಹೋಗಿ ಒಂದು ದೊಡ್ಡ ಲೋಟದ ತುಂಬ ಹಾಲು ತಂದು ಕೊಟ್ಟಳು. ಅವಳು ಆ ಕಡೆ ಹೋಗುತ್ತಲೇ,

''ಯಾಕೋ ಆ ಮನೆಯವರನ್ನು ಸೇರಿಸಿಕೊಂಡರೆ ಹೇಗೋ ಸೇರಿಸಿಕೊಳ್ಳದಿದ್ದರೆ ಹೇಗೋ ಎಂದು ಭಯವಾಗುತ್ತಿದೆ'' ಎಂದಳು ರಾಣಿ.

''ಎಷ್ಟು ಬೇಕೋ ಅಷ್ಟರಲ್ಲಿಡು'' ಎಂದ ಪಾಂಡು. ಆದರೆ ಆ ಲಕ್ಷ್ಮಿ ಬರುವಾಗಲೆಲ್ಲ ಒಂದಲ್ಲ ಒಂದು ಬೀರಿಯ ಮನೆಯ ವಿಷಯ ತೆಗೆದು ಮಾತನಾಡುತ್ತಿದ್ದಳು. ಚಿನ್ನಸ್ವಾಮಿಯನ್ನು ಕುರಿತು ಶುದ್ಧ ಸೋಮಾರಿ ಎಂದು ಹೇಳುತ್ತಿದ್ದಳು. ನಕ್ಕು ಹಾರಿಕೆಯ ಮಾತನಾಡಿ ಹಾಲು ಕೊಟ್ಟು ಕಳುಹಿಸುತ್ತಿದ್ದಳು ರಾಣಿ.

ಪಾಂಡು ಹಣಕಾಸಿನಲ್ಲಿ ಅಲ್ಪಸ್ವಲ್ಪ ಬೀರಿಗೆ ನೆರವಾಗುತ್ತಿದ್ದ. ಯಾವುದೋ ಮಾತಿನ ಭರದಲ್ಲಿ ಅವರ ಮನೆಯಲ್ಲಿರುವ ಆಡನ್ನು ಪಾಂಡುವೇ ತೆಗೆಸಿಕೊಟ್ಟದ್ದು ಎಂದಿದ್ದಳು ರಾಣಿ, ಲಕ್ಷ್ಮಿಯೊಂದಿಗೆ. ಇದೆಲ್ಲ ನೋಡುತ್ತ ಇದ್ದ ಲಕ್ಷ್ಮಿ ಸಮಯ ನೋಡಿ ಕಕ್ಕಿದಳು ರಾಣಿಗೆ.

''ಅಲ್ಲ ರಾಣಿ ನಿನ್ನ ಗಂಡನ ಜೊತೆಗೆ ಬೀರಿ ಸಂತೆಗೆ ಹೋಗಿದ್ದಾಳೆ. ಅಲ್ಲಿ ಅವರಿಬ್ಬರು ಅಂಕೆಯಿಲ್ಲ ಶಂಕೆಯಿಲ್ಲ'' ಎಂದು ನಕ್ಕಳು.

''ಯಾಕೆ ಹಾಗೆ ಹೇಳ್ತೀಯ'' ಸ್ವಭಾವ ಸಹಜವಾಗಿ ಅಂತವನ್ನೆಲ್ಲ ತಲೆಗೇ ತೆಗೆದುಕೊಳ್ಳದ ರಾಣಿ ಕೇಳಿದಳು.

''ನೋಡು ನೀನು ಎರಡು ಮಕ್ಕಳನ್ನು ಹೆತ್ತಿದ್ದೀಯ. ಇಷ್ಟು ದೊಡ್ಡ ಸಂಸಾರಕ್ಕೆ ನೀನೇ ಯಜಮಾನಿ ಅಷ್ಟು ಗೊತ್ತಾಗಬೇಡ್ವ. ಒಳ್ಳೆ ಬೆಪ್ಪು. ನಿನ್ನ ಗಂಡ ಬೀರಿಗೆ ಸಹಾಯ ಮಾಡೋದ್ಯಾಕೆ. ಈಗ ಅವಳ ಜೊತೆಗೆ ಪೇಟೆಗೆ ಹೋಗಿದ್ದಾನಲ್ಲ. ಅಷ್ಟು ಗೊತ್ತಾಗಬೇಡ್ವ'' ಎಂದಳು.

''ಓ ..... ಅದಾ'' ರಾಣಿ ಬಿದ್ದು ಬಿದ್ದು ನಕ್ಕಳು.

''ನಿನಗೆಲ್ಲೋ ಹುಚ್ಚು ನನ್ನ ಮಾತಿಗೆ ಬೆಲೇನೇ ಕೊಡೋದಿಲ್ಲವಲ್ಲ. ಕೈ ಸುಟ್ಟುಕೊಂಡ ಮೇಲೆ ಬುದ್ಧಿ ಬರುತ್ತೆ'' ಎಂದು ಹೇಳಿ ಅವಳು ಹೊರಟು ಹೋದಳು. ಅವಳು ಆ ಕಡೆ ಹೋದ

ಮೇಲೆ ರಾಣಿ ಚಂದ್ರಿಯನ್ನು ಕರೆದು ಹೇಳಿದಳು.

''ಚಂದ್ರಿ ಹುಷಾರು ಆ ಹೆಂಗಸಿನ ಸಹವಾಸ ಮಾಡೋವಾಗ ಕೊಂಚ ಎಚ್ಚರಿಕೆಯಿಂದ ಇರಬೇಕು'' ಎಂದಳು.

''ಹೌದಕ್ಕ ಗುಮ್ಮಿಗೆ ನೀರು ತರೋಕೆ ಬರ್‍ತೀಯ ಅಂತ ಮೊನ್ನೆ ಕರದ್ಲಲ್ಲ ಆಗ ನೀವೆಲ್ಲ ಯಾಕೆ ಒಟ್ಟಿಗೆ ಇರ್‍ತೀರ. ಲಾಭ ಎಲ್ಲಾ ನಿಮ್ಮ ಭಾವ ಅಕ್ಕ ಲಪಟಾಯಿಸೋದಿಲ್ವೆ. ಆಮೇಲೆ ನಿಮ್ಮನ್ನ ಬೀದಿ ಪಾಲು ಮಾಡಿದ್ರೆ ಅಂದ್ಲು. ನಾನಿಷ್ಟು ದಿವಸ ನಿನ್ನ ಹತ್ರ ಹೇಳ್ಲೇ ಇಲ್ಲ''

''ಹಾಗಂದ್ಲೇನು?''

''ಹೌದಕ್ಕ''

''ಹಾಗಾದ್ರೆ ನಾವಿನ್ನು ಮೇಲಿಂದ ಹುಷಾರಾಗಿರಬೇಕು. ಅವಳು ಬಂದ್ರೆ ಕೆಲಸ ಇದೆ ಎಂದು ಮಾತಿಗೆ ನಿಲ್ಲದೆ ಒಳಗೆ ಹೋಗಿಬಿಡಬೇಕು. ಬೇರಿನ್ನ ನಾವೇನು ಇವತ್ತು ನಿನ್ನೆಯಿಂದ ಕಂಡಿದ್ದೀವ ಹೇಳು. ಅವಳ ಮೇಲೆ ತಂದು ಹಾಕೋಕೆ ನೋಡ್ತಾಳೆ.''

''ಅಕ್ಕಾ ಅಗ್ಲೆ ಗಾಂಜಾ ಬೆಳೆಸೋಕೆ ಎಷ್ಟೊಂದು ಜಾಗ ಮಾಡಿಕೊಂಡಿದ್ದಾರೆ ನೋಡು. ಬದುಕಿಗೆ ಕಷ್ಟಪಡಲಿ ಬಿಡು, ಅದಕ್ಕೆ ನಾವ್ಯಾಕೆ ಮತ್ಸರಪಡಬೇಕು. ಆದರೆ ನಮ್ಮ ಮನೆ ಸುದ್ದಿಗೆ ಬರೋದನ್ನ ಮಾತ್ರ ನಾನು ಸಹಿಸೋದಿಲ್ಲ'' ಎಂದು ರಾಣಿ ಸಂಜೆಯ ಅಡಿಗೆಯ ಸಿದ್ಧತೆಗೆ ಹೋದಳು. ಒಳಗಿನ ಎಲ್ಲಾ ಕೆಲಸ ಅವಳೇ ನೋಡುತ್ತಿದ್ದಳು. ಒಬ್ಬರದೇ ಕೈ ಇದ್ದರೆ ಅಚ್ಚುಕಟ್ಟು ಇರುತ್ತದೆ. ಸಾಮಾನು ಹೆಚ್ಚು ವ್ಯಯವಾಗುವುದಿಲ್ಲ ಎಂದು ಅವಳಿಗೆ ಗೊತ್ತಿದೆ. ಅಕ್ಕಿಗೆ ಎಷ್ಟು ಹಾಕಬೇಕು, ಮುದ್ದೆಗೆ ಎಷ್ಟು ಹಿಟ್ಟು ಬೇಕಾಗಬಹುದು ಎನ್ನುವುದೆಲ್ಲ ಅವಳಿಗೆ ಗೊತ್ತಿದ್ದ ಹಾಗೆ ಚಂದ್ರಿಗೆ ತಿಳಿಯದು. ಸ್ವಲ್ಪವೂ ಹಾಳಾಗದಂತೆ ತುಂಬ ಸೂಕ್ಷ್ಮವಾಗಿ ಸಂಬಾರ ಪದಾರ್ಥಗಳನ್ನು ಉಪಯೋಗಿಸುತ್ತಿದ್ದಳು ರಾಣಿ. ಅವಳು ನಂದಿದ ಒಲೆಯನ್ನು ಊದಿ ಅಡಿಗೆಗೆ ಇಡಬೇಕು. ಚಿನ್ನಸ್ವಾಮಿಗೂ ಲಕ್ಷ್ಮಿಯ ಗಂಡ ಸಾಂಬನಿಗೂ ಜಗಳ ಆಗುತ್ತಿರುವುದು ಕೇಳಿಸಿತು. ಈಚೀಚೆಗೆ ಆ ಸಂಸಾರ ಜಗಳವಾಡುವುದನ್ನು ನೋಡಿದ್ದಳು. ಬುದ್ಧಿವಂತ ಆ ಸಾಂಬ ಅವರು ಹೆಚ್ಚು ದಿನ ಆ ಅರಣ್ಯದೊಳಗೆ ನಿಲ್ಲೋದಿಲ್ಲ. ಆಗಲೇ ಸ್ವಲ್ಪ ಹಣ ಮಾಡಿಕೊಂಡಂತಿದೆ. ಅವರು ನಮಗಿಂತ ಮೊದಲು ಅರಣ್ಯ ಬಿಟ್ಟು ಹೋಗುತ್ತಾರೆ ನೋಡುತ್ತಿರು. ನಾವು ಆದಷ್ಟು ಬೇಗ ಈ ಅರಣ್ಯ ಬಿಟ್ಟು ಹೋಗಬೇಕು ಎಂದಿದ್ದ ಪಾಂಡು ರಾಣಿಯೊಂದಿಗೆ. ಅವನಿಗೆ ಇರುವಂತೆ ಆಸೆ ತನಗೂ ಇರುವುದರಿಂದ ಮನೆ ಮಂದಿಯನ್ನೆಲ್ಲ ಸುಧಾರಿಸುತ್ತ ಒತಮಿತವಾಗಿ ಪದಾರ್ಥಗಳು ಪೋಲಾಗದಂತೆ ಅಡಿಗೆ ಊಟ ಸಜ್ಜುಗೊಳಿಸುತ್ತಿದ್ದಳು ರಾಣಿ. ಈ ಚಾಕಚಕ್ಯತೆ ಇರುವುದರಿಂದಲೇ ಅವಳು ಎಲ್ಲರಿಗೂ ಹೊಂದಿಕೊಳ್ಳಲು ಸಾಧ್ಯವಾಗಿತ್ತು. ಅಷ್ಟರಲ್ಲೇ ಪೇಟೆಗೆ ಬೀರಿಯ ಜೊತೆಗೆ ಹೋಗಿದ್ದ ಪಾಂಡು ಮನೆಗೆ ಬಂದ. ಬರುತ್ತಾ ಅಂದ.

> **ಸುಯೋಧನ**
>
> ಊರಿಗಾಗಿಯೇ
> ಊರು
> ಕಳೆದುಕೊಂಡ
> ಮಹಾನುಭಾವ
>
> ಆರ್.ಬಿ.ದಿವಾಕರ್

''ನಾಳೆ ಖೇಮದ್ರುಮ ಬರ್‍ತಾನಂತೆ. ಅರಣ್ಯದೊಳಗೆ ಇನ್ನೇನು ಪ್ರಗತಿ ಸಾಧಿಸಿದ್ದೀರ ಎನ್ನುವುದನ್ನು ನೋಡಬೇಕಾಗಿದೆ ಎಂದ. ನಾನೇನು ಸಾಂಬ ಅರಣ್ಯಕ್ಕೆ ಬಂದ ವಿಷಯ ಹೇಳಲಿಲ್ಲ. ನನಗ್ಯಾಕೆ ಬೇಕು ಬಂದು ನೋಡಲಿ. ಕೂತಲ್ಲೇ ಸಂಪಾದಿಸ್ತಾರೆ ಇವರೆಲ್ಲ. ಕಷ್ಟಪಡದೆ ಸಂಪಾದಿಸುವ ಇವರನ್ನು ನೋಡಿದರೆ ಕೊಂದುಬಿಡಬೇಕು ಎನ್ನುವಷ್ಟು ಸಿಟ್ಟು ಬರುತ್ತದೆ ಆದರೆ ಏನು ಮಾಡೋದು'' ಆ ಸಾರೆ ಐನೂರು ಕೇಳಿದನಂತೆ, ಕೊಟ್ಟು ಬಂದು ಹಳಹಳಿಸಿದ. ಬಾವಿ ನೀರಿಗೆ ಬಂದ ಸಾಂಬನನ್ನು ನೋಡಿ ಹೊರಗೆ ಓಡಿದ ಪಾಂಡು, ಅವನಿಗೆ ಹೇಳಿದ.

''ನಾಳೆ ಅರಣ್ಯಾಧಿಕಾರಿ ಬರ್‍ತಾನಂತೆ''

ಅರಣ್ಯಾಧಿಕಾರಿ ಎಂದೊಡನೆ ಸಾಂಬನ ಮುಖ ಬಿಳಿಚಿಕೊಂಡಿತು.

''ಅವನಿಗೆ ಅಷ್ಟು ಲಂಚ ಕೊಟ್ಟು ಸರಿಮಾಡಿಕೊಂಡಿದ್ದೇವೆ. ಆದರೂ ಅವನಿಗೆ ತೃಪ್ತಿಯಿಲ್ಲ. ತಿಂಗಳು ತಿಂಗಳು ಕುಕ್ಕಿದರೂ ಅಸಮಾಧಾನ. ನಾವು ಇನ್ನೇನು ಪ್ರಗತಿ ಸಾಧಿಸಿದ್ದೇವೆ ಎನ್ನುವುದನ್ನು ನೋಡಬೇಕಂತೆ'' ಎಂದ.

''ನೀವು ಎಷ್ಟು ಲಂಚ ಕೊಡುತ್ತಿದ್ದೀರಿ?''

''ಐದುನೂರು''

''ಓ! ದೇವರೆ ಅಷ್ಟೊಂದು ಹಣವೇ''

''ಅಷ್ಟು ಸಾಲುವುದಿಲ್ಲ ಎನ್ನುತ್ತಾನಲ್ಲ''

''ಹಾಗಾದರೆ ನಾನೂ ಅಷ್ಟೇ ಕೊಡಬೇಕಾಗುತ್ತದೇನೋ''

''ನೀವು ಇದಕ್ಕಿಂತಲೂ ಕೊಂಚ ಹೆಚ್ಚು ಕೊಡಬೇಕಾಗಬಹುದು. ನೀವು ನಮಗಿಂತ ಹೆಚ್ಚು ಜಾಗದಲ್ಲಿ ಗಾಂಜಾ ಬೆಳೆಸಿದ್ದೀರಿ'' ಸಹಜವಾಗಿ ಹೇಳಿದ ಪಾಂಡು.

''ನೋಡಿ ಇದು ನಿಮಗೆ ಒಳ್ಳೆಯದಲ್ಲ''

''ಯಾವುದು?''

''ನೀವು ಹೀಗೆಲ್ಲ ಅವರಿಗೆ ಹೇಳಿಕೊಡುವುದು''

''ನೋಡಿ ಸ್ವಾಮಿ ನನ್ನ ಜಾಯಮಾನಕ್ಕೆ ಇಂಥವೆಲ್ಲ ಒಗ್ಗಿ ಬಂದಿಲ್ಲ. ನಾನು ಹೇಗೋ ನನ್ನ ಹೆಂಡತಿಯೂ ಹಾಗೆ. ಇನ್ನು ನೀನು ಆ ಬೀರಿಯನ್ನು ನಂಬಬಹುದು ಚಿನ್ನಸ್ವಾಮಿಯನ್ನು ನಂಬಬೇಡಿ.''

''ಹೊ ....'' ಎಂದು ಅವನು ಗಹಗಹಿಸಿ ನಗತೊಡಗಿದ.

''ಯಾಕೆ ಹಾಗೆ ನಗ್ತೀರ?''

''ಬೀರಿನ್ನ ನಂಬೋಕು ಬಿಡೋಕು ನನಗೇನ್ರಿ, ಅವಳ ಸಂಬಂಧ. ನಿಮಗಾದ್ರು ಅವಳ ಸಂಬಂಧ ಇರಬಹುದು?'' ಎಂದು ಅವನು ನೀರು ಸೇದುವ ಕೊಡವನ್ನು ತಲೆಯ ಮೇಲೆ ಹೊತ್ತು ನಡೆದ.

''ನೋಡಿ ಸಾಂಬ ನೀವೀಗ ಹೇಳೀದ್ರಲ್ಲ ಆ ಮಾತನ್ನ ವಾಪಸ್ಸು ತಗೊಳ್ಳಿ''

''ಹೋಗ್ರಿ ಹೋಗ್ರಿ ನಿಮ್ಮನ್ನ ನಾನು ಇಲ್ಲಿಗೆ ...ದಾಗಿನಿಂದ ನೋಡ್ತಿಲ್ವ'' ಎಂದು ಹೇಳುತ್ತ ಮುಂದೆ ಹೋಗಿಬಿಟ್ಟ. ಛೆ! ಎಂತಹ ಮಾತು. ಹಲ್ಕ ಜನರಿಂದ ಬರೋದೆ ಇಂತಹ ಮಾತುಗಳು ಎಂದು ನೊಂದುಕೊಂಡು ಒಳಗೆ ಬಂದ. ಯಾಕೋ ಆ ದಿನ ಊಟ ಸೇರಲಿಲ್ಲ ಪಾಂಡುಗೆ. ಬೀರಿಯಂತಹ ಹೆಣ್ಣುಮಗಳ ಮೇಲೆ ಗೂಬೆ ಕೂರಿಸುತ್ತಿದ್ದಾರಲ್ಲ ಎಂದು ಮನಸ್ಸಿಗೆ ನೋವಾಯಿತು. ತಕ್ಷಣ ಪಾಂಡುವಿನ ಅರಿವಿಗೆ ಬಂತು. ತಾನು ಖೇಮದ್ರುಮನಿಗೆ ಅವನು ಕೊಡಬೇಕಾದ ಲಂಚದ ಬಗ್ಗೆ ಹೇಳಿದ್ದು ಅವನಿಗೆ ಸರಿಬರಲಿಲ್ಲ. ಅದಕ್ಕೆ ಅವನು ತನ್ನ ಮತ್ತು ಬೀರಿಯ ಸಂಬಂಧವನ್ನು ಸೃಷ್ಟಿಸಿ ಹೇಳಿದ ಎಂದುಕೊಂಡಾಗ ಮನಸ್ಸಿಗೆ ಕೊಂಚ ಸಮಾಧಾನ ಸಿಕ್ಕಿತು.

ಮರುದಿನ ಖೇಮದ್ರುಮ ಬಂದಾಗ ಸಾಂಬ ಕಾಡಿನ ಮರಗಳನ್ನು ಕಡಿಸುತ್ತಿದ್ದ. ಅಜ್ಜ ಸಾಯುವುದಕ್ಕೆ ಮುಂಚೆ ತಾನು ಮೂರನೆ ಬಾರಿ ಕಾಡಿನ ಮರಗಳನ್ನು ಕಡಿಸಲು ಮುಂದಾದಾಗ ತನ್ನ ಕೈ ಅಡ್ಡ ತಡೆದು ಗಳಗಳ ಎಂದು ಅತ್ತೇ ಬಿಟ್ಟಿದ್ದ. ಎಂದೂ ಹಾಗೆ ಅತ್ತವನಲ್ಲ.

''ಕಾಡು ಕಡಿದು ನಿರ್ನಾಮ ಮಾಡಬೇಡ್ರೋ'' ಎಂದಿದ್ದ ಹಾಲಜ್ಜನ ಬೆನ್ನು ತುಂಬಾ ಬಾಗಿತ್ತು. ಅವನು ಅಳುವುದನ್ನು ನೋಡಿ ನಿರ್ಜೀವ ಮರಗಳನ್ನು ಕಂಡು ಹಾಲಜ್ಜ ಮನೆಯಲ್ಲಿ ಯಾರೋ ಸತ್ತರೆಂಬಂತೆ ಅಳುತ್ತಿದ್ದಾನಲ್ಲ ಎಂದು ತನಗಾಗ ಅನ್ನಿಸಿತ್ತು. ಈಗ ಸಾಂಬ ಮರಗಳನ್ನು ಕಡಿಯುವಾಗ ಹೋಗಿ ಅವನ ಕೈ ಅಡ್ಡ ತಡೆಯಲೇ ಎಂದುಕೊಂಡ. ಆದರೆ ಅವನ ಕೈ ಅಡ್ಡ ತಡೆವೇ ತಡೆದ ಖೇಮದ್ರುಮ. ಅವನು ಬರುತ್ತಿದ್ದ ಹಾಗೆ ಜಬರದಸ್ತಿನಿಂದ ಹೇಳಿದ.

''ಯಾರಲ್ಲಿ ಮರಗಳನ್ನು ಕಡಿಸುತ್ತಿರುವವರು, ಶಿಕ್ಷೆ ಆಗುತ್ತದೆ ನಷ್ಟ ಕಟ್ಟಿಕೊಡಬೇಕು'' ಎಂದ. ಸಾಂಬ ಮರ ಕಡಿಸುತ್ತಿದ್ದುದನ್ನು ನಿಲ್ಲಿಸಿ ಖೇಮದ್ರುಮನ ಹತ್ತಿರಕ್ಕೆ ಬಂದು ಹೇಳಿದ.

''ಇವರೆಲ್ಲ ಮಾಡಿ ಬಿಟ್ಟಿದ್ದನ್ನು ನಾನು ಪ್ರಾರಂಭಿಸಿದ್ದೇನೆ'' ಎಂದ.

''ಸಾವಿರ ರೂಪಾಯಿ ದಂಡ ತೆತ್ತು ಕೆಲಸ ಮುಂದುವರೆಸು''

"ಸಾವಿರ ರೂಪಾಯಿ ಎಲ್ಲಿಂದ ತರಲಿ?"

"ಅದೇನೋ ನನಗೆ ಹೇಳಬೇಡ. ಇಷ್ಟಕ್ಕೂ ನಿನ್ನನ್ನು ಈ ಅರಣ್ಯದೊಳಗೆ ಬಿಟ್ಟವರು ಯಾರು?"

"ಇವರನ್ನು ಯಾರು ಬಿಟ್ಟರು ಹೇಳಿ?"

"ಬುದ್ಧಿವಂತ ಕಣಯ್ಯ ನೀನು, ನಾನು ಹೇಳಿದ್ದಕ್ಕೆಲ್ಲ ಪ್ರಶ್ನೆ ಹಾಕಿದ ಹಾಗಲ್ಲ. ನಾಳೆ ನಾನು ಬರೋವಾಗ ಒಬ್ಬ ಪೋಲಿಸ್ ಅಧಿಕಾರಿಯನ್ನು ಜೊತೆಗೆ ಕರೆದುಕೊಂಡು ಬರಬೇಕಾಗುತ್ತದೆ. ನಿನ್ನ ನಾನು ನೋಡಿದ್ದೇನೆ. ನಿನ್ನ ಮೇಲೆ ನಿಗ ಇಡ್ತೇನೆ. ನೀನೆಲ್ಲಿ ತಪ್ಪಿಸಿಕೊಂಡು ಹೋದ್ರೂ ಬಿಡೋದಿಲ್ಲ ಗೊತ್ತಾಯ್ತಾ" ಎಂದ.

"ಈಗ ಸಾಂಬ ಹೆದರಿದ. ಸ್ವಲ್ಪ ಕಡಿಮೆ ಮಾಡಿ ಸ್ವಾಮಿ ಅಷ್ಟು ಹಣ ನೀವು ಕೇಳಿದ ಕೂಡ್ಲೆ ನಾನೆಲ್ಲಿಂದ ಒದಗಿಸ್ಲಿ"

"ನಿನ್ನ ಹೆಂಡ್ತಿ ಮೈಮೇಲಿರೋ ಚಿನ್ನ ತೆಗೆದು ಕೊಡ್ಲಿ" ಹಣದ ಬದಲಿಗೆ ಅವನೇನು ಬಿಡೋದಿಲ್ಲ, ಕಮ್ಮೀನೂ ಮಾಡೋದಿಲ್ಲ ಎಂದು ಅರ್ಥವಾದ ಮೇಲೆ ವಿಧಿಯಿಲ್ಲದೆ ಒಳಗೆ ಹೋಗಿ ಬಂದ ಸಾಂಬ ಹೊಸ ನೋಟುಗಳನ್ನು ಎಣಿಸಿ ತಂದು ಖೇಮದ್ರುಮನ ಕೈಗೆ ಹಾಕಿದ.

"ಎಲ್ಲಿತ್ತು ಇಷ್ಟೊಂದು ಹಣ?"

"ಸ್ವಾಮಿ ಊರು ಬಿಟ್ಟು ಬರೋವಾಗ ನಮ್ಮ ಯಜಮಾನ್ರು, ನಾನು ಮಾಡಿದ ಕೂಲಿ ಅಂತ ಒಂದೆರಡು ಸಾವಿರ ಕೊಟ್ಟಿದ್ರು. ಅದ್ರಲ್ಲಿ ಕಷ್ಟಪಟ್ಟು ಉಳ್ಸಿದ್ದೆ ಅದು ನಿಮ್ಮ ಬಾಯಿಗೆ ಹಾಕ್ಬೇಕಾಗುತ್ತೆ ಅಂದ್ಕೊಂಡಿರಲಿಲ್ಲ" ಎಂದ. ಸಾಂಬ ಹೇಳಿದ ಮಾತನ್ನು ಅವನು ಖೇಮದ್ರುಮನ ಕೈಗೆ ಹಾಕಿದ ಹಣವನ್ನು ನೋಡುತ್ತ ನಿಂತ ಪಾಂಡುಗೆ ಆಶ್ಚರ್ಯವಾಯಿತು. ಅವನು ಹೇಳ್ತಿರೋದು ಸುಳ್ಳು ಅದೆಲ್ಲ ಅವನು ಅರಣ್ಯಕ್ಕೆ ಬಂದ ಮೇಲೆ ಸಂಪಾದಿಸಿದ ಹಣ. ಅವನು ಬಹಳ ಬೇಗ ಸಾಕಷ್ಟು ಹಣ ಸಂಪಾದಿಸಿಕೊಂಡು ನಮಗಿಂತ ಮೊದಲೇ ಅರಣ್ಯ ಬಿಟ್ಟು ಹೋಗೋದು ಖಂಡಿತ. ಅವನಿಗಿಂತ ಮೊದಲು ನಾವು ಹೋಗಬೇಕು. ಹಾಗೆ ನಾವು ಅರಣ್ಯ ಬಿಟ್ಟು ಹೋದರೆ ಚಿನ್ನಸ್ವಾಮಿಯ ಸಂಸಾರ ಏನು ಮಾಡುತ್ತದೋ.

> ಸಂಗಾತಿಗೆ
>
> ಕೊಟ್ಟರೆಷ್ಟು ಬಿಟ್ಟರೆಷ್ಟು
> ತುಟ್ಟಿ ಭತ್ಯೆ
> ಕೊಟ್ಟೇ ಕೊಡುವೆಯಲ್ಲ
> ತುಟಿ ಭತ್ಯೆ
>
> – ಎಚ್.ವಿಶಾಲಾಕ್ಷಿ

ಅವರೂ ತಮ್ಮ ಹಿಂದೆ ಹೊರಡಬಹುದು. ಅವನು ದುಡಿಯುವುದಿಲ್ಲ. ಬೀರಿ ದುಡಿದು ಮಕ್ಕಳನ್ನು ಹೇಗೋ ಕಷ್ಟಪಟ್ಟು ಸಾಕುತ್ತಿದ್ದಾಳೆ. ಸಾಂಬನ ಹೆಂಡತಿ ಲಕ್ಷ್ಮಿ ಈಗ ನಮ್ಮ ಮನೆಗೆ ಆಡಿನ ಹಾಲಿಗೂ ಬರುತ್ತಿಲ್ಲ. ಅವರು ಎರಡು ಆಡುಗಳನ್ನು ಕೊಂಡಿದ್ದಾರೆ. ಹಾಗೆಂದ ಮೇಲೆ ಒಳಗೆ ಅವನ ಹತ್ತಿರ ಇನ್ನೆಷ್ಟು ಹಣ ಇದೆಯೋ ಎಂದು ಯೋಚಿಸುತ್ತಿರಬೇಕಾದರೆ ಖೇಮದ್ರುಮ ಅಂದ "ಬಾವಿಯಲ್ಲಿ ಯಥೇಚ್ಛವಾಗಿ ನೀರು ತುಂಬಿಕೊಂಡಿದೆ. ಅರಣ್ಯದ ಒಳಗೆ ಹೀಗೆಲ್ಲ ಎಲ್ಲೆಂದರಲ್ಲಿ ಬಾವಿ ತೋಡಿಸುವ ಹಾಗಿಲ್ಲ. ಅದರ ಬಾಬ್ತು ಅಂತ ಒಂದು ಸಾವಿರ ಕೊಟ್ಟು ಬಿಡು. ನಿನ್ನ ಸಂಸಾರ ದೊಡ್ಡದು. ನನಗೂ ಅಯ್ಯೋ ಪಾಪ ಅನ್ಸುತ್ತೆ. ನೀವೆಲ್ಲ ಕಷ್ಟಪಟ್ಟು ದುಡೀತೀರ. ಅದಕ್ಕಾಗಿಯೇ ತುಂಬಾ ಕಮ್ಮಿ ಮಾಡಿದ್ದೇನೆ" ಎಂದ.

"ನಾಳೆ ಕೊಡ್ತೇನೆ ಸ್ವಾಮಿ ಅನ್ನೋ ಹಾಗಿಲ್ಲ. ಈಗಿಲ್ಲದ್ದು ನಾಳೆ ಎಲ್ಲಿಂದ ಹೊಂದಿಸ್ತೀಯ" ಅನ್ನುತ್ತಾನೆ. ಒಳಗೆ ಇದ್ದ ಚಿಲ್ಲರೆ ಪಲ್ಲರೆ ಎಲ್ಲಾ ಸೇರಿಸಿ "ನೋಡಿ ಸ್ವಾಮಿ ಮುನ್ನೂರೈವತ್ತು ಇದೆ ಈಗ ಇದನ್ನು ಇಟ್ಕೊಳ್ಳಿ. ಮುಂದಿನ ತಿಂಗಳು ನಿಮ್ಮ ಬಾಬ್ತು ಕೊಡೋವಾಗ ಅದರ ಜೊತೆ ನೂರು ನೂರು ಸೇರ್ಸಿ ಕೊಡ್ತಾ ಬರ್ತೇವೆ" ಎಂದ. ಖೇಮದ್ರುಮ ಈ ಮಾತಿಗೆ ಒಪ್ಪದೆ ವಿಧಿಯಿರಲಿಲ್ಲ. ಎಷ್ಟಾದ್ರು ಕೊಡ್ಲಿ. ಬಟ್ಟಾರೆ ಹಣ ನಿಲ್ಲದೆ ಕೈಗೆ ಬರ್ತಾ ಇದ್ದರೆ ಸರಿ ಎಂದು ಯೋಚಿಸಿದ ಅವನು. ಪಾಂಡುವಿನಿಂದ ಅಷ್ಟು, ಸಾಂಬನಿಂದಷ್ಟು ಕಿತ್ತುಕೊಂಡು ಹೊರಟು ಹೋದ. ಸಾಂಬ

ನಿಂದ ಸಿಕ್ಕಿದ ಒಂದು ಸಾವಿರದಿಂದ ತೃಪ್ತನಾದ ಚೇಮದುರ್ರುಮ, ಚಿನ್ನಸ್ವಾಮಿಯನ್ನು ದಬಾಯಿಸಲು ನೋಡಿದ. ಅವನಿಂದ ಹಣ ಪಡೆಯದಿದ್ದಾಗ ಸಾಂಬನಿಗೆ ಅನುಮಾನ ಉಂಟಾಯಿತು. ಆದರೆ ಅವನು ತನ್ನ ಕೆಲಸದ ಭರದಲ್ಲಿ ಅದನ್ನಲ್ಲಿಗೆ ಮರೆತುಬಿಟ್ಟ. ನಾಲ್ಕು ಎಕರೆ ಜಾಗ ಸಿಗುವಷ್ಟು ಕಾಡು ಮರಗಳನ್ನು ಕಡಿಸಿ ಜಾಗ ಮಾಡಿಕೊಂಡ. ತಾವು ನೀರು ಹೊರಲು ಕಷ್ಟಪಟ್ಟ ಹಾಗೆ ಅವನು ಕಷ್ಟಪಡಬೇಕಾಗಿರಲಿಲ್ಲ. ಪಾಂಡು ತೋಡಿಸಿದ ಬಾವಿ ಇದೆ. ಅಲ್ಲಿಂದ ಎಷ್ಟು ಬೇಕಾದರೂ ನೀರು ಹೊರಬಹುದು. ಆಕ್ಷೇಪಣೆ ಮಾಡಬಹುದಿತ್ತು ಪಾಂಡು. ಎಲ್ಲದಕ್ಕೂ ಹೇಳುತ್ತ ಹೋದರೆ ದ್ವೇಷ ಬೆಳೆಯುತ್ತಾ ಹೋಗುತ್ತದೆ. ದ್ವೇಷದಿಂದ ಸಾಧಿಸುವುದೇನಿದೆ ಮಣ್ಣು ಎಂದುಕೊಂಡು ಸುಮ್ಮನಾಗಿದ್ದ.

ನಾಲ್ಕು ಎಕರ ಜಾಗದಲ್ಲೂ ಗಾಂಜಾ ಬೆಳೆಸಿದ್ದಾನೆ ಸಾಂಬ. ಅದೇನು ಕೈಗುಣವೋ ಅಥವಾ ನೆಲದಡಿಯ ಮಣ್ಣೋ ದೇವರಿಗೆ ಗೊತ್ತು. ಗಾಂಜಾ ಸೊಂಪಾಗಿ ಬೆಳೆದಿತ್ತು. ಅವುಗಳನ್ನು ಜೋಡು ಮಾಡಿ ಅರಣ್ಯದ ಹೊರಗೆ ಸಾಗಿಸುವುದೇ ಕಷ್ಟ. ಕಾಡು ಕುರುಬರನ್ನು ಕರೆದರೆ ಅವರೆಲ್ಲಿ ಕಲಿತುಬಿಡುತ್ತಾರೋ ಎನ್ನುವ ಭೀತಿ ಅವನಿಗೆ. ತಮ್ಮ ಮನೆಯಲ್ಲಾದರೆ ನಾಲ್ಕಾರು ಮಂದಿ ಇದ್ದೇವೆ. ಗಿರಿಯನ್ನು ತಡೆದು ಸಾಂಬ ಹೇಳಿದ ನಂತೆ,

''ಕೂಲಿ ಕೊಡ್ತೇನೆ ಹೋರೋಕೆ ಸ್ವಲ್ಪ ಸಹಾಯ ಮಾಡ್ತೀಯ ಅಂತ'' ಗಿರಿ, ಬೀರಿಗೆ ಹೇಳಿ ''ಅವಳು ಎಷ್ಟು ಬೇಕಾದರೂ ಕಷ್ಟಪಡುವ ಹೆಣ್ಣು ಎಂದನಂತೆ'' ಎಂದಿದ್ದಳು ರಾಣಿ. ಒಟ್ಟಾರೆ ಅವನು ಇನ್ನು ನಾಲ್ಕಾರು ವರ್ಷದಲ್ಲಿ ಬೇಕಾದಷ್ಟು ಸಂಪತ್ತು ಮಾಡಿಕೊಳ್ಳುತ್ತಾನೆ ಎಂದು ತನ್ನಷ್ಟಕ್ಕೆ ಅಂದುಕೊಂಡ ಪಾಂಡು. ರಾಣಿ ಒಳಗೆ ಅಡುಗೆಯಲ್ಲಿ ತೊಡಗಿದ್ದಳು. ಮಾಂಸ ತಿನ್ನದೆ ಬಹಳ ದಿವಸಗಳಾಗಿದ್ದವು. ಬೆಳಿಗ್ಗೆ ಎರಡು ಕೇಜಿ ಕುರಿ ಮಾಂಸ ತಂದಿದ್ದ. ''ಬೆಳಿಗ್ಗೆ ಮಾಡಿದರೆ ಒಬ್ಬೊಬ್ಬರು ಒಂದೊಂದು ಕಡೆ ಇರ್ತೀರ. ಒಂದೊಂದು ಸಮಯಕ್ಕೆ ಊಟಕ್ಕೆ ಬರ್ತೀರ ರಾತ್ರಿ ಮಾಡೋಣ'' ಎಂದಿದ್ದಳು ಬೀರಿ. ಗಮ್ಮನೆ ವಾಸನೆ ಬರುತ್ತಿತ್ತು. ಅವು ಚಿನ್ನಸ್ವಾಮಿಯ ಗುಡಿಸಲಿಗೂ ಸಾಂಬನ ಗುಡಿಸಲಿಗೂ ಹರಡಿರಬಹುದು. ಉಮಾ ಯಾಕೋ ಬೆಳಗಿನಿಂದ ಒಂದೇ ಸಮ ಅಳುತ್ತಿದ್ದಳು. ಅಡಿಗೆ ಮಾಡುವುದರಲ್ಲಿ, ಎಲೆ ಕುತ್ತುವುದರಲ್ಲಿ ರಾಣಿ ಆಗಾಗ ಅವಳನ್ನು ಗದರಿಸುತ್ತ ಸುಮ್ಮನಾಗಿಸುತ್ತಿದ್ದುದನ್ನು ನೋಡಿದ್ದ. ಈಗ ಮೂಲೆಯಲ್ಲಿ ಹಾಗೆ ನೆಲದ ಮೇಲೆ ಸುಮ್ಮನೆ ಮಲಗಿಬಿಟ್ಟಿದ್ದಳು. ಹತ್ತಿರ ಹೋಗಿ ಉಮಾ ಎಂದ ಪಾಂಡು. ಮಗು ನರಳುತ್ತಿದೆ. ಹಣೆ ಮುಟ್ಟಿನೋಡಿದ, ಕೆಂಡದ ಹಾಗೆ ಸುಡುತ್ತಿದೆ.

''ರಾಣಿ ನೀನು ಮಗು ಹಣೆ ಮುಟ್ಟಿ ನೋಡಿಲ್ಲ. ಜ್ವರ ಬರ್ತಿದೆ ಉಮಾಳಿಗೆ'' ಎಂದ. ಅಡಿಗೆ ಕೆಲಸ ನಿಲ್ಲಿಸಿ ರಾಣಿ ಮಗುವಿನ ಹತ್ತಿರ ಬಂದಳು. ಹಣೆ ಮುಟ್ಟಿನೋಡಿದಳು. ಪಾಂಡು ಹೇಳಿದಂತೆ ಜ್ವರ ಕೆಂಡದ ಹಾಗೆ ಸುಡುತ್ತಿದೆ. ಎತ್ತಿ ಕಾಲ ಮೇಲೆ ಹಾಕಿಕೊಂಡು ಕೂತಳು.

''ಬೆಳಗಿನಿಂದ ಇದಕ್ಕೇ ರಚ್ಚೆ ಹಿಡಿದಿದ್ದಳು'' ಎಂದು ಚಂದ್ರಿಗೆ ಹೇಳಿದಳು.

''ಚಂದ್ರಿ, ಮಸಾಲೆ ಅರೆದಿಟ್ಟಿದ್ದೇನೆ. ಹುಳಿಗೆ ಹಾಕಿ ಬುಡ ಹತ್ತದಂತೆ ನೋಡಿಕೊ. ಅಡಿಗೆ ಆದ ಮೇಲೆ ನೀವೆಲ್ಲ ಊಟ ಮಾಡಿ ನನಗೆ ಊಟ ಬೇಡ'' ಎಂದಳು.

ಚಂದ್ರಿ ಅಷ್ಟು ಹೊತ್ತಿಗೆ ಏನೂ ಹೇಳಲಿಲ್ಲ. ಎಲ್ಲರಿಗೂ ಊಟಕ್ಕೆ ಬಡಿಸಿದಳು. ಮಾಂಸದ ಸಾರು ತುಂಬ ರುಚಿಯಾಗಿತ್ತು. ಆದರೆ ಊಟ ಯಾರಿಗೆ ಸೇರುತ್ತದೆ. ಒಬ್ಬರೂ ಸರಿಯಾಗಿ ಊಟ ಮಾಡಲಿಲ್ಲ. ಎಷ್ಟು ಹೇಳಿದರೂ ರಾಣಿ ಊಟದ ಶಾಸ್ತ್ರ ಸಹ ಮಾಡಲಿಲ್ಲ. ಅಕ್ಕ ಊಟ ಮಾಡಲಿಲ್ಲವೆಂದು ಚಂದ್ರಿ ತಾನು ಮಾಡಲಿಲ್ಲ.

''ಹೋಗು ಚಂದ್ರಿ, ನನ್ನಾಣೆಯಿದೆ. ನೀನು ಊಟ ಮಾಡಿ, ಉಳಿದದ್ದನ್ನು ಬೀರಿಯ ಮನೆಗೆ ಕೊಟ್ಟು ಬಾ. ಅವರಾದರೂ ಊಟ ಮಾಡಲಿ. ಚೆಲ್ಲುವುದು ಬೇಡ'' ಎಂದಳು.

ಅಕ್ಕ ಅಷ್ಟಂದ ಮೇಲೆ ಊಟ ಬಾಯಿಗೆ ರುಚಿಸದೆ ಹೋದರೂ ಊಟದ ಶಾಸ್ತ್ರ ಮಾಡಿ,

ಬೀರಿಯ ಮನೆಗೆ ಕೊಟ್ಟು ಬರಲು ಹೋದಳು.

''ಅದ್ಯಾಕೆ ಚಂದ್ರಿ, ಇಷ್ಟೊಂದು ಅಡಿಗೆ ಮಿಕ್ಕಿದೆ'' ಎಂದು ಬೀರಿ ಕೇಳುತ್ತಿದ್ದ ಹಾಗೆ ಚಂದ್ರಿ ಬಿಕ್ಕಿ ಬಿಕ್ಕಿ ಅಳತೊಡಗಿದಳು.

''ಏನಾಯ್ತು ಚಂದ್ರಿ ಯಾಕೆ ಹೀಗಳ್ತೀಯ?''


''ಉಮಾಳಿಗೆ ಜ್ವರ. ಕೆಂಡದ ಹಾಗೆ ಸುಡ್ತಿದೆ. ಅಕ್ಕ ಊಟ ಮಾಡಲಿಲ್ಲ. ಯಾರಿಗೆ ಊಟ ಸೇರುತ್ತದೆ ಹೇಳು. ನಾವು ಯಾರೂ ಸರಿಯಾಗಿ ಊಟ ಮಾಡಲಿಲ್ಲ. ಇವರಿಗಂತೂ ಉಮಾ ಎಂದರೆ ಜೀವ ನೋಡು. ತನ್ನ ಮಗಳು ಹಾಗಾಗಿ ಹುಟ್ಟಿದಳು ಅಂತ ಅವಳನ್ನು ಏನೂ ಅವನು ಕೀಳರಿಮೆಯಿಂದ ನೋಡುವುದಿಲ್ಲ. ಮಕ್ಕಳು ಎಂದರೆ ಅವರಿಗೆ ಜೀವ'' ಎಂದಳು.

''ಯಾಕಷ್ಟೊಂದು ಭಯ ಬೀಳ್ತೀರ ನಡಿ ನಾನು ಬರ್ತೇನೆ'' ಎಂದು ಬೀರಿ ಚಂದ್ರಿಯ ಜೊತೆ ಪಾಂಡುವಿನ ಗುಡಿಸಲಿಗೆ ಬಂದಳು. ರಾಣಿಯ ತೊಡೆಯ ಮೇಲೆ ಉಮಾ ಮಲಗಿತ್ತು. ಬೀರಿ ಹತ್ತಿರ ಕುಳಿತುಕೊಂಡು ಸಮಾಧಾನ ಹೇಳಲು ಯತ್ನಿಸಿದರೆ ರಾಣಿ ತಡೆಯಲಾರದೆ ಅಳತೊಡಗಿದಳು. ಅವಳಿಗೆ ಮೂರು ವರ್ಷದ ಹಿಂದೆ ಹಾವು ಕಚ್ಚಿ ಸತ್ತ ರಾಧಿಯ ನೆನಪು ಮೇಲಿಂದ ಮೇಲೆ ಬರುತ್ತಿತ್ತು. ಮಗುವಿನ ಜ್ವರದ ತಾಪದಿಂದ ತನ್ನ ಕಾಲ್ತೊಡೆಗಳೂ ಬಿಸಿ ಏರಿವೆ ಎಂದಳು ರಾಣಿ.

''ಹಣೆಗೆ ಒದ್ದೆ ಬಟ್ಟೆ ಯಾಕಿಟ್ಟಿಲ್ಲ. ಜ್ವರ ಇಳಿಯಬೇಕಾದರೆ ಒದ್ದೆ ಬಟ್ಟೆ ಇಡಬೇಕು. ಎಂತಹ ಜ್ವರ ಇದ್ದರೂ ಅರ್ಧ ಗಂಟೆಯಲ್ಲಿ ಇಳಿದು ಬಿಡುತ್ತದೆ'' ಎಂದಳು ಬೀರಿ.

ಅವಳು ಅಷ್ಟು ಹೇಳುತ್ತಿರುವಾಗಲೇ ಬೀರಿ ದೊಡ್ಡ ಟವಲೊಂದನ್ನು ಒದ್ದೆ ಮಾಡಿ ತಂದಳು. ಅದನ್ನು ಚಂದ್ರಿಯೇ ಉಮಾಳ ಹಣೆಯ ಮೇಲಿಟ್ಟಾಗ, ಉಮಾ ಚಳಿಗೆ ಮೈ ಸಿಂಡರಿಸಿಕೊಂಡು, ಜ್ವರದ ತಾಪಕ್ಕೆ ಬಾಯಲ್ಲಿ ಏನನ್ನೋ ವಟಗುಟ್ಟುತ್ತ ಮಗ್ಗುಲಾದಳು. ಅರ್ಧ ಗಂಟೆಯಲ್ಲಿ ಜ್ವರ ಇಳಿದಂತೆ ಕಂಡಿತು.

''ನೀವೆಲ್ಲ ಸಮಾಧಾನದಿಂದ ಮಲಗಿ, ಜ್ವರ ಇನ್ನು ಇಳಿದುಹೋಗುತ್ತದೆ. ಅಕಸ್ಮಾತ್ ಮತ್ತೆ



ಬಂದರೆ ಹೀಗೆ, ಒದ್ದೆ ಬಟ್ಟೆ ಹಾಕುತ್ತ ಬನ್ನಿ, ಜ್ವರ ಆದ್ದರಿಂದ ಭಯಪಡಬೇಕಾಗಿಲ್ಲ. ಬೇರೇನೋ ಆಗಿದ್ದರೆ ಹೆದರಬೇಕಾಗಿತ್ತು'' ಎಂದು ಹೇಳಿ ಬೀರಿ ಹೋದಳು.

ಮನೆಗೆ ಬಂದರೆ ಎಲ್ಲಾ ಮಾಂಸದ ಸಾರನ್ನು ಹಾಕಿಕೊಂಡು ತಂದೆ ಮಕ್ಕಳು ತಿಂದು ಮುಗಿಸಿಬಿಟ್ಟಿದ್ದಾರೆ. ತನಗಾಗಿ ಸ್ವಲ್ಪವೂ ಉಳಿಸಿಲ್ಲ. ಮಕ್ಕಳಾದರೆ ಕೆಲಸ ಮಾಡುತ್ತವೆ. ಗಂಡ ಅದೂ ಇಲ್ಲ. ತಿನ್ನುವುದಕ್ಕೆ ಮಾತ್ರ ಕಂಡುಗ ಗಾತ್ರ ಬೇಕು. ನೀನು ತಿಂದೆಯಾ ಬಿಟ್ಟೆಯಾ ಎಂದು ಕೇಳುವುದಿಲ್ಲ. ಎಂತಹ ಗಂಡಸರೋ ಒಬ್ಬರನ್ನು ನೋಡಿಯಾದರೂ ಕಲಿಯದವರು ಕೆಲವರು. ಅವರಲ್ಲಿ ತನ್ನ ಗಂಡ ಒಬ್ಬ ಏನು ಮಾಡೋಕಾಗುತ್ತೆ ದುಃಖವಾದರೂ ನುಂಗಿಕೊಂಡಳು ಬೀರಿ. ಮಕ್ಕಳನ್ನಾಗಲಿ, ಗಂಡನನ್ನಾಗಲಿ ತನಗಿಡದೆ ತಿಂದು ಬಿಟ್ಟರಲ್ಲ ಎಂದು ಕೇಳಲಿಲ್ಲ. ತಿಂದು ಮುಗಿಸಿದ ಮೇಲೆ ಕೇಳಿಯಾದರೂ ಪ್ರಯೋಜನವೇನು ಎಂದುಕೊಂಡು, ತಾನು ಬೆಳಿಗ್ಗೆ ಮಾಡಿ ಉಳಿದ ಹಿಟ್ಟಲ್ಲಿ ಒಂದು ಮುದ್ದೆ ತೆಗೆದು ಉಂಡು ಮಲಗಬೇಕು ಎನ್ನುವಷ್ಟರಲ್ಲಿ ಚಿಕ್ಕ ಮಗ ಮಲಗಿದ್ದ

ವನು ಎದ್ದು ಬಂದು, ಮೇಲೆ ಎತ್ತಿಟ್ಟಿದ್ದ ಮಾಂಸದ ಸಾರನ್ನು ತೆಗೆದುಕೊಡುತ್ತ ಅಂದ.

''ಅಮ್ಮ ಎಷ್ಟು ಹೊತ್ತಿಗೆ ಬಂದೆ? ನಿನಗೆ ಅಂತ ಎರಡು ಸೌಟು ಮಾಂಸದ ಸಾರನ್ನು ಎತ್ತಿಟ್ಟಿದ್ದೆವು. ಅಪ್ಪ ನೋಡಿದರೆ ಅದನ್ನು ಬಿಡುತ್ತಿರಲಿಲ್ಲ'' ಎಂದ.

''ಅಯ್ಯೋ! ನನ್ನ ಕಂದ, ನೀವು ನನ್ನ ಮರೆತಿರಿ ಎಂದುಕೊಂಡಿದ್ದೆನಲ್ಲಾ'' ಎಂದಳು ಚಂದ್ರಿ, ಕಣ್ಣೊರೆಸಿಕೊಳ್ಳುತ್ತ.

ಮಾಂಸದ ಸಾರು ನಿಜವಾಗಿಯೂ ತುಂಬ ರುಚಿಯಾಗಿತ್ತು. ಗಂಡ ನೋಡಿದ್ದರೆ ಬಿಡುತ್ತಿರಲಿಲ್ಲ. ಮಕ್ಕಳು ತನಗಾಗಿ ಎತ್ತಿಟ್ಟಿವೆ. ಬೆಳಗ್ಗೆ ದುಡಿದ ಆಯಾಸವೆಲ್ಲ ಕ್ಷಣಮಾತ್ರದಲ್ಲಿ ಪರಿಹಾರವಾದಂತೆನಿಸಿತು. ಉಂಡು ಅವಳೂ ಕೈ ತೊಳೆದುಕೊಂಡು ಹಾಸಿದ ಚಾಪೆಯ ಮೇಲೆ ಉರುಳಿಕೊಳ್ಳಬೇಕು, ಗಿರಿ ಓಡುತ್ತ ಬಂದು ಹೇಳಿದ.

''ಬೀರಿಅಕ್ಕ ನನ್ನ ತಂಗಿ ಉಮಾ ಕಣ್ಣು ಮುಚ್ಚಿಕೊಂಡ್ತು'' ಎಂದ. ಹೌಹಾರಿದವಳಂತೆ ಎದ್ದಳು ಬೀರಿ. ಅವಳ ಹಿಂದೆ ಅವಳ ಮಕ್ಕಳು ಚಿನ್ನಸ್ವಾಮಿ ಎಲ್ಲಾ ಪಾಂಡುವಿನ ಮನೆಗೆ ಬಂದರು. ರಾಣಿಯ ದುಃಖವನ್ನು ನಿಲುಗಡೆಗೆ ತರಲು ಯಾರಿಂದಲೂ ಸಾಧ್ಯವಾಗಲಿಲ್ಲ. ಚಂದ್ರಿಯ ಕಾಲಿಲ್ಲದ ಹುಡುಗಿ ರತ್ನ ತೆವಳುತ್ತ ಹೋಗಿ ದೊಡ್ಡಮ್ಮನ ಕಣ್ಣೊರೆಸಲು ಯತ್ನಿಸುತ್ತಿದ್ದ ದೃಶ್ಯ ಹೃದಯವಿದ್ರಾವಕವಾಗಿತ್ತು.

''ನಮ್ಮ ಸಂಸಾರಕ್ಕೆ ಅದರಲ್ಲೂ ಅಣ್ಣನಿಗೆ ಇವ್ಯಾಕೆ ಇಂತಹ ಕಷ್ಟ ಒಂದರ ಮೇಲೊಂದು ಬರುತ್ತಿದೆ'' ಎಂದು ತಮ್ಮಂದಿರಿಬ್ಬರು ತಮ್ಮಷ್ಟಕ್ಕೆ ಯೋಚಿಸುತ್ತಿದ್ದರು. ಪಾಂಡು ತಲೆಯ ಮೇಲೆ ಕೈ ಹೊತ್ತು ಸುಮ್ಮನೆ ಕುಳಿತುಬಿಟ್ಟಿದ್ದ. ಸ್ವಲ್ಪ ಹೊತ್ತಿನ ನಂತರ ಆ ನೀರಸ ಮೌನವನ್ನು ಒಡೆದು ಚಿನ್ನಸ್ವಾಮಿ ಹೇಳಿದ.

''ನಡೀರಿ ಇನ್ನೆಷ್ಟು ಗೋಳಾಡಿದರೂ ಅಷ್ಟೆ, ಮಗುವನ್ನು ಮಣ್ಣು ಮಾಡಿ ಬರೋಣ'' ಎಂದ.

ಪಾಂಡು ಕೂತ ಕಡೆಯಿಂದ ಮೇಲೇಳಲಿಲ್ಲ. ಅತ್ತು ಅತ್ತು ರಾಣಿಯ ಕಣ್ಣೀರು ಹಿಂಗಿ ಹೋಗಿವೆ. ದಾಶರಥಿ ಮಗುವಿನ ಹೆಣವನ್ನು ಎತ್ತಿಕೊಂಡು ಮೇಲೆದ್ದ. ಚಂದ್ರಿಯ ಮಗಳು ಕುಮುದ ಅಪ್ಪನ ಕಾಲನ್ನು ಬಿಗಿಯಾಗಿ ಹಿಡಿದುಕೊಂಡು ಗೋಳಾಡಿದಳು. ಹೊರಗೆ ನಿಂತು ನೋಡುತ್ತಿದ್ದ ಸಾಂಬನಿಗೂ ಈ ದೃಶ್ಯ ಕರುಳು ಕಿವುಚಿತು. ದಾಶರಥಿ ಒಮ್ಮೆ ಕಾಲನ್ನು ಜಾಡಿಸಿದ ರಭಸಕ್ಕೆ ಕುಮುದ ಮಗುಚಿಕೊಂಡು ಬಿದ್ದಳು. ಅಷ್ಟರವರೆಗೆ ಮೂಕವಾಗಿ ರೋದಿಸುತ್ತ ಕುಳಿತಿದ್ದ ರಾಣಿ ದಡಾರನೆ ಎದ್ದು ಬಂದು ಆರು ವರ್ಷದ ಕುಮುದಳನ್ನು ಎತ್ತಿಕೊಂಡು ತನ್ನ ಬರಿದಾದ ಮಡಿಲನ್ನು ತುಂಬಿಕೊಂಡು ಅಂದಳು ಗಂಡನ ಕಡೆಗೆ ತಿರುಗಿ,

''ನೋಡಿ ನೀವು ಅಳಬಾರದು. ಚಂದ್ರಿಯ ಈ ಮಗು ಎಲ್ಲರಂತೆ ಅಂಗ ಶರೀರವನ್ನು ಪಡೆದುಕೊಂಡು ಹುಟ್ಟಿಬರಲಿಲ್ಲ. ನಮ್ಮ ಮಗು ಕಣ್ಣು ಮುಚ್ಚಿತು. ಬಹುಶಃ ದೇವರು ನಾವೆಲ್ಲ ಈ ಮಗುವಿನ ಕಷ್ಟ ನಿಗ ಕೊಡಲಿ ಎಂದಿರಬಹುದು ಅದನ್ನು ಕಿತ್ತುಕೊಂಡು ಹೋದ. ಹೋಗಿ ನೀವು ಆ ಹೆಣವನ್ನು ಸಂತೋಷದಿಂದ ಮಣ್ಣು ಮಾಡಿ ಬನ್ನಿ'' ಎಂದಳು.

ಪಾಂಡು ತನ್ನ ಪಂಚೆಯ ತುದಿಯಿಂದ ಮೂಗೊರೆಸಿಕೊಂಡು ಮೇಲೆದ್ದ. ಮನೆಯ ಮುಂದಿದ್ದ ಬಾವಿ ಕಟ್ಟೆಯ ಪಕ್ಕದಲ್ಲಿ ನೆಲ ಅಗೆದು ಮಣ್ಣು ಮುಚ್ಚಿ ಮನೆಗೆ ಬರುವ ಮೊದಲು ಬಾವಿ ನೀರು ಸೇದಿ ಅಲ್ಲೇ ಸ್ನಾನ ಮಾಡಿಕೊಂಡು ಒಳಗೆ ಬಂದರು.

●

ಚೈತ್ರಮಾಸದ ಆ ಬಿಸಿಲು ಮೈಬೆವರಿಳಿಸುತ್ತಿತ್ತು. ಒಂದೆಡೆ ಆಯಾಸ, ಮತ್ತೊಂದೆಡೆ ಬೇಗುದಿ. ಬಮಕಿನುದ್ದಕ್ಕೂ ಒಂದಲ್ಲ ಒಂದು ಚಿಂತೆಯನ್ನು ಹೊತ್ತು ನಡೆದ ಬದುಕು. ಆದರೂ ಒಬ್ಬರಿಗೊಬ್ಬರು ಸಮಾಧಾನ ಹೇಳುವುದಕ್ಕಾಗಿಯೇ, ಇಲ್ಲ ಒಬ್ಬರ ಕಷ್ಟಕ್ಕೆ ಮತ್ತೊಬ್ಬರು ಆಗುವುದಕ್ಕಾಗಿಯೇ ಹೊಂದಿಕೊಂಡಿದ್ದ ಆ ತಂಡ ಉರಿ ಬಿಸಿಲಿಗೆ ಮನಸಿನ ಬೇಗುದಿಗೆ ಬಹಳವಾಗಿಯೇ ಬಳಲಿದೆ. ಅವರ ನೋವು ಕಷ್ಟ ಹೊಟ್ಟೆ ತುಂಬಿದವರಿಗೆ ಅರ್ಥವಾಗುವ ಹಾಗಿಲ್ಲ. ಖೇಮದ್ರುಮ ಮುಲಾಜಿಲ್ಲದೆ ಬರು

ತ್ತಿದ್ದ. ಏನು ಹೇಳಿದರು ಅವನಿಗೆ ಬರಬೇಕಾದ ಬಾಬ್ತನ್ನು ಬಿಡುತ್ತಿರಲಿಲ್ಲ. ಮೌನವಾಗಿ ಅವನಿಗೆ ಕೊಡಬೇಕಾದ್ದನ್ನು ಕೊಡುತ್ತಿದ್ದವನು ಪಾಂಡು ಒಬ್ಬನೇ. ಚಿನ್ನಸ್ವಾಮಿಯು ದುಡಿಯುವವನಲ್ಲ, ಅವನ ಬಾಬ್ತು ಎಂದು ಹೇಳಿ ನೂರೋ ಇನ್ನೂರೋ ಖೇಮದ್ರುಮನ ಕೈಗೆ ಹಾಕುತ್ತಿದ್ದವನು ಪಾಂಡುವೆ. ಈಚೆಗೆ ಖೇಮದ್ರುಮನ ಜೊತೆಯಲ್ಲಿ ವಿರೂಪಾಕ್ಷ ಬಂದಿರಲಿಲ್ಲ. ಪ್ರಾಯಶಃ ಅವನು ಸಾಂಬ ಅರಣ್ಯದಲ್ಲಿ ಹೊಸ ಸಂಸಾರ ಹೂಡಿದ ಮೇಲೆ ಬಂದದ್ದು ಒಂದೋ ಎರಡೋ ಬಾರಿ, ಈ ಸಾರೆ ಅವರಿಬ್ಬರು ಬಂದಾಗ ಸಾಂಬ ಅದೇಕೋ ಅವರಿಬ್ಬರ ಮಾತಿನ ಕಡೆಗೆ ನಿಗ ಇಡುತ್ತ ಬಂದಿದ್ದ. ಅವರಿಬ್ಬರ ಮಾತಿನಲ್ಲಿ ಅಡಗಿರುವ ಕೃತ್ರಿಮ ಮೋಸವನ್ನು ಗ್ರಹಿಸುತ್ತ ಬಂದ. ಅವನು ತಾನು ಕೊಡುತ್ತ ಬಂದ ಹಣವನ್ನು ಅರ್ಧ ಇಳಿಸಿದ. ಖೇಮದ್ರುಮ ಒಪ್ಪಿಕೊಳ್ಳದಿದ್ದಾಗ,

''ಏನು ಮಾಡ್ತಿರೋ ಮಾಡಿ ಹೋಗಿ'' ಎಂದುಬಿಟ್ಟ.

''ಮಾಡೋದೇನು ನಿಮ್ಮನ್ನ ಒಂದಿನ ಅರಣ್ಯದಿಂದ ಹೊರಗೆ ಹಾಕಿಸ್ತೇನೆ''


''ಒಂದಿನ ತಾನೆ ಈಗಲ್ಲವಲ್ಲ'' ಎಂದ ಸಾಂಬ ಮಾತಿಗೆ ಸೋಲದೆ. ಅವರಿಬ್ಬರು ಹೊರಟು ಹೋದ ಮೇಲೆ ಪಾಂಡುವನ್ನು ಕರೆದು ಹೇಳಿದ.

''ನೀವೆಲ್ಲ ಅವರಿಬ್ಬರಿಗೆ ಮೋಸ ಹೋಗಿದ್ದೀರಿ''

''ಅವನು ಅರಣ್ಯಾಧಿಕಾರಿ ಅಲ್ಲವೇನು?'' ಅವನ ಮಾತಿನ ಮೋಡಿಯನ್ನು ಗ್ರಹಿಸಿದ ಪಾಂಡು ಕೇಳಿದ.

''ಅಲ್ಲ''

''ಅದು ಹ್ಯಾಗೆ ಹೇಳ್ತೀಯ?''



''ಅರಣ್ಯಾಧಿಕಾರಿ ಹೆಸರಿನಲ್ಲಿ ಅವನು ಕಬಳಿಸ್ತಿದ್ದಾನೆ. ಬೇಕಾದರೆ ನಾನು ಹೇಳಿದ್ದು ಸುಳ್ಳೋ ದಿಟವೋ ಎಂದು ಪರೀಕ್ಷಿಸೋಣ ನಾಳೆ ಅರಣ್ಯಾಧಿಕಾರಿಯ ಕಚೇರಿಗೆ ಹೋದರೆ ಗೊತ್ತಾಗುತ್ತದೆ. ನಾನು ಹೋಗ್ತಿದ್ದೇನೆ ನೀನು ಬರೋ ಹಾಗಿದ್ರೆ ಬಾ'' ಎಂದ.

ಮನಸ್ಸಿಗೆ ಆದ ನೋವು, ಮಾಯದ ಗಾಯ ಇದ್ದುದರಿಂದ ಪಾಂಡು ಈ ಬಗ್ಗೆ ಹೆಚ್ಚು ಓಡಿಸಲು ಹೋಗಲಿಲ್ಲ. ಮರುದಿನ ಸಾಂಬನೇ ಗುಡಿಸಲ ಹೊರಗೆ ನಿಂತು ಕೂಗಿದ.

''ಪಾಂಡು ನಾನೀಗ ಅರಣ್ಯಾಧಿಕಾರಿಯ ಕಚೇರಿಗೆ ಹೊರಟಿದ್ದೇನೆ ಬರೋ ಹಾಗಿದ್ರೆ ಬಾ''

ರೊಟ್ಟಿ ಸುಡುತ್ತಿದ್ದ ರಾಣಿ, ತನ್ನ ದುಃಖವನ್ನೆಲ್ಲ ನುಂಗಿಕೊಂಡು ಉತ್ಸಾಹದ ಮುಖವಾಡ ಧರಿಸಿದ್ದಳು. ಮೆಲ್ಲಗೆ ಅಂದಳು ಪಾಂಡುವಿಗೆ ''ರೊಟ್ಟಿ ತಿಂದು ಹೋಗಿ ಬರೋದು ಎಷ್ಟು ಹೊತ್ತಾಗುತ್ತೋ ಏನೋ, ಪಾಂಡು ಸಾಂಬನನ್ನು ಒಳಗೆ ಕರೆದ. ಒಳಗಿದ್ದ ಪೆಟ್ಟಿಗೆಯ ಮೇಲೆ ಅವನನ್ನು ಕುಳ್ಳಿರಿಸಿ ರಾಣಿ ಸುಟ್ಟ ಬಿಸಿ ರೊಟ್ಟಿಯೊಂದನ್ನು ಇಬ್ಬರಿಗೂ ಒಂದೊಂದು ಎಲೆಯಲ್ಲಿ ಹಾಕಿಕೊಟ್ಟಳು. ಸಾಂಬ ರೊಟ್ಟಿ ತಿನ್ನುತ್ತ ಅಂದ.

''ಅವನು ಅರಣ್ಯಾಧಿಕಾರಿ ಅಲ್ಲ ಅಂತ ಆದರೆ, ನಾವು ಈ ಗುಟ್ಟು ನಮಗೆ ಗೊತ್ತಾಗಿದೆ ಅನ್ನೋ ಹಾಗೆ ವರ್ತಿಸಬಾರದು. ನಮಗೇನು ಗೊತ್ತಿಲ್ಲದಂತಯೇ ವರ್ತಿಸಬೇಕು. ಹಾಗಿದ್ರೆ, ಮಾತ್ರ, ನಾವು ಸ್ವಲ್ಪ ಮಟ್ಟಿಗೆ ಹಣ ಸಂಪಾದಿಸಿಕೊಳ್ಳಬಹುದು. ನಮಗೆ ಗುಟ್ಟು. ಗೊತ್ತಾಗಿದೆ ಅಂತ ಅವನಿಗೆ ಗೊತ್ತಾದ್ರೆ, ಅವನು ಅರಣ್ಯಾಧಿಕಾರಿಗೆ ಹೋಗಿ ದೂರು ಕೊಟ್ಟೇ ಕೊಡ್ತಾನೆ. ನಾವು ಅವನಿಗೆ ಇದುವರೆಗೆ ಲಂಚ ಕೊಟ್ಟದ್ದನ್ನು ಹೇಳಿದರೆ ಏನಿದೆ ನಮ್ಮ ಹತ್ತಿರ ಸಾಕ್ಷಿಪುರಾವೆಗಳು. ಇಷ್ಟಕ್ಕೂ ಲಂಚ ಕೊಡೋದು ತಪ್ಪು ನಾವು ಎರಡು ರೀತೀಲಿ ತಪ್ಪಿತಸ್ಥರಾಗುತ್ತೇವೆ'' ಎಂದ.

''ನೀನು ಹೇಳೋದು ನಿಜ'' ಎಂದ ಪಾಂಡು.

ಸಾಂಬ ತಿಂಗಳ ಹಿಂದೆ ನಮ್ಮೊಂದಿಗೆ ಜಗಳಾಡಿದ್ದ, ಬೀಲಿಗೂ ತನಗೂ ಸಂಬಂಧ ಕಲ್ಪಿಸಿ ತನ್ನ ಮನಸ್ಸನ್ನು ಕೆಡಿಸಿದ್ದ. ಈಗ ತಾನಾಗಿ ಬಂದು ತನ್ನೊಂದಿಗೆ ಮಾತು ಬೆಳೆಸಿದ್ದಾನೆ. ಎಷ್ಟೇ ಆಗಲಿ ಬಡವರಿಗೆ ಬದುಕು ಕಷ್ಟ ಸುಖ ಅರ್ಥವಾಗೋದು ಎಂದು ಪಾಂಡು ತನ್ನಷ್ಟಕ್ಕೆ ಯೋಚಿಸುತ್ತಿರಬೇಕಾದರೆ,

''ನೋಡು ಪಾಂಡು ಅಬ್ಬಬ್ಬಾ ಎಂದರೆ ನಾನು ಈ ಅರಣ್ಯದಲ್ಲಿ ವರ್ಷದ ಮೇಲಿರೋದಿಲ್ಲ. ಕೈಲಿ ಅಷ್ಟು ಹಣ ಮಾಡಿಕೊಂಡು ಹೊರಟುಹೋಗುತ್ತೇನೆ'' ಎಂದ. ಮೂರು ದಿನದ ಹಿಂದೆ ಕಾಡು ಕುರುಬರನ್ನು ಕರೆಸಿ ಒಡೆದು ಹಾಕಿದ ಕಾಡಿನ ಮರಗಳ ಸೌದೆಯನ್ನು ಹೊರಗೆ ಸಾಗಿಸಿದ್ದ ಸಾಂಬ. ರಸ್ತೆ ಬದಿಯಲ್ಲಿ ಲಾರಿ ಬಂದು ನಿಂತಿದೆ. ಸೌದೆಯನ್ನು ಸಾಗಿಸಿದ್ದಾನೆ, ಎಂದಿದ್ದ ಗಿರಿ. ಅದರ ನೆನಪು ಬಂದು ''ಸೌದೆ ಮಾರಿದ್ದೇನು ನೀನು?'' ಎಂದ.

''ಹೌದು ಒಳ್ಳೆ ಲಾಭ ಬಂತು, ನಾಳೆ ಇನ್ನಷ್ಟು ಕಾಡು ಮರಗಳನ್ನು ಕಡಿಸೋಣ ಎಂದಿದ್ದೇನೆ. ಏನಿದ್ದರೂ ಹಸಿಮರ ಈ ಕಾಲದಲ್ಲಿ ಚೆನ್ನಾಗಿ ಒಣಗುತ್ತದೆ'' ಎಂದ.

''ನೀನು ಹೋಗೋದ್ರೊಳಗೆ ಕಾಡು ಕಡಿದು ಊರು ಮಾಡಿ ಹೋಗ್ತೀಯ ಅನ್ನು'' ಎಂದ.

''ನಾನೇನು ಕಡಿಯೋದು ಉತ್ತರ ದಿಕ್ಕಿನ ಕಾಡು ಮರಗಳನ್ನು ಅರಣ್ಯ ಇಲಾಖೆಯೇ ಗುತ್ತಿಗೆಗೆ ಕೊಟ್ಟಿದೆಯಂತೆ, ಆ ಭಾಗದ ಅರಣ್ಯ ಪೂರ್ಣ ನಾಶವಾಗಿದೆಯಂತೆ, ಊರಲ್ಲಿ ಯಾರೋ ಮಾತನಾಡಿಕೊಳ್ಳುವುದು ಕಿವಿಗೆ ಬಿತ್ತು. ನಮ್ಮಿಂದ ಲಂಚ ಪಡೆದಂತೆ ಅಲ್ಲೂ ಲಂಚ ಪಡೆದಿರಬೇಕು'' ಎಂದ. ಪಾಂಡು ಮಾತನಾಡದಿದ್ದಾಗ,

''ನೀನು ಅಷ್ಟು ಕಾಡು ಮರಗಳನ್ನು ಕಡಿಸು ಒಂದೆರಡು ಬಿಸಿಲಿಗೆ ಒಣಗುತ್ತದೆ. ಸೌದೆ ಮಾಡಿ ಮಾರಬಹುದು, ಇಲ್ಲ ಮರದ ದಿಮ್ಮಿಗಳನ್ನೆ ಸಾಗಿಸಲು ಬರುತ್ತದೆ'' ಎಂದ.

ಪಾಂಡು ಈ ಮಾತಿಗೆ ಉತ್ತರಿಸದೆ ಹೋದರೂ, ಚಂದ್ರಿಯ ಮಗು ಕುಮುದಳ ಕಡೆಗೆ ದೃಷ್ಟಿ ಹರಿಯಿತು. ತನ್ನ ಮಗು ಪ್ರಾಣ ನೀಗಿದರೇನಂತೆ, ಕಣ್ಣ ಮುಂದೆ ಬೆಳೆಯುತ್ತಿರುವ

ಮಗು ಕೊನೆಯವರೆಗೂ ಅವರ ಆಶ್ರಯದಲ್ಲಿರ ಬೇಕೆ? ಆದಷ್ಟು ಬೇಗ ಅರಣ್ಯಬಿಟ್ಟು, ಹುಡುಗಿಯನ್ನು ದೊಡ್ಡಾಸ್ಪತ್ರೆಗೆ ಸೇರಿಸಿ ಆಪರೇಷನ್ ಮಾಡಿಸಿಯಾದರೂ ಕಾಲನ್ನು ಸರಿಪಡಿಸಲೇ ಬೇಕು. ಎಷ್ಟು ಖರ್ಚಾದರೂ ಸರಿಯೆ ಎಂದುಕೊಂಡ. ಒಂದು ಕ್ಷಣ ಸತ್ತು ಮಣ್ಣಾದ ಮಗಳ ನೆನಪು ದೂರ ಸರಿಯಿತು. ಅವರಿಬ್ಬರು ರೊಟ್ಟಿ ತಿಂದು ಮುಗಿಸಿ, ನಡೆದುಕೊಂಡು ಊರ ದಾರಿ ಹಿಡಿದರು. ಅರಣ್ಯಾಧಿಕಾರಿಯ ಕಚೇರಿಗೆ ಬಂದಾಗ ಊಟದ ಹೊತ್ತು, ಅಧಿಕಾರಿಗಳು ಊಟಕ್ಕೆ ಹೋಗಿದ್ದಾರೆ ಏನು ಬೇಕಾಗಿತ್ತು ಎಂದ, ಒಳಗೆ ಬಿಡುವ ಜವಾನ.

''ಏನಿಲ್ಲ ಅವರನ್ನು ಸ್ವಲ್ಪ ಕಾಣಬೇಕಾಗಿತ್ತು'' ಎಂದ ಸಾಂಬ.

''ಕುಳಿತಿರಿ ಅವರು ಮಧ್ಯಾಹ್ನ ಊಟಕ್ಕೆ ಹೋದರೆ ಬರ್‍ತಾರೆ ಎನ್ನುವ ಭರವಸೆಯಿಲ್ಲ'' ಎಂದ.

''ಹಾಗಾದರೆ ನಾವಿಲ್ಲಿ ಕೂತೇನು ಮಾಡುವುದು?''

''ಅಗತ್ಯದ ಕೆಲಸಕ್ಕೆ ಬಂದಿದ್ದರೆ ಕೂತಿದ್ದು ನೋಡಿ ಹೋಗಿ, ಬಂದರೆ ಅರ್ಧ ಗಂಟೆಯಲ್ಲಿ ಬರೋದುಂಟು'' ನಿರಾಶೆಯಲ್ಲೂ ಆಸೆಯ ತಂತಿ ಮೀಟಿದ ಹಾಗಾಯ್ತು.

'ಸರಿ' ಎಂದು ಅವರಿಬ್ಬರು ಅಲ್ಲೆ ಇದ್ದ ಬೆಂಚಿನ ಮೇಲೆ ಕುಳಿತುಕೊಂಡರು.

''ಏನಾಗಬೇಕಾಗಿದೆಯೋ, ಅರಣ್ಯ ಇಲಾಖೆಗೆ ಸೇರಿದ ಜಮೀನು ಬೇಕಾಗಿದೆಯೇ'' ಎಂದ.

''ಅದೇನಿಲ್ಲ ಅವರನ್ನು ನೋಡಬೇಕು''

''ಹೋ .... ಗೊತ್ತಾಯ್ತು ಬಿಡಿ. ನಿಮಗೂ ಅವರಿಗೂ ಸಂಬಂಧ ಇರುವ ಗುಟ್ಟಿನ ವಿಷಯ'' ಅವನು ವಟಗುಟ್ಟಿದ.

''ಹೌದು''

''ಹಾಗಾದ್ರೆ, ಇರಿ ಸ್ವಾಮಿ, ಈಕಡೆಗೆ ಒಂದೆರಡು ರೂಪಾಯಿ ಎಸೀರಿ ನಾನು ನಿಮಗೆಲ್ಲ ಹೇಳಿಕೊಡ್ತೇನೆ. ಅಧಿಕಾರಿಗಳ ಮೂಡು ಎಷ್ಟು ಹೊತ್ತಿಗೆ ಹ್ಯಾಗ ಹ್ಯಾಗೆ ಇರುತ್ತ ಅಂತ'' ಎಂದ. ಪಾಂಡು ಕಿಸೆಯಿಂದ ಎರಡು ರೂಪಾಯಿ ತೆಗೆದು

> ನನ್ನೆದೆಯ ಪುಸ್ತಕದಲ್ಲಿ
> ನಿನ್ನ
> 'ಸಾವಿರದ'
> ನೆನಪುಗಳನ್ನು
> ಸಂಪಾದಿಸಿದ್ದೇನೆ
>
> \- ಅಶೋಕ ಸಮಗಂಡಿ

ಅವನ ಕೈಲಿಟ್ಟ. ಜವಾನ ಇವರ ಕಡೆ ಮಂಗನಂತೆ ನೋಡಿ ಹಲ್ಲುಕಿಸಿದ ಅರ್ಧಗಂಟೆ ಆಯ್ತು, ಮುಕ್ಕಾಲು ಗಂಟೆ ಆಯ್ತು ಸಾಹೇಬ್ರು ಬರ್‍ತಾರೋ ಇಲ್ಲೋ ಎಂದು ಅವನಷ್ಟಕ್ಕೆ ಗೊಣಗಿಕೊಂಡ. ಅವರಿಬ್ಬರು ಈ ಮಾತಿನಿಂದ ಎಚ್ಚೆತ್ತವರಂತೆ ಮೇಲೆದ್ದರು.

''ಕೂತ್ಕೊಳ್ಳಿ ಸ್ವಾಮಿ ಸ್ವಲ್ಪ ಆ ಕಡೆಗೆ ಓ..... ಅಲ್ಲಿ ಆ ರಸ್ತೆ ತಿರುವಿನಲ್ಲಿ ಸಾಹೇಬ್ರ ಕಾರು ಬರ್‍ತಿದೆ. ಪುಣ್ಯ ಮಾಡಿದ್ರಿ, ಬಿಡಿ. ತತ್ತನ್ನಿ ಇಲ್ಲಿ ಮತ್ತೆರಡು ರೂಪಾಯಿ'' ಎಂದ.

''ಆಗ್ಲೇ ಕೊಟ್ನಲ್ಲ'' ಎಂದ ಪಾಂಡು.

''ಅದು ಸಾಹೇಬ್ರು ಬರ್‍ತಾರೋ ಇಲ್ಲೋ ಅಂತ ತಿಳಿಸೋದಕ್ಕಾಯ್ತು. ಈಗ ಸಾಹೇಬ್ರು ಬಂದ್ರಲ್ಲ. ಅವರನ್ನ ಕಾಣೋಕೆ ನಿಮ್ಮನ್ನ ಒಳಗೆ ಕಳಿಸಬೇಕಲ್ಲ ಅದಕ್ಕೆ ಸ್ವಾಮಿ ಎರಡು ರೂಪಾಯಿ'' ಎಂದ.

ನಿರ್ವಾಹವಿಲ್ಲದೆ ಸಾಂಬ ಎರಡು ರೂಪಾಯಿ ತೆಗೆದುಕೊಟ್ಟ. ಇಲ್ಲದಿದ್ದರೆ ತಮ್ಮನ್ನು ಅಲ್ಲಿಂದ ದೂರ ಓಡಿಸುತ್ತಾನೆ. ಸಾಹೇಬ್ರಮುಖ ಸರಿಯಾಗಿ ಕಾಣಿಸದೆ ಹೋದ್ರೆ, ತಾವು ಗುರುತು ಹಿಡಿಯೋದು ಹೇಗೆ. ಹತ್ತಿರದಲ್ಲಿ ನೋಡಿದರೆ ಅವರು ಖೇಮದ್ರುಮ ಹೌದೇ ಅಲ್ಲವೇ ಎಂದು ಸ್ಥಿರವಾಗುತ್ತದೆ.

''ಸಾರ್ ಅವರನ್ನ ಕೋಣೆಗೆ ಕಳಿಸಿಕೊಟ್ಟು ಆಮೇಲೆ ನಿಮ್ಮನ್ನ ಒಳಗೆ ಬಿಡ್ತೇನೆ. ನಾನು ಕರೆಯೋವರ್‍ಗೂ ಇಲ್ಲೆಕುಳಿತಿರಿ. ನಿಮ್ಮ ಪುಣ್ಯ ಸಾಹೇಬ್ರು ಬಂದ್ರಲ್ಲ'' ಎಂದ. ಅಷ್ಟರಲ್ಲಿ ಅರಣ್ಯಾಧಿಕಾರಿಯ ಕಾರು ಕಚೇರಿಯನ್ನು ಸಮೀಪಿ

ಸಿತು. ಜವಾನ ಸೆಲ್ಯೂಟ್ ಹೊಡೆದ. ಇವರಿಬ್ಬರು ಎದ್ದುನಿಂತರು. ಸಾಹೇಬ್ರು ಆಕಡೆ ಈಕಡೆ ನೋಡಲಿಲ್ಲ. ಅವರ ಠೀವಿ ನೋಡಿ ಅದು ಖೇಮದ್ರುಮ ಅಲ್ಲ ಎಂದು ಮೊದಲೇ ಅನಿಸಿತು ಪಾಂಡುವಿಗೆ.

''ನೋಡಿದ್ಯಾ ಅದು ಖೇಮದ್ರುಮ ಅಲ್ಲ'' ಎಂದು ಪಿಸುಗುಟ್ಟಿದ ಸಾಂಬ. ಅವರ ಕೊಠಡಿಯ ಮೇಲೆ ಅವರ ಹೆಸರಿನ ಫಲಕ ಇದೆ. ಓದಲು ಬಂದಿದ್ದರೆ ಯಾರನ್ನು ಕೇಳುವ ಅಗತ್ಯವಿಲ್ಲ. ಜವಾನ ಅವರ ಹಿಂದೆ ಕೊಠಡಿಯೊಳಗೆ ಹೋದ. ಅರಣ್ಯಾಧಿಕಾರಿಯನ್ನು ನೋಡಿದ ಮೇಲೆ ಇವರಿಬ್ಬರು ಕಾಲಿಗೆ ಬುದ್ಧಿ ಹೇಳಿದರು. ಜವಾನ ಬರೋವಷ್ಟರಲ್ಲಿ ಹೊರಟುಹೋಗಬೇಕು. ಹೊರಗೆ ಬಂದ ಜವಾನ ಅತ್ತಿತ್ತ ಅವರನ್ನು ಹುಡುಕಿದ. ದೂರದ ರಸ್ತೆ ತಿರುವಿನಲ್ಲಿ ಅವರು ಮರ ಆದದ್ದನ್ನು ನೋಡಿ, ಇದೇನಿದು ವಿಚಿತ್ರ ಎಂದು ಗೊಣಗಿಕೊಂಡು ಅಲ್ಲೇ ಬೆಂಚಿನ ಮೇಲೆ ಕುಳಿತುಕೊಂಡ. ದಾರಿಹೋಕರೊಬ್ಬರು ಎದುರಾದಾಗ ಅರಣ್ಯಾಧಿಕಾರಿಯ ಹೆಸರನ್ನು ಕೇಳಿದ ಸಾಂಬ.

ಸದಾಶಿವ ಎಂದ ಆತ.

ಅಷ್ಟೇ ಬೇಕಾಗಿತ್ತು ಇವರಿಬ್ಬರಗೆ.

''ನೋಡಿದ್ಯಾ ನನ್ನ ಊಹೆ ಎಷ್ಟು ನಿಜ ಆಯ್ತು. ನೂರಕ್ಕೆ ನೂರು ಅವನು ನಮಗೆ ಮೋಸ ಮಾಡಿದ್ದಾನೆ ಅಂದಿದ್ನಲ್ಲ. ಹ್ಯಾಗೆ ನಿಜವಾಯ್ತು ನೋಡು'' ಎಂದ.

''ಖೇಮದ್ರುಮ ಬರ್ಲಿ, ಚೆನ್ನಾಗಿ ತರಾಟೆಗೆ ತಗೋಬೇಕು'' ಎಂದ ಪಾಂಡು. ''ಅವಸರ ಮಾಡಬೇಡ, ಅವಸರದಿಂದ ಕೆಲಸ ಹಾಳು ಅಂತಾರಲ್ಲ. ನೆನಪಿರಲಿ ನಮಗೇನು ತಿಳಿದಿಲ್ಲ ಅಂತ ಕೆಲವು ದಿವಸ ವರ್ತಿಸಬೇಕು. ಆಮೇಲೆ ನೋಡ್ತಿರು ಒಂದಿನ ನಾನು ಅವನಿಗೆ ಸರಿಯಾಗಿ ಬುದ್ಧಿ ಕಲಿಸಿ ಹೋಗ್ತೇನೆ'' ಎಂದ ಸಾಂಬ. ಇಬ್ಬರೂ ಮಾತನಾಡುತ್ತ ಬಿಸಿಲೆಯನ್ನು ತಲುಪಿದರು. ಆಗಲೇ ತಿಂದ ರೊಟ್ಟಿ ಜೀರ್ಣವಾಗಿ ಎಲ್ಲಿ ಹೋಗಿತ್ತೋ ಇಬ್ಬರಿಗೂ ಹಸಿವು. ಆದ್ದರಿಂದ ಇಬ್ಬರೂ ಬಿಸಿಲೆ ತಲುಪುತ್ತಲೇ ಅವರವರ ಮನೆಗೆ ಹೊರಟುಹೋದರು. ಹೋಗುವ ಮೊದಲು ಸಾಂಬ, ''ಈ ವಿಷಯ ನಮ್ಮಿಬ್ಬರಲ್ಲೇ ಇರಲಿ. ನಾವು ಒಬ್ಬರ ಕಿವಿಗೆ ಹಾಕಿದರೆ ಅದು ಹೋಗಿ ಖೇಮದ್ರುಮನನ್ನು ತಲುಪುವುದಕ್ಕೆ ಹೆಚ್ಚು ಹೊತ್ತು ಬೇಡ'' ಎಂದ. ಅವನ ಮಾತಿಗೆ ಮೌನವಾಗಿಯೇ ಸಮ್ಮತಿ ನೀಡಿದ ಪಾಂಡು.

ತನ್ನ ಮಗಳು ಉಮಾ ಸತ್ತಮೇಲೆ ಚಂದ್ರಿಯ ಮಗಳು ಕುಮುದಳನ್ನು ಹಚ್ಚಿಕೊಂಡು ಬಿಟ್ಟಿದ್ದ ಪಾಂಡು. ಆ ಹುಡುಗಿಯೂ ರಾಣಿ ಮತ್ತು ಇವನನ್ನು ಹಚ್ಚಿಕೊಂಡು ಬಿಟ್ಟಿದ್ದಳು. ದೊಡ್ಡಪ್ಪನ ಬರುವನ್ನು ನಿರೀಕ್ಷಿಸುತ್ತ ಹೊಸಿಲ ಬಳಿ ಕುಳಿತಿದ್ದ ಕುಮುದ ಇವನನ್ನು ಕಂಡೊಡನೆ ಒಳಗಿದ್ದ ರಾಣಿಗೆ ಸುದ್ದಿ ಮುಟ್ಟಿಸಿದಳು. ಹೊಸಿಲ ಬಳಿ ಕುಳಿತಿದ್ದ ಅವಳನ್ನು ಎತ್ತಿಕೊಂಡು ಪಾಂಡು ಒಳಗಡಿ ಇಟ್ಟ. ರಾಣಿ ಊಟ ಮಾಡದೆ ಅವನಿಗಾಗಿ ಕಾಯುತ್ತಿದ್ದಳು. ಚಂದ್ರಿ ಅಲ್ಲೇ ಮೂಲೆಯಲ್ಲಿ ಮಲಗಿದ್ದಳು. ಊಟದೆಲೆ ಕುತ್ತದೆ ಅವಳು ಮಲಗಿದ್ದಾಳೆ. ಯಾವತ್ತು ಅಕ್ಕ-ತಂಗಿಯರು ಮಧ್ಯಾಹ್ನ ಮಲಗುತ್ತಿರಲಿಲ್ಲ. ಗಂಡ ಆ ಕಡೆ ತಿರುಗಿದಾಗ ಹೆಂಟೆಗೊದ್ದ ಇರಬೇಕು. ಅವಳ ಕಣ್ಣಿಗೆ ಕಚ್ಚಿಬಿಟ್ಟಿದೆ ಎಂದಳು ರಾಣಿ. ಚಂದ್ರಿ ಭಾವನನ್ನು ನೋಡಿ ಎದ್ದು ಕುಳಿತುಕೊಂಡಳು.

''ಅಂಟುವಾಳದ ಕಾಯಿ ಕೀಳಲು ಹೋಗಿದ್ವೇವು. ಆ ಮರದ ಮ್ಯಾಣಕ್ಕೆ ಗೊದ್ದಗಳು ಉದ್ದಕ್ಕೂ ಹರಿಯುತ್ತಿದ್ದವು. ಕಡ್ಡಿಯಿಂದ ಕೊಂಬೆಗಳನ್ನು ಎಳೆದು ಅಂಟುವಾಳದ ಕಾಯಿ ಕೀಳುತ್ತಿರಬೇಕಾದರೆ ಗೊದ್ದ ಹೇಗೆ ಕಚ್ಚಿತೋ ತಿಳಿಯಲಿಲ್ಲ. ಮನೆಗೆ ಬಂದಾಗ ಊತ ಏರಿ ಕಣ್ಣು ಬಿಡಲಿಕ್ಕಾಗಲಿಲ್ಲ'' ಎಂದಳು.

''ಮಲಕ್ಕೊ ಸಂಜೆ ಹೊತ್ತಿಗೆ ಕಡಿಮೆಯಾಗಬಹುದು'' ಎಂದ ಪಾಂಡು. ಊಟ ಮಾಡುತ್ತ ರಾಣಿ ಕೇಳಿದಳು,

''ಅರಣ್ಯಾಧಿಕಾರಿ ಖೇಮದ್ರುಮ ಹೌದು ತಾನೆ?''

''ಹೌದು ಈ ಸಾಂಬನಿಗೆ ಸುಮ್ಮನೆ ಇಲ್ಲದ ಭ್ರಾಂತಿ ಅಷ್ಟೆ'' ಎಂದ ಪಾಂಡು. ಮತ್ತೆ ರಾಣಿಯು ಸುಮ್ಮನಾದಳು.

ಚಂದ್ರಿಯ ಕಣ್ಣಿನ ಊತವೇನೋ ಒಂದೆರಡು ದಿನದಲ್ಲಿ ಇಳಿಯಿತು. ಆದರೆ ಅದು ಹಂಚೆಗೊದ್ದವೋ ಮತ್ತೇನು ಹುಳವೋ ಕಚ್ಚಿದ ನಂಜಿಗೆ ಕಣ್ಣಲ್ಲಿ ಒಂದು ಕುರು ಎದ್ದಿತು. ಕೀವು ತುಂಬಿಕೊಂಡು ಅದು ಕಣ್ಣು ಪೂರ್ತಿ ಹರಡಿಕೊಂಡಿತು. ಚಂದ್ರಿ ನಾಲ್ಕಾರು ತಿಂಗಳು ಕಣ್ಣು ನೋವಿನಿಂದ ನರಳಿದಳು. ಆಸ್ಪತ್ರೆಗೆ ತೋರಿಸಲು ಹೋಗಲಿಲ್ಲ. ಹುಣ್ಣು ಕೀವು ತುಂಬಿ, ಕೀವು ಹೊರಬಂದ ಮೇಲೆ ವಾಸಿ ಆದ ಹಾಗೆ ಲೆಕ್ಕ ಎಂದು ಮನೆಯವರೆಲ್ಲ ಯೋಚಿಸಿದರು. ರಾಣಿ ಅವಳ ಕಣ್ಣಿಗೆ ಹಗಲೆಲ್ಲ ತಂಪಾಗಿರಲಿ ಎಂದು ಕೊತ್ತಂಬರಿ ನೆನಸಿಟ್ಟು ನೀರು ಬಿಡುತ್ತಿದ್ದಳು. ಚಂದ್ರಿಯ ಕಣ್ಣು ಗುಣವಾಗಲು ನಾಲ್ಕಾರು ತಿಂಗಳು ಹಿಡಿಯಿತು. ಕಣ್ಣೇನೋ ಗುಣವಾಯಿತು. ಆದರೆ ಎಡಗಣ್ಣ ದೃಷ್ಟಿಯನ್ನು ಕಿತ್ತುಕೊಂಡು ಹೋಯಿತು. ಅವರ ಜನದಲ್ಲೇ ದೃಷ್ಟಿ ತಾಗುವ ಹಾಗೆ ಇದ್ದ ಚಂದ್ರಿಯ ಮುಖ ಈಗ ನೋಡಲಾಗುತ್ತಿರಲಿಲ್ಲ. ಯಾಕೋ ಅಜ್ಜ ಹೇಳುತ್ತಿದ್ದ ಮಾತು ಪಾಂಡುವಿಗೆ ನೆನಪಾಗುತ್ತದೆ.

''ಕಾಡು ಕಡಿದು ಊರು ಮಾಡಿದಿರಿ. ಪ್ರಕೃತಿ ಮುನಿಯುತ್ತಾಳೆ. ಪಕ್ಷಿ ಸಂಕುಲಗಳು ಶಾಪ ಹಾಕುತ್ತವೆ. ಕಾಡು ತತ್ತರಿಸುತ್ತದೆ'' ಆಗೆಲ್ಲ ಅಜ್ಜನ ಮಾತು ಹಗುರವಾಗಿ ಕಾಣುತ್ತಿತ್ತೊ, ಹಗುರವಾಗಿ ತೆಗೆದುಕೊಂಡಿದ್ದನೋ ತಿಳಿಯದು. ಈಗ ಅಜ್ಜನ ಒಂದೊಂದು ಮಾತುಗಳು ನೆನಪಿಗೆ ಬರುತ್ತವೆ. ಅಜ್ಜ ಬೆಂಕಿಯಲ್ಲಿ ಬಿದ್ದು ಬೆಂದು ಹೋದ, ಅವನು ಸಾಯುವಾಗ ಅವನ ಎರಡೂ ಬಗಲಲ್ಲಿದ್ದ ಎರಡು ಮೊಲಗಳ ಚಿತ್ರ ಕಣ್ಣಿಗೆ ಕಟ್ಟುತ್ತವೆ. ಪಶುಪಕ್ಷಿ ಪ್ರಾಣಿಗಳನ್ನು, ಗಿಡಮರಗಳನ್ನು ಅಜ್ಜ ಪ್ರೀತಿಸುತ್ತಿದ್ದ ನೀವು ಎಲ್ಲಾ ಪ್ರೀತಿಸಿ ಉದ್ಧಾರವಾಗುತ್ತೀರ ಎಂದು ಹೇಳುತ್ತಿದ್ದ. ತಾವು ಯಾರೊಬ್ಬರೂ ಅವನು ಹೇಳುತ್ತಿದ್ದ ಮಾತುಗಳನ್ನು ಕೇಳುತ್ತಿರಲಿಲ್ಲ. ಈಗ ಕೇಳಬೇಕಾಗಿತ್ತು ಎನಿಸುತ್ತದೆ. ಅದಕ್ಕಾಗಿಯೇ ಅವನು ಸತ್ತ ಮೇಲೆ ಒಂದು ಮರ ಕಡಿಯುವ ಸಾಹಸಕ್ಕೂ ಹೋಗಿರಲಿಲ್ಲ ಅವರೆಲ್ಲ. ಸಾಂಬ ಕಡಿದು ಕಡಿದು ಹಾಕುವಾಗ ನರಳುತ್ತದೆ ಒಳಮನಸ್ಸು. ಬೇಡ

> **ವಿಷಾದ**
> ಈ ಕೆನ್ನೆಯ ಮೇಲೆ
> ನಿನ್ನ ಹಲ್ಲಿನ ಗುರುತಿದೆ
> ಎಂದಿದ್ದೆ; ಇಲ್ಲಾ,
> ಕಣ್ಣೀರ ಕಲೆಯೂ ಇದೆ.
>
> **ಸುಧಾ ಶರ್ಮಾ**

ಎನ್ನುವುದಕ್ಕೆ ತಾವು ಯಾರು, ತಾವು ಅದೇ ಕೆಲಸ ಮಾಡಿದ್ದೇವಲ್ಲ ಎಂದು ಯೋಚಿಸುತ್ತಾನೆ. ಚಂದ್ರಿಯ ಮುಖ ಕಂಡಾಗಲೆಲ್ಲ, ಇದು ಯಾವ ದೌರ್ಭಾಗ್ಯ ಎಂದು ಹಲುಬುತ್ತಾನೆ. ಆದಷ್ಟು ಬೇಗ ಅರಣ್ಯ ಬಿಟ್ಟು ಹೋಗಬೇಕು. ದುಡಿದಷ್ಟರಲ್ಲಿ ಇತ್ತೀಚೆಗೆ ಹೆಚ್ಚೇನು ಹಣ ಉಳಿತಾಯ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಖೇಮದ್ರು ಮನಿಗೆ ದುಡಿದ ಹಣದಲ್ಲಿ ಅರ್ಧಭಾಗ ಹೋಗುತ್ತಿತ್ತು. ಇನ್ನು ಅರ್ಧ ಭಾಗದಲ್ಲಿ ಸಂಸಾರದ ಖರ್ಚುವೆಚ್ಚಗಳನ್ನು ನಿಭಾಯಿಸುವುದೇ ಕಷ್ಟವಾಗುತ್ತಿತ್ತು. ರಾಣಿ ಹೇಳುತ್ತಿದ್ದಳು,

''ಇತ್ತೀಚೆಗೆ ಮನೆಗೆ ಬೇಕಾದಷ್ಟು ಸಾಮಾನು ನೀವು ತರಿಸುತ್ತಿಲ್ಲ. ನಾನು ಇಷ್ಟು ಮಂದಿಗೆ ಅಡಿಗೆ ಹೇಗೆ ಮಾಡಿ ಹಾಕಬೇಕು?''

''ಹೇಗಾದರೂ ಎರಡು ವರ್ಷ ಸುಧಾರಿಸು. ಈ ಬಿಸಿಲೆ ಅರಣ್ಯಕ್ಕೆ ಬಂದ ಮೇಲೆ ನಮಗೆ ಏನು ಒಳ್ಳೆಯದಾಗಿದೆ ಹೇಳು. ಹೊಟ್ಟೆಪಾಡೇನೋ ಸುಖವಾಗಿ ಕಳೆಯುತ್ತಿದೆ. ಒಪ್ಪಿಕೊಳ್ಳೋಣ. ಆದರೆ ಇದಕ್ಕಿಂತಲೂ ಮುಖ್ಯವಾದ್ದನ್ನು ನಾವು ಕಳೆದುಕೊಳ್ಳುತ್ತಿಲ್ಲವೇ?'' ಎಂದಾಗ ತನ್ನಿಬ್ಬರು ಮಕ್ಕಳನ್ನು ಕಳೆದುಕೊಂಡ ನೆನಪು ಬಂದು ಕಣ್ಣೀರು ಮಿಡಿದಿದ್ದಳು. ಯೋಚಿಸುತ್ತ ಅವನು ಈ ಸಾರೆ ಖೇಮದ್ರುಮನು ಬಂದಾಗ ಅವನಿಗೆ ಕೊಡುವ ಭಾಗದಲ್ಲಿ ಅರ್ಧಭಾಗ ಇಳಿಸುತ್ತೇನೆ. ದಗಲ್ಬಾಜಿ ಜನರು. ತಾನು ಅರಣ್ಯಾಧಿಕಾರಿ ಎಂದು ಹೇಳುತ್ತ ಇಷ್ಟು ವರ್ಷ ತಮ್ಮನ್ನು ದೋಚಿದ್ದಾನೆ. ಅನಾಯಾಸವಾಗಿ ಹೇಗೆ ಸುಲಿಗೆ ಮಾಡಿದ್ದಾನೆ. ತಾವು ಎಲ್ಲಾ ನಂಜಿದೆವಲ್ಲ ಅವನ

ಸುಟಕಕ್ಕೆ. ಸಾಂಬ ಈ ಗುಟ್ಟು ಬಯಲಾದ ಮೇಲೆ,

''ನಾನಿಷ್ಟೇ ಕೊಡುವುದು ಏನು ಮಾಡ್ತೀಯೋ ಮಾಡ್ಕೋ ಹೋಗು'' ಎಂದಿದ್ದ. ಅವನ ಬಾಯಿಗೆ ಖೇಮದ್ರುಮ ಹೆದರುವಂತೆ ತನಗೆ ಹೆದರುತ್ತಿಲ್ಲ ಆದರೂ ತಾನು ತನ್ನ ಕಷ್ಟದ ಅರಿವನ್ನು ಅವನಿಗೆ ಮುಟ್ಟಿಸಿ ಅವನಿಗೆ ಕೊಡುವ ಹಣದಲ್ಲಿ ಒಂದಿಷ್ಟು ಕಮ್ಮಿ ಮಾಡಿಸಬೇಕು. ಕೊಟ್ಟಷ್ಟು ತೃಪ್ತಿಯಿಲ್ಲ ಅವನಿಗೆ. ಯಾವಾಗಲೋ ಒಮ್ಮೆ ಹಣ ಕಮ್ಮಿ ಬಿದ್ದಾಗ ಜೇನುತುಪ್ಪ ಕೊಟ್ಟದ್ದು ನೆನಪಿಟ್ಟುಕೊಂಡು, ತಾಜಾ ಜೇನು ತುಪ್ಪ ಸಂಗ್ರಹಿಸಿದಾಗ ಎರಡು ಸೀಸೆ ಈ ಕಡೆ ಕೊಡುವುದನ್ನು ಮರೆಯಬೇಡ ಎಂದು ಹೇಳುತ್ತ ಬರುತ್ತಿದ್ದಾನೆ. ಈ ಸಾರೆ ತೆಗೆದು ತಂದ ಜೇನುತುಪ್ಪದಲ್ಲಿ ಒಂದು ಸೀಸೆ ಅವನಿಗೆ ಕೊಟ್ಟು ಪುಸಲಾಯಿಸಬೇಕು. ಇಲ್ಲದಿದ್ದರೆ ಅವನು ಹೋಗಿ ಆ ಅರಣ್ಯಾಧಿಕಾರಿಗೆ ದೂರುಕೊಡಬಹುದು. ಯೋಚಿಸುತ್ತಿರಬೇಕಾದರೆ ಖೇಮದ್ರುಮ ಬಂದ.

''ಸ್ವಾಮಿ ಇಷ್ಟು ವರ್ಷ ಹ್ಯಾಗೋ ನಡೀತು. ನೀವು ಕೇಳಿದಷ್ಟು ಹಣ ಕೊಟ್ಟೆ. ಆದರೆ ನಮ್ಮ ಮನೆಯ ಪರಿಸ್ಥಿತೀನ ನೀವು ಅರ್ಥಮಾಡ್ಕೋ ಬೇಕು''

''ಅದೆಲ್ಲ ನನಗೇನು ಹೇಳ್ತೀಯ''

''ಅಜ್ಜ ಸತ್ತ ಮೇಲೆ ಒಂದೊಂದೆ ಕಷ್ಟ ನನ್ನ ಬೆನ್ನು ಬಿಡಲಿಲ್ಲ. ನನ್ನ ಕೂಸು ಹೋಯ್ತು. ನೋಡಿ ನನ್ನ ತಮ್ಮನ ಹೆಂಡತಿ ಚಂದ್ರಿ, ಒಂದು ಕಣ್ಣು ಕಳೆದುಕೊಂಡು ಒಬ್ಬಾ ಹೋದನ್ನ ನೋಡಿದ್ರೆ, ಕರುಳು ಕಿವುಚಿ ಬರುತ್ತೆ. ನನ್ನ ಸಂಸಾರದ ದಿನ ನಿತ್ಯದ ಖರ್ಚು ತೂಗಿಸುವುದಕ್ಕೆ ನನ್ನಿಂದಾಗುತ್ತಿಲ್ಲ''

''ಅದೆಲ್ಲ ನನ್ನ ಮುಂದೆ ಹೇಳಬೇಡಯ್ಯ'' ಎಂದ ಖೇಮದ್ರುಮ. ಅಲ್ಲೇ ಬಾವಿ ನೀರು ಸೇದಿಕೊಳ್ಳುತ್ತಿದ್ದ ಸಾಂಬ,

''ನೋಡಿ ಸ್ವಾಮಿ ಕೊಟ್ಟಷ್ಟು ತಗೊಂಡು ಹೋದ್ರೆ, ಸರಿ. ಇಲ್ದೆ ಹೋದ್ರೆ, ನಾವೇನು ಮಾಡ್ತೇವೆ ಅಂತ ನಿಮಗೆ ಗೊತ್ತಿಲ್ಲ'' ಎಂದ.

''ಏನು ಮಾಡ್ತೀಯೋ ನೀನಲ್ಲ ನನಗೆ ತಕ್ಕ ಶಾಸ್ತಿ ಮಾಡೋನು. ನಾನು ನಿಮ್ಮನ್ನ ಹೊರಗೆ ಹಾಕೋಕೆ ಎಷ್ಟು ಹೊತ್ತು ಬೇಕು ಅಂದ್ಕೊಂಡಿದ್ದೀಯ? ಚಿಟಕೆ ಹೊಡೆದು ನಿಲ್ಲಿಸೋದ್ರಲ್ಲಿ ನಿಮ್ಮನ್ನ ಕತ್ತು ಹಿಡಿದು ಹೊರಗೆ ಹಾಕೋಕೆ ನಂಗೊತ್ತು''

''ನೀನೆಷ್ಟು ನ್ಯಾಯವಾಗಿ ನಡೆದುಕೊಂಡ್ರೆ ನಾವು ಅಷ್ಟೇ ನ್ಯಾಯವಾಗಿರ್ತೇವೆ. ನ್ಯಾಯ ಬಿಟ್ಟು ಹೋದ್ರೆ ನಮ್ಗು ಗೊತ್ತು ಏನು ಮಾಡಬೇಕು ಅಂತ'' ಎಂದ ಸಾಂಬನ ಮಾತಿನಿಂದ ಖೇಮದ್ರುಮ ಯಾಕೋ ಮೆತ್ತಗಾದ.

''ಸರಿ ಏನು ಕೊಡ್ತಿರೋ ಕೊಡಿ'' ಎಂದ.

ಅವನ ಮುಖಕ್ಕೆ ನೂರು ರೂಪಾಯಿ ಬಿಸಾಡಿದ ಸಾಂಬ, ''ಕೊಡ್ತಿರೋದೆ ಜಾಸ್ತಿ ತಗೊಂಡು ಹೋಗು'' ಎಂದ. ಅದನ್ನು ನೋಡಿ ಪಾಂಡು ಇನ್ನೂರು ರೂಪಾಯಿ, ಮೇಲೊಂದು ಜೇನು ತುಪ್ಪದ ಸೀಸೆ ತಂದು ಅವನ ಮುಂದಿಟ್ಟ.

''ಬೇವರ್ಸಿ ನನ್ನ ಮಕ್ಕಳ್ರ ಮಾಡ್ತೇನೆ ತಡೀರಿ'' ಎಂದು ಅವನು ತನ್ನಷ್ಟಕ್ಕೆ ಗೊಣಗಿಕೊಂಡು, ಬಂದದ್ದೇ ಲಾಭ ಎಂದುಕೊಳ್ಳುತ್ತ ಹೊರಟುಹೋದ.

ಮಣ್ಣು ಸಾರ ಕಳೆದುಕೊಂಡಿದೆ ಗಾಂಜಾದ ಬೆಳೆ ಮೊದಲಿನಷ್ಟು ಹುಲುಸಾಗಿಲ್ಲ. ಆದಷ್ಟು ಬೇಗ ಈ ಜಾಗ ಬಿಡುವುದು ಒಳ್ಳೆಯದು ಎಂದುಕೊಳ್ಳುತ್ತಾನೆ ಪಾಂಡು. ಬೀರಿ ಬಂದು ಹೇಳಿದಳು. ''ಅಣ್ಣಾ ಯಾಕೋ ನಮಗೆ ಈ ಜಾಗ ಆಗಿಬರಲಿಲ್ಲ. ಹೇಗೂ ನೀನು ಇಷ್ಟರಲ್ಲಿ ಈ ಜಾಗ ಬಿಡುತ್ತೇನೆ ಎಂದಿದ್ದೆ. ನೀವು ಎಲ್ಲಿ ಹೋಗ್ತಿರೋ ಅಲ್ಲಿ ಬಂದು ನಿಮಗೆ ಕಾಟ ಕೊಡೋಕೆ ನನಗಿಷ್ಟವಿಲ್ಲ. ಗಂಡಮಕ್ಕಳನ್ನು ಕರೆದುಕೊಂಡು ನಾನು ಊರಿಗೆ ಹೋಗ್ತೇನೆ. ಅಲ್ಲಿ ಭಿಕ್ಷೆ ಬೇಡಿಯಾದರೂ ಬದುಕಬಹುದೇನೋ'' ಎಂದಳು.

ಒಂದು ತೋಟ ಹೊಲಮನೆ ಕೊಂಡು ಬದುಕಬೇಕು ಎಂದು ಆಗಾಗ ಯೋಚಿಸುತ್ತಾ ಬಂದಿದ್ದ ಪಾಂಡು, ಅವಳನ್ನು ಹೋಗಲು ಬಿಡಲಿಲ್ಲ. ''ಎಷ್ಟೋ ವರ್ಷದಿಂದ ನೀವೆಲ್ಲ ಜೊತೆಗೆ

ಇದ್ದೀರಿ. ಬೇಡ ಜೀರಿ ನಮ್ಮನ್ನು ಬಿಟ್ಟು ಹೋಗಬೇಡಿ. ಒಂದು ದಿನ ಒಳ್ಳೆಯ ಕಾಲ ಬರಬಹುದು. ನಾವೆಲ್ಲ ಸಂತೋಷದಿಂದ ಅನುಭವಿಸುವ ಕಾಲ ಬರಬಹುದು. ಇಷ್ಟು ದಿನ ಅನುಭವಿಸಿದ ದುರ್ದೆಸೆ ಇನ್ನು ಮುಂದಿರಲಾರದು. ನೋಡೋಣ ದೇವರು ನಡೆಸಿದರೆ ನಾವು ಹೋಗುವ ಕಡೆಗೆ ನಿಮ್ಮನ್ನು ಕರೆದುಕೊಂಡು ಹೋಗುತ್ತೇವೆ'' ಎಂದ.

ಅವಳಿಗೂ ಆ ತಂಡವನ್ನು ಬಿಟ್ಟು ಇರಲು ಧೈರ್ಯವಿಲ್ಲ. ಅಣ್ಣ-ತಮ್ಮಂದಿರ ಹಾಗೆ ಅವರಿರುವುದರಿಂದ ಜೀರಿಗೂ ಏನಾದರೂ ಸಹಾಯ ಬೇಕಿದ್ದರೆ ಅವರಲ್ಲಿ ಕೇಳಲು ಸಂಕೋಚವಿಲ್ಲ. ಈಗ ಅವಳು ಆಡುಗಳನ್ನು ಮಾರಿದ್ದಳು. ಅವುಗಳಿಗೆ ಹುಲ್ಲು ತರಲು ಅವಳಿಂದ ಸಾಧ್ಯವಿಲ್ಲ. ಕಾಡೊಳಗೆ ಬಿಟ್ಟರೆ ಅವು ಎಲ್ಲೆಲ್ಲೋ ಅಂಡಲೆದು ತಪ್ಪಿಸಿಕೊಂಡು ಚಿರತೆಯ ಬಾಯಿಗೆ ಆಹಾರವಾಗಿ ಹೋದರೆ ನಷ್ಟವಲ್ಲದೆ ಮತ್ತೇನು. ಅದರಲ್ಲಿ ಒಂದು ಆಡು ಸಾಂಬ ಕೊಂಡಿದ್ದ. ಮತ್ತೊಂದನ್ನು ಪಾಂಡುಗೆ ಹಾಗೆ ಕೊಟ್ಟುಬಿಟ್ಟಿದ್ದಳು. ದಿನಾ ಅಷ್ಟೋ ಇಷ್ಟೋ ಹಾಲು ಕೊಟ್ಟರೆ ಸಾಕು ಎಂದಿದ್ದಳು. ಚಿನ್ನಸ್ವಾಮಿಗೆ ತುಂಬಾ ಸಿಟ್ಟು ಬಂದಿತ್ತು. ''ನೀವು ಯಾವುದೇ ವ್ಯವಹಾರಕ್ಕೆ ತಲೆ ಹಾಕ ಕೂಡದು. ದುಡಿದು ಹಾಕೋಕೆ ಯೋಗ್ಯತೆ ಇಲ್ಲದವರು, ಎಲ್ಲಾ ವ್ಯವಹಾರಕ್ಕೆ ತಲೆ ಹಾಕೋಕೆ ಮಾತ್ರ ಬರುತ್ತೆ'' ಎಂದು ಮೂದಲಿಸಿದ್ದಳು. ಚಿನ್ನಸ್ವಾಮಿ ನಿರ್ವಾಹವಿಲ್ಲದೆ ಸುಮ್ಮನಾಗಿದ್ದ.

ದಿನಗಳು ಉರುಳುತ್ತಿವೆ. ಸಾಂಬ ಒಂದು ದಿನ ಬಂದು ಪಾಂಡುಗೆ ಹೇಳಿದ.

''ಪಾಂಡು ಅಬ್ಬಬ್ಬ ಎಂದರೆ ನಾನಿರೋದು ಇಲ್ಲಿ ಒಂದು ವಾರ. ವಾಸಕ್ಕೆ ಒಂದು ಮನೆ ಖರೀದಿಸಿದೆವು. ಎಲ್ಲಿ ಏನು ಅಂತ ಕೇಳಬೇಡ. ಅದೆಲ್ಲ ಗುಟ್ಟಾಗಿರಬೇಕು. ನಾವು ಅರಣ್ಯವನ್ನ ಲೂಟಿ ಹೊಡೆದಿದ್ದೇವೆ ಅಂತ ಅರಣ್ಯಾಧಿಕಾರಿಗೆ ಗೊತ್ತಾದರೆ ಬೆನ್ನು ಹತ್ತಬಹುದು. ನೀನು ಆದಷ್ಟು ಬೇಗ ಈ ಜಾಗ ಬಿಟ್ಟು ಹೋಗೋ ಏರ್ಪಾಡು ಮಾಡಿಕೋ. ಅರಣ್ಯದ ಉತ್ತರ ಭಾಗದಲ್ಲೆಲ್ಲ ಕಾಡು ಮರಗಳನ್ನು ಗುತ್ತಿಗೆಗೆ ಪಡೆದು ಕಾಡು ಕಡಿದು ಊರು ಮಾಡುತ್ತಿದ್ದಾರೆ. ಅವರಿಗೆ ಕಾಡು ಮರಗಳನ್ನು ಗುತ್ತಿಗೆಗೆ ಕೊಟ್ಟವರ ಖೇಮದ್ರುಮನಂತಹ ನಕಲಿ ಜನರೇ ಇರಬೇಕು. ಅರಣ್ಯ ಇಲಾಖೆಗೆ ಗೊತ್ತಾಗೋ ಹೊತ್ತಿಗೆ ಕಾಡು ಊರಾಗಿರುತ್ತೆ. ನಮಗೇನು ನಾವು ಮಾಡ್ತಿರೋದು ಅದನ್ನೇ ತಾನೆ'' ಪಾಂಡು 'ನಿಜ' ಎಂದ.

''ಈ ಸಾರೆ ಖೇಮದ್ರುಮ ಬರ್ಲಿ ಅವನಿಗೆ ಹ್ಯಾಗೆ ಬುದ್ಧಿ ಕಲಿಸ್ತೇನೆ ಅಂತ ನೋಡ್ತಿರು. ಅವನು ಇನ್ನೆಂದು ಇಂತಹ ಕೆಲಸ ಮಾಡಬಾರ್ದು, ಹಾಗೆ ಬುದ್ಧಿ ಕಲಿಸ್ತೇನೆ. ಕಳೆದ ಸಾರೆ ಬಂದಿದ್ನಲ್ಲ. ಲಕ್ಷ್ಮಿ ಹತ್ರ ಸಲಿಗೆಯಿಂದ ಮಾತನಾಡಿದ್ನಂತೆ.



ನಮ್ಮನ್ನ ಏನು ಅಂತ ತಿಳ್ಕೊಂಡಿದ್ದಾರೋ ಒಬ್ಬ್ರಾದ್ರೂ ಬುದ್ಧಿ ಕಲಿಸದೆ ಹೋದ್ರೆ ಇಂತೋರು ಕೊಬ್ಬಿ ಬಿದ್ದಾರೆ. ಅದಕ್ಕೆ ಅವಕಾಶ ಮಾಡಿಕೊಡಬಾರದು'' ಎಂದ.

''ಇಷ್ಟು ದಿನ ಆ ಅವಕಾಶ ಮಾಡಿಕೊಟ್ಟದ್ದೇ ತಪ್ಪು''

''ತಪ್ಪು, ಆದ್ರೆ ನಾವು ಬದುಕಬೇಕಾಗಿತ್ತಲ್ಲ. ಹೊಟ್ಟೆಗಾಗಿ ಮನುಷ್ಯರು ಏನೇನು ಮಾಡ್ತಾರೆ ಅನ್ನೋದಕ್ಕೆ ನಾನು ಸಾಕ್ಷಿನೇ ಅನ್ನು'' ಎಂದ ಸಾಂಬ. ಪಾಂಡು ಈ ಮಾತಿಗೆ ಉತ್ತರಿಸಲಿಲ್ಲ.

''ನೋಡು ನಾನು ಅರಣ್ಯ ಬಿಟ್ಟು ಹೋದೆ, ಹೋಗೋ ಮೊದ್ಲು ಹೇಳ್ಲಿಲ್ಲ ಮಾಡ್ಲಿಲ್ಲ ಅಂತ ಬೇಜಾರಿಲ್ಲ ತಿಳ್ಕೋಬಾರ್ದು ಅಂತ ಹೇಳಿದ್ದೇನೆ. ನಿಜ ಹೇಳೋದಾದರೆ ಈ ಅರಣ್ಯದ ಎಲ್ಲಾ ಸಂಪನ್ಮೂಲಗಳನ್ನು ನನ್ನ ಸ್ವಾರ್ಥಕ್ಕಾಗಿ ಬಳಸಿದ್ದೇನೆ. ಮಾಡಿದ ತಪ್ಪನ್ನು ಮುಚ್ಚಿಡೋದು ಅಂದ್ರೆ, ಅದು ಮತ್ತೊಂದು ರೀತೀಲಿ ತಪ್ಪಾಗುತ್ತೆ. ಅದಕ್ಕಾಗಿ ನಿಮ್ಮ ಹತ್ತಿರ ಹೇಳಿಕೊಂಡ ಮೇಲೆ ಸಮಾಧಾನ ವಾಯ್ತು'' ಎಂದ ಸಾಂಬ. ಒಂದು ರೀತಿಯಲ್ಲಿ ಒಳ್ಳೆಯವನೇ ಎನಿಸಿತು ಪಾಂಡುಗೆ. ಕೆಲವೊಮ್ಮೆ ಬಾಯಿಗೆ ಬಂದಂತೆ ಮಾತನಾಡಿದರೂ ಯಾವು ದನ್ನೂ ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ ಎನಿಸಿದಾಗ, ಅವನ ಬಗ್ಗೆ ತಾನಾಗಿ ಗೌರವ ಹುಟ್ಟಿಕೊಂಡಿತು.

''ಹಾಗಾದರೆ ನೀನು ಯಾವತ್ತು ಹೋಗ್ತೀಯ?''

''ಮುಂದಿನ ಭಾನುವಾರ ಹೋಗೋಣ ಅಂತ ನಿರ್ಧರಿಸಿದ್ದೇನೆ''

''ಹೋಗೋ ಮೊದಲು ಒಂದಿನ ನಮ್ಮನೆ ಊಟ ಮಾಡಿಕೊಂಡು ಹೋಗು,''

''ಆದರ ನೀನು ಹೆಚ್ಚು ದಿನ ಇಲ್ಲಿರೋದು ಸರಿಯಿಲ್ಲ. ಆದಷ್ಟು ಬೇಗ ನೀವು ಇಲ್ಲಿಂದ ಹೊರಟು ಹೋಗೋ ಏರ್ಪಾಡು ಮಾಡಿಕೊಳ್ಳಿ'' ಎಂದ ಸಾಂಬ, ತಲೆ ಮೇಲ ಊಟದೆಲೆಯ ಕಟ್ಟು ಹೊತ್ತು ಪೇಟೆಗೆ ಹಾಕಿ ಬರಲು ಹೊರಟು. ಅದನ್ನು ನೋಡಿ ಗಿರಿ ತಾನು ಜೊತೆಗೆ ಬರುವುದಾಗಿ ಹೇಳಿದ.

''ನಂದೂ ಒಂದು ಕಟ್ಟು ಇದೆ ಗಿರಿ, ಪೇಟೆಗೆ ಹಾಕಿ ಬರ್ತೀಯ'' ಎಂದಳು ಬೀರಿ.

''ಅದಕ್ಯಾಕೆ ಅಷ್ಟು ಸಂಕೋಚ ಕೊಡಿಲ್ಲಿ'' ಎಂದ ಗಿರಿ ಅವಳು ಕಟ್ಟಿಕೊಟ್ಟ ಕಟ್ಟನ್ನು ಕೈಲಿ ಹಿಡಿದು ತಮ್ಮ ಊಟದೆಲೆಯ ಕಟ್ಟನ್ನು ತಲೆ ಮೇಲೆ ಹೊತ್ತು, ಸಾಂಬನ ಜೊತೆ ಕಾಲು ಹಾಕಿದ.

●

ಖೇಮದ್ರುಮ ಅವಧಿಗೆ ಎರಡು ದಿನ ಮುಂಚಿತವಾಗಿಯೇ ಹಣ ವಸೂಲಿಗೆ ಬಂದ. ಆಗಲೇ ಸಾಂಬನ ಹೆಂಡತಿ ಲಕ್ಷ್ಮಿ ಮನೆಯ ಪಾತ್ರೆ ಪರಡಿ, ಸಾಮಾನು ಸರಂಜಾಮುಗಳನ್ನೆಲ್ಲ ಗೋಣೀ ಚೀಲದಲ್ಲಿ ತುಂಬಿ, ಬಿಗಿದು ಕಟ್ಟಿಟ್ಟಿದ್ದಳು. ನಾಲ್ಕು ದಿನದ ಅಡಿಗೆಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ತೆಗೆದಿಟ್ಟು ಉಳಿದದ್ದೆಲ್ಲ ಗೋಣೀ ಚೀಲದಲ್ಲಿ ತುಂಬಿದ್ದಳು.

ಖೇಮದ್ರುಮ ಅದನ್ನು ಕಂಡವನು ''ಎಲ್ಲಿಗೋ ಪ್ರಯಾಣ ಹೊರಟಂತಿದೆ'' ಎಂದ.

''ಹೌದು ನಾನು ಈ ಅರಣ್ಯದಿಂದ ಹೊರಗೆ ಹೋಗಲು ನಿರ್ಧರಿಸಿದ್ದೇನೆ ಯಜಮಾನರು ಒಂದುಸಣ್ಣ ಮನೆಯನ್ನು ಖರೀದಿಸಿದ್ದಾರೆ''

''ಮನೆಯನ್ನೇ ಯಾವಾಗ?''

''ನಾಲ್ಕು ತಿಂಗಳ ಹಿಂದೆ''

''ನನಗೇನು ಹೇಳಲೇ ಇಲ್ಲ.''

''ಹೇಳೋ ಅಗತ್ಯ ಕಾಣಲಿಲ್ಲ ಅಂತಿದ್ರು''

''ಯಾರ ಹತ್ರ?''

''ಯಾರ ಹತ್ರ ಯಾಕೆ ಬೇಕು ನನ್ನ ಹತ್ತಿರನೇ ಹಾಗಂತ ಅಂದ್ರು''

''ಈಗ ನಿಮ್ಮನ್ನೇನು ಮಾಡ್ತೇನೆ ಅಂತ ಗೊತ್ತಾ''

''ಈ ಮಾತನ್ನು ಕೇಳುತ್ತ ಮನೆಯೊಳಗೆ ನಿಂತಿದ್ದ ಸಾಂಬ ಗೋಣೀ ಚೀಲಗಳನ್ನು ಸೇರಿಸಿ ಕಟ್ಟಲು ತೆಗೆದಿಟ್ಟದ್ದ ದಪ್ಪನೆ ಹುರಿ ಹಗ್ಗವನ್ನು ಕೈಗೆತ್ತಿಕೊಂಡ, ಅದನ್ನು ಗುರಿ ತಪ್ಪದಂತೆ ಬೀಸಿ ಖೇಮದ್ರುಮನತ್ತ ಒಗೆದ. ಅದು ಖೇಮದ್ರುಮನ ಕಾಲುಗಳನ್ನು ಸುತ್ತಿಕೊಂಡಿತು. ಅವನು ಸರ್ರನೆ ಆ ಹಗ್ಗವನ್ನು ಹಿಂದಕ್ಕೆ ಎಳೆದ. ಸಾಂಬ ಹಗ್ಗವನ್ನು ಎಳೆದ ರಭಸಕ್ಕೆ ಖೇಮದ್ರುಮ

ಮೂರು ಮಾರು ಮುಗ್ಗರಿಸಿ ಬಿದ್ದ. ಅವನು ಏಳುವುದರೊಳಗೆ ಅದೇ ಹಗ್ಗವನ್ನು ಎಳೆದುಕೊಂಡು ಮುಖ ಮೂತಿ ನೋಡದೆ ಆ ಹಗ್ಗದಲ್ಲೇ ಬೀಸಿ ಒಗೆದ. ಖೇಮದ್ರುಮನ ಕೈಮೈ ಎಲ್ಲ ತರಚಿಕೊಂಡು ರಕ್ತ ಬರತೊಡಗಿತು.

''ಅಯ್ಯೋ ಬಿಡೋ ನನ್ನ'' ಖೇಮದ್ರುಮ ಬೊಬ್ಬೆ ಹಾಕಿದ.

''ಬಿಡಬೇಕಾ ನಿನ್ನ?'' ಅವನ್ನ ಒದ್ದು ಪ್ರಶ್ನೆ ಹಾಕಿದ.

''ಅಯ್ಯೋ ನಾನು ಸತ್ತೆ''

''ನಿನ್ನ ಸಾಯೋಕೆ ಯಾರು ಬಿಡ್ತಾರೆ. ಈಗ ಬೊಗಳು ನೀನು ಅರಣ್ಯಾಧಿಕಾರಿ ಅಂತ ಹೇಳ್ಕೊಂಡು ಸುಳ್ಳು ನಾಟಕ ಆಡಿದ್ಯಲ್ಲ? ಅದಕ್ಕೆ ಈ ಶಿಕ್ಷೆ''

''ನಾನು ಅರಣ್ಯಾಧಿಕಾರಿ ಅಲ್ಲ ಅಂತ ನಿನಗೆ ಹೇಳ್ದೋರು ಯಾರು?''

''ನೋಡು ಮತ್ತೆ ಸುಳ್ಳು ಬೊಗಳ್ತಿದ್ದೀಯಲ್ಲ. ಹೀಗೆ ಸುಳ್ಳು ಬೊಗಳ್ತಾ ಹೋದ್ರೆ ಇದುವರೆಗೆ ನಮಗೆ ಮೋಸ ಮಾಡಿ ನಮ್ಮ ಹತ್ರ ಕಿತ್ತುಕೊಂಡಿದ್ಯಲ್ಲ ಅದನ್ನೆಲ್ಲ ಕಕ್ಕಬೇಕಾದೀತು ಹುಷಾರ್''

''ಅಯ್ಯೋ ಹಾಗೆ ಮಾಡ್ಬೇಡ್ರಪ್ಪ ತಪ್ಪೊಪ್ಪಿಕೊಂಡೆ, ಬಿಟ್ಟುಬಿಡಿ ನನ್ನ ಇನ್ನು ನಿಮ್ಮ ಸುದ್ದಿಗೆ ಬರೋಲ್ಲ''

''ಬರೋಲ್ಲ ತಾನೆ''

''ಖಂಡಿತ ಬರೋದಿಲ್ಲ''

''ಪ್ರಮಾಣವಾಗ್ಲೂ''

''ಪ್ರಮಾಣವಾಗ್ಲೂ''

''ಹಾಗಾದರೆ ಹೋಗು ಬಡಪಾಯಿ ಬದುಕ್ಕೋ. ನಾವು ಈ ಅರಣ್ಯವನ್ನು ಲೂಟಿ ಮಾಡಿದ್ದೇವೆ. ನಮ್ಗೆ ನೀನು ಮೋಸ ಮಾಡ್ದೆ, ಆದ್ರಿಂದ ನಿನಗೆ ಕೊಟ್ಟಿದ್ದನ್ನು ಹಿಂದಕ್ಕೆ ಪಡೆಯೋದಿಲ್ಲ. ಆದ್ರೆ ಇನ್ಮೇಲಿಂದ ಇಂತಹ ಕೆಲಸ ಮಾಡಬೇಡ'' ಎಂದ ಸಾಂಬ.

''ಇಲ್ಲ ನಿನ್ನ ದಮ್ಮಯ್ಯ ಇನ್ಮೇಲಿಂದ ಇಂತಹ ಕೆಲಸ ಮಾಡೋದಿಲ್ಲ ನನ್ನ ಬಿಟ್ಟುಬಿಡು'' ಎಂದ.

''ಇನ್ನೆರಡು ಬಿಗಿಯೋ ಸಾಂಬ. ನಮ್ಮ

> **ಇತಿಮಿತಿ**
>
> ಎಲ್ಲದಕ್ಕೂ
> ಇದೆ
> ಪ್ರೀತಿಗೆ ಮಾತ್ರ
> ಇಲ್ಲ
>
> – ಎಚ್.ವಿಶಾಲಾಕ್ಷಿ

ಮಗು ಸತ್ತ ಸಮಯದಲ್ಲೂ ಬಂದು ನಮ್ಮನ್ನ ಬಿಡದೆ ಬರೋ ಬಾಬತ್ತನ್ನು ವಸೂಲಿ ಮಾಡ್ದ. ಸುಮ್ನೆ ಬಿಡಬಾರ್ದು ಅವನ್ನ'' ಎಂದು ಮುಂದೆ ಬಂದು ಪಾಂಡು ತಾನು ಒಂದೆರಡು ಒದೆತ ಕೊಟ್ಟ. ಚೆಂಡುರುಳುವ ಹಾಗೆ ಹೋಗಿ ಅಷ್ಟು ದೂರ ಬಿದ್ದ ಖೇಮದ್ರುಮನನ್ನು ಮಣ್ಣಿಂದ ಮೇಲಕ್ಕೆತ್ತಿ,

''ಹೋಗು ಬದುಕ್ಕೋ ಹೋಗು. ಈ ಸಾಂಬ ಬರದೆ ಹೋಗಿದ್ದರೆ ನಿನಗೆಲ್ಲಿ ಇಂತಹ ಸ್ಥಿತಿ ಬರ್ತಿತ್ತು. ನಾವು ಕೊನೆವರೆಗೂ ನೀನು ಅರಣ್ಯಾಧಿಕಾರಿ ಅಂದ್ಕೊಂಡೇ ನಿನ್ನ ಹೊಟ್ಟೆ ತುಂಬಿಸುತ್ತಿದ್ವಿ. ಆದರೆ ಈ ಸಾಂಬ ತುಂಬ ಹುಷಾರಿ. ನನ್ನನ್ನ ಕರ್ಕೊಂಡು ಒಂದು ದಿನ ಅರಣ್ಯಾಧಿಕಾರಿಗಳ ಕಚೇರಿಗೆ ಹೋದ. ಅಲ್ಲಿಗೆ ಹೋದ ಮೇಲೆ ನಿನ್ನ ಬಣ್ಣ ಏನು ಎನ್ನೋದು ಬಯಲಾಯ್ತು. ಇಷ್ಟು ದಿನ ಒಳ್ಳೆ ನಾಟಕ ಆಡ್ದೆ. ಆ ನಿನ್ನ ನಾಟಕ ನಮ್ಮನ್ನು ಏಮಾರಿಸಿದ ಹಾಗಲ್ಲ. ಜ್ಞಾಪಕವಿರಲಿ ಇನ್ಮೇಲಿಂದ ಇಂತಹ ನಾಟಕ ಆಡೋವಾಗ ಎಚ್ಚರವಿರಲಿ'' ಎಂದ.

ಕೈಮೈ ಎಲ್ಲಾ ತರಚಿದ್ದರಿಂದ ಖೇಮದ್ರುಮನಿಗೆ ನಡೆಯಲು ಸಾಧ್ಯವಾಗದೆ ಅವನು ಕುಂಟುತ್ತ ಹೊರಟುಹೋದ. ಅವನು ಹೋಗುವುದನ್ನು ನೋಡುತ್ತ ದಾಶರಥಿ, ಕೃಷ್ಣ ಬಿದ್ದು ಬಿದ್ದು ನಗತೊಡಗಿದರು. ''ಹಾಗೆ ನಗಬೇಡ್ರೊ, ಅವನು ಹೊಟ್ಟೆಯೊಳಗೆ ಉರಿ ಇಟ್ಟುಕೊಂಡೇ ಹೋಗಿದ್ದಾನೆ. ಅವನು ಇಷ್ಟರಲ್ಲೇ ಅರಣ್ಯಾಧಿಕಾರಿಗೆ ಹೇಳಿ ನಿಮ್ಮನ್ನೆಲ್ಲ ಹೊರಗೆ ಹಾಕಿಸ್ತಾನೆ. ಇಷ್ಟರಲ್ಲಿ ನೀವೇ ಇಲ್ಲಿಂದ ಹೊರಟು ಹೋಗುವ

ಏರ್ಪಾಡು ಮಾಡಿಕೊಳ್ಳಿ'' ಎಂದ ಸಾಂಬ.

ಅದು ನಿಜ ಎನಿಸಿತು ಪಾಂಡುವಿಗೆ. ಸಾಂಬ ಹೇಳೋ ಹಾಗೆ ಅವನು ಇಷ್ಟರಲ್ಲೇ ಅರಣ್ಯಾಧಿಕಾರಿಗೆ ದೂರು ಕೊಡ್ತಾನೆ. ಆದ್ದರಿಂದ ಆದಷ್ಟು ಬೇಗ ತಾವು ಗಂಟುಮೂಟೆ ಕಟ್ಟಬೇಕು. ಹೋಗುವುದಲ್ಲಿಗೆ ಹಣವೇನೋ ಸ್ವಲ್ಪ ಉಳಿತಾಯವಾಗಿತ್ತು. ಸಕಲೇಶಪುರದ ಕಡೆ ಹುಡುಕಿದರೆ ಒಂದೆರಡು ಎಕರೆ ಹೊಲ ಮನೆ ಖರೀದಿಸಬಹುದೇನೋ ಎಂದುಕೊಳ್ಳುತ್ತ ಮನೆಯೊಳಗೆ ಬಂದ.

''ಖೇಮದ್ರುಮನಿಗೆ ತಕ್ಕ ಶಾಸ್ತಿ ಆಯ್ತು'' ಎಂದಳು ರಾಣಿ.

''ನಾವು ಸಂತೋಷಪಡೋ ಹಾಗಿಲ್ಲ'' ಎಂದ ಪಾಂಡು.

''ಯಾಕೆ?''

''ಅವನಿಗೆ ಹೊಡೆತ ತಿಂದ ಮೇಲೆ ನಮ್ಮ ಮೇಲೆ ಉರಿ ಇರೋದಿಲ್ಲವೇ ನಾಳೆ ಅರಣ್ಯಾಧಿಕಾರಿಗೆ ಅವನು ಸುದ್ದಿ ಕೊಡಬಹುದು''

''ನೀವೇನು ಹೇಳ್ತಿದ್ದೀರ ಅವನು ಅರಣ್ಯಾಧಿಕಾರಿ ಅಲ್ವೇನು?''

''ಅಲ್ಲ ನಾವು ಆ ದಿನ ಅರಣ್ಯಾಧಿಕಾರಿಯ ಕಚೇರಿಗೆ ಹೋಗಿ ನಿಜಾಂಶ ತಿಳಿದುಕೊಂಡು ಬಂದ್ವು. ಇಷ್ಟು ದಿನ ತಾನೇ ಅರಣ್ಯಾಧಿಕಾರಿ ಅಂತ ಆ ಖೇಮದ್ರುಮನ ನಾಟ್ಕಾ ಆಡ್ತ. ಅದಕ್ಕೆ ಈವತ್ತು ಚೆನ್ನಾಗಿ ಒದೆತ ಬಿತ್ತು'' ಎಂದ.

''ಹಾಗಾ ನೀನನ್ನೋ ಹಾಗೆ ಅವನು ಅರಣ್ಯಾಧಿಕಾರಿಗೆ ದೂರು ಕೊಡಬಹುದು ಅದರೊಳಗೆ ನಾವು ಈ ಜಾಗ ಬಿಡಬೇಕು''

''ಹ್ಯಾಗೂ ಆ ಸಾಂಬ ಮುಂದಿನ ಭಾನುವಾರ ಹೊರಟ್ಹೋಗ್ತಿದ್ದಾನೆ. ಇನ್ನೆಷ್ಟು ದಿನ ಉಳೀತು ನಾಲ್ಕು ದಿನ ಸಹ ಇಲ್ಲ. ನಾಳೆ ಅವರ ಸಂಸಾರವನ್ನು ಕರೆದು ಊಟ ಹಾಕು. ಬಹಳ ದಿವಸ ಆಯ್ತು ಸೀ ಅಡಿಗೆ ಮಾಡ್ದೆ. ಹೋಗಿ ಸಾಮಾನು ಕಟ್ಟಿಸಿಕೊಂಡು ಬರ್ತೇನೆ ಒಬ್ಬಟ್ಟು ಮಾಡು'' ಎಂದ. ರಾಣಿ ಒಪ್ಪಿಕೊಂಡಳು.

ಮರುದಿನ ರಾಣಿ ಹೊತ್ತಿಗೆ ಮುಂಚೆ ಎದ್ದು ಬೇಳೆ ಬೇಯಿಸಿ, ಹೊರಗೆ ಹಾಕಿದ್ದ ರುಬ್ಬು ಕಲ್ಲಿನಲ್ಲಿ ಒಬ್ಬಟ್ಟಿಗೆ ಬೆಂದ ಬೇಳೆಯನ್ನು ಹಾಕಿ ರುಬ್ಬ ತೊಡಗಿದಳು. ಚಂದ್ರಿ ತಟ್ಟೆ ಕೊಡಲು ಬಂದಳು. ಬೀರಿಯ ಮನೆಯವರನ್ನು ಯಾಕೆ ಬಿಡಬೇಕು ಅವರಿಗೂ ಹೇಳಿ ಕಳಿಸೋಣ ಎನಿಸಿತು. ಗಿರಿ ಹೋಗಿ ಹೇಳಿ ಬಂದ. ಅವನು ಈಕಡೆ ಬರುತ್ತಿದ್ದ ಹಾಗೆ ಜೀರಿ ತನ್ನ ಮನೆಯ ಕೆಲಸ ಬಿಟ್ಟು ತಾನೂ ಸಹಾಯಕ್ಕೆ ಬಂದಳು. ಸಹಾಯಕ್ಕೆ ಎಲ್ಲರೂ ಬಂದರೂ ಅಡಿಗೆ ಮಾಡಿದವಳು ರಾಣಿಯೇ. ಸುಬ್ರಮಣಿ ಗೂರಲು ರೋಗದಿಂದ ಚಾಪೆ ಹಿಡಿದಿದ್ದ. ಎಣ್ಣೆ ವಾಸನೆ, ಮಸಾಲೆ ವಾಸನೆ ಅವನಿಗೆ ಆಗುವುದಿಲ್ಲವೆಂದು ಬೇಸಿಗೆ ದಿನವಾದ್ದರಿಂದ ಹೊರಗೆ ಒಲೆ ಹೂಡಿ ಅಡಿಗೆಗೆ ತೊಡಗಿದ್ದಳು ರಾಣಿ. ಅವಳ ಅಡಿಗೆ ಆಗು ಹೊತ್ತಿಗೆ ಎಲ್ಲಾ ಅವರವರ ಕಸುಬು ಮುಗಿಸಿಕೊಂಡು ಬಂದರು. ಹೊರಗೆ ಸುತ್ತಮುತ್ತ ಚೆನ್ನಾಗಿ ಗುಡಿಸಿ, ಅಲ್ಲೆ ಊಟಕ್ಕೆ ಎಲೆ ಹಾಸಿ ಬಡಿಸಿದಳು ಚಂದ್ರಿ. ಊಟ ಮಾಡುತ್ತ ಒಮ್ಮೆ ತಲೆ ಎತ್ತಿ ನೋಡಿದ ಸಾಂಬ. ಸದಾ ಒಳ್ಳೆ ಮದುಮಗಳಂತೆ ಕಾಣುತ್ತಿದ್ದ ಚಂದ್ರಿ, ಒಳ್ಳೆಯ ಸೀರೆ ಉಡಲಿ ಉಡದೆ ಹೋಗಲಿ ಯಾವಾಗಲೂ ಅವಳ ಮುಖದಲ್ಲಿ ಎದ್ದುಕಾಣುತ್ತಿದ್ದ ಲವಲವಿಕೆ ಇಂದು ಪೂರ್ಣ ನಶಿಸಿಹೋಗಿದೆ. ಹುಟ್ಟಿದ ಹೆಣ್ಣು ಮಗು ಕುಮುದಳ ಸ್ಥಿತಿ ಹಾಗಾದರೆ, ತಾನೀಗ ಒಂದು ಕಣ್ಣನ್ನೇ ಕಳೆದುಕೊಂಡು ಒಕ್ಕಣ್ಣೆಯಾಗಿದ್ದಳು. ಇನ್ನೆಲ್ಲಿಂದ ಉತ್ಸಾಹ ಉಕ್ಕಿ ಬರಬೇಕು, ಬಾಡಿದ ಅವಳ ಮುಖವನ್ನು ನೋಡಿ ಸಾಂಬನಿಗೆ ಕಸಿವಿಸಿಯಾಯ್ತು. ಆ ಅರಣ್ಯಕ್ಕೆ ಬಂದ ಹೊಸದರಲ್ಲಿ ಹೆಂಡತಿಯೊಂದಿಗೆ ರಂಬೆಯ ಹಾಗಿದ್ದಾಳೆ ಎಂದಿದ್ದ. ಅವಳಿಗೆ ಆಗ ಸಿಟ್ಟು ಬಂದಿತ್ತು.

''ಬೇರೊಬ್ಬರ ಹೆಂಡತಿಯನ್ನು ಅದು ಯಾಕೆ ಹಾಗೆ ವರ್ಣಿಸ್ತೀರ, ಈ ಗಂಡಸರ ಹಾಗೆ. ತಮ್ಮ ಮನೆಯ ಹೆಂಗಸರನ್ನು ಬಿಟ್ಟು ಬೇರೊಬ್ಬರ ಹೆಂಡಿರನ್ನು ಕದ್ದು ಕದ್ದು ನೋಡೋದು'' ಎಂದು ಮೂದಲಿಸಿದ್ದಳು. ಈಗಲೂ ಊಟ ಮಾಡಿಕೊಂಡು ಮನೆಗೆ ಬಂದವನು ಹೇಳಿದ್ದ.

''ಎಷ್ಟು ಚೆನ್ನಾಗಿದ್ಲು ಹ್ಯಾಗಾಗಿ ಹೋದ್ಲು''

''ಯಾರು'' ಎಂದಳು ಲಕಿ...

''ಅದೇ ಆ ಚಂದ್ರಿ,''

''ನಿಮ್ಮ ಕಣ್ಣೀ ತಾಗಿರಬೇಕು''

''ಇದ್ರು ಇರಬಹುದು''

''ನೋಡಿದ್ರಾ, ಒಪ್ಪಿಕೊಳ್ತಿದ್ದೀರಲ್ಲ ನಾಚಿಕೆ ಆಗೋದಿಲ್ವೆ''


''ಯಾಕೆ ನಾಚಬೇಕು ಹೇಳು. ಎಷ್ಟಂದ್ರು ಗಂಡಸು. ಇಷ್ಟಕ್ಕೂ ನಾನು ಯಾವ ಅಪರಾಧ ಮಾಡಿದ್ದೇನೆ ಅಂತ ನಾಚಬೇಕು ಹೇಳು. ಇರೋದನ್ನ ಹೇಳ್ದೆ. ಸೌಂದರ್ಯ ಕಂಡ್ರೆ ಯಾರು ಮರುಳಾಗೋಲ್ಲ'' ಎಂದ ಈ ಮಾತಿಗೆ ಅವಳೇನು ಹೇಳಲಿಲ್ಲ. ಅಷ್ಟಕ್ಕೆ ಸಾಂಬನೂ ಸುಮ್ಮನಾಗಿ ಬಿಟ್ಟ.

ಆ ಭಾನುವಾರ ಅಷ್ಟು ಹೊತ್ತಿಗೆ ಎದ್ದು, ಬಿಸಿಲು ಬರುವುದರೊಳಗೆ ಸಾಂಬ ಹೆಂಡತಿ ಮಕ್ಕಳೊಂದಿಗೆ ಅರಣ್ಯದಿಂದ ಹೊರಗೆ ನಡೆದ. ಅವನ ಸಾಮಾನಿನ ಮೂಟೆ ಹೊರಲು ಪಾಂಡು ಮತ್ತು ಅವನ ತಮ್ಮಂದಿರು ನೆರವಾದರು. ಅರಣ್ಯದ ಹೊರಗೆ ಬರುತ್ತಲೇ ಮೂಟೆಗಳನ್ನು ಇಳಿಸಿ, ಸಾಂಬ ಕೂಲಿಯವರನ್ನು ಕರೆದುಕೊಂಡು ಬರುವವರೆಗೆ ಕಾದನು. ನಾಲ್ಕು ಮಂದಿ ಕೂಲಿಗಳನ್ನು ಕರೆದುಕೊಂಡು ಬಂದ ಸಾಂಬ. ಅವರ ತಲೆಯ ಮೇಲೆ ಮೂಟೆಗಳನ್ನಿಟ್ಟು, ಸಾಂಬನ ಸಂಸಾರವನ್ನು ಬೀಳ್ಕೊಂಡರು ಪಾಂಡು ಮತ್ತು ಅವನ ತಮ್ಮಂದಿರು.

ಇದ್ದಕ್ಕಿದ್ದಂತೆ ನೆನಪಾಗಿ ಸಾಂಬ ತನ್ನ ಕಿಸೆಯಿಂದ ಹೊಸ ಹೊಸ ಹತ್ತು ರೂಪಾಯಿ ನೋಟುಗಳನ್ನು ತೆಗೆದು ಆ ನಾಲ್ಕು ಮಂದಿಗೆ ಕೊಟ್ಟ.

''ಎಷ್ಟು ಹೊಸ ಹೊಸ ನೋಟುಗಳು'' ಎಂದ ದಾಶರಥಿ.

''ಚೆನ್ನಾಗಿ ಹಣ ಸಂಪಾದಿಸಿಕೊಂಡು ಹೋದ. ನಾವು ಇದ್ದೇವೆ, ಹೋಗಲಿ ಎಂದರೆ ಎಂದೂ ಸರಿಯಾಗಿ ಅಚ್ಚುಕಟ್ಟಾಗ ಮಾಂಸದ ಅಡಿಗೆ ಮಾಡಿಲ್ಲ'' ಎಂದ ಕೃಷ್ಣನ ಮಾತು ಕರುಳನ್ನು ಕಿವುಚಿದಂತಾಯ್ತು ಪಾಂಡುಗೆ. ಅವನು ಹೇಳುವ ಹಾಗೆ, ಲೆಕ್ಕಾಚಾರದ ಸಾಮಾನು ತಂದು ಹಾಕುತ್ತಿದ್ದ. ಸಾಮಾನು ತಂದು ಹಾಕಿದರೆ ತಾನೇ ರಾಣಿ ಅಡಿಗೆ ಮಾಡಿ ಹಾಕುವುದು. ಅವಳು ದುಂದು ವೆಚ್ಚ ಮಾಡುತ್ತಿರಲಿಲ್ಲ. ಇದ್ದುದರಲ್ಲೇ ಹೊಂದಿಸುತ್ತಿದ್ದಳು. ಇದರಿಂದಲ್ಲವೇ ಕೈಲಿ ಅಷ್ಟು ಹಣ ಸೇರಿಸಲಾಯ್ತು. ಎಂದುಕೊಂಡಾಗ ಕೊಂಚ ಸಮಾಧಾನವಾಯ್ತು. ತಮ್ಮನ ತಲೆ



ಸವರಿ ಅಂದ ಪಾಂಡು.

''ಇಷ್ಟರಲ್ಲೇ ನಾವೂ ಈ ಜಾಗ ಬಿಟ್ಟು ಹೋಗೋಣ. ಆಮೇಲೆ ನಿಂಗೊಂದು ಹೆಣ್ಣು ನೋಡಿ ಮದುವೆ ಮಾಡಬೇಕು'' ಎಂದ,

ಕೃಷ್ಣನ ಕಣ್ಣುಗಳೆರಡು ಅರಳಿಕೊಂಡವು.

ಮರುದಿನ ಅವನು ಸಕಲೇಶಪುರಕ್ಕೆ ಹೊರಡ ಬೇಕು. ಕೆಂಪು ಹೊಳೆಯ ಹತ್ತಿರದಲ್ಲಾದರೂ ಆಸ್ತಿ ಮನೆ ಇರುವ ಜಾಗ ಸಿಕ್ಕರೆ ತಮ್ಮ ಪುಣ್ಯ ಎಂದುಕೊಳ್ಳುತ್ತ, ತಿಂಡಿ ತಿಂದು ಹೊರಗೆ ಕಾಲಿಟ್ಟಿದ್ದ ಪಾಂಡು. ಯಮದ್ರುಮನ ಜೊತೆಗೆ ಅರಣ್ಯಾಧಿಕಾರಿ ಬರುತ್ತಿದ್ದಾನೆ. ಸರಸರ ಒಳಗೆ ಹೋಗಿ ರಾಣಿ ಮತ್ತು ತಮ್ಮಂದಿರಿಗೆ ಹೇಳಿದ.

''ಅರಣ್ಯಾಧಿಕಾರಿ ಬರುತ್ತಿದ್ದಾನೆ ಈಗೇನು ಮಾಡೋದು. ಏನೂ ಮಾಡೋಕಾಗೋದಿಲ್ಲ. ಕೊಡೋ ಶಿಕ್ಷೆಯನ್ನು ಧೈರ್ಯವಾಗಿ ಎದುರಿಸ ಬೇಕಷ್ಟೆ'' ಎಂದ.

ಯಾರ ಗಂಟಲಲ್ಲೂ ತಿಂಡಿ ಇಳಿಯಲಿಲ್ಲ. ಅವರೆಲ್ಲರು ಬಂದುದನ್ನು ಎದುರಿಸಲು ಸಿದ್ಧರಾಗಿ ನಿಂತರು. ಅರಣ್ಯಾಧಿಕಾರಿ ಹತ್ತಿರ ಬಂದು ಜಬರದಸ್ತಿನಿಂದ,

''ಯಾರಿದ್ದೀರಿ ಒಳಗೆ ಹೊರಗೆ ಬನ್ನಿ'' ಎಂದ.

ಪಾಂಡು ಹೊರಗೆ ಬಂದ. ಅವನ ಹಿಂದೆ ಅವನ ತಮ್ಮಂದಿರು ಬಂದರು.

''ನಿಮ್ಮನ್ನು ಈ ಅರಣ್ಯದೊಳಗೆ ಬಿಟ್ಟವರು ಯಾರು?''

''ನಾವು ವಲಸೆ ಬಂದ ಜನ. ಊರಲ್ಲಿ ನೆಲೆಸಲು ಜಾಗ ಸಿಗದ್ದರಿಂದ ಕಾಡು ಸೇರಿದೆವು''

''ಕಾಡು ಕಡಿದು ಊರು ಮಾಡಿದ ನಿಮಗೆ ಏನು ಶಿಕ್ಷೆ ಕೊಡಬಹುದು''

''ಸ್ವಾಮಿ ನಮಗೇನು ತಿಳೀದು, ನಾವು ಯಾರೂ ವಿದ್ಯಾವಂತರಲ್ಲ''

''ಆದರೆ ವಿದ್ಯಾವಂತರಿಗಿಂತ ಹೆಚ್ಚಿನ ಬುದ್ಧಿ ನಿಮಗಿದೆ ಎನ್ನುವುದಕ್ಕೆ ನೀನು ಬ್ಯಾಂಕಿನಲ್ಲಿಟ್ಟ ಹಣವೇ ಸಾಕ್ಷಿ. ನಿಮ್ಮ ಖಾತೆಯಲ್ಲಿರುವ ಹಣವನ್ನು ಸರ್ಕಾರ ಮುಟ್ಟುಗೋಲು ಹಾಕಿದೆ. ನೀವು ವಿದ್ಯಾವಂತರಲ್ಲ ಎನ್ನುವ ಕಾರಣಕ್ಕೆ ನಿಮ್ಮನ್ನು ಬಿಟ್ಟಿದ್ದೇವೆ. ಇಲ್ಲವಾದರೆ ನಿಮಗೆ ಕಠಿಣ ಶಿಕ್ಷೆ ವಿಧಿಸುತ್ತಿದ್ದೆವು. ಜೊತೆಗೆ ನೀವು ವಲಸೆ ಬಂದವರು ಎನ್ನುವ ದೃಷ್ಟಿ ಸರ್ಕಾರಕ್ಕೆ ಇದೆ. ಎಲ್ಲಿ

ಚಿಂತನ ಶೀಲರು ಕಂಡಂತೆ


* ಸಂಧಾನವು ಯಾವಾಗಲೂ ಇಷ್ಟ. ಆದರೆ ಆತ್ಮಗೌರವವನ್ನು ಮಾರಿಕೊಳ್ಳುವುದು ಸಂಧಾನವಾಗಲಾರದು. **-ಗಾಂಧೀಜಿ**
* ಸಾರ್ವತ್ರಿಕ ಶಿಕ್ಷಣವಿಲ್ಲದೆ ದೊರೆಯುವ ಸಾರ್ವತ್ರಿಕ ಮತಾಧಿಕಾರವು ಒಂದು ಶಾಪವಾಗುತ್ತದೆ. **-ಮೇರ್ಲ್ಯಾಂಡ್**
* ಒಂದು ತಾಸು ಓದಿದರೆ ಎರಡು ತಾಸು ದುಡಿಯಿರಿ. ಮೂರು ತಾಸು ವಿಚಾರ ಮಾಡಿರಿ. **-ಪರಮಹಂಸ**
* ಅಳುವವರ ಬಳಿ ಕುಳಿತರೆ ಶೋಕ ಹೆಚ್ಚುವುದು. **-ಕುವೆಂಪು**
* ಜಾಗರೂಕತೆಯಿಂದ ಮಾಡಿದ ಕಾರ್ಯದಲ್ಲಿ ಭಯ ಬರುವುದಿಲ್ಲ. **-ಶೇಕ್ಸ್‌ಪಿಯರ್**
* ಋಷಿಗಳು ಒಮ್ಮೊಮ್ಮೆ ಮೂರ್ಖರಂತೆ ವರ್ತಿಸುತ್ತಾರೆ. **-ಅರಿಸ್ಟಾಟಲ್**
* ತೇಜಸ್ವಿಗಳ ವಯಸ್ಸನ್ನು ನೋಡಲಾಗುವುದಿಲ್ಲ. **- ಕಾಳಿದಾಸ**

(ಸಂಗ್ರಹ) ರವಿಶಂಕರ್ ತಿಮಲಾಪುರ

ತಗೀರಿ ನಿಮ್ಮ ಸಾಮಾನು ಸರಂಜಾಮು. ಎಲ್ಲಾ ಈಗಿಂದೀಗಲೇ ಹೊರಡಿ'' ಎಂದ.

ಅರಣ್ಯಾಧಿಕಾರಿಗಳ ಜೊತೆಗೆ ಬಂದ ಜವಾನರು, ಒಳಗಿದ್ದ ಒಡಕುಪಡಕು ಪಾತ್ರೆಗಳ ಸಹಿತ ಹೊರಗೆ ಎಸೆದರು.

''ಅಲ್ಲಯ್ಯ ಹೊಟ್ಟೆಗೆ ತಿನ್ನದೆ, ಸರಿಯಾಗಿ ಬಟ್ಟೆಗೆ ಹಾಕದೆ ಎಲ್ಲಾ ತಗೊಂಡು ಹೋಗಿ ಬ್ಯಾಂಕಿನಲ್ಲಟ್ಟಿದ್ದೆಯಲ್ಲಯ್ಯ'' ಎಂದು ಚೇಮದ್ರುಮ ಹಂಗಿಸಿದ. ಎಲ್ಲರೂ ಸೇರಿ ಸಾಮಾನುಗಳನ್ನು ಗಂಟುಕಟ್ಟಿದರು. ಇದನ್ನು ನೋಡಿ ಬೀರಿಯೂ ಗಂಟುಮೂಟೆ ಕಟ್ಟಿದಳು. ಯಾರಿಗೂ ಉಸಿರಾಡುವುದಕ್ಕೂ ಪುರಸೊತ್ತಿಲ್ಲ. ಎಲ್ಲಾ ಗಂಟುಮೂಟೆ ಕಟ್ಟುತ್ತಲೇ ಹೊತ್ತು ಮುಂದೆ ನಡೆದರು. ಬಿಸಿಲೆಗೆ ಹೇಗೆ ಬಂದಿದ್ದರೋ ಹಾಗೆ ಹೊರಟರು ಒಬ್ಬರ ಹಿಂದೆ ಒಬ್ಬರು. ಆದರೆ ಆಗ ಇದ್ದ ದಟ್ಟಕಾಡು ಈಗ ಮಾಯವಾಗಿದೆ. ಗಿರಿ ಹೆಗಲಲ್ಲಿ ಹೊತ್ತಿದ್ದ ಕುಮುದ ಒಬ್ಬಳು ಆ ತಂಡದ ಸಂಖ್ಯೆಯನ್ನು ಹೆಚ್ಚಿಸಿದ್ದಾಳೆ ಎನ್ನುವುದಕ್ಕಿಂತ ಬರುವಾಗ ಆವಳಿರಲಿಲ್ಲ ಎನ್ನುವುದೇ ಸರಿ. ಸುಬ್ರಮಣಿ ಬಿಸಿಲೆಗೆ ಬಂದಾಗ ಆರೋಗ್ಯವಾಗಿ ಜೀವ ಕಳೆಯಿಂದ ತುಂಬಿಕೊಂಡಿದ್ದ. ಆದರೆ ಈಗ ಜೀವಚ್ಛವವಾಗಿ ದ್ದಾನೆ ಗೂರಲು ರೋಗದಿಂದ. ಇಷ್ಟರ ವಿನಃ ಬರುವಾಗ ಆ ತಂಡ ಹೇಗೆ ನೊಂದಿತ್ತೋ ಹಾಗೆ ನೋವು ಹೊತ್ತು ನಡೆದಿದೆ. ತಂಡದ ಯಜಮಾನ ಒಮ್ಮೆ ತನ್ನ ವರತ್ತ'ದೃಷ್ಟಿ ಹಾಯಿಸಿದ. ಎಲ್ಲರೂ ಅಳುತ್ತಿದ್ದಾರೆ. ಹಾಗೆ ಅವನ ದೃಷ್ಟಿ ಮರಗಿಡಗಳ ಕಡೆ ಹರಿಯಿತು. ಮರಗಿಡಗಳೂ, ಪಕ್ಷಿಸಂಕುಲಗಳೂ ತಮಗೆ ಕೊಟ್ಟ ಶಾಪವೇ ಇದು ಎಂದು ಯೋಚಿಸಿದ. ಪಕ್ಷಿಗಳೂ ಮರಗಿಡಗಳಿಂದ ರೆಕ್ಕೆ ಹಿಗ್ಗಲಿಸಿ ಹಾರುತ್ತಿವೆ. ಕಾಡೊಳಗೆ ಆಹಾರ ದೊರಕಿದರೂ, ಕಾಳುಕಡ್ಡಿಗಳಿಗಾಗಿ ಹೋಗುತ್ತಿರಬೇಕು. ಕಾಡುಮರಗಳು ಇನ್ನು ಸುರಕ್ಷಿತವಾಗಿರುತ್ತವೆ ಎಂದು ಭಾವಿಸಿರಬೇಕು. ಅಲ್ಲಲ್ಲಿ ಕುಳಿತು ಉಲಿಯುತ್ತಿದ್ದ ಪಕ್ಷಿಗಳ ಕಲರವದಲ್ಲಿ ಹೊಸ ಬಗೆಯ ನಿನಾದ ಹರಿದು ಬಂದಂತೆನಿಸಿತು ಪಾಂಡುವಿಗೆ. ಮರಗಿಡಗಳೂ ಚಾಮರ ಸೇವೆಯಿಂದ ತಮ್ಮೆಲ್ಲರನ್ನು ಬೀಳ್ಕೊಡುತ್ತಿವೆ ಏನೋ



ಎನಿಸಿ ಪಾಂಡುವಿನ ಕಣ್ಣಲ್ಲಿ ಪಳ್ಳನೆ ನೀರು ಚೀಮ್ಮಿತು. ಕೈಯಿಂದ ಕೈಗೆ ಹೊತ್ತ ಮೂಟೆಗಳನ್ನು ಬದಲಾಯಿಸುತ್ತ, ಆ ತಂಡ ಬಿಸಿಲೆಗೆ ಬರುವ ಮುನ್ನ ಒಂದು ದಿನದ ಮಟ್ಟಿಗೆ ತಂಗಿದ್ದ ಬಸ್ ನಿಲ್ದಾಣದಲ್ಲಿ ತಂಗಿತು. ಅಷ್ಟು ಹೊತ್ತಿಗೆ ಎಲ್ಲರಿಗೂ ಹಾಲಜ್ಜನ ನೆನಪು ಬಂದಿರಬೇಕು. ಎಲ್ಲರೂ ಬಿಕ್ಕಿಬಿಕ್ಕಿ ಅಳತೊಡಗಿದರು. ಆ ಅರಣ್ಯ ರೋದನ ಯಾರು ಕೇಳಬೇಕು. ಕಾಡು ಕಡಿದು ಊರು ಮಾಡಿದ ಈ ತಂಡಕ್ಕೆ ದಕ್ಕಿದ್ದೇನೂ ಇಲ್ಲ. ಮೈಲಿದ್ದ ಕಸುವು ಮಾಯವಾಗಿ ಬಿಟ್ಟಿದೆ. ಮುಂದೇನು! ಮುಂದೇನು? ಎನ್ನುವ ಪ್ರಶ್ನೆ ಬೃಹದಾಕಾರವಾಗಿ ದೈತ್ಯಾಕಾರವಾಗಿ ಎದ್ದು ನಿಂತು ನರ್ತಿಸುತ್ತಿದೆ.

(ಮುಗಿಯಿತು) *

ಅಣಿ ಮುತ್ತುಗಳು

★ ಸರಿಯಾಗಿ ಬಳಸದ ಒಳ್ಳೆಯ ಗುಣವೂ ಕೆಲವು ಬಾರಿ ಕೆಟ್ಟದ್ದಾಗುತ್ತದೆ. **- ಷೇಕ್ಸ್‌ಪಿಯರ್**

★ ಮನುಷ್ಯ ಹುಲಿಯನ್ನು ಕೊಂದರೆ 'ಶಿಕಾರಿ' ಎನ್ನುತ್ತಾರೆ. ಹುಲಿ ಮನುಷ್ಯನನ್ನು ಕೊಂದರೆ ಹಿಂಸೆ ಎನ್ನುತ್ತಾರೆ. **- ಜಾರ್ಜ್ ಬರ್ನಾರ್ಡ್ ಷಾ**

★ ಒಂದು ದೇಶ ಬಲಗೊಳ್ಳುವುದು ಸಂಕುಚಿತ ದೃಷ್ಟಿಯುಳ್ಳ ದೊಡ್ಡ ಮನುಷ್ಯರಿಂದಲ್ಲ. ಉದಾರ ದೃಷ್ಟಿಯುಳ್ಳ ಸಾಮಾನ್ಯ ಜನರಿಂದ. **- ಸ್ವಾಮಿ ರಾಮತೀರ್ಥ**

★ ಮೊಣಕಾಲೂರಿ ಬದುಕುವುದಕ್ಕಿಂತ ಕಾಲ ಮೇಲೆ ನಿಂತು ಸಾಯುವುದೇ ಲೇಸು **- ಬ್ರೌನಿಂಗ್**

★ ಸ್ತ್ರೀ ನಮ್ಮೆಲ್ಲರ ತಾಯಿ. ನಮ್ಮನ್ನು ಸಾಕಿ ಸಲಹುವ ಆದಿ ಮಾಯೆ. **- ವಿ.ಕೃ.ಗೋಕಾಕ**

(ಸಂಗ್ರಹ) ***ಎಂ.ಎಂ.ಶಿವಪ್ರಕಾಶ***

Printed and Published by **B.S. SAVANUR** on behalf of Loka Shikshana Trust at 'Samyukta Karnataka Press', Koppikar Road, Hubli-580020 (Phone: 64303), No. 2, Residency Road, Bangalore-560025 (Phone: 213265)
Managing Editor: K. SHAMA RAO.
Representatives: Bombay: V. Satyamurthy (Phone: 5510592)
Madras: S. K. Murthi (Phone: 414870)
New Delhi: V. K. Chopra (Phone:7114785)
Registered with the Registrar of Newspapers for India under No. 3633/57



M. K. Publicity